prajavani.net prajavani

ಶನಿವಾರ, ಅಕ್ಟೋಬರ್ 25, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 294 | ಪುಟ 20

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 84,211 | ನಿಫ್ಟಿ 25,795 | $/₹ 87.83 | ಚಿನ್ನ (Std. 10g) ₹1,29,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,62,740 (ಬೆಂಗಳೂರು)



ಹೊತ್ತಿ ಉರಿದ ಬಸ್, 20 ಸಾವು

ಕರ್ನೂಲು ಜಿಲ್ಲೆಯ ಚಿನ್ನತೇಕೂರು ಬಳಿ ಅವಘಡ

- ಹೈದರಾಬಾದ್‌ನಿಂದ ಬೆಂಗಳೂರಿಗೆ ಹೊರಟಿದ್ದ ಬಸ್

ಪ್ರಜಾವಾಣಿ ವಾರ್ತೆ/ಪಿಟಿಐ

ಕರ್ನೂಲು (ಆಂಧ್ರಪ್ರದೇಶ): ಹೈದರಾಬಾದ್‌ನಿಂದ ಬೆಂಗಳೂರಿಗೆ ಹೊರಟಿದ್ದ ಖಾಸಗಿ ಸಂಸ್ಥೆಯ ಸ್ಲೀಪರ್ ಎ.ಸಿ ಬಸ್‌ವೊಂದು ಅಪಘಾತದಲ್ಲಿ ಬೆಂಕಿ ಹೊತ್ತಿ ಉರಿದಿದ್ದರಿಂದ 20 ಮಂದಿ ಸಜೀವ ದಹನಗೊಂಡ ಘಟನೆ ಜಿಲ್ಲೆಯ ಚಿನ್ನತೇಕೂರು ಗ್ರಾಮದ ಬಳಿ ಶುಕ್ರವಾರ ನಡೆದಿದೆ.

ಮುಂದಿದ್ದ ಬೈಕ್‌ಅನ್ನು ಹಿಂದಿಕ್ಕಲು ಚಾಲಕ ಯತ್ನಿಸಿದಾಗ ಬೈಕ್‌ಗೆ ಬಸ್ ಡಿಕ್ಕಿ ಹೊಡೆದಿದ್ದರಿಂದ ಈ ಅವಘಡ ಸಂಭವಿಸಿದೆ. ಬಸ್‌ನಲ್ಲಿದ್ದವರ ಪೈಕಿ 19 ಪ್ರಯಾಣಿಕರು ಸಜೀವ ದಹನಗೊಂಡರೆ, ಘಟನೆಯಲ್ಲಿ ಬೈಕ್ ಸವಾರ ಕೂಡ ಮೃತಪಟ್ಟಿದ್ದಾರೆ.

ಚಾಲಕನ ನಿರ್ಲಕ್ಷ್ಯವೇ ಅವಘಡಕ್ಕೆ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ದೀಪಾವಳಿಗಾಗಿ ಹೈದರಾಬಾದ್ ಹಾಗೂ ಇತರ ಸ್ಥಳಗಳಿಗೆ ತೆರಳಿದ್ದವರು, ಹಬ್ಬ ಮುಗಿಸಿಕೊಂಡು ಬೆಂಗಳೂರಿಗೆ ವಾಪಸಾಗುತ್ತಿದ್ದರು.

ಮೃತದೇಹಗಳು ಗುರುತಿಸಲಾಗದಷ್ಟು ಸುಟ್ಟು ಕರಕಲಾಗಿವೆ. ಮೃತರ ಗುರುತು ಪತ್ತೆಗಾಗಿ ಡಿಎನ್‌ಎ ಪರೀಕ್ಷೆ ನಡೆಸಲಾಗುತ್ತಿದ್ದು, ವಿಧಿವಿಜ್ಞಾನ ತಜ್ಞರ ತಂಡವೊಂದು ಘಟನಾ ಸ್ಥಳಕ್ಕೆ ತೆರಳಿ ಮಾದರಿಗಳನ್ನು ಸಂಗ್ರಹಿಸಿದೆ. ಶುಕ್ರವಾರ ಬೆಳಗಿನ ಜಾವ ಈ ಅವಘಡ ಸಂಭವಿಸಿದೆ. ಆಗ ಪ್ರಯಾಣಿಕರು ಗಾಢನಿದ್ರೆಯಲ್ಲಿ ಇದ್ದರು. ಹೀಗಾಗಿ ಬೆಂಕಿಯ ಕೆನ್ನಾಲಿಗೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಸಾವಿನ ಸಂಖ್ಯೆ ಹೆಚ್ಚಾಗಲು ಇದು ಕೂಡ ಒಂದು ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಅವರು ಘಟನೆ ಬಗ್ಗೆ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಹ ದುರ್ಘಟನೆ ಕುರಿತು ದುಃಖ ವ್ಯಕ್ತಪಡಿಸಿದ್ದಾರೆ.

ಘಟನೆ ವಿವರ: ಕರ್ನೂಲು ನಗರದಿಂದ 20 ಕಿ.ಮೀ. ದೂರದಲ್ಲಿರುವ, ಚಿನ್ನತೇಕೂರ ಗ್ರಾಮದ ಸಮೀಪದ ಉಲಿಂದಕೊಂಡ ಕ್ರಾಸ್ ಬಳಿ ನಸುಕಿನ 3.30ರ ಸುಮಾರಿಗೆ ಈ ಅಪಘಾತ ಸಂಭವಿಸಿದೆ.

'ವಿ.ಕಾವೇರಿ ಟ್ರಾವೆಲ್ಸ್‌ಗೆ ಸೇರಿದ ಬಸ್, ಹೈದರಾಬಾದ್‌ನಿಂದ ಬೆಂಗಳೂರಿಗೆ ಹೊರಟಿತ್ತು. ಈ ವೇಳೆ, ಬೈಕ್‌ಅನ್ನು ಹಿಂದಿಕ್ಕಲು ಚಾಲಕ ಯತ್ನಿಸಿದಾಗ, ಅದಕ್ಕೆ ಡಿಕ್ಕಿಯಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಬಸ್ ಅಡಿಗೆ ಬೈಕ್ ಬಿದ್ದು, ಸಿಕ್ಕಿ ಹಾಕಿಕೊಂಡಿತ್ತು. ಅದನ್ನು ಚಾಲಕ ಗಮನಿಸಿಲ್ಲ. ಹಿಟ್ ಅಂಡ್ ರನ್ ಪ್ರಕರಣವಾಗುವುದನ್ನು ತಪ್ಪಿಸುವುದಕ್ಕಾಗಿ, ಚಾಲಕ ಬಸ್ ನಿಲ್ಲಿಸಿಲ್ಲ. ಅಲ್ಲದೇ, ಬೈಕ್ ಸಮೇತ ಸವಾರನನ್ನು 200 ಮೀಟರ್ ವರೆಗೆ ಎಳೆದುಕೊಂಡೇ ಹೋಗಿದ್ದಾನೆ ಎಂಬ ಸಂಶಯ ಇದೆ' ಎಂದು ಹೇಳಿದ್ದಾರೆ. 'ಈ ವೇಳೆ, ಉಂಟಾದ ಘರ್ಷಣೆಯಿಂದಾಗಿ ಕಿಡಿ ಹೊತ್ತಿದೆ. ಬಳಿಕ ಬೈಕ್‌ನ ಇಂಧನ ಟ್ಯಾಂಕ್ ಸ್ಫೋಟಗೊಂಡು ಭಾರಿ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದೆ' ಎಂದೂ ಅವರು ಹೇಳಿದ್ದಾರೆ.

▶ 9

ಕರ್ನೂಲಿನಲ್ಲಿ ಸಂಭವಿಸಿದ ಬೆಂಕಿ ಆಕಸ್ಮಿಕದಲ್ಲಿ ಹಲವರು ಮೃತಪಟ್ಟಿರುವ ಸಂಗತಿ ದುರದೃಷ್ಟಕರ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುವೆ

ನರೇಂದ್ರ ಮೋದಿ, ಪ್ರಧಾನಿ



ಹೈದರಾಬಾದ್‌ನಿಂದ ಬೆಂಗಳೂರಿಗೆ ಹೊರಟಿದ್ದ ಖಾಸಗಿ ಬಸ್ ಕರ್ನೂಲು ಜಿಲ್ಲೆಯ ಚಿನ್ನತೇಕೂರು ಬಳಿ ಸಂಭವಿಸಿದ ಅಪಘಾತದಲ್ಲಿ ಹೊತ್ತಿ ಉರಿಯಿತು –ಪಿಟಿಐ ಚಿತ್ರ

ಪ್ರಮುಖ ಅಂಶಗಳು

- ಬಹುತೇಕ ಪ್ರಯಾಣಿಕರು ಹೈದರಾಬಾದ್‌ನವರಾಗಿದ್ದು, 25ರಿಂದ 35 ವರ್ಷ ವಯೋಮಾನದವರು
- ಗಾಯಾಳುಗಳಿಗೆ ಕರ್ನೂಲು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ
- ಮೃತ ಪ್ರಯಾಣಿಕರ ಪೈಕಿ ಆಂಧ್ರಪ್ರದೇಶ ಮತ್ತು ತೆಲಂಗಾಣದ ತಲಾ 6 ಮಂದಿ, ಒಡಿಶಾ, ಬಿಹಾರದ ತಲಾ ಒಬ್ಬರು, ತಮಿಳುನಾಡು ಹಾಗೂ ಕರ್ನಾಟಕದ ತಲಾ ಇಬ್ಬರು ಇದ್ದಾರೆ. ಒಬ್ಬರ ಗುರುತು ಪತ್ತೆಯಾಗಿಲ್ಲ
- ವೈದ್ಯರ ತಂಡವೊಂದು ಘಟನಾ ಸ್ಥಳಕ್ಕೆ ತೆರಳಿದ್ದು, ಡಿಎನ್‌ಎ ಪರೀಕ್ಷೆಗಾಗಿ ಮೃತದೇಹಗಳಿಂದ ಮಾದರಿಗಳನ್ನು ಸಂಗ್ರಹಿಸಿದೆ
- ರಕ್ಷಣಾ ಕಾರ್ಯದಲ್ಲಿ ನೆರವು ನೀಡುವಂತೆ ನೆರೆಯ ಗದ್ವಾಲ್ ಜಿಲ್ಲೆಯ ಜಿಲ್ಲಾಧಿಕಾರಿಗೆ ತೆಲಂಗಾಣ ಸಿ.ಎಂ ಸೂಚನೆ

ಕಲ್ಯಾಣ, ಕಿತ್ತೂರು ಕರ್ನಾಟಕದ ವಿವಿಧೆಡೆ ವರ್ಷಧಾರೆ

ಭಾರಿ ಮಳೆ, ನೆಲ ಕಚ್ಚಿದ ಬೆಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿತ್ತೂರು ಕರ್ನಾಟಕ ಭಾಗದ ಧಾರವಾಡ, ಉತ್ತರ ಕನ್ನಡ, ಕಲ್ಯಾಣ ಕರ್ನಾಟಕ ಭಾಗದ ಬಳ್ಳಾರಿ, ವಿಜಯನಗರ, ಬೀದರ, ಯಾದಗಿರಿ, ಕೊಪ್ಪಳ ಜಿಲ್ಲೆಗಳ ವಿವಿಧೆಡೆ ಶುಕ್ರವಾರ ಉತ್ತಮ ಮಳೆಯಾಗಿದ್ದು, ಹಲವೆಡೆ ಬೆಳೆ ನೆಲಕಚ್ಚಿದೆ.

ವಿವಿಧ ಜಿಲ್ಲೆಗಳಲ್ಲಿ ಭತ್ತದ ಫಸಲು ನೆಲಕ್ಕೊರಗಿದ್ದರೆ, ವಿಜಯನಗರ ಜಿಲ್ಲೆಯಲ್ಲಿ ಒಕ್ಕಣೆ ಮಾಡಿದ್ದ ಮೆಕ್ಕೆಜೋಳ ರಾಶಿ ನೀರು ಪಾಲಾಗಿದೆ. ಬೆಳೆಹಾನಿಗೆ ಆತಂಕಗೊಂಡ ರೈತರೊಬ್ಬರು ಕೊಪ್ಪಳ ತಾಲ್ಲೂಕು ಬಸಾಪುರದಲ್ಲಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಹುಬ್ಬಳ್ಳಿ ವರದಿ: ಕಿತ್ತೂರು ಕರ್ನಾಟಕದ ವಿವಿಧೆಡೆ ಗುರುವಾರ ರಾತ್ರಿ ಶುರುವಾದ ಮಳೆಯು ಶುಕ್ರವಾರ ಸಂಜೆಯವರೆಗೂ ಮುಂದುವರೆಯಿತು.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನಲ್ಲಿ ನೂರಾರು ಎಕರೆಯಲ್ಲಿ ಭತ್ತದ ಬೆಳೆ ನೆಲಕ್ಕೊರಗಿದೆ. ಅಲ್ಲಲ್ಲಿ ಮೆಕ್ಕೆಜೋಳ ಬೆಳೆ ಹಾನಿಗೀಡಾಗಿದೆ. ಕೆಲ ಮನೆಗಳಿಗೆ ಹಾನಿಯಾಗಿದೆ. ರಸ್ತೆಯಲ್ಲಿ ರೈತರು ಒಕ್ಕಣೆ ಮಾಡಿದ್ದ ಮೆಕ್ಕೆಜೋಳ ರಾಶಿ ನೀರುಪಾಲಾಗಿವೆ. ಹರಪನಹಳ್ಳಿ ತಾಲ್ಲೂಕಿನಲ್ಲಿ 50 ಎಕರೆಯಷ್ಟು ಭತ್ತದ ಫಸಲು ಹಾನಿಯಾಗಿದೆ.

ಧಾರವಾಡ ಜಿಲ್ಲೆ ಅಳ್ನಾವರದಲ್ಲಿ ಭತ್ತ, ಗೋವಿನ ಜೋಳ ಬೆಳೆ ಹಾನಿಯಾಗಿದೆ. ತೇವಾಂಶದಿಂದ ಕಾಳುಗಳು ಪೊಳ್ಳಾಗುವ ಸ್ಥಿತಿ ಇದೆ. ಹಲವೆಡೆ ಫಸಲು ಮಳೆ ನೀರಿಗೆ ತೇಲಿ ಹೋಗಿದೆ.

ವಿಜಯನಗರ ಜಿಲ್ಲೆ ಬ್ಯಾಲಹುಣ್ಸೆಯಲ್ಲಿ ಮಳೆಯಿಂದ ಭತ್ತದ ಪೈರು ನೆಲಕಚ್ಚಿದೆ –ಪ್ರಜಾವಾಣಿ ಚಿತ್ರ

ತುಂಗಭದ್ರಾ: ನದಿ, ಕಾಲುವೆಗೆ ನೀರು

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯಕ್ಕೆ ಒಳಹರಿವು ಹೆಚ್ಚಿದ್ದು, ಶುಕ್ರವಾರ ಮೂರು ಕ್ರಸ್ಟ್‌ಗೇಟ್ ತೆರೆದು ನೀರು ಹೊರಬಿಡಲಾಗಿದೆ. 8,970 ಕ್ಯೂಸೆಕ್ ನೀರು ನದಿಗೆ, ಕಾಲುವೆ ಮತ್ತು ವಿದ್ಯುತ್ ಉತ್ಪಾದನೆಗೆ 13,524 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ.

'ಸದ್ಯ ಒಳಹರಿವು ಪ್ರಮಾಣ 22,938 ಕ್ಯೂಸೆಕ್ ಇದೆ. ಒಳಹರಿವು ಹೆಚ್ಚಳವಾದರೆ ಹೊರಹರಿವು ಹೆಚ್ಚಲಿದೆ' ಎಂದು ತುಂಗಭದ್ರಾ ಮಂಡಳಿ ತಿಳಿಸಿದೆ.

1,633 ಅಡಿ ಎತ್ತರದ ಅಣೆಕಟ್ಟೆಯ ಕ್ರಸ್ಟ್‌ಗೇಟ್‌ಗಳು ಶಿಥಿಲಗೊಂಡಿವೆ. ಇವುಗಳನ್ನು ಬದಲಿಸಬೇಕು ಎಂಬ ತಜ್ಞರ ವರದಿ ಹಾಗೂ ತಜ್ಞರ ನೀಡಿದ ಸಲಹೆಯಂತೆ ಗರಿಷ್ಠ 1,626 ಅಡಿ ಎತ್ತರಕ್ಕಷ್ಟೇ (ಗರಿಷ್ಠ 105.78 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಬದಲು 80 ಟಿಎಂಸಿ ಅಡಿ) ನೀರು ಸಂಗ್ರಹಿಸಿ ಇಟ್ಟುಕೊಳ್ಳಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಉತ್ತರ ಕನ್ನಡ ಜಿಲ್ಲೆ ಬಿಣಗಾ ಗ್ರಾಮದ ಬಳಿ ನೌಕಾನೆಲೆ ಗೇಟ್ ಎದುರು ಮಾವಿನ ಮರ ಬಿದ್ದು 7 ಬೈಕ್ ಜಖಂಗೊಂಡಿದೆ. ಒಂದು ಆಕಳು ಸತ್ತಿದ್ದು, ಮತ್ತೊಂದಕ್ಕೆ ಗಾಯವಾಗಿದೆ.

ಜಿಲ್ಲೆಯ ಕರಾವಳಿ ಭಾಗದಲ್ಲಿ ಬಿರುಗಾಳಿಯೊಂದಿಗೆ ಮಳೆ ಸುರಿದಿದೆ. ಅರಬ್ಬಿ ಸಮುದ್ರವು ಪ್ರಕ್ಷುಬ್ಧಗೊಂಡಿದೆ. ಮೀನುಗಾರಿಕೆಯ ದೋಣಿಗಳು ಬಂದರಿನಲ್ಲಿಯೇ ಲಂಗರು ಹಾಕಿವೆ. ಕೇರಳ, ತಮಿಳುನಾಡು ಮೂಲದ ದೋಣಿಗಳು ಕೂಡಾ ಇಲ್ಲಿ ನಿಲುಗಡೆ ಆಗಿವೆ.

▶ 8

ಚಿನಕುರುಳಿ ಪ್ರಕಾಶ್ ಶೆಟ್ಟಿ



ಪಶ್ಚಿಮ ಏಷ್ಯಾ ದೇಶಗಳಿಂದ ಕಚ್ಚಾ ತೈಲ ಖರೀದಿ?

ವಿವರ ▶ 12

ರಕ್ಷಣೆಗೆ ಕೇಂದ್ರದ ಸಹಾಯ ಕೋರುತ್ತೇವೆ: ಆರ್‌ಎಸ್‌ಎಸ್

28ಕ್ಕೆ ಶಾಂತಿ ಸಭೆ: 'ಹೈ' ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಬರುವ ನವೆಂಬರ್ 2ಕ್ಕೆ ನಡೆಸಲು ಉದ್ದೇಶಿಸಿರುವ ಪಥಸಂಚಲನದ ವೇಳೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ರಾಜ್ಯ ಸರ್ಕಾರಕ್ಕೆ ಕಷ್ಟವಾಗುತ್ತದೆ ಎಂದಾದರೆ ನಾವು ಕೇಂದ್ರದ ನೆರವು ಕೇಳುತ್ತೇವೆ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಹೈಕೋರ್ಟ್‌ಗೆ ಅರುಹಿದೆ.

ಚಿತ್ತಾಪುರದಲ್ಲಿ ಅಕ್ಟೋಬರ್ 19ರಂದು ಮಧ್ಯಾಹ್ನ 3 ಗಂಟೆಗೆ ನಡೆಸಲು ಉದ್ದೇಶಿಸಿದ್ದ ಪಥಸಂಚಲನಕ್ಕೆ ಅನುಮತಿ ನಿರಾಕರಿಸಿದ್ದ ತಹಶೀಲ್ದಾರ್ ಕ್ರಮವನ್ನು ಪ್ರಶ್ನಿಸಿ ಪಥಸಂಚಲನದ ಸಂಚಾಲಕರೂ ಆದ ಚಿಂಚೋಳಿಯ ಹಿರಿಯ ನಾಗರಿಕ ಅಶೋಕ್ ಪಾಟೀಲ್ (70) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಶುಕ್ರವಾರ ವಿಚಾರಣೆ ನಡೆಸಿತು.

ಸುದೀರ್ಘ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಸರ್ಕಾರ ಎಲ್ಲ ಸಂಘಟನೆಗಳೊಂದಿಗೆ ಇದೇ 28ರಂದು ಶಾಂತಿ ಸಭೆ ನಡೆಸಬೇಕು. ಚಿತ್ತಾಪುರದಲ್ಲಿನ ಪರಿಸ್ಥಿತಿ ಪರಿಗಣಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಮತ್ತು ಸಭೆಯಲ್ಲಿ ಕೈಗೊಂಡ ನಿರ್ಣಯದ ವರದಿಯನ್ನು ಇದೇ 30ರಂದು ಕೋರ್ಟ್‌ಗೆ ತಿಳಿಸಬೇಕು' ಎಂದು ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 30ರ ಮಧ್ಯಾಹ್ನ 2.30ಕ್ಕೆ ಮುಂದೂಡಿತು.

ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ವಾದ: ವಿವಿಧ ಸಂಘಟನೆಗಳು ಪಥ ಸಂಚಲನದ ಪರ, ವಿರುದ್ಧ ಮಾಧ್ಯಮಗಳಲ್ಲಿ ಹೇಳಿಕೆ ನೀಡುತ್ತಿರುವುದರ ಪರಿಣಾಮ ಇಡೀ ನಗರದಲ್ಲಿ ಉದ್ವಿಗ್ನ ಸ್ಥಿತಿ ಉಂಟಾಗಿದೆ.

▶ 7

ಸಮಸ್ಯೆ ಬಗೆಹರಿಯುವ ಮಾರ್ಗದ ಬಗ್ಗೆ ಸರ್ಕಾರದ ವರದಿಯಲ್ಲಿ ಸ್ಪಷ್ಟತೆಯಿಲ್ಲ. ಆಡಳಿತದ ಸಾಮರ್ಥ್ಯವನ್ನು ಸಾಬೀತುಪಡಿಸಲು ಇದು ಸಕಾಲ. ಎಲ್ಲರಿಗೂ ಸಮಾಧಾನಕರವಾಗುವ ರೀತಿಯಲ್ಲಿ ಸಮಸ್ಯೆ ಬಗೆಹರಿಸಿ

ನ್ಯಾ.ಎಂ.ಜಿ.ಎಸ್.ಕಮಲ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉತ್ತರಾಧಿಕಾರಿ ಕುರಿತು ಅವರ ಮಗ ಯತೀಂದ್ರ ಅವರು ಆಡಿದ ಮಾತು ಶುಕ್ರವಾರ ಮತ್ತೆ ಚರ್ಚೆಗೆ ಒಳಗಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜತೆಗೆ ಗುರುತಿಸಿಕೊಂಡ ಶಾಸಕರು ಯತೀಂದ್ರ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ಸಿದ್ದರಾಮಯ್ಯ ಜತೆಗೆ ಗುರುತಿಸಿಕೊಂಡವರು 'ಹೇಳಿಕೆಯಲ್ಲಿ ತಪ್ಪಿಲ್ಲ' ಎನ್ನುತ್ತಲೇ, 'ಉತ್ತರಾಧಿಕಾರಿ'ಯಾಗಲು ತಾವೂ ಸಿದ್ಧ ಎಂದು ಸುಳಿವು ನೀಡಿದ್ದಾರೆ.

ಮತ್ತಷ್ಟು ಪ್ರಜ್ವಲಿಸಿದ 'ಉತ್ತರಾಧಿಕಾರಿ' ಕಿಡಿ

'ತೇವಲಿನ ಮಾತು'

ತೀಟೆ–ತೇವಲಿಗೆ ಯಾರು–ಯಾರೋ ಮಾತನಾಡಿದ್ದಕ್ಕೆಲ್ಲಾ ತಲೆಕೆಡಿಸಿಕೊಳ್ಳಬೇಕಿಲ್ಲ. ಅವರೇನು ಹೈಕಮಾಂಡಾ? ಸಿದ್ದರಾಮಯ್ಯ ಅವರ ಪುತ್ರನ ಹೇಳಿಕೆ ವೈಯಕ್ತಿಕವಾದದ್ದು, ಅದು ಪಕ್ಷದ ತೀರ್ಮಾನವಲ್ಲ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಿದರೆ, ನನಗೆ ಸಂತೋಷ. ಆದರೆ, ಸಿದ್ದರಾಮಯ್ಯ ಅವರನ್ನು ಬದಲಿಸಿ ಎಂದು ಯಾರಾದರೂ ಕೇಳಿದ್ದಾರಾ?

ಕೆ.ಎಂ.ಉದಯ್, ಮದ್ದೂರು ಶಾಸಕ

'ಮಾತು ಮಿತಿಯಲ್ಲಿರಲಿ'

ಯತೀಂದ್ರ ಅವರ ಮಾತು ಮಿತಿಯಲ್ಲಿ ಇರಬೇಕು, ಜವಾಬ್ದಾರಿಯುತವಾಗಿ ಮಾತನಾಡಬೇಕು. ಏನೇನೋ ಹೇಳಿ, ಪಕ್ಷದಲ್ಲಿ ಗೊಂದಲ ಮೂಡಿಸಬಾರದು. ಪಕ್ಷದಲ್ಲಿ ನಾಯಕರಾಗಬೇಕು ಅಂದರೆ, ಸೇವೆ ಮಾಡುವುದರಲ್ಲಿ ದಾಖಲೆ ಸೃಷ್ಟಿಸಬೇಕು. 2028ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂಬುದು ನನ್ನ ಆಸೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲಿ ಎಂದು ಹೈಕಮಾಂಡ್ ಹೇಳಿದರೆ ಅದನ್ನು ನಾವು ಪಾಲಿಸುತ್ತೇವೆ.

ಡಾ.ಎಚ್.ಡಿ.ರಂಗನಾಥ್, ಕುಣಿಗಲ್ ಶಾಸಕ

'ತಿರುಚಿದ ಮಾತು'

ನೀನು ಏನು ಮಾತನಾಡಿದ್ದೆ ಎಂದು ಯತೀಂದ್ರನನ್ನು ಕೇಳಿದೆ. 'ಸೈದ್ಧಾಂತಿಕವಾಗಿ ಮಾತನಾಡಿದೆ ಅಷ್ಟೆ, ಮುಖ್ಯಮಂತ್ರಿ ಬದಲಾವಣೆ ಬಗ್ಗೆ ತಾನು ಮಾತನಾಡಿಲ್ಲ. ಇಂಥವರೇ ಮುಖ್ಯಮಂತ್ರಿ ಆಗುತ್ತಾರೆ ಎಂದೂ ಹೇಳಿಲ್ಲ' ಎಂದ. ಅವನ ಮಾತನ್ನು ತಿರುಚಿದರೆ ಏನು ಹೇಳುವುದು?

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಮಾತಾಡುವಲ್ಲಿ ಮಾತಾಡುವೆ'

ಅಧಿಕಾರ ಹಸ್ತಾಂತರ, ನಾಯಕತ್ವ ಕುರಿತು ನಾನು ಈಗ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ನಮ್ಮ ಪಕ್ಷದಲ್ಲಿ ಶಿಸ್ತಿಗೆ ಆದ್ಯತೆ. ಯತೀಂದ್ರ ಸೇರಿದಂತೆ ಯಾರ ವಿಚಾರವಾದರೂ ಅಷ್ಟೆ. ಅವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಕೆಲವರು ಒತ್ತಾಯಿಸಿದ್ದಾರೆ. ಎಲ್ಲವನ್ನೂ ಗಮನಿಸಿದ್ದೇನೆ. ಈ ವಿಚಾರವಾಗಿ ಯಾರ ಬಳಿ ಮಾತನಾಡಬೇಕೋ ಅವರ ಬಳಿ ಮಾತನಾಡುತ್ತೇನೆ.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

'ಸಾಮಾಜಿಕ ನ್ಯಾಯಕ್ಕೆ ಬದ್ಧ'

ಸಮಾಜವಾದ, ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಆಧಾರದಲ್ಲಿ ಸತೀಶ ಜಾರಕಿಹೊಳಿ ಅವರನ್ನು ಸಿದ್ದರಾಮಯ್ಯ ಅವರ ಉತ್ತರಾಧಿಕಾರಿ ಎಂದು ಯತೀಂದ್ರ ಅವರು ಹೇಳಿರಬಹುದು. ಕಾಂಗ್ರೆಸ್‌ನಲ್ಲಿ ನನ್ನನ್ನು ಸೇರಿದಂತೆ ಬಹುತೇಕರು ಬಸವತತ್ವದ ಅನುಯಾಯಿಗಳು, ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿರುವವರು. ಯತೀಂದ್ರ ಅವರು ಬೆಳಗಾವಿಯ ಕಾರ್ಯಕ್ರಮದಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಈ ಮಾತು ಹೇಳಿದ್ದಾರೆ. ವಿಜಯಪುರಕ್ಕೆ ಬಂದರೆ ನನ್ನ ಕುರಿತೂ ಅದೇ ಮಾತು ಹೇಳಬಹುದು.

ಎಂ.ಬಿ.ಪಾಟೀಲ, ಬೃಹತ್ ಕೈಗಾರಿಕಾ ಸಚಿವ

'ಯಾರೂ ಅನಿವಾರ್ಯವಲ್ಲ'

ಕಾಂಗ್ರೆಸ್ ವ್ಯವಸ್ಥೆಯೊಳಗೆ ಸಿದ್ದರಾಮಯ್ಯ, ಶಿವಕುಮಾರ್, ಸತೀಶ ಜಾರಕಿಹೊಳಿ ಯಾರೂ ಅನಿವಾರ್ಯವಲ್ಲ. ಸದ್ಯ ಸಿದ್ದರಾಮಯ್ಯ ಕರ್ನಾಟಕದ ಮುಖ್ಯಮಂತ್ರಿ ಆಗಿದ್ದಾರೆ. ಸತೀಶ ಜಾರಕಿಹೊಳಿ ಭವಿಷ್ಯದ ನಾಯಕ ಎಂಬ ಯತೀಂದ್ರ ಅವರ ಹೇಳಿಕೆ ಬಗ್ಗೆ ಚರ್ಚಿಸುವ ಅಗತ್ಯವಿಲ್ಲ. ಇಂತಹ ವಿಚಾರದಲ್ಲಿ ಬೇರೆಯವರ ಮಾತಿಗೆ ಮಾನ್ಯತೆ ಇಲ್ಲ.

ಡಾ.ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

'ಬೇರೆ ಅರ್ಥ ಬೇಕಿಲ್ಲ'

ಯಾವುದೇ ವಿಚಾರ ಇರಲಿ, ಯಾರು ಮಾತನಾಡಬೇಕೋ ಅವರು ಮಾತನಾಡಿದರೆ ಮಾತ್ರ ಅದಕ್ಕೆ ಅರ್ಥವಿರುತ್ತದೆ. ವೇದಿಕೆಯ ಮೇಲೆ ಸತೀಶ ಜಾರಕಿಹೊಳಿ ಕುರಿತು ತಾವು ಸೈದ್ಧಾಂತಿಕವಾಗಿ ಒಂದೇ ಆಲೋಚನೆ ಹೊಂದಿದ್ದೇವೆ ಎಂಬ ಅರ್ಥದಲ್ಲಿ ಯತೀಂದ್ರ ಹೇಳಿದ್ದಾರೆ. ಅದನ್ನು ಬೇರೆಯ ರೀತಿ ಅರ್ಥೈಸುವ ಅಗತ್ಯವಿಲ್ಲ.

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

ಸೂರ್ಯೋದಯ: 6:11 ಸೂರ್ಯಾಸ್ತ: 5:56 | ಚಂದ್ರೋದಯ: ಬೆ. 8:17 ಚಂದ್ರಾಸ್ತ: ರಾ. 7:49 | ಶುಕ್ರವಾರದ ಉಷ್ಣಾಂಶ: ಗರಿಷ್ಠ 26° ಕನಿಷ್ಠ 20°

ಶನಿವಾರದ ಉಷ್ಣಾಂಶ 26° ಗರಿಷ್ಠ 21° ಕನಿಷ್ಠ | ಭಾನುವಾರ 29°: 20° | ಸೋಮವಾರ 29°: 20° | ಮಂಗಳವಾರ 30°: 20°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ

35 ಸಾವಿರ ಮನೆಗಳಿಗೆ ವಿದ್ಯುತ್ ಸಂಪರ್ಕ?

1,200 ಚದರಡಿ ವಿಸ್ತೀರ್ಣದವರೆಗಿನ ನಿವೇಶನದಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಮಾತ್ರ ಅನ್ವಯ

ಎ.ಎಂ.ಸುರೇಶ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ 50 ಸಾವಿರ ಅರ್ಜಿಗಳು ಬಂದಿದ್ದು, ನಗರಾಭಿವೃದ್ಧಿ ಇಲಾಖೆ ಈಚೆಗೆ ಹೊರಡಿಸಿರುವ ಆದೇಶದ ಪ್ರಕಾರ ಸುಮಾರು 35 ಸಾವಿರ ಮನೆಗಳಿಗೆ ವಿದ್ಯುತ್ ಸಂಪರ್ಕ ಸಿಗಲಿದೆ ಎಂದು ಅಂದಾಜಿಸಲಾಗಿದೆ.

ಜಿಬಿಎ ವ್ಯಾಪ್ತಿಯಲ್ಲಿ 1,200 ಚದರಡಿ ವಿಸ್ತೀರ್ಣದವರೆಗಿನ ನಿವೇಶನದಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಪಡೆಯುವುದರಿಂದ ವಿನಾಯಿತಿ ನೀಡಿ ನಗರಾಭಿವೃದ್ಧಿ ಇಲಾಖೆ ಇದೇ 13ರಂದು ಆದೇಶ ಹೊರಡಿಸಿದೆ.

ಅದರ ಪ್ರಕಾರ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 1,200 ಚದರಡಿ ನಿವೇಶನದಲ್ಲಿ ನೆಲ + 2 ಅಂತಸ್ತು ಅಥವಾ ಸ್ಟಿಲ್ಟ್ +3 ಅಂತಸ್ತು-ವರೆಗಿನ ವಸತಿ ಕಟ್ಟಡಗಳಿಗೆ ಸಿಸಿ, ಒಸಿ ಅಗತ್ಯವಿಲ್ಲ. ಇದನ್ನು ಆಧರಿಸಿ ಅರ್ಜಿ ಸಲ್ಲಿಸಿರುವ ಗ್ರಾಹಕರಿಗೆ ವಿದ್ಯುತ್ ಸಂಪರ್ಕ ನೀಡುವ ಪ್ರಕ್ರಿಯೆಯನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಆರಂಭಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸೆಪ್ಟೆಂಬರ್‌ನಲ್ಲಿ ಹೊರಡಿಸಿದ್ದ ಆದೇಶದಲ್ಲಿ ನಕ್ಷೆ ಅನುಮೋದನೆ ಪಡೆದು 1,200 ಚದರ ಅಡಿ ವಿಸ್ತೀರ್ಣ-ದಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಒಸಿಯಿಂದ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಲಾಗಿತ್ತು. ಆದರೆ, ಬಹುತೇಕ ವಸತಿ ಕಟ್ಟಡಗಳನ್ನು ಬಿ ಖಾತಾ ನಿವೇಶನಗಳಲ್ಲಿ ನಿರ್ಮಿಸಿದ್ದು, ನಕ್ಷೆ ಅನುಮೋದನೆ ಪಡೆದಿರಲಿಲ್ಲ. ಇದರಿಂದಾಗಿ ಹೆಚ್ಚಿನ ಜನರಿಗೆ ಈ ಆದೇಶದಿಂದ ಉಪಯೋಗ ಆಗುತ್ತಿರಲಿಲ್ಲ. ಇಂಧನ ಇಲಾಖೆಯ ಅಧಿಕಾರಿಗಳು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದರು.

ಈ ತಿಂಗಳ 9ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಮತ್ತೊಮ್ಮೆ ಚರ್ಚೆ ನಡೆಸಿ, ನಕ್ಷೆ ಅನುಮೋದನೆ ಪಡೆದು ನಿರ್ಮಿಸಿರುವ ಎಂಬ ಷರತ್ತನ್ನು ಕೈಬಿಡಲಾಗಿದೆ. ಪರಿಷ್ಕೃತ ಆದೇಶದಲ್ಲಿ ಜಿಬಿಎ ವ್ಯಾಪ್ತಿಯಲ್ಲಿ 1,200 ಚದರಡಿ ವಿಸ್ತೀರ್ಣದವರೆಗಿನ ನಿವೇಶನಗಳಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ ಅಗತ್ಯವಿಲ್ಲ ಎಂದು ತಿಳಿಸಲಾಗಿದೆ.

ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣಪತ್ರ (ಸಿಸಿ) ಒಸಿ ಇಲ್ಲದಿದ್ದರೆ ನೀರು ಮತ್ತು ವಿದ್ಯುತ್ ಸಂಪರ್ಕ ನೀಡಬಾರದು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಇದನ್ನು ಪಾಲನೆ ಮಾಡುವ ದೃಷ್ಟಿಯಿಂದ ಸಿಸಿ, ಒಸಿ ಇಲ್ಲದ ಕಟ್ಟಡಗಳಿಗೆ ಈ ವರ್ಷದ ಏಪ್ರಿಲ್‌ನಿಂದ ವಿದ್ಯುತ್, ನೀರಿನ ಸಂಪರ್ಕ ನೀಡುವುದನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದಾಗಿ ಬೆಸ್ಕಾಂ ಸೇರಿದಂತೆ ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸಿರುವ ಸುಮಾರು ಒಂದು ಲಕ್ಷ ಅರ್ಜಿಗಳು ಇತ್ಯರ್ಥವಾಗದೆ ಉಳಿದಿದ್ದವು.

ಈಗ 1,200 ಚದರಡಿ ವಿಸ್ತೀರ್ಣ-ದವರೆಗಿನ ನಿವೇಶನಗಳಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಸಿಸಿ, ಒಸಿಯಿಂದ ವಿನಾಯಿತಿ ನೀಡಿದ್ದು, ವಿದ್ಯುತ್ ಸಂಪರ್ಕ ನೀಡುವ ಪ್ರಕ್ರಿಯೆ ಆರಂಭಿಸುವಂತೆ ಸಂಬಂಧಪಟ್ಟ ಉಪ ವಿಭಾಗದ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಬೆಸ್ಕಾಂ ಹಿರಿಯ ಅಧಿಕಾರಿ ತಿಳಿಸಿದರು.

ಮುಖ್ಯಾಂಶಗಳು

- ಐದು ತಿಂಗಳಿಂದ ಕಾಯುತ್ತಿರುವ ಗ್ರಾಹಕರು
- ವಿದ್ಯುತ್ ಸಂಪರ್ಕ ನೀಡುವ ಪ್ರಕ್ರಿಯೆಗೆ ಚಾಲನೆ
- ವಸತಿ ಕಟ್ಟಡಗಳ ಗ್ರಾಹಕರ ಸಮಸ್ಯೆಗೆ ಕೊನೆಗೂ ಪರಿಹಾರ

ಇನ್ನಷ್ಟು ದಿನ ಕಾಯುವುದು ಅನಿವಾರ್ಯ

1,200 ಚದರಡಿ ವಿಸ್ತೀರ್ಣಕ್ಕಿಂತ ದೊಡ್ಡ ನಿವೇಶನಗಳಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಹಾಗೂ ವಾಣಿಜ್ಯ ಬಳಕೆಯ ಕಟ್ಟಡಗಳಿಗೆ ಸದ್ಯಕ್ಕೆ ವಿದ್ಯುತ್ ಸಂಪರ್ಕ ನೀಡುತ್ತಿಲ್ಲ. 1,200 ಚದರಡಿ ವಿಸ್ತೀರ್ಣದವರೆಗಿನ ವಸತಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡುವ ಪ್ರಕ್ರಿಯೆ ಮುಗಿದ ಬಳಿಕ, ದೊಡ್ಡ ಕಟ್ಟಡಗಳಿಗೆ ಸಂಪರ್ಕ ನೀಡಲು ಪ್ರತ್ಯೇಕ ಕಾಯ್ದೆ ತರುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. 'ಈ ವರ್ಷದ ಏಪ್ರಿಲ್‌ವರೆಗೆ ನಿರ್ಮಿಸಿರುವ ಎಲ್ಲ ರೀತಿಯ ಕಟ್ಟಡಗಳಿಗೆ ಸಿಸಿ, ಒಸಿಯಿಂದ ಒಮ್ಮೆಗೆ ಮಾತ್ರ ವಿನಾಯಿತಿ ನೀಡಿ, ದಂಡ ಕಟ್ಟಿಸಿಕೊಂಡು ವಿದ್ಯುತ್ ಸಂಪರ್ಕ ನೀಡಲು ಇಂಧನ ಇಲಾಖೆ ಉದ್ದೇಶಿಸಿದೆ. ಇದರ ಸಾಧಕ-ಬಾಧಕಗಳ ಬಗ್ಗೆ ಅಧ್ಯಯನ ನಡೆದಿದ್ದು, ಸದ್ಯದಲ್ಲೇ ಈ ವಿಷಯ ಸಚಿವ ಸಂಪುಟದ ಮುಂದೆ ಬರಲಿದೆ' ಎಂದು ವಿವರಿಸಿದರು.

ಸುದ್ದಿ 2 ನಿಮಿಷ

ಎಚ್‌ಎಎಲ್ ಆಸ್ಪತ್ರೆಯಲ್ಲಿ ಸರ್ವಿಸ್ ರಸ್ತೆ

ಬೆಂಗಳೂರು: ಎಚ್‌ಎಎಲ್ ಆಸ್ಪತ್ರೆಯ ಬಳಸಿಕೊಂಡು ವಿಂಡ್ ಟನಲ್ ರಸ್ತೆಯ ಸಮೀಪ 1.43 ಕಿ.ಮೀ ಉದ್ದ ಸರ್ವಿಸ್ ರಸ್ತೆಯನ್ನು ರಾಜಕಾಲುವೆ ಬಫರ್ ವಲಯದಲ್ಲಿ ನಿರ್ಮಿಸಲು ಬಿ-ಸ್ಮೈಲ್ ನಿರ್ಧರಿಸಿದೆ.

ರಾಜಕಾಲುವೆ/ ಬಫರ್ ವಲಯದ ಸಂರಕ್ಷಣೆ, ಅಭಿವೃದ್ಧಿ ಜೊತೆಗೆ ಸರ್ವಿಸ್ ರಸ್ತೆಯನ್ನು ನಿರ್ಮಿಸಲು ₹19.98 ಕೋಟಿ ವೆಚ್ಚದ ಬಿ-ಸ್ಮೈಲ್ ಟೆಂಡರ್ ಆಹ್ವಾನಿಸಿದ್ದು, ಆರು ತಿಂಗಳಲ್ಲಿ ರಸ್ತೆ ನಿರ್ಮಿಸುವ ಗುರಿ ಹೊಂದಿದೆ.

ಚಲ್ಲಘಟ್ಟದ ಚಿಣಿ ರಸ್ತೆಯ ಸಮೀಪದ ರಾಜಕಾಲುವೆ ಬಫರ್ ವಲಯದಲ್ಲಿ ಆರಂಭವಾಗುವ ಸರ್ವಿಸ್ ರಸ್ತೆ, ಎಚ್‌ಎಎಲ್‌ನ ಕಾಂಪೌಂಡ್ ಸಮೀಪ ಹಾದುಹೋಗಿ, ಚಲ್ಲಘಟ್ಟದ ಕೆರೆ ದಡದಲ್ಲಿ ಸಾಗಲಿದೆ. ಈ ಸರ್ವಿಸ್ ರಸ್ತೆ ಕೆಂಪಾಪುರಕ್ಕೆ ಸಂಪರ್ಕ ಕಲ್ಪಿಸಲಿದೆ.

ರಾಜಕಾಲುವೆಗೆ ರಿಟೈನಿಂಗ್ ವಾಲ್, ಸೇತುವೆ ನಿರ್ಮಾಣ, ಒಳಚರಂಡಿ ಪೈಪ್ ಅಳವಡಿಕೆ, ಯುಟಿಲಿಟಿ ಚೇಂಬರ್‌ಗಳು, ಕೇಬಲ್ ಡಕ್ಟ್, ಎಚ್‌ಡಿಪಿಇ ಕೇಬಲ್ ಅಳವಡಿಸುವುದು ಸೇರಿದಂತೆ, ಬ್ಲ್ಯಾಕ್ ಟಾಪಿಂಗ್ ರಸ್ತೆಯನ್ನು ಪಾದಚಾರಿ ಮಾರ್ಗ, ಮಳೆ ನೀರು ಸಂಗ್ರಹ ವ್ಯವಸ್ಥೆಯೊಂದಿಗೆ ನಿರ್ಮಿಸಲು ಬಿ-ಸ್ಮೈಲ್ ನಿರ್ಧರಿಸಿದೆ.

'ಉದ್ಯಾನ ಅಭಿವೃದ್ಧಿಗೆ ಕ್ರಮ'

ಬೆಂಗಳೂರು: ಸ್ವಾತಂತ್ರ್ಯ ಉದ್ಯಾನವನ್ನು (ಫ್ರೀಡಂ ಪಾರ್ಕ್) ಸಮಗ್ರವಾಗಿ ಅಭಿವೃದ್ಧಿಪಡಿಸಲು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸ್ವಾತಂತ್ರ್ಯ ಉದ್ಯಾನಕ್ಕೆ ಶುಕ್ರವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದ ಅವರು, 'ವಿದ್ಯುತ್ ಸಂಪರ್ಕ, ಕುಡಿಯುವ ನೀರಿನ ವ್ಯವಸ್ಥೆ, ವಾಯುವಿಹಾರಿಗಳ ನಡಿಗೆಗೆ ಸುಗಮ ಮಾರ್ಗ, ಭದ್ರತಾ ವ್ಯವಸ್ಥೆ ಸೇರಿದಂತೆ ಸಮಗ್ರ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಬೇಕು' ಎಂದರು.

ವಾಯುವಿಹಾರಕ್ಕೆ ಬರುವ ಹಿರಿಯ ನಾಗರಿಕರು, ಮಹಿಳೆಯರು, ಮಕ್ಕಳ ನಡಿಗೆಗೆ ಸುಗಮ ಮಾರ್ಗ ಇರಬೇಕು. ಆಟದ ಉಪಕರಣಗಳೊಂದಿಗೆ 'ಕಿಡ್ಸ್ ಪಾರ್ಕ್' ನಿರ್ಮಿಸಬೇಕು. ಶೌಚಾಲಯ ವ್ಯವಸ್ಥೆ ಕಲ್ಪಿಸಬೇಕು. ಉದ್ಯಾನದಲ್ಲಿ ಸ್ವಚ್ಛತೆ ಕಾಪಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಉದ್ಯಾನದ ಪಕ್ಕದಲ್ಲಿರುವ ಬಹುಮಹಡಿ ವಾಹನ ನಿಲುಗಡೆ ಸ್ಥಳವನ್ನು ಪರಿಶೀಲಿಸಿದ ಅವರು, ಈ ಕಟ್ಟಡದ ಮೇಲ್ಭಾಗದಲ್ಲಿರುವ ಜಾಗವನ್ನು, ವಸ್ತು ಪ್ರದರ್ಶನ ಮತ್ತು ಮಾರಾಟ ಹಾಗೂ ಇನ್ನಿತರ ವಾಣಿಜ್ಯ ಉದ್ದೇಶಗಳಿಗೆ ನೀಡಿ, ಆದಾಯ ಬರುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಸ್ವಾತಂತ್ರ್ಯ ಉದ್ಯಾನದ ಅಕ್ಕ ಪಕ್ಕದಲ್ಲಿನ ರಸ್ತೆಬದಿಯಲ್ಲಿ ಎಳನೀರು ಮಾರಾಟ ಮಾಡುತ್ತಿರುವವರು ತೆಂಗಿನ ಚಿಪ್ಪುಗಳನ್ನು ಅಲ್ಲಿಯೇ ಬಿಡದೆ, ವಿಲೇವಾರಿ ಮಾಡಬೇಕು. ಪಾದಚಾರಿ ಮಾರ್ಗಗಳನ್ನು ಸ್ವಚ್ಛವಾಗಿ ನಿರ್ವಹಿಸಬೇಕು ಎಂದರು.

ಹೆಚ್ಚುವರಿ ಆಯುಕ್ತ (ಅಭಿವೃದ್ಧಿ) ದಲ್ಜಿತ್ ಕುಮಾರ್, ಜಂಟಿ ಆಯುಕ್ತರಾದ ರಂಗನಾಥ್, ಹೇಮಂತ್ ಶರಣ್, ಮುಖ್ಯ ಎಂಜಿ-ನಿಯರ್‌ಗಳಾದ ವಿಜಯ್‌ಕುಮಾರ್ ಹರಿದಾಸ್ ಮತ್ತು ಸುಗುಣಾ ಹಾಜರಿದ್ದರು.

ಯುವಕ ಆತ್ಮಹತ್ಯೆ

ದಾಬಸ್ ಪೇಟೆ: ಸಾಲ ತೀರಿಸಲಾಗದೇ ಮನನೊಂದು ಯುವಕ ಆತ್ಮಹತ್ಯೆ ಮಾಡಿಕೊಂಡ ಘಟನೆ ದಾಬಸ್‌ಪೇಟೆ-ಯಲ್ಲಿ ನಡೆದಿದೆ.

ಪಟ್ಟಣದ ಜಯರಾಮು ಬಡಾವಣೆ ನಿವಾಸಿ ಚೇತನ್ (28) ಮೃತಪಟ್ಟ ಯುವಕ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಚೇತನ್ ನಾಲ್ಕೈದು ತಿಂಗಳಿಂದ ನಿರುದ್ಯೋಗಿಯಾಗಿದ್ದ. ಕೆಲವರಿಂದ ಒಂದೂವರೆ ಲಕ್ಷ ಸಾಲ ಪಡೆದಿದ್ದ. ಅದನ್ನು ತೀರಿಸಲಾಗದೆ ಮನನೊಂದು ಮನೆಯಲ್ಲಿಯೇ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ದಾಬಸ್‌ಪೇಟೆ ಪೊಲೀಸರು ತಿಳಿಸಿದ್ದಾರೆ.

ಕಣ್ಣಿನ ಆಸ್ಪತ್ರೆಗಳಲ್ಲಿ ಪಟಾಕಿ ಗಾಯಕ್ಕೆ 200ಕ್ಕೂ ಹೆಚ್ಚು ಮಂದಿಗೆ ಚಿಕಿತ್ಸೆ

ಹಬ್ಬ ಮುಗಿದರೂ ನಿಲ್ಲದ ಪಟಾಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬ ಮುಗಿದರೂ ನಗರದಲ್ಲಿ ಪಟಾಕಿ ಅವಘಡಗಳು ನಿಂತಿಲ್ಲ. ಮಕ್ಕಳು ಸೇರಿ ವಿವಿಧ ವಯೋಮಾನದ 200ಕ್ಕೂ ಅಧಿಕ ಮಂದಿಯ ಕಣ್ಣಿಗೆ ಪಟಾಕಿ ಕಿಡಿ ಈ ವರ್ಷ ಹಾನಿ ಮಾಡಿದೆ.

ಗಾಯಗೊಂಡವರಲ್ಲಿ ಹೆಚ್ಚಿನವರು ಲಕ್ಷ್ಮಿ ಬಾಂಬ್, ಬಿಜಲಿ ಪಟಾಕಿ ಹಾಗೂ ಹೂ ಕುಂಡ ಸಿಡಿಸಿದವರಾಗಿದ್ದಾರೆ. ಮಿಂಟೊ ಕಣ್ಣಿನ ಆಸ್ಪತ್ರೆಗೆ ಇದೇ 20ರಿಂದ ಐದು ದಿನಗಳ ಅವಧಿಯಲ್ಲಿ ಪಟಾಕಿ ಸಂಬಂಧಿ ಗಾಯಕ್ಕೆ 45 ಮಂದಿ ಭೇಟಿ ನೀಡಿದ್ದಾರೆ. ಅವರಲ್ಲಿ 17 ಮಂದಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಐದು ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. 11 ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆದರೆ, ಉಳಿದವರು ಹೊರರೋಗಿ ವಿಭಾಗದಲ್ಲಿ ಚಿಕಿತ್ಸೆ ಪಡೆದು ತೆರಳಿದ್ದಾರೆ.

> ಈ ವರ್ಷ ಪಟಾಕಿ ಗಾಯ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದೆ. ಸೂಕ್ತ ಮುನ್ನೆಚ್ಚರಿಕೆ ವಹಿಸದ ಪರಿಣಾಮ ಮಕ್ಕಳು, ವೀಕ್ಷಕರೂ ಅಧಿಕ ಸಂಖ್ಯೆಯಲ್ಲಿ ಗಾಯಗೊಂಡಿದ್ದಾರೆ
>
> **ಡಾ. ನರೇನ್ ಶೆಟ್ಟಿ,** ನಾರಾಯಣ ನೇತ್ರಾಲಯದ ನಿರ್ದೇಶಕ

ಮಿಂಟೊ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದವರಲ್ಲಿ 20 ಮಂದಿ ಪಟಾಕಿ ಹಚ್ಚಿದವರಾದರೆ, 25 ಮಂದಿ ಪಟಾಕಿ ಸಿಡಿತವನ್ನು ವೀಕ್ಷಿಸುವ ವೇಳೆ ಗಾಯ-ಗೊಂಡವರಾಗಿದ್ದಾರೆ. ಈ ಆಸ್ಪತ್ರೆಯಲ್ಲಿ ಪಟಾಕಿ ಗಾಯಕ್ಕೆ ಚಿಕಿತ್ಸೆ ಪಡೆದವರಲ್ಲಿ ಮಹಿಳೆಯರಿಗಿಂತ ಪುರುಷರೇ ಅಧಿಕ ಸಂಖ್ಯೆಯಲ್ಲಿದ್ದಾರೆ.

ಮಕ್ಕಳ ಕಣ್ಣಿಗೆ ಹಾನಿ

ಪಟಾಕಿ ಸಿಡಿತದಿಂದ ಮಕ್ಕಳೇ ಅಧಿಕ ಸಂಖ್ಯೆಯಲ್ಲಿ ಗಾಯಗೊಂಡಿದ್ದಾರೆ. ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದವರಲ್ಲಿ 24 ಮಂದಿ ವಯಸ್ಕರಾದರೆ, 21 ಮಕ್ಕಳು ಪಟಾಕಿ ಕಿಡಿಯಿಂದಾದ ಕಣ್ಣಿನ ಗಾಯಕ್ಕೆ ಚಿಕಿತ್ಸೆ ಪಡೆದಿದ್ದಾರೆ. ಹಲವರ ಕಣ್ಣಿನ ರೆಪ್ಪೆಗಳು ಸುಟ್ಟಿವೆ. ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆ ಪಡೆದವರಲ್ಲಿ 37 ಮಂದಿ ವಯಸ್ಕರಾದರೆ, 56 ಮಂದಿ 18 ವರ್ಷದೊಳಗಿನವರಾಗಿದ್ದಾರೆ.

ನಾರಾಯಣ ನೇತ್ರಾಲಯ-ದಲ್ಲಿಯೂ ಪಟಾಕಿ ಗಾಯಕ್ಕೆ ಸಂಬಂಧಿಸಿದಂತೆ ಈ ವರ್ಷ ಹಬ್ಬದ ಅವಧಿಯಲ್ಲಿ ಅಧಿಕ ಮಂದಿ ಚಿಕಿತ್ಸೆ ಪಡೆದಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 93ಕ್ಕೆ ಏರಿಕೆಯಾಗಿದೆ. 61 ಪ್ರಕರಣಗಳಲ್ಲಿ ಸ್ವಯಂಪ್ರೇರಿತ ತಪ್ಪಿನಿಂದ ಗಾಯಗಳನ್ನು ಮಾಡಿಕೊಂಡರೆ, 32 ಪ್ರಕರಣಗಳಲ್ಲಿ ಪಟಾಕಿ ಸಿಡಿತ ವೀಕ್ಷಿಸು-ತ್ತಿರುವವರಾಗಿದ್ದಾರೆ. ಏಳು ಮಂದಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.

ವಿಕ್ಟೋರಿಯಾ ಆವರಣದಲ್ಲಿರುವ ಸುಟ್ಟಗಾಯಗಳ ವಿಭಾಗದಲ್ಲಿ ಐವರು ಚಿಕಿತ್ಸೆ ಪಡೆದುಕೊಂಡಿದ್ದಾರೆ. ನೇತ್ರಧಾಮದಲ್ಲಿ 18, ಶಂಕರ ಕಣ್ಣಿನ ಆಸ್ಪತ್ರೆ-ಯಲ್ಲಿ 13, ಶೇಖರ್ ಕಣ್ಣಿನ ಆಸ್ಪತ್ರೆಯಲ್ಲಿ 13, ಡಾ.ಅಗರ್ವಾಲ್ಸ್ ಆಸ್ಪತ್ರೆಯಲ್ಲಿ ಆರು ಮಂದಿ ಸೇರಿ ನಗರದ ವಿವಿಧ ಕಣ್ಣಿನ ಆಸ್ಪ-ತ್ರೆಗಳಿಂದ, 200ಕ್ಕೂ ಅಧಿಕ ಮಂದಿಗೆ ಪಟಾಕಿ ಗಾಯ ಸಂಬಂಧ ಚಿಕಿತ್ಸೆ ಒದಗಿಸಲಾಗಿದೆ.

ಸೆಕ್ಯೂರಿಟಿ ಗಾರ್ಡ್‌ಗೆ ಇರಿತ: ಬಂಧನ

ಬೆಂಗಳೂರು: ಶ್ರೀರಾಂಪುರದ ಮೆಟ್ರೊ ನಿಲ್ದಾಣದ ವಾಹನ ನಿಲುಗಡೆ ಪ್ರದೇಶದಲ್ಲಿ ದ್ವಿಚಕ್ರ ವಾಹನಗಳಿಂದ ಪೆಟ್ರೋಲ್ ಕಳವು ಮಾಡಿ ತಪ್ಪಿಸಿಕೊಳ್ಳುವ ವೇಳೆ, ತನ್ನನ್ನು ಹಿಡಿಯಲು ಯತ್ನಿಸಿದ ಸೆಕ್ಯೂರಿಟಿ ಗಾರ್ಡ್‌ಗೆ ಚೂರಿಯಿಂದ ಇರಿದಿದ್ದ ಆರೋಪಿಯನ್ನು ಶ್ರೀರಾಂಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಸವೇಶ್ವರನಗರ ನಿವಾಸಿ ವಿನಾಯಕ (22) ಬಂಧಿತ. ಸೆಕ್ಯೂರಿಟಿ ಗಾರ್ಡ್ ಗಿರೀಶ್ ಗಾಯಗೊಂಡವರು.

ಶ್ರೀರಾಂಪುರ ಮೆಟ್ರೊ ನಿಲ್ದಾಣದ ವಾಹನ ನಿಲುಗಡೆ ಸ್ಥಳದಲ್ಲಿ ದ್ವಿಚಕ್ರ ವಾಹನಗಳಿಂದ ಮಂಗಳವಾರ ಮುಂಜಾನೆ ಆರೋಪಿ ಪೆಟ್ರೋಲ್ ಕಳವು ಮಾಡಿ ಬಾಟಲ್‌ಗೆ ತುಂಬಿಸಿಕೊ-ಳ್ಳುತ್ತಿದ್ದ. ಅದನ್ನು ಗಮನಿಸಿದ ಸೆಕ್ಯೂರಿಟಿ ಗಾರ್ಡ್ ಗಿರೀಶ್ ಆರೋಪಿಯನ್ನು ಹಿಡಿಯಲು ಯತ್ನಿಸಿದ್ದರು. ಆಗ ತಪ್ಪಿಸಿ-ಕೊಳ್ಳಲು ಯತ್ನಿಸಿದಾಗ ಚೂರಿಯಿಂದ ಸೆಕ್ಯೂರಿಟಿ ಗಾರ್ಡ್‌ಗೆ ಇರಿದಿದ್ದ ಎಂದು ಪೊಲೀಸರು ಹೇಳಿದರು.

ಕುಟುಂಬ ಕಲಹ: ಗೃಹಿಣಿ ಆತ್ಮಹತ್ಯೆ

ದಾಬಸ್ ಪೇಟೆ: ಕುಟುಂಬ ಕಲಹಕ್ಕೆ ಮನನೊಂದು ಗೃಹಿಣಿಯೊಬ್ಬರು ಕೆರೆಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ತುಮಕೂರು ತಾಲ್ಲೂಕಿನ ಭೀಮಸಂದ್ರ ಗ್ರಾಮದ ನಿವಾಸಿ ಪ್ರಮೀಳಾ (49) ದಾಬಸ್‌ಪೇಟೆ ಸಮೀಪದ ದೇವರ ಹೊಸಹಳ್ಳಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಟಿ ದಿವ್ಯಾ ಸುರೇಶ್ ಕಾರು ಬೈಕ್‌ಗೆ ಡಿಕ್ಕಿ

ಮಹಿಳೆಗೆ ಗಾಯ, ಬ್ಯಾಟರಾಯನಪುರ ಠಾಣೆ ಪೊಲೀಸರಿಂದ ತನಿಖೆ

ಪ್ರಜಾವಾಣಿ ವಾರ್ತೆ

ದಿವ್ಯಾ ಸುರೇಶ್

ಬೆಂಗಳೂರು: ಬಿಗ್‌ಬಾಸ್ ಮಾಜಿ ಸ್ಪರ್ಧಿ ಹಾಗೂ ನಟಿ ದಿವ್ಯಾ ಸುರೇಶ್ ಅವರು ಸಂಚರಿಸುತ್ತಿದ್ದ ಕಾರು ಬೈಕ್‌ಗೆ ಡಿಕ್ಕಿಯಾದ ಪರಿಣಾಮ ಮಹಿಳೆಯೊಬ್ಬರು ಗಾಯಗೊಂಡಿದ್ದು, ನಟಿಯ ವಿರುದ್ಧ ಬ್ಯಾಟರಾಯನಪುರ ಸಂಚಾರ ಠಾಣೆಗೆ ದೂರು ನೀಡಲಾಗಿದೆ.

ಅಕ್ಟೋಬರ್ 4ರ ರಾತ್ರಿ 1.30ಕ್ಕೆ ಬ್ಯಾಟರಾಯನಪುರದ ಎಂ.ಎಂ. ರಸ್ತೆಯಲ್ಲಿ ದಿವ್ಯಾ ಅವರು ಕಾರಿನಲ್ಲಿ ತೆರಳುತ್ತಿದ್ದರು. ಆ ವೇಳೆ ಮುಂದೆ ಚಲಿಸುತ್ತಿದ್ದ ಬೈಕ್‌ಗೆ ಕಾರು ಹೊಡೆದಿದೆ. ಆದರೆ, ಅವರು ಕಾರನ್ನು ನಿಲುಗಡೆ ಮಾಡದೇ ಪರಾರಿ ಆಗಿದ್ದರು ಎಂದು ದೂರಲಾಗಿದೆ.

ಬೈಕ್‌ನಲ್ಲಿದ್ದ ಮಹಿಳೆಯ ಕಾಲಿಗೆ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದಿವ್ಯಾ ಅವರ ವಿರುದ್ಧ ಮಹಿಳೆಯ ಸಂಬಂಧಿ ಕಿರಣ್ ಅವರು ಸಂಚಾರ ಪೊಲೀಸರಿಗೆ ದೂರು ನೀಡಿದ್ದಾರೆ.

ವಿವರಣೆ ಪಡೆದ ಪೊಲೀಸರು: ಕಿರಣ್ ನೀಡಿದ ದೂರು ಆಧರಿಸಿ, ಆ ಮಾರ್ಗದ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಯಿತು. ಕಾರಿನ ನೋಂದಣಿ ಸಂಖ್ಯೆ ಆಧರಿಸಿ ಮಾಲೀಕರನ್ನು ಪತ್ತೆ ಮಾಡಲಾಯಿತು. ದಿವ್ಯಾ ಅವರಿಂದ ಘಟನೆ ಕುರಿತು ವಿವರಣೆ ಪಡೆದುಕೊಳ್ಳಲಾಗಿದೆ. ಕಾರನ್ನು ಜಪ್ತಿ ಮಾಡಲಾಗಿತ್ತು. ದಿವ್ಯಾ ಅವರು ಕಾರನ್ನು ಬಿಡಿಸಿಕೊಂಡು ಹೋಗಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ದೂರಿನಲ್ಲಿ ಏನಿದೆ ?

'ಅನುಷಾ ಅವರಿಗೆ ಅನಾರೋಗ್ಯವಿದ್ದ ಕಾರಣಕ್ಕೆ ಗಿರಿನಗರದ ಆಸ್ಪತ್ರೆಗೆ ತೆರಳುತ್ತಿದ್ದವು. ಬೈಕ್‌ನಲ್ಲಿ ಮಧ್ಯೆ ಅನುಷಾ ಕುಳಿತಿದ್ದರೆ, ನಾನು ಬೈಕ್ ಚಲಾಯಿಸುತ್ತಿದ್ದೆ, ಬೈಕ್ ಹಿಂದೆ ಅನಿತಾ ಅವರು ಕುಳಿತಿದ್ದರು. ಈ ವೇಳೆ ಬ್ಯಾಟರಾಯನಪುರದ ಎಂ.ಎಂ.ರಸ್ತೆ ಬಳಿ ನಾಯಿ ಬೊಗಳಿದ್ದಕ್ಕೆ ಸ್ವಲ್ಪ ಬಲಕ್ಕೆ ಬೈಕ್ ತಿರುಗಿಸಿದ್ದೆ. ಕಾರು, ಅನಿತಾ ಅವರ ಕಾಲಿಗೆ ಡಿಕ್ಕಿ ಹೊಡೆದಿತ್ತು. ಕಾರು ಡಿಕ್ಕಿಯಾದ ರಭಸಕ್ಕೆ ಬೈಕ್‌ನಲ್ಲಿದ್ದ ಮೂವರು ರಸ್ತೆಗೆ ಬಿದ್ದಿದ್ದೆವು. ಅನಿತಾ ಅವರ ಕಾಲಿಗೆ ಪೆಟ್ಟಾಗಿತ್ತು. ದಿವ್ಯಾ ಅವರು ಕಾರು ನಿಲ್ಲಿಸದೇ ಪರಾರಿಯಾಗಿದ್ದರು. ನಂತರ ಅನಿತಾ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತು' ಎಂದು ಕಿರಣ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಅನಿತಾ ಅವರಿಗೆ ಶಸ್ತ್ರ ಚಿಕಿತ್ಸೆಗೆ ₹2 ಲಕ್ಷ ಖರ್ಚಾಗಿದೆ. ದಿವ್ಯಾ ಸುರೇಶ್ ಅವರು ಗಾಯಾಳು ಅನಿತಾ ಅವರನ್ನು ಸಂಪರ್ಕಿಸಿಲ್ಲ ಎಂದು ಕಿರಣ್ ಆರೋಪಿಸಿದ್ದಾರೆ.

ಲೈಂಗಿಕ ದೌರ್ಜನ್ಯ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಾಹ ಆಗುವುದಾಗಿ ನಂಬಿಸಿ ಯುವತಿಯನ್ನು ಲೈಂಗಿಕವಾಗಿ ಬಳಸಿಕೊಂಡು ಬಳಿಕ ಅವರಿಗೆ ವಂಚಿಸಿದ್ದ ಆರೋಪಿಯನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಥಣಿಸಂದ್ರದ ನಿವಾಸಿ ಮೊಹಮ್ಮದ್ ಇಶಾಕ್ (30) ಬಂಧಿತ.

ಯುವತಿಗೆ ಇನ್‌ಸ್ಟಾಗ್ರಾಂ ಮೂಲಕ ಇಶಾಕ್ ಪರಿಚಯವಾಗಿದ್ದ. ಇಬ್ಬರ ನಡುವೆ ಸ್ನೇಹವಾಗಿತ್ತು. ಯುವತಿಗೆ ವಿವಾಹವಾಗುವುದಾಗಿ ಆರೋಪಿ ಭರವಸೆ ನೀಡಿದ್ದ. ಬಳಿಕ ಹೋಟೆಲ್‌ವೊಂದಕ್ಕೆ ಕರೆದೊಯ್ದು ಲೈಂಗಿಕವಾಗಿ ಬಳಸಿಕೊಂಡಿದ್ದ. ನಂತರ, ಇಶಾಕ್ ಬೇರೊಂದು ಯುವತಿಯ ಜತೆಗೆ ನಿಶ್ಚಿತಾರ್ಥ ಮಾಡಿಕೊಂಡಿರುವುದು ಗೊತ್ತಾಗಿದೆ. ಈ ಸಂಬಂಧ ಸಂತ್ರಸ್ತೆಯು ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಲಾರಿ- ಕಾರು ಅಪಘಾತ: ಇಬ್ಬರ ಸಾವು

ನೆಲಮಂಗಲ: ತಾಲ್ಲೂಕಿನ ಟಿ.ಬೇಗೂರು ಬಳಿಯ ರಾಷ್ಟ್ರೀಯ ಹೆದ್ದಾರಿ–48ರಲ್ಲಿ ಶುಕ್ರವಾರ ಮುಂಜಾನೆ ಲಾರಿ ಹಾಗೂ ಕಾರು ನಡುವೆ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗದಗ ಜಿಲ್ಲೆ ರೋಣ ತಾಲ್ಲೂಕಿನ ಶಿವನಗೌಡ ಪಾಟೀಲ (64) ಹಾಗೂ ಪ್ರಮೀಳಾ ಪಾಟೀಲ (45) ಮೃತಪಟ್ಟವರು.

ಕಾರಿನಲ್ಲಿದ್ದ ಮೃತರ ಸಂಬಂಧಿಗಳಾದ ಹೊನ್ನಮ್ಮ, ಸುನಿಲ್, ಬಸವರಾಜು ಅವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಒಂದೇ ಕಾರಿನಲ್ಲಿ ಐವರು ಗುರುವಾರ ರಾತ್ರಿ ಗದಗದಿಂದ ಹೊರಟಿದ್ದರು. ಅವರು ಶುಕ್ರವಾರ ಮುಂಜಾನೆ ಬೆಂಗಳೂರಿನತ್ತ ಬರುತ್ತಿದ್ದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಎಸ್‌. ಟಿ. ಸೋಮಶೇಖರ್ ಪಾಲ್ಗೊಂಡಿದ್ದರು

ಕಾಂಗ್ರೆಸ್ ಸಭೆ: ಸೋಮಶೇಖರ್ ಭಾಗಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಬಿಜೆಪಿಯಿಂದ ಉಚ್ಚಾಟನೆಯಾಗಿರುವ ಯಶವಂತಪುರ ಕ್ಷೇತ್ರದ ಶಾಸಕ ಎಸ್.ಟಿ.ಸೋಮಶೇಖರ್ ಅವರು ಕಾಂಗ್ರೆಸ್ ಸಭೆಯಲ್ಲಿ ಕಾಣಿಸಿಕೊಂಡರು.

ಮಾಗಡಿ ಮುಖ್ಯರಸ್ತೆಯ ಬಿಇಎಲ್ ಬಡಾವಣೆಯಲ್ಲಿ ಶುಕ್ರವಾರ ನಡೆದ ಯಶವಂತಪುರ ವಿಧಾನಸಭಾ ಕ್ಷೇತ್ರದ ಬೂತ್‌ಮಟ್ಟದ ಏಜೆಂಟ್ -2 ನೇಮಕಾತಿ ಸಭೆಯಲ್ಲಿ ಅವರು ಭಾಗಿ ಆಗಿದ್ದರು.

'ಪಕ್ಷ ನಿಷ್ಠೆ, ಸಂಘಟನೆ, ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸವನ್ನು ಯಾರು ಮಾಡುತ್ತಾರೊ ಅವರು ಸಮಾಜ ಸೇವಕರ ಸಾಲಿನಲ್ಲಿ ನಿಲ್ಲುತ್ತಾರೆ. ನಾಯಕತ್ವ, ಅಧಿಕಾರ, ಹುಡುಕಿಕೊಂಡು ಬರುತ್ತದೆ' ಎಂದು ಸೋಮಶೇಖರ್ ಹೇಳಿದರು.

'ಕಾರ್ಯಕರ್ತರು ಪಕ್ಷ ಸಂಘಟನೆಗೆ ಮುಂದಾದಾಗ ಸರ್ಕಾರದ ಯೋಜನೆಗಳು ನಿಜವಾದ ಫಲಾನು-ಭವಿಗಳಿಗೆ ತಲುಪುತ್ತವೆ. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ತೊಡಗಿಸಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

'ಬೂತ್‌ಮಟ್ಟದಲ್ಲಿ ಮತದಾರರ ಪಟ್ಟಿಗೆ 18 ವರ್ಷ ತುಂಬಿದವರನ್ನು ಸೇರಿಸುವುದು, ಎರಡು ಕಡೆ ಹೆಸರು ಇದ್ದರೆ ತೆಗೆಸುವುದು, ಬೂತ್ ವ್ಯಾಪ್ತಿಯಲ್ಲಿ ವಾಸಿಸುವವರನ್ನು ಪಟ್ಟಿಗೆ ಸೇರಿಸುವ, ಮೃತರ ಹೆಸರನ್ನು ತೆಗೆಸುವ ಕೆಲಸವನ್ನು ಸದಸ್ಯರು ಮಾಡಬೇಕು' ಎಂದು ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ತಿಳಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಾಲರಾಜ್, ಕೆಪಿಸಿಸಿ ಜಾಲತಾಣದ ಮುಖ್ಯಸ್ಥ ವಿಜಯ ಮತ್ತಿಕಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೇವಣಸಿದ್ದಯ್ಯ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸಾವಿತ್ರಿ ಹಾಜರಿದ್ದರು.

ಶಾಲಾ ವಾಹನ ಚಾಲಕರ ಡಿ.ಎಲ್ ಅಮಾನತಿಗೂ ಶಿಫಾರಸು

ಮದ್ಯ ಸೇವಿಸಿ ಚಾಲನೆ: 36 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯಸೇವಿಸಿ ಶಾಲಾ ವಾಹನ ಚಾಲನೆ ಮಾಡುತ್ತಿದ್ದ 36 ಚಾಲಕರ ವಿರುದ್ಧ ನಗರದ ಸಂಚಾರ ವಿಭಾಗದ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿ-ದ್ದಾರೆ. ಚಾಲಕರ ಚಾಲನಾ ಪರವಾನಗಿ ಅಮಾನತುಪಡಿಸುವಂತೆಯೂ ಸಾರಿಗೆ ಇಲಾಖೆಗೆ ಶಿಫಾರಸು ಮಾಡಿದ್ದಾರೆ.

ಚಾಲಕರು ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದಾರೆ ಎಂಬ ದೂರು ಬಂದಿತ್ತು. ಶುಕ್ರವಾರ ಬೆಳಿಗ್ಗೆ ದಿಢೀರನೇ ಸಂಚಾರ ಪೊಲೀಸರು ಕಾರ್ಯಾಚರಣೆ ನಡೆಸಿದರು.

ಕಾರ್ಯಾಚರಣೆಯಲ್ಲಿ ವಿವಿಧ ಮಾದರಿಯ 5,881 ಶಾಲಾ ವಾಹನಗಳನ್ನು ತಡೆದು ಆಲ್ಕೊಮೀಟರ್ ಉಪಕರಣದ ಮೂಲಕ ಚಾಲಕರ ತಪಾಸಣೆ ಮಾಡಲಾಯಿತು. ಆ ಪೈಕಿ 36 ಮಂದಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿರುವುದು ಕಂಡುಬಂತು. ಅವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

ಚಾಲಕರ ವಿರುದ್ಧ ಪಾನಮತ್ತ ಚಾಲನೆ ಮತ್ತು ಅಜಾಗರೂಕ ಚಾಲನೆ ಆರೋಪದ ಅಡಿ ಪ್ರಕರಣ ದಾಖಲಿಸಲಾಗಿದೆ. ಎಫ್.ಸಿ ಹೊಂದಿರದ ವಾಹನಗಳನ್ನು ಜಪ್ತಿ ಮಾಡಿಕೊಂಡು ಸಾರಿಗೆ ಇಲಾಖೆ ಅಧಿಕಾರಿಗಳ ವಶಕ್ಕೆ ನೀಡಲಾಗಿದೆ ಎಂದು ಸಂಚಾರ ಪೊಲೀಸ್ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

'ಸಂಬಂಧಪಟ್ಟ ಶಾಲಾ ಆಡಳಿತ ಮಂಡಳಿಗೂ ನೋಟಿಸ್ ಜಾರಿ ಮಾಡಿ ಮಾಹಿತಿ ಕೇಳಿದ್ದೇವೆ. ಅವರು ನೀಡುವ ಮಾಹಿತಿ ಆಧರಿಸಿ ಸಾರಿಗೆ ಇಲಾಖೆಗೆ ವರದಿ ಕೊಡುತ್ತೇವೆ. ಕೆಲವು ಶಾಲೆಗಳು ಮಕ್ಕಳನ್ನು ಕರೆದೊಯ್ಯಲು ಖಾಸಗಿ ವಾಹನಗಳನ್ನು ಬಳಸುತ್ತಿರುವುದು ಕಂಡುಬಂದಿದೆ. ಈ ಬಗ್ಗೆಯೂ ಸಾರಿಗೆ ಇಲಾಖೆಗೆ ಮಾಹಿತಿ ನೀಡುತ್ತೇವೆ' ಎಂದೂ ಅವರು ತಿಳಿಸಿದರು.

ನಾಲ್ಕು ಸಂಚಾರ ವಿಭಾಗದಲ್ಲಿ ಪೊಲೀಸರ ಕಾರ್ಯಾಚರಣೆ

ವಿಭಾಗ	ತಪಾಸಣೆ ಮಾಡಿದ ವಾಹನಗಳ ಸಂಖ್ಯೆ	ಪ್ರಕರಣ
ಪೂರ್ವ	1,653	9
ಪಶ್ಚಿಮ	1,118	9
ಉತ್ತರ	2,122	13
ದಕ್ಷಿಣ	988	5
ಒಟ್ಟು	5,881	36

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ. 17-CWS-MYSS-2025-26 ದಿನಾಂಕ: 18.10.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಅಸ್ತಿತ್ವದಲ್ಲಿರುವ ಪೈಪ್‌ಲೈನ್ ಅನ್ನು ಶಕ್ತಿಯುತವಾದ ದಕ್ಷ ಅಲ್ಯುಮಿನಿಯಂನಿಂದ ಬದಲಾವಣೆ ಮಾಡುವುದು.	ರೂ. 32,94,010/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.11.2025, 15:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು/ಕೇಂದ್ರ ಕಾರ್ಯಾಗಾರ/ಮೈಸೂರು

PUB/577/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

IN THE COURT OF THE PRL SENIOR CIVIL JUDGE AT KOLAR

O.S. No. 340/2020

BETWEEN: K.V. Krishnappa, Since dead by LRS And others ...**PLAINTIFFS**

AND: K.V. Venkateshappa And others ...**DEFENDANTS**

PUBLIC NOTICE TO THE DEFENDANT No. 17 UNDER ORDER 5 RULE 20 OF CPC

Smt. Anasuya, W/o Anjineyagowda, aged about 45 years, R/at Care of Arjun Gowda No.2. IPP Quarters Premises of K.C.General Hospital, Malleshwaram Bangalore.

The Plaintiffs have filed above suit against the defendants for the relief of partition and such other reliefs. This Hon'ble court be pleased to issued notice to you defendant No. 17, but the same is not served on you. Hence you the Defendant No. 17, is summoned to appear before this Hon'ble court to answer all such questions relating to the above proceedings in order to enable the court effectually and completely to adjudicate upon and settle all the questions involved.

The above matter is coming up for hearing on proposed Defendant no.17 may appear before this court in person or through their advocate on **10/12/2025** at **11.00 AM** to file his objections if any. Failing which the matter will be heard and determined exparte in your absence.

Given under my hand and seal of this Court, on this 23-10-2025.

By order of the Court, Sheristedar, Prl. Senior Civil Judge and C.J.M Court, Kolar

Advocate for Plaintiffs: **K.V. Shankarappa** Kolar.

ನೈಋತ್ಯ ರೈಲ್ವೆ

ಇ-(ಐಆರ್‌ಇಪಿಎಸ್) ಟೆಂಡರು ಸೂಚನೆ ಸಂ.: 36 UBL 2025-26 ದಿನಾಂಕ: 17.10.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಪ್ರಸ್ತಾವಿತ ಬದಲಾಯಿಸುವ ಕೊಠಡಿ & ಮಹಿಳೆಯರ ಪ್ರತ್ಯೇಕ ಕೊಠಡಿ, ಸ್ಟೇಷನ್ ಮಾಸ್ಟರ್ ಮತ್ತು ಪಾಯಿಂಟ್ಸ್‌ವುಮೆನ್ ಕೊಠಡಿಗಳ ನಿರ್ಮಾಣ (ಒಟ್ಟು – 24 ನಿಲ್ದಾಣಗಳು). (ನಿರ್ವಹಣೆ ಅವಧಿ: 03 ವರ್ಷಗಳು)	ರೂ. 2,76,32,347.00
2	ಹುಬ್ಬಳ್ಳಿ ವಿಭಾಗ: ಬೈರಿದೇವರಕೊಪ್ಪ (ಬಿಡಿಕೆಎ) (ಹಳೆಯ ಅಮರ್‌ಗೋಲ್ ನಿಲ್ದಾಣ) ದಲ್ಲಿ ಪ್ರಸ್ತಾವಿತ ಬಾಲಾಸ್ಟ್‌ನ ಡಿಪೋ.	ರೂ. 2,52,69,079.00
3	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ–ಗದಗ ವಿಭಾಗ: ಉಪ ಕಾಮಗಾರಿ–1: ಪ್ಯಾಸೆಂಜರ್ ಲೂಪ್ ಲೈನುಗಳಲ್ಲಿ 13.625 ಟಿಕೆಎಂ ಉದ್ದಕ್ಕೆ ಟಿಆರ್‌ಆರ್(ಎಸ್). ಉಪ ಕಾಮಗಾರಿ–2: ಹುಬ್ಬಳ್ಳಿ–ಗದಗದಲ್ಲಿ (ಯುಬಿಎಲ್–ಜಿಡಿಜಿ) 13.625 ಕಿಮೀ. ಉದ್ದದ ಲೂಪ್ ಲೈನಿಗೆ ಸ್ಲೀಪರ್ ಸಾಂದ್ರತೆಯನ್ನು ಹೆಚ್ಚಿಸುವುದು.	ರೂ. 3,79,72,986.00
4	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ–ಗದಗ (ಯುಬಿಎಲ್–ಜಿಡಿಜಿ) ವಿಭಾಗ: ಕೆಎನ್‌ಎನ್‌ಎಲ್ ಪ್ರಾಧಿಕಾರ ಉಪ-ವಿಭಾಗ – 02 ಹೂವಿನಹಡಗಲಿಯಲ್ಲಿ ಡಿಪೋಸಿಟ್ ಅವಧಿಯಂತೆ ಹುಲಿಕೋಟಿ–ಬಿಂಕದಕಟ್ಟಿ (ಎಲ್‌ಕೆಟಿ–ಬಿಕೆಐಟಿ) ನಡುವೆ ಕಿಮೀ. 49/630 ರಲ್ಲಿ ಆರ್‌ಹೆಚ್ ಗಿರ್ಡರ್ / ಕಟ್ ಮತ್ತು ಕವರ್ ಮಾದರಿಯಲ್ಲಿ ಪ್ರೀಕಾಸ್ಟ್ ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್ ಮೂಲಕ ಕೆನಾಲ್ ಕ್ರಾಸಿಂಗ್‌ನ ನಿರ್ಮಾಣ ಕಾರ್ಯ.	ರೂ. 2,49,36,775.00
5	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ–ಗದಗ (ಯುಬಿಎಲ್–ಜಿಡಿಜಿ) ವಿಭಾಗ: ಹುಬ್ಬಳ್ಳಿ–ಗದಗ (ಯುಬಿಎಲ್–ಜಿಡಿಜಿ) ವಿಭಾಗದಲ್ಲಿ ಅಣ್ಣಿಗೇರಿ ಯಾರ್ಡ್ (ಎನ್‌ಜಿಆರ್) ನ ಕಿಮೀ. 36/0–010 ರಲ್ಲಿ ನಿಯಮಿತ ಎತ್ತರದ ಸಬ್‌ವೇ (ಎಲ್‌ಹೆಚ್‌ಎಸ್) ಯ ನಿರ್ಮಾಣ / ವಿಸ್ತರಣೆ.	ರೂ. 1,84,55,233.00
6	ಹುಬ್ಬಳ್ಳಿ ವಿಭಾಗ: ಗದಗ–ಹೊಟಗಿ (ಜಿಡಿಜಿ–ಹೆಚ್‌ಜಿ) ವಿಭಾಗ: ಬಿಜಾಪುರ – ಮುಗಲಳ್ಳಿ (ಬಿಜೆಪಿ–ಎಂಜಿಎಲ್) ವಿಭಾಗದಲ್ಲಿ ಓಆರ್‌ಎನ್ 3 ರ ಪ್ರಯುಕ್ತ ಆರ್‌ಹೆಚ್ ಗಿರ್ಡರ್ / ಕಟ್ ಮತ್ತು ಕವರ್ ಮಾದರಿಯ ಮೂಲಕ ಪ್ರೀಕಾಸ್ಟ್ ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ಗಳ ಮೂಲಕ ಬ್ರಿಡ್ಜ್ ನಂ. 33ಬಿ & 34ಎ (ಡೌನ್ ಲೈನ್) ಯ ಪುನರ್‌ನಿರ್ಮಾಣ.	ರೂ. 1,60,07,327.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.11.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ ಹುಬ್ಬಳ್ಳಿ

PUB/573/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಅರಣ್ಯ ಇಲಾಖೆ

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೊಡ್ಡಬಳ್ಳಾಪುರ ರಸ್ತೆ, ಸಾವಕನಹಳ್ಳಿ ಗೇಟ್ ದೇವನಹಳ್ಳಿ – 562 110, ದೂರವಾಣಿ : 080–2978 7088, ಇಮೇಲ್ : dcfrural@gmail.com

ಸಂಖ್ಯೆ : ಕೆ.ಎಫ್.ಡಿ–ಬಿ.ಆರ್.ಡಿ.0ಎ5/2025–ಡಿ.ಸಿ.ಎಫ್./ಬೆಂಗಳೂರು ಗ್ರಾ. ವಿಭಾಗ ದಿನಾಂಕ : 19–10–2025

ಪತ್ರಿಕಾ ಪ್ರಕಟಣೆ

ಈ ಮೂಲಕ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಕಾರನಾಳ ಕೆರೆ ಅಂಗಳದಲ್ಲಿ ಪಿ.ಎಂ. ಕುಸುಮ ಫೀಡರ್ ಲೆವೆಲ್ ಸೋಲರೈಸೇಷನ್ ಯೋಜನೆಯಡಿಯಲ್ಲಿ ಸೌರ ಘಟಕಗಳನ್ನು ಸ್ಥಾಪಿಸಲು ಕಾಮಗಾರಿಯನ್ನು ಕೈಗೊಳ್ಳಲು ಸಂಬಂಧಿಸಿದಂತೆ ಪ್ರಸ್ತಾಪಿತ ಪ್ರದೇಶದಲ್ಲಿರುವ ಕಾಮಗಾರಿಗೆ ಅಡ್ಡಬರುತ್ತಿರುವ ವಿವಿಧ ಜಾತಿಯ 247 ಮರಗಳ ತೆರವಿಗಾಗಿ ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಬೆಂಗಳೂರು ವಿದ್ಯುತ್ ಕಂಪನಿ ನಿಯಮಿತ ರವರು ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿರುತ್ತಾರೆ, ವಿವರಗಳು ಈ ಕೆಳಕಂಡಂತಿರುತ್ತವೆ.

ಯೋಜನೆ ಹೆಸರು : ಪಿ.ಎಂ. ಕುಸುಮ ಫೀಡರ್ ಲೆವೆಲ್ ಸೋಲರೈಸೇಷನ್ ಯೋಜನೆಯಡಿಯಲ್ಲಿ ಸೌರ ಘಟಕಗಳನ್ನು ಸ್ಥಾಪಿಸುವ ಕಾಮಗಾರಿ, ಏಜೆನ್ಸಿಯ ಹೆಸರು : ಕಾರಾಗೃಹ ಮತ್ತು ಸುಧಾರಣಾ ಸೇವಗಳು ಇಲಾಖೆ ಬೆಂಗಳೂರು, ಮರ ತೆರವುಗೊಳಿಸುವ ಉದ್ದೇಶ : ಪಿ.ಎಂ. ಕುಸುಮ ಫೀಡರ್ ಲೆವೆಲ್ ಸೋಲರೈಸೇಷನ್ ಯೋಜನೆಯಡಿಯಲ್ಲಿ ಸೌರ ಘಟಕಗಳನ್ನು ಸ್ಥಾಪಿಸುವ ಕಾಮಗಾರಿ ಮಾಡಲು, ಯೋಜನಾ ಪ್ರದೇಶದಲ್ಲಿ ಅಡ್ಡ ಬರುತ್ತಿರುವ / ತೆರವುಗೊಳಿಸಬೇಕಾಗಿರುವ ಮರಗಳು : 247, ಆಕ್ಷೇಪಣೆ ಸಲ್ಲಿಸಲು / ಹೆಚ್ಚಿನ ಮಾಹಿತಿ ಪಡೆಯಲು (ಸಾರ್ವಜನಿಕರು ನೇರವಾಗಿ / ಇ–ಮೇಲ್ / ಅಂಚೆ ಮುಖಾಂತರ ಈ ಕೆಳಸಹಿದಾರರ ಕಛೇರಿಗೆ ಸಲ್ಲಿಸಬಹುದು / ಮಾಹಿತಿಯನ್ನು ಪಡೆಯಬಹುದು) ವಿಳಾಸ : ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ – ದೊಡ್ಡಬಳ್ಳಾಪುರ ಹೆದ್ದಾರಿ, ಸಾವಕನಹಳ್ಳಿ ಗೇಟ್, ದೇವನಹಳ್ಳಿ – 562 110, ಇ–ಮೇಲ್ : dcfrural@gmail.com, ದೂರವಾಣಿ : 080 – 2990 7088, ಆಕ್ಷೇಪಣೆಗಳನ್ನು ಸಲ್ಲಿಸಬೇಕಾದ ಅವಧಿ : ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗಾಗಿ, ಸೂಚನೆ : ಆಕ್ಷೇಪಣೆಗಳು ಪ್ರಸ್ತಾವಿತ ಯೋಜನೆಗೆ ಮಾತ್ರ ಸಂಬಂಧಿಸಿರಬೇಕು.

ಮೇಲ್ಕಂಡ ಪ್ರದೇಶದಲ್ಲಿನ ಮರಗಳನ್ನು ತೆರವುಗೊಳಿಸುವ ಸಂಬಂಧ ಸಾರ್ವಜನಿಕರ ಆಕ್ಷೇಪಣೆ / ಸಲಹೆಗಳಿದ್ದಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976 ಸೆಕ್ಷನ್ 8(3)(vii) ಪ್ರಕಾರ ಸಲಹೆ – ಸೂಚನೆಗಳನ್ನು ನೀಡಲು ಆಹ್ವಾನಿಸಲಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ವಾಸಾಸಂಇ/ ಬೆಂಗ್ರಾಜ/3383/ಮಣಿಪಾಲ್/2024–25

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ– 561203

ಸಂ.: DPA/TP/CLU/26/2025-26 ದಿನಾಂಕ: 24.10.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಬಿಐಎಪಿಎ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿನ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಆರ್. ಆನಂದಮೂರ್ತಿ ಬಿನ್ ಲೇಟ್॥ ವಿ. ರಾಮಯ್ಯ	ಯಲಹಂಕ	ಹೆಸರಘಟ್ಟ – 2	ಅದ್ದೆವಿಶ್ವನಾಥಪುರ	228/2	1–18	ವ್ಯವಸಾಯ	ವಸತಿ

ಷರಾ: ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಚಿಟಿಕೆ ಸುದ್ದಿ

ಪತಿಗೆ ಮೂತ್ರಪಿಂಡ ದಾನ ಮಾಡಿದ ಪತ್ನಿ

ಮೂತ್ರಪಿಂಡ ಕಸಿ ಮಾಡಿಸಿಕೊಂಡ ಪತಿ ಹಾಗೂ ಪತ್ನಿ ಜೊತೆ ವೈದ್ಯರ ತಂಡ

ಕೆ.ಆರ್.ಪುರ: 41 ವರ್ಷದ ಪತಿಯ ಜೀವ ಉಳಿಸಲು ಪತ್ನಿಯೇ ಮೂತ್ರಪಿಂಡ ದಾನ ಮಾಡಿ ಮಾನವೀಯತೆ ಮೆರೆದಿದ್ದಾರೆ.

ಪಶ್ಚಿಮ ಬಂಗಾಳ ಮೂಲದ ವ್ಯಕ್ತಿಯೊಬ್ಬರು ಮೂತ್ರಪಿಂಡ ವೈಫಲ್ಯದಿಂದ ವೈಟ್‌ಫೀಲ್ಡ್‌ನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು.

ಸಮಸ್ಯೆಯನ್ನು ಮನಗಂಡ ವೈದ್ಯರ ತಂಡ, ಪತ್ನಿಯ ಮೂತ್ರಪಿಂಡವನ್ನು ಯಶಸ್ವಿಯಾಗಿ ಕಸಿ ಮಾಡಿ ಜೀವ ಉಳಿಸಿದೆ.

‘ಸಾಮಾನ್ಯವಾಗಿ ಮಧುಮೇಹ ಅಥವಾ ರಕ್ತದೊತ್ತಡ ಸಮಸ್ಯೆ ಕಾಣಿಸಿಕೊಂಡ ಹತ್ತರಿಂದ ಹದಿನೈದು ವರ್ಷ ಬಳಿಕ ಮೂತ್ರಪಿಂಡ ಹಾನಿಯಾಗುವ ಸಂಭವವಿರುತ್ತದೆ. ಈ ವ್ಯಕ್ತಿಗೆ ಮೂರು ವರ್ಷಗಳಲ್ಲಿ ಮೂತ್ರಪಿಂಡ ಸಮಸ್ಯೆ ದೃಢಪಟ್ಟಿತ್ತು. ಪ್ರಾರಂಭಿಕ ಹಂತದಲ್ಲಿ ತಪಾಸಣೆ ಹಾಗೂ ಜೀವನ ಶೈಲಿ ಬದಲಾಯಿಸಿದರೆ ಕಿಡ್ನಿ ಹಾನಿ ತಡೆಯಬಹುದು’ ಎಂದು ವೈದ್ಯರಾದ ಹರೀಶ್ ಬಾಬು, ದಿಲೀಪ್ ಹಾಗೂ ಪ್ರಮೋದ್ ಹೇಳಿದರು.

ತೆರಿಗೆ ವಂಚನೆ ಬಸ್ ವಶಕ್ಕೆ

ಬೆಂಗಳೂರು: ತೆರಿಗೆ ಪಾವತಿಸದೇ ವಂಚಿಸುತ್ತಿದ್ದ ಖಾಸಗಿ ಬಸ್‌ಗಳನ್ನು ಸಾರಿಗೆ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ನಗರದ ಹೊರ ವಲಯದ ಅತ್ತಿಬೆಲೆ ಚೆಕ್‌ಪೋಸ್ಟ್‌ನಲ್ಲಿ ಶುಕ್ರವಾರ ಬೆಳಿಗ್ಗೆಯಿಂದಲೇ ಜಂಟಿ ಆಯುಕ್ತರಾದ ಎಂ.ಪಿ.ಓಂಕಾರೇಶ್ವರಿ, ಎಂ.ಶೋಭಾ, ಎನ್.ಜಿ.ಗಾಯತ್ರಿದೇವಿ ನೇತೃತ್ವದಲ್ಲಿ ಕ್ಷಿಪ್ರ ಕಾರ್ಯಾಚರಣೆ ನಡೆಸಲಾಯಿತು. ಈ ವೇಳೆ ತೆರಿಗೆ ಪಾವತಿಸದೇ ಬಸ್‌ನಲ್ಲಿ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದುದು ಕಂಡು ಬಂತು. 30ಕ್ಕೂ ಹೆಚ್ಚು ಬಸ್‌ಗಳನ್ನು ಈ ವೇಳೆ ವಶಪಡಿಸಿಕೊಳ್ಳಲಾಯಿತು.

ಬಸ್‌ನಲ್ಲಿ ಪ್ರಯಾಣಿಸುತ್ತಿದ್ದವರಿಗೆ ತೊಂದರೆ ಆಗದಂತೆ ಪರ್ಯಾಯ ವ್ಯವಸ್ಥೆಯನ್ನು ಸಾರಿಗೆ ಇಲಾಖೆ ಸಿಬ್ಬಂದಿ ಮಾಡಿದರು. ಪ್ರಯಾಣಿಕರಿಂದ ಯಾವುದೇ ಹಣ ಪಡೆಯದೇ ನಿಗದಿತ ಸ್ಥಳಗಳಿಗೆ ಬಿಡಲು ವ್ಯವಸ್ಥೆಯನ್ನೂ ಮಾಡಲಾಯಿತು.

ಈ ವೇಳೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ದೀಪಕ್, ಪ್ರಮತೇಶ ಹಾಗೂ ರಾಜಕುಮಾರ್, ಮೋಟಾರು ವಾಹನ ನಿರೀಕ್ಷಕರಾದ ನವೀನ, ವಿಶ್ವನಾಥ್ ಶೆಟ್ಟಿ, ಅಮೂಲ್ಯಾ, ಸುಧಾಕರ್, ನರಸಿಂಹಮೂರ್ತಿ ಹಾಗೂ ರಾಜೇಶ್ ಹಾಜರಿದ್ದರು.

ಪಥಸಂಚಲನ ಅನುಮತಿಗೆ ಮನವಿ

ಬೆಂಗಳೂರು: ಭೀಮ್ ಆರ್ಮಿಯಿಂದ ನವೆಂಬರ್ 2ರಂದು ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ‘ಭೀಮ್ ಆರ್ಮಿ ಭಾರತ್ ಏಕ್ತಾ ಮಿಷನ್’ ಅಡಿಯಲ್ಲಿ ಸಂವಿಧಾನ ಪೀಠಿಕೆ, ನೀಲಿ ಶಾಲು, ಬಿದರಿನ ಕೋಲು ಅಥವಾ ಖಡ್ಗ, ಪರವಾನಗಿ ಪಡೆದ ಬಂದೂಕು ಹಿಡಿದುಕೊಂಡು ಪಥ ಸಂಚಲನ ನಡೆಸಲು ಅನುಮತಿ ನೀಡುವಂತೆ ಕಲಬುರಗಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ ಎಂದು ಭೀಮ್ ಆರ್ಮಿ ರಾಜ್ಯ ಘಟಕದ ಅಧ್ಯಕ್ಷ ಡಿ.ಎಸ್. ರಾಜ್‌ಗೋಪಾಲ್ ತಿಳಿಸಿದರು.

ಮೊಬೈಲ್‌ನಲ್ಲಿ ಟ್ರಾಫಿಕ್ ಸಿಗ್ನಲ್ ಮಾಹಿತಿ

ಮ್ಯಾಪಲ್ಸ್ ಆ್ಯಪ್‌ನಲ್ಲಿ ಟ್ರಾಫಿಕ್ ರಿಯಲ್ ಟೈಮ್ ಮಾಹಿತಿ; ಪ್ರಾಯೋಗಿಕ ಜಾರಿ

• ಖಲೀಲಅಹ್ಮದ ಶೇಖ

ಬೆಂಗಳೂರು: ‘ಸಿಲಿಕಾನ್ ಸಿಟಿ’ಯ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಹಸಿರು, ಕೆಂಪು ನಿಶಾನೆ ತೋರುವ ಸಮಯ ಎಷ್ಟು ಸೆಕೆಂಡ್‌ಗಳವರೆಗೆ ಇರಲಿದೆ ಎಂಬ ರಿಯಲ್ ಟೈಮ್ ಮಾಹಿತಿಯನ್ನು ಮ್ಯಾಪಲ್ಸ್ ಆ್ಯಪ್‌ನಲ್ಲಿ ಲೈವ್ ಆಗಿ ನೀಡಲಾಗುತ್ತದೆ. ಬೆಂಗಳೂರು ನಗರದಲ್ಲಿ ಮೊದಲ ಬಾರಿಗೆ ಇದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ. ಇದರಿಂದ ಯಾವ ರಸ್ತೆಯಲ್ಲಿ ಎಷ್ಟು ಸಮಯದವರೆಗೆ ಸಂಚಾರ ದಟ್ಟಣೆ ಇರಲಿದೆ ಎಂಬ ಮಾಹಿತಿಯನ್ನು ಪ್ರಯಾಣಿಕರು ಅಂಗೈಯಲ್ಲಿ ಪಡೆದುಕೊಳ್ಳಬಹುದು.

ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗ, ಅರ್ಕಾಡಿಸ್ ಇಂಡಿಯಾ ಮತ್ತು ಮ್ಯಾಪಲ್ಸ್ (ಮ್ಯಾಪ್ ಮೈ ಇಂಡಿಯಾ) ಜಂಟಿಯಾಗಿ ಈ ಉಪಕ್ರಮವನ್ನು ಜಾರಿಗೊಳಿಸಿವೆ. ಮ್ಯಾಪಲ್ಸ್ ಆ್ಯಪ್ ಬಳಕೆದಾರರು ಬೆಂಗಳೂರು ನಗರದ ಟ್ರಾಫಿಕ್ ಸಿಗ್ನಲ್‌ಗಳು ಸಮೀಪಿಸುತ್ತಿದ್ದಂತೆಯೇ ಟ್ರಾಫಿಕ್ ಸಿಗ್ನಲ್‌ಗಳು ಕೆಂಪು ಅಥವಾ ಹಸಿರು ನಿಶಾನೆಗೆ ಬದಲಾಗಲು ಎಷ್ಟು ಸೆಕೆಂಡುಗಳಿವೆ ಎಂಬ ನಿಖರ ಮಾಹಿತಿಯನ್ನು ಈಗ ಮೊಬೈಲ್‌ನಲ್ಲಿಯೇ ವೀಕ್ಷಿಸಬಹುದು.

ಪ್ರತಿ ಸಿಗ್ನಲ್‌ಗೂ ಕಾಲಮಿತಿ ಅಳವಡಿಸಿ ವಾಹನ ಸಂಚಾರ ನಿಯಂತ್ರಣ ಮಾಡುವ ಹಳೆಯ ವ್ಯವಸ್ಥೆಯ ಬದಲಿಗೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿಕೊಂಡು ಆಯಾ ರಸ್ತೆಗಳಲ್ಲಿನ ವಾಹನ ದಟ್ಟಣೆಯನ್ನು ಗ್ರಹಿಸಿ ಹಸಿರು ನಿಶಾನೆ ನೀಡುವ ಅಡ್ಯಾಪ್ಟಿವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್ (ಎಟಿಸಿಎಸ್) ನಗರದ 169 ಜಂಕ್ಷನ್‌ಗಳಲ್ಲಿ ಕಾರ್ಯಾಚರಣೆ ಮಾಡುತ್ತಿದೆ. ಈ ಟ್ರಾಫಿಕ್ ಸಿಗ್ನಲ್‌ಗಳು ಎಷ್ಟು ಸೆಕೆಂಡುಗಳ ಕಾಲ ಹಸಿರು, ಕೆಂಪು ನಿಶಾನೆ ತೋರುತ್ತವೆ ಎಂಬುದನ್ನು ಮ್ಯಾಪಲ್ಸ್ ಆ್ಯಪ್‌ನಲ್ಲಿ ನೋಡಬಹುದು.

ಮ್ಯಾಪಲ್ಸ್ ಆ್ಯಪ್‌ನಲ್ಲಿ ಟ್ರಾಫಿಕ್ ಸಿಗ್ನಲ್ ರಿಯಲ್ ಟೈಮ್ ಬಿತ್ತರಿಸುತ್ತಿದೆ

ಮುಖ್ಯಾಂಶಗಳು

- 169 ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಎಐ ಟ್ರಾಫಿಕ್ ಸಿಗ್ನಲ್‌ಗಳಿಗೆ ಮಾತ್ರ ಅನ್ವಯ
- ಈ ಟ್ರಾಫಿಕ್ ಸಿಗ್ನಲ್‌ಗಳ 500 ಮೀಟರ್ ದೂರದಿಂದಲೇ ಕೌಂಟ್‌ಡೌನ್ ಅವಧಿ ಬಿತ್ತರ
- ಸಂಚಾರ ಪೊಲೀಸ್ ವಿಭಾಗ, ಮ್ಯಾಪಲ್ಸ್, ಅರ್ಕಾಡಿಸ್ ಇಂಡಿಯಾ ನಡುವೆ ಒಪ್ಪಂದ

‘ಹಲವು ಆವಿಷ್ಕಾರಗಳಿಗೆ ಮ್ಯಾಪಲ್ಸ್ ಸಾಕ್ಷಿ’

‘ಟ್ರಾಫಿಕ್ ಸಿಗ್ನಲ್‌ನ ಹಸಿರು ಅಥವಾ ಕೆಂಪು ನಿಶಾನೆ ತೋರುವ ಸಮಯ ಎಷ್ಟು ಸೆಂಕಡ್‌ಗಳವರೆಗೆ ಇರಲಿದೆ ಎಂಬ ಮಾಹಿತಿಯನ್ನು ಈಗ ಮ್ಯಾಪಲ್ಸ್ ಆ್ಯಪ್‌ನಲ್ಲಿಯೂ ನೋಡಬಹುದು. ಸ್ವದೇಶಿ ನಿರ್ಮಿತ್ ಆ್ಯಪ್ ಇನ್ನೂ ಹಲವು ಆವಿಷ್ಕಾರಗಳಿಗೆ ಸಾಕ್ಷಿಯಾಗಲಿದೆ’ ಎಂದು ಮ್ಯಾಪ್ ಮೈ ಇಂಡಿಯಾ ನಿರ್ದೇಶಕ ರೋಹನ್ ವರ್ಮಾ ಅವರು ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

‘ಈ ಎಐ ಚಾಲಿತ ಸ್ಮಾರ್ಟ್ ಸಿಗ್ನಲ್‌ಗಳಲ್ಲಿ ವೆಹಿಕಲ್ ಆಕ್ಚುಯೇಟೆಡ್ ಕಂಟ್ರೋಲ್ಡ್ (ವಿಎಸಿ) ತಂತ್ರಜ್ಞಾನದ ಸಹಾಯದಿಂದ ಸಿಗ್ನಲ್‌ಗಳಲ್ಲಿ ಬಿತ್ತರಿಸುವ ನೈಜ ಸಮಯವನ್ನು ಮ್ಯಾಪಲ್ಸ್ ಆ್ಯಪ್‌ನಲ್ಲಿ ತೋರಿಸಲಾಗುತ್ತದೆ. ಇದನ್ನು ಸಂಚಾರ ವಿಭಾಗದ ಪೊಲೀಸರು ಮ್ಯಾನ್ಯುಯಲ್ ಆಗಿ ನಿರ್ವಹಣೆ ಮಾಡಿದರೆ, ಆ್ಯಪ್‌ನಲ್ಲಿ ಮಾಹಿತಿ ಸಿಗುವುದಿಲ್ಲ’ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಎಐ ಸಿಗ್ನಲ್‌ಗಳಲ್ಲಿ ಬರುವ ಕೌಂಟ್‌ಡೌನ್ ಅವಧಿಯನ್ನು ಮ್ಯಾಪಲ್ಸ್ ಆ್ಯಪ್‌ನಲ್ಲಿ ತೋರಿಸಲಾಗುತ್ತಿದೆ. ಇದರಿಂದ ವಾಹನ ಸವಾರರು ಟ್ರಾಫಿಕ್ ಸಿಗ್ನಲ್‌ನ 500 ಮೀಟರ್ ದೂರದಿಂದಲೇ ಹಸಿರು ಅಥವಾ ಕೆಂಪು ನಿಶಾನೆ ಬರಲು ಎಷ್ಟು ಸೆಕೆಂಡುಗಳಿವೆ ಎಂಬುದನ್ನು ತಿಳಿದುಕೊಂಡು, ಬೇರೆ ಮಾರ್ಗದ ಮೂಲಕ ತೆರಳಲು ಅವಕಾಶ ಕಲ್ಪಿಸುತ್ತದೆ. ನಗರದಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಇದು ಸಹಾಯಕವಾಗಲಿದೆ’ ಎಂದು ಅವರು ವಿವರಿಸಿದರು.



ಭಾರತದ ಜಾಹೀರಾತು ದಂತಕಥೆಗಳಲ್ಲಿ ಒಬ್ಬರಾದ ವ್ಯಕ್ತಿಗೆ ನಮನಗಳು!

ಲೋಕೋಪಯೋಗಿ ಇಲಾಖೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾದಗಿರಿ-ಸೈದಾಪುರ ಜಿಲ್ಲಾ ಮುಖ್ಯ ರಸ್ತೆಯಲ್ಲಿ (ಎಂಡಿಆರ್) ಸೇತುವೆ ಹಾಗೂ ರಸ್ತೆ ನಿರ್ಮಾಣ ಕಾಮಗಾರಿಗೆ ಅಗತ್ಯ ತಾಂತ್ರಿಕ ಅರ್ಹತೆ ಮತ್ತು ಕಾರ್ಯಾನುಭವ ಇಲ್ಲದ ಗುತ್ತಿಗೆದಾರರಿಗೆ ಟೆಂಡರ್ ನೀಡಲಾಗಿದೆ’ ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸ್ಥಳೀಯ ಶರಣಪ್ಪ ಗೌಡ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ವಿಕ್ರಂ ಹುಯಿಲಗೋಳ ಅವರ ವಾದ ಆಲಿಸಿದ ನ್ಯಾಯಪೀಠ, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ, ಯಾದಗಿರಿ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಹಾಗೂ ಖಾಸಗಿ ನಿರ್ಮಾಣ ಸಂಸ್ಥೆಯಾದ ಶ್ರೀ ಬನದೇಶ್ವರ ಕನ್ಸ್ಟ್ರಕ್ಷನ್ ಕಂಪನಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು 2026ರ ಜನವರಿ 9ಕ್ಕೆ ಮುಂದೂಡಿತು. ಅಂತೆಯೇ, ‘ಗುತ್ತಿಗೆದಾರ ಕಂಪನಿಗೆ ಇರುವ ಹಿಂದಿನ ಕಾರ್ಯಾನುಭವದ ಬಗ್ಗೆ ಮಾಹಿತಿ ನೀಡಿ ಎಂದು ಯಾದಗಿರಿ ವಿಭಾಗದ ಕಾರ್ಯಕಾರಿ ಎಂಜಿಯರ್ ಅವರಿಗೆ ನಿರ್ದೇಶಿಸಿತು.

‘ಜಿಬಿಎಗೆ ಇನ್ನಷ್ಟು ಪ್ರದೇಶ: ಸಮೀಕ್ಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಗೆ ಭವಿಷ್ಯದಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕಾದ ಬೆಂಗಳೂರು ಹೊರವಲಯದ ಪ್ರದೇಶಗಳ ಸಮೀಕ್ಷೆ ನಡೆಸಲು ಸೂಚಿಸಲಾಗಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ 12 ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನೆ ಸಭೆ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಬಿಎಂಆರ್‌ಡಿಎ ವ್ಯಾಪ್ತಿಯ ಪ್ರದೇಶಗಳು ಮುಂದೆ ಬೆಂಗಳೂರು ನಗರದ ಭಾಗವಾಗಲಿವೆ. ಹಾಗಾಗಿ, ಈಗಿನಿಂದಲೇ ರಸ್ತೆ ವಿಸ್ತರಣೆ ಮತ್ತಿತರ ಮೂಲಸೌಕರ್ಯಗಳ ಅಭಿವೃದ್ಧಿ ಮಾಡಲು ಸೂಕ್ತ ಯೋಜನೆ ರೂಪಿಸಬೇಕಿದೆ. ನಗರಸಭೆ, ಪಟ್ಟಣ ಪಂಚಾಯಿತಿ ಸೇರಿದಂತೆ ಒಂದಷ್ಟು ಪ್ರದೇಶಗಳಲ್ಲಿ ರಸ್ತೆಗಳು ಕಿರಿದಾಗಿವೆ. ಲೋಕೋಪಯೋಗಿ ಇಲಾಖೆ, ನಗರ ಯೋಜನೆ ಇಲಾಖೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ನೀಲನಕ್ಷೆ ಸಿದ್ಧಪಡಿಸಲು ಸೂಚನೆ ನೀಡಲಾಗಿದೆ’ ಎಂದರು.

ಬೆಂಗಳೂರು ವ್ಯಾಪ್ತಿಗೆ ಒಳಪಡದ, ಬೆಂಗಳೂರು ಸುತ್ತಲ ಪ್ರದೇಶಗಳ ಸ್ಥಳೀಯ ಸಂಸ್ಥೆಗಳಲ್ಲೂ ಬಿ–ಖಾತೆಯಿಂದ ಎ–ಖಾತೆಗೆ ಪರಿವರ್ತನೆ ಮಾಡಲು, ಬೆಂಗಳೂರು ನಗರದಲ್ಲಿ ಆಸ್ತಿಗಳ ಮೌಲ್ಯ ಆಧಾರಿತ ತೆರಿಗೆ ಸಂಗ್ರಹದಂತೆ ಏಕರೂಪತೆ ತರಲು ಹಾಗೂ ಅಕ್ರಮ ಕಟ್ಟಡ ನಿರ್ಮಾಣಕ್ಕೆ ಕಡಿವಾಣ ಹಾಕಲು ಸೂಚಿಸಿದ್ದೇನೆ’ ಎಂದು ಹೇಳಿದರು.

‘ಬೆಂಗಳೂರು ನಗರ ಮಾದರಿಯಲ್ಲಿಯೇ ಎಲ್ಲ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣ ಮಾಡಬೇಕು. ಈಗಾಗಲೇ 110 ಹಳ್ಳಿಗಳಿಗೆ ಮೂಲ ಸೌಕರ್ಯ ಒದಗಿಸಲಾಗುತ್ತಿದೆ. ಭವಿಷ್ಯದಲ್ಲಿ ಸೇರ್ಪಡೆಯಾಗುವ ಪ್ರದೇಶಗಳಲ್ಲಿ ನಾಗರಿಕ ಪ್ರಜ್ಞೆ ಮೂಡಿಸಬೇಕಿದೆ. ಕಸವನ್ನು ಎಲ್ಲೆಂದರಲ್ಲಿ ಬಿಸಾಡಲಾಗುತ್ತಿದೆ. ಬೆಂಗಳೂರು ನಗರದ ಮಾದರಿಯಲ್ಲಿ ಕಸ ಸಂಗ್ರಹ ವ್ಯವಸ್ಥೆ ಬಗ್ಗೆಯೂ ಸೂಚನೆ ನೀಡಲಾಗಿದೆ. ಬೆಂಗಳೂರು ದಕ್ಷಿಣ ಮಾತ್ರವಲ್ಲದೆ ಇತರೆ ಗಡಿ ಪ್ರದೇಶಗಳ ಸ್ಥಳೀಯ ಸಂಸ್ಥೆಗಳತ್ತ ಗಮನಹರಿಸಲಾಗುವುದು’ ಎಂದರು.

ವಿಶ್ವ ಪೋಲಿಯೊ ದಿನದ ಅಂಗವಾಗಿ ರೋಟರಿ ಡಿಸ್ಟ್ರಿಕ್ಸ್ 3192ರ ವತಿಯಿಂದ ವಿಧಾನಸೌಧದ ಆವರಣದಲ್ಲಿರುವ ಕೆಂಪೇಗೌಡ ಪ್ರತಿಮೆಯಿಂದ ಲ್ಯಾವೆಲ್ಲೆ ರಸ್ತೆಯಲ್ಲಿರುವ ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್‌ವರೆಗೆ ವಾಕಥಾನ್ ನಡೆಯಿತು

ಪರಿಶೀಲಿಸಿ ಕ್ರಮ ಕೈಗೊಳ್ಳಲು ಆದೇಶ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ತುಮಕೂರಿನ ಬೆಳಗುಂಬದಲ್ಲಿ ಭಾರತೀಯ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಅಸೋಸಿಯೇಷನ್‌ಗೆ ಗುತ್ತಿಗೆ ಆಧಾರದಲ್ಲಿ ಮಂಜೂರಾದ ಎರಡು ಎಕರೆ ಜಮೀನಿನ ಬಳಕೆಗೆ ವಿಧಿಸಲಾಗಿದ್ದ ಷರತ್ತುಗಳನ್ನು ಉಲ್ಲಂಘಿಸಿಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಹೈಕೋರ್ಟ್, ಸ್ಥಳೀಯ ತಹಶೀಲ್ದಾರ್‌ಗೆ ನಿರ್ದೇಶಿಸಿದೆ.

ಈ ಸಂಬಂಧ ಬೆಳಗುಂಬ ಗ್ರಾಮದ ಬಿ.ಎಸ್.ವೆಂಕಟೇಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

‘ತುಮಕೂರು ತಹಶೀಲ್ದಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ಒಂದೊಮ್ಮೆ ಅರ್ಜಿದಾರರು ಆರೋಪಿಸಿರುವಂತೆ ಗುತ್ತಿಗೆ ಆಧಾರದಲ್ಲಿ ಮಂಜೂರಾಗಿರುವ 2 ಎಕರೆ ಜಮೀನಿನ ಬಳಕೆಯಲ್ಲಿ ಷರತ್ತುಗಳನ್ನು ಉಲ್ಲಂಘಿಸಲಾಗಿದೆ. ವಾಣಿಜ್ಯ ಉದ್ದೇಶದಿಂದ ಆ ಜಾಗದಲ್ಲಿ ಸಮ್ಮೇಳನ ಸಭಾಂಗಣ ನಿರ್ಮಿಸಲಾಗುತ್ತಿದೆ ಎಂಬುದು ಕಂಡು ಬಂದಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕು’ ಎಂದು ನಿರ್ದೇಶಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿತು.

ಹುಲಿ ಮರಿ ದತ್ತು ಪಡೆದ ಪ್ರೆಸ್ಟೀಜ್

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಎರಡು ಗಂಡು ಹುಲಿ ಮರಿಗಳನ್ನು ಪ್ರೆಸ್ಟೀಜ್ ಗ್ರೂಪ್ ಸಂಸ್ಥೆ ಶುಕ್ರವಾರ ದತ್ತು ಪಡೆಯಿತು.

ದತ್ತು ಪಡೆದ ಹುಲಿ ಮರಿಗಳಿಗೆ ಸಿಂಬ ಮತ್ತು ಶೇರು ಎಂದು ನಾಮಕಾರಣ ಮಾಡಲಾಗಿದೆ. ಪರಿಸರ ಸಮತೋಲನ ಮತ್ತು ಜೀವ ವೈವಿಧ್ಯ ರಕ್ಷಣೆಗಾಗಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಬನ್ನೇರುಘಟ್ಟ ಉದ್ಯಾನದೊಂದಿಗೆ ಕಂಪನಿಯು ಕೈಜೋಡಿಸಿದೆ ಎಂದು ಉದ್ಯಾನದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಬೆಂಗಳೂರನಲ್ಲಿ ಕಾರ್ತಿಕ ಮಾಸ ನಿಮಿತ್ತ ರುದ್ರಾಕ್ಷಿ ಪ್ರದರ್ಶನ ಹಾಗೂ ಮಾರಾಟ

ಅಕ್ಟೋಬರ್ 22 ರಿಂದ 27 ರವರೆಗೆ ಆಯೋಜನೆ

ಬೆಂಗಳೂರು: ನಗರದ **ಹೊಟೇಲ್** Hotel Le Foliage, Beside Sangeeta Gadgets, **ಸಂಗಮ ಸರ್ಕಲ್ ಬಸ್ ಸ್ಟಾಪ್** ಹತ್ತಿರ, Opp. Metro Pillar EP-No.9, ಎದುರಿಗೆ, **46 ನೇ ಕ್ರಾಸ್ 8 ಬ್ಲಾಕ್, ಸಿಆರ್ ಲೇಔಟ್, 1ನೇ ಹಂತ, ಜೆ.ಪಿ. ನಗರ, ಬೆಂಗಳೂರು, ಆಗಸ್ಟ್ 22 ರಿಂದ 27** ರವರೆಗೆ ರುದ್ರಾಕ್ಷಿ ಪ್ರದರ್ಶನ ಮಾರಾಟ, **ಒಂದು ಮುಖಿ ಯಿಂದ 21 ಮುಖಿ ರುದ್ರಾಕ್ಷಗಳು ಲಭ್ಯವಿವೆ.** ಇಂಡಸ್-ನೇಪಾಳ ಸಂಸ್ಥೆಯ **ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ** ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮ ರಾಶಿ, ಜನ್ಮ ನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಮಾಂಸಹಾರಿಗಳು ಸಹ ರುದ್ರಾಕ್ಷಿಗಳನ್ನು ಧರಿಸಬಹುದು. ಮಳಿಗೆಯು **ಬೆಳಗ್ಗೆ 10.30 ರಿಂದ ರಾತ್ರಿ 09.00** ರವರೆಗೆ ತೆರದಿ ರುತ್ತದೆ. **ಸಂಪರ್ಕಿಸಿ: ಡಾ. ನರೇಂದ್ರ ಕಾಶಿರೆಡ್ಡಿ 7097396666**

ಕೊನೆಯ ಮೂರು ದಿನ

ADVT

‘ಇಪಿಎಫ್‌ಗೆ 7 ಕೋಟಿ ನೋಂದಣಿ’

ಶೇ.90ರಷ್ಟು ಗುರಿ ಬಾಕಿ: ಉದ್ಯೋಗ ಮೇಳದಲ್ಲಿ ಸಚಿವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಐದು ವರ್ಷದಲ್ಲಿ ದೇಶದಲ್ಲಿ ಒಟ್ಟು ಏಳು ಕೋಟಿ ಮಂದಿಯನ್ನು ನೌಕರರ ಭವಿಷ್ಯ ನಿಧಿ (ಇಪಿಎಫ್) ವ್ಯಾಪ್ತಿಗೆ ತರಲಾಗಿದ್ದು, ಅಸಂಘಟಿತ ವಲಯದವರಿಗೂ ಸೂಕ್ತ ಉದ್ಯೋಗ ಭದ್ರತೆ ಹಾಗೂ ಸರ್ಕಾರದ ಸೌಲಭ್ಯಗಳನ್ನು ಕೇಂದ್ರ ಸರ್ಕಾರ ಒದಗಿಸುತ್ತಿದೆ’ ಎಂದು ಕೇಂದ್ರ ಕಾರ್ಮಿಕ, ಉದ್ಯೋಗ, ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ನಗರದ ಕಬ್ಬನ್ ಪಾರ್ಕ್‌ನಲ್ಲಿರುವ ಸರ್ಕಾರಿ ನೌಕರರ ಭವನದಲ್ಲಿ ಭಾರತೀಯ ಅಂಚೆ ಇಲಾಖೆ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಉದ್ಯೋಗ ಪತ್ರ ವಿತರಿಸಿ ಅವರು ಮಾತನಾಡಿದರು.

‘ಉದ್ಯೋಗ ಪಡೆಯುವುದು ಪ್ರತಿಯೊಬ್ಬರ ಕನಸು. ಸರ್ಕಾರವೇ ಎಲ್ಲರಿಗೂ ಉದ್ಯೋಗ ನೀಡಲು ಆಗುವುದಿಲ್ಲ. ಖಾಸಗಿ ವಲಯದಲ್ಲೂ ಸಾಕಷ್ಟು ಮಂದಿ ಬದುಕು ಕಟ್ಟಿಕೊಂಡಿದ್ದಾರೆ. ಸ್ವಯಂ ಉದ್ಯೋಗಿಗಳೂ ಇದ್ದಾರೆ. ಸುಲಭವಾಗಿ ಯಾರಿಗೂ ಕೆಲಸ ಸಿಗುವುದಿಲ್ಲ. ಶಿಕ್ಷಣ, ಜ್ಞಾನದ ಜತೆಗೆ ಕೌಶಲ ಇದ್ದರೆ ಅವಕಾಶ ಲಭ್ಯವಾಗಲಿದೆ. ಇದನ್ನು ಬೆಳೆಸಿಕೊಳ್ಳಿ’ ಎಂದು ಸಲಹೆ ನೀಡಿದರು.

ಲೋಕಸಭಾ ಸದಸ್ಯ ಪಿ.ಸಿ.ಮೋಹನ್ ಮಾತನಾಡಿ, ‘ದೇಶದಲ್ಲಿ ಒಂದೇ ದಿನ 40 ಕಡೆ ಕಾರ್ಯಕ್ರಮ ನಡೆಸಿ 51 ಸಾವಿರ ಮಂದಿಗೆ ಕೇಂದ್ರ ಸರ್ಕಾರ ಉದ್ಯೋಗ ನೀಡುತ್ತಿದೆ. ಉದ್ಯೋಗ ಸಿಗುತ್ತಿದೆ ಎಂದರೆ ದೇಶ ಪ್ರಗತಿಯಾಗುತ್ತಿದೆ ಎಂದು ವ್ಯಾಖ್ಯಾನಿಸಬಹುದು. ಪಕ್ಕದ ರಾಷ್ಟ್ರಗಳಾದ ಶ್ರೀಲಂಕಾ, ಪಾಕಿಸ್ತಾನ, ನೇಪಾಳದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರೆ, ಭಾರತ ಮಾತ್ರ ಕೋವಿಡ್ ನಂತರವೂ ವಿಶ್ವದ 4ನೇ ಸದೃಢ ಆರ್ಥಿಕ ದೇಶವಾಗಿ ಬೆಳೆದಿದೆ’ ಎಂದು ಹೇಳಿದರು.

ಕರ್ನಾಟಕ ಅಂಚೆ ಸೇವೆಗಳ ನಿರ್ದೇಶಕ ಸಂದೇಶ್ ಮಹದೇವಪ್ಪ, ನೈರುತ್ಯ ರೈಲ್ವೆಯ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕಿ ಉಮಾ ಶರ್ಮ, ಬಿಎಸ್‌ಎಫ್‌ನ ಡೆಪ್ಯೂಟಿ ಕಮಾಂಡೆಂಟ್ ಅನಿಲ್ ಮೀನಾ ಹಾಜರಿದ್ದರು.

115 ಮಂದಿಗೆ ಉದ್ಯೋಗ

ಭಾರತೀಯ ರೈಲ್ವೆಯಲ್ಲಿ 30, ರೈಲ್ವೆ ಗಾಲಿ ಕಾರ್ಖಾನೆಯಲ್ಲಿ 19, ಎಸ್‌ಬಿಐ ಹಣಕಾಸು ಸೇವಾ ವಿಭಾಗದಲ್ಲಿ 9, ಕೇಂದ್ರ ಗೃಹ ಸಚಿವಾಲಯದಲ್ಲಿ 8, ನಿಮ್ಹಾನ್ಸ್‌ನಲ್ಲಿ 9, ಆದಾಯ ತೆರಿಗೆ ಇಲಾಖೆಯಲ್ಲಿ ಇಬ್ಬರು, ಜಿಎಸ್‌ಟಿ ವಿಭಾಗದಲ್ಲಿ 16, ಪರಿಸರ, ಅರಣ್ಯ, ಹವಾಮಾನ ಬದಲಾವಣೆ ಇಲಾಖೆಯಲ್ಲಿ 4, ಸಂಪರ್ಕ ಇಲಾಖೆಯಲ್ಲಿ 15, ಇಸ್ರೊದಲ್ಲಿ ಒಬ್ಬರು ಹಾಗೂ ಅನಿಲ ಪ್ರಾಧಿಕಾರದಲ್ಲಿ ಇಬ್ಬರು ಸೇರಿ ಒಟ್ಟು 115 ಮಂದಿ ಉದ್ಯೋಗ ಪತ್ರವನ್ನು ಪಡೆದುಕೊಂಡರು.

72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ 2024

ಪ್ರವೇಶಗಳಿಗೆ ಆಹ್ವಾನ

ಚಲನಚಿತ್ರಗಳು ಮತ್ತು ಸಿನಿಮಾ ಬರಹ

ಅರ್ಹತೆ

ಫೀಚರ್ & ನಾನ್–ಫೀಚರ್ ಫಿಲಂಸ್
ಇಂಗ್ಲಿಷ್ ಸಬ್ ಟೈಟಲ್‌ಗಳೊಂದಿಗೆ
ಸಿಬಿಎಫ್‌ಸಿ ಪ್ರಮಾಣೀಕೃತ

ಸಿನಿಮಾ ಕುರಿತು ಪ್ರಕಟಿತ
ಪುಸ್ತಕಗಳು,
ಬರಹಗಳು/ವಿಮರ್ಶೆಗಳು

01/01/2024 ರಿಂದ 31/12/2025 ವರೆಗೆ
(ಎರಡೂ ದಿನಗಳು ಸೇರಿರುತ್ತವೆ)

ವಿಚಾರಣೆಗಳಿಗಾಗಿ ಕರೆ ಮಾಡಿ 011-26499370/78
(ಬೆಳಗ್ಗೆ 09:30 ರಿಂದ ಸಂಜೆ 05:00 ಗಂಟೆ)

ನಿಯಮಗಳಿಗಾಗಿ ಮತ್ತು ಆನ್‌ಲೈನ್ ಪ್ರವೇಶ ಸಲ್ಲಿಕೆಗಾಗಿ 31/10/2025 (ಸಂಜೆ 5:00 ಗಂಟೆ) ರವರೆಗೆ ಭೇಟಿ ಕೊಡಿ www.mib.gov.in ಮತ್ತು nfaindia.org

ಎಲ್ಲಾ ದಾಖಲಾತಿಗಳನ್ನು ಕೆಳಗಿನ ವಿಳಾಸಕ್ಕೆ ಸಲ್ಲಿಸುವುದು:

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ಕೋಶ
ಮಾಹಿತಿ ಮತ್ತು ಪ್ರಸಾರ ಸಚಿವಾಲಯ
ಭಾರತ ಸರ್ಕಾರ
ಸಿರಿ ಫೋರ್ಟ್ ಆಡಿಟೋರಿಯಂ ಕಾಂಪ್ಲೆಕ್ಸ್
ಆಗಸ್ಟ್ ಕ್ರಾಂತಿ ಮಾರ್ಗ
ನವದೆಹಲಿ – 110049

Email: nfa.mib@gov.in | 72nfa2024@gmail.com
Website: www.mib.gov.in | nfaindia.org

CBC 22201/11/0019/2526

ಎನ್‌ಎಸ್‌ಎಸ್‌ಒ ಸುವರ್ಣ ಮಹೋತ್ಸವದಲ್ಲಿ ಕೇಂದ್ರ ಸಚಿವರಾದ ಶೋಭಾ ಅಭಿಮತ

‘ರೇಷ್ಮೆ ತ್ಯಾಜ್ಯ ಮರುಬಳಕೆಯಾದಲ್ಲಿ ಸ್ವಾವಲಂಬನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೇಷ್ಮೆಕೃಷಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಸ್ವಾವಲಂಬನೆ ಸಾಧಿಸಬೇಕು. ರೇಷ್ಮೆತ್ಯಾಜ್ಯವನ್ನು ರಫ್ತು ಮಾಡುವ ಬದಲು, ಇಲ್ಲಿಯೇ ಮರುಬಳಕೆ ಮಾಡಲು ಯೋಜನೆ ರೂಪಿಸಬೇಕು’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅಭಿಪ್ರಾಯಪಟ್ಟರು.

ನ್ಯಾಷನಲ್ ಸಿಲ್ಕ್ ವರ್ಮ್ ಸೀಡ್ ಆರ್ಗನೈಸೇಷನ್ (ಎನ್‌ಎಸ್‌ಎಸ್‌ಒ) ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸುವರ್ಣ ಮಹೋತ್ಸವ ಉದ್ಘಾಟಿಸಿದ ಅವರು ಮಾತನಾಡಿದರು.

‘ನಮ್ಮಲ್ಲಿನ ರೇಷ್ಮೆತ್ಯಾಜ್ಯವು ಚೀನಾಕ್ಕೆ ರಫ್ತು ಆಗುತ್ತಿದೆ. ಅವರು ಅದರಿಂದ ಸಿದ್ಧ ಉಡುಪು ತಯಾರಿಸಿ, ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಾರೆ. ಈ ತ್ಯಾಜ್ಯವು ನಮ್ಮಲ್ಲಿಯೇ ಪುನರ್ ಬಳಕೆಯಾದಲ್ಲಿ ರೈತರ ಹಾಗೂ ಉದ್ಯಮಿಗಳ ಆದಾಯ ದುಪ್ಪಟ್ಟಾಗಲಿದೆ. ಆ ನಿಟ್ಟಿನಲ್ಲಿ ಯೋಚನೆ ಮಾಡಬೇಕಿದೆ. ರೇಷ್ಮೆಯ ಬಟ್ಟೆ, ನೂಲು ಮತ್ತು ತ್ಯಾಜ್ಯಕ್ಕೆ ಸಂಬಂಧಿಸಿದಂತೆ ಸರ್ಕಾರ, ರೈತರು ಹಾಗೂ ಉದ್ಯಮಿಗಳು ಒಟ್ಟಾಗಿ ಕೆಲಸ ಮಾಡಬೇಕಿದೆ. ರೇಷ್ಮೆ ಬಟ್ಟೆಗೆ ಎಲ್ಲೆಡೆ ಬೇಡಿಕೆಯಿದೆ. ಕರ್ನಾಟಕದ ಮೈಸೂರು ಸಿಲ್ಕ್ ಸೀರೆಯು ದೇಶದಾದ್ಯಂತ ಪ್ರಸಿದ್ಧಿ ಪಡೆದಿದ್ದು, ಸಂಸತ್ತಿನಲ್ಲಿ ಮಹಿಳಾ ಸಂಸದರು ಈ ಸೀರೆ ಬಗ್ಗೆ ವಿಚಾರಿಸುತ್ತಾರೆ. ಆದ್ದರಿಂದ ರೇಷ್ಮೆಯಲ್ಲಿ ಗುಣಮಟ್ಟ ಕಾಯ್ದುಕೊಂಡು, ಉತ್ಪಾದನೆ ಹೆಚ್ಚಿಸಬೇಕು’ ಎಂದರು.

‘ಪ್ರಪಂಚದಲ್ಲಿ ಅಧಿಕ ರೇಷ್ಮೆ ಉತ್ಪಾದನೆ ಮಾಡುವ ರಾಷ್ಟ್ರಗಳ ಸ್ಥಾನದಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ಆದರೂ ರೇಷ್ಮೆಯಲ್ಲಿ ಆತ್ಮನಿರ್ಭರತೆ ಸಾಧ್ಯವಾಗಲಿಲ್ಲ. ಎಣ್ಣೆಕಾಳುಗಳು, ಬೇಳೆ ಕಾಳುಗಳನ್ನೂ ಆಮದು ಮಾಡಿಕೊಳ್ಳುತ್ತಿದ್ದೇವೆ. ನಮ್ಮ ದೇಶದಲ್ಲಿ ರೇಷ್ಮೆ ಬಟ್ಟೆಗಳ ತಯಾರಿಗೆ 45 ಸಾವಿರ ಮೆಟ್ರಿಕ್ ಟನ್ ರೇಷ್ಮೆ ಗೂಡು ಅಗತ್ಯ. 41 ಸಾವಿರ ಮೆಟ್ರಿಕ್ ಟನ್ ಗೂಡನ್ನು ಮಾತ್ರ ಬೆಳೆಯಲಾಗುತ್ತಿದೆ. ಸುಮಾರು 5 ಸಾವಿರ ಮೆಟ್ರಿಕ್ ಟನ್ ರೇಷ್ಮೆ ಗೂಡನ್ನು ಚೀನಾದಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಎಣ್ಣೆಕಾಳುಗಳು, ಬೇಳೆ ಕಾಳು ಹಾಗೂ ರೇಷ್ಮೆಯಲ್ಲಿ ಸ್ವಾವಲಂಬನೆ ಸಾಧಿಸಲು ವಿಶೇಷ ಯೋಜನೆಗಳನ್ನು ಕೇಂದ್ರ ಸರ್ಕಾರ ರೂಪಿಸುತ್ತಿದೆ’ ಎಂದು ಹೇಳಿದರು.

ಸಂಸದ ಡಾ.ಸಿ.ಎನ್. ಮಂಜುನಾಥ್, ‘ರೇಷ್ಮೆಗೂಡಿನ ಉತ್ಪಾದನೆ ದ್ವಿಗುಣವಾಗಬೇಕು. ರಾಜ್ಯದಲ್ಲಿ ಸಿಲ್ಕ್ ಕಾರಿಡಾರ್ ಮಾಡುವ ಜತೆಗೆ, ಹಿಪ್ಪುನೇರಳೆ ಬೆಳೆಗೆ ಸಂಬಂಧಿಸಿದಂತೆ ವಿಶೇಷ ವಲಯ ಘೋಷಿಸಬೇಕಿದೆ. ಜಿಲ್ಲಾ ಮಟ್ಟದಲ್ಲಿ ರೇಷ್ಮೆ ವಸ್ತುಸಂಗ್ರಹಾಲಯವನ್ನೂ ಆರಂಭಿಸಬೇಕು’ ಎಂದು ಆಗ್ರಹಿಸಿದರು.

ಕೇಂದ್ರ ರೇಷ್ಮೆ ಮಂಡಳಿಯ ಸದಸ್ಯ ಕಾರ್ಯದರ್ಶಿ ಪಿ. ಶಿವಕುಮಾರ, ಎನ್‌ಎಸ್‌ಎಸ್‌ಒ ನಿರ್ದೇಶಕ (ತಾಂತ್ರಿಕ) ಎಸ್. ಮಂಥಿರಾಮೂರ್ತಿ ಉಪಸ್ಥಿತರಿದ್ದರು.

ಯಶಸ್ವಿ ರೇಷ್ಮೆ ಉದ್ಯಮಿಗಳು ಹಾಗೂ ರೈತರಿಗೆ ಸಮಾರಂಭದಲ್ಲಿ ‘ಮೆಚ್ಚುಗೆ ಪ್ರಮಾಣಪತ್ರ’ಗಳನ್ನು ನೀಡಿ ಗೌರವಿಸಲಾಯಿತು. (ಕುಳಿತವರು ಎಡದಿಂದ) ಎಸ್. ಮಂಥಿರಾಮೂರ್ತಿ, ಡಾ.ಸಿ.ಎನ್. ಮಂಜುನಾಥ್, ಶೋಭಾ ಕರಂದ್ಲಾಜೆ, ಪಿ. ಶಿವಕುಮಾರ್ ಮತ್ತು ಕೇಂದ್ರ ರೇಷ್ಮೆ ಮಂಡಳಿ ಆಡಳಿತ ಮಂಡಳಿ ಸದಸ್ಯ ಎಂ. ಶಿವಣ್ಣ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಚಿಟಿಕೆ ಸುದ್ದಿ

ಆರೋಪಿಗಳ ಮೇಲೆ ಕ್ರಮಕ್ಕೆ ಒತ್ತಾಯ

ಬೆಂಗಳೂರು: ‘ಪಶ್ಚಿಮ ಬಂಗಾಳದ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದ ಆರೋಪಿಗಳನ್ನು ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ರಾಜ್ಯ ಮಹಿಳಾ ಆಯೋಗ ಒತ್ತಾಯಿಸಿದೆ.

ಈ ಬಗ್ಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದಿದ್ದು, ‘ಬೆಂಗಳೂರು ಉತ್ತರ ತಾಲ್ಲೂಕಿನ ಗಂಗೊಂಡನಹಳ್ಳಿಯಲ್ಲಿ ನೆಲಸಿದ್ದ ಗೃಹಿಣಿಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಪ್ರಕರಣವನ್ನು ಆಯೋಗವು ಗಂಭೀರವಾಗಿ ಪರಿಗಣಿಸಿದೆ. ಈ ಕೃತ್ಯ ಎಸಗಿದ ಆರೋಪಿಗಳನ್ನು ಕೂಡಲೇ ಬಂಧಿಸಿ, ಕಾನೂನು ಕ್ರಮ ಕೈಗೊಂಡಿರುವ ಬಗ್ಗೆ ಆಯೋಗಕ್ಕೆ ವರದಿ ನೀಡಬೇಕು’ ಎಂದು ಸೂಚಿಸಿದೆ.

ಗೋವರ್ಧನ್ ಉತ್ಸವ

ಬೆಂಗಳೂರು: ದೀಪಾವಳಿಯ ಅಂಗವಾಗಿ ಎಚ್‌ಬಿಆರ್ ಲೇಔಟ್‌ನ ಇಸ್ಕಾನ್‌ನಲ್ಲಿ ಆಯೋಜಿಸಲಾಗಿದ್ದ ‘ಗೋ ಗ್ರೀನ್ ದಿಸ್ ಗೋವರ್ಧನ್ ಉತ್ಸವ’ದಲ್ಲಿ ಭಕ್ತಿ, ಸಂಸ್ಕೃತಿ ಮತ್ತು ಪರಿಸರ ಜಾಗೃತಿ ಕುರಿತ ಕಾರ್ಯಕ್ರಮಗಳು ನಡೆದವು.

‘ಭೂಮಿಯ ಮೇಲೆ ಉಂಟಾಗುತ್ತಿರುವ ಪ್ರಾಕೃತಿಕ ವಿಕೋಪದಂತಹ ಸವಾಲುಗಳನ್ನು ಎದುರಿಸಲು ಸಹಜ, ಸಾತ್ವಿಕ ಮತ್ತು ಪರಿಸರ ಸ್ನೇಹಿ ಜೀವನಶೈಲಿ ಅಳವಡಿಸಿಕೊಳ್ಳಬೇಕು’ ಎಂದು ಸಂಘಟಕರು ಹೇಳಿದರು.

‘ಗೋವರ್ಧನ ಲೀಲಾ – ಮಾನವಕುಲವನ್ನು ಪರಿಸರ ಅಪಾಯದಿಂದ ರಕ್ಷಿಸುವ ದಿವ್ಯ ಹಸ್ತಕ್ಷೇಪ’ ಎಂಬ ವಿಷಯ ಕುರಿತು ಉಪನ್ಯಾಸ ನಡೆಯಿತು.

ಉತ್ಸವದಲ್ಲಿ 12 ಅಡಿ ಎತ್ತರದ ಗೋವರ್ಧನ ದರ್ಶನ, ಹೂವುಗಳ ಪ್ರದರ್ಶನ, ಗೋ ಪೂಜೆ, ಘೃತದೀಪಾರಾಧನೆ ನಡೆಯಿತು. ಭಕ್ತಿ ಕೀರ್ತನೆಗಳು ಜನರನ್ನು ಆಕರ್ಷಿಸಿತು.

ಸುರಂಗ ರಸ್ತೆ: ಲಾಲ್‌ಬಾಗ್‌ನೊಳಗೆ ‘ಶಾಫ್ಟ್’

ಮರ ಕಡಿದು ಆಟೊ, ಟ್ಯಾಕ್ಸಿ, ಬಸ್ ನಿಲ್ದಾಣ, ಮಾರುಕಟ್ಟೆ ನಿರ್ಮಾಣ ● ಜಲಮೂಲ, ಬಂಡೆಗೆ ಧಕ್ಕೆ

● ಆರ್. ಮಂಜುನಾಥ್

ಬೆಂಗಳೂರು: ನಗರದ ಆಹ್ಲಾದಕರ ವಾತಾವರಣಕ್ಕೆ ‘ಹಸಿರು ಕಳಸ’ವಾಗಿರುವ ಲಾಲ್‌ಬಾಗ್‌ನೊಳಗೇ ಸುರಂಗ ರಸ್ತೆ ಯೋಜನೆಯಡಿ ಬೃಹತ್ ‘ಶಾಫ್ಟ್’ ನಿರ್ಮಾಣವಾಗಲಿದೆ. ಇದರಿಂದ ನೂರಾರು ಮರ-ಗಿಡಗಳು ನೆಲಸಮವಾಗುವುದಲ್ಲದೆ, ನೂರಾರು ವರ್ಷಗಳ ಇತಿಹಾಸ ಹೊಂದಿರುವ ಬೃಹತ್ ಬಂಡೆ, ಜಲಮೂಲಗಳಿಗೂ ಧಕ್ಕೆಯಾಗಲಿದೆ.

ಸುರಂಗ ರಸ್ತೆಯ ಪ್ರವೇಶ, ನಿರ್ಗಮನದ ಎರಡು ಪಥಗಳು (ತಲಾ 15.2 ಮೀಟರ್ ಸುತ್ತಳತೆ) ಲಾಲ್‌ಬಾಗ್ ಕೆಳಭಾಗದಲ್ಲಿ ಬರುವ ಜೊತೆಗೆ, ಹಲವು ರೀತಿಯ ಸೌಲಭ್ಯಗಳನ್ನು ಒದಗಿಸುವ ಬೃಹತ್ ‘ಶಾಫ್ಟ್’ ಕೂಡ ಲಾಲ್‌ಬಾಗ್‌ನೊಳಗೇ ನಿರ್ಮಾಣವಾಗಲಿದೆ.

ಸಿದ್ದಾಪುರ ರಸ್ತೆಯ ಅಶೋಕ ಪಿಲ್ಲರ್ ಬಳಿಯಿಂದ ಸುರಂಗ ರಸ್ತೆಯ ಸುಮಾರು 1.41 ಕಿ.ಮೀ ಉದ್ದದ ಪ್ರವೇಶ ರ‍್ಯಾಂಪ್–7 ಹಾಗೂ ವಿಲ್ಸನ್ ಗಾರ್ಡನ್ ಬಳಿಯ ಸಿದ್ದಾಪುರ ರಸ್ತೆಯಲ್ಲಿ ಸುಮಾರು 1.08 ಕಿ.ಮೀ ಉದ್ದ ನಿರ್ಗಮನ ರ‍್ಯಾಂಪ್–2 ಲಾಲ್‌ಬಾಗ್‌ನಡಿಯೇ ಸಾಗಿ, ಉದ್ಯಾನದೊಳಗೇ ತೆರೆದುಕೊಳ್ಳಲಿವೆ. ಸುಮಾರು ಎರಡು ಎಕರೆಗಿಂತ ಹೆಚ್ಚು ಪ್ರದೇಶದಲ್ಲಿ ಈ ‘ಶಾಫ್ಟ್’ ನಿರ್ಮಾಣವಾಗಲಿದೆ.

‘ಲಾಲ್‌ಬಾಗ್‌ನ ಆರು ಎಕರೆ ಪ್ರದೇಶವನ್ನು ಸುರಂಗ ರಸ್ತೆ ಯೋಜನೆಯ ಕಾಮಗಾರಿಗೆ ಮಾತ್ರ ಬಳಸಿಕೊಂಡು, ನಂತರ ಅದನ್ನು ಉದ್ಯಾನವನ್ನಾಗಿಯೇ ನಿರ್ಮಿಸಲಾಗುವುದು’ ಎಂದು ಬಿ–ಸ್ಮೈಲ್ ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಲಾಲ್‌ಬಾಗ್ ಉದ್ಯಾನದಲ್ಲೇ ಎಕರೆಗಟ್ಟಲೆ ಪ್ರದೇಶದಲ್ಲಿ ನಿರ್ಮಾಣವಾಗುವ ‘ಶಾಫ್ಟ್’ ಬಗ್ಗೆ ವಿವರವಾದ ಮಾಹಿತಿಯನ್ನು ಬಹಿರಂಗಪಡಿಸಿಲ್ಲ.

ಸಿದ್ದಾಪುರ ರಸ್ತೆಯ ಲಾಲ್‌ಬಾಗ್ ಗೇಟ್ ಸಮೀಪವಿರುವ ಜಾಗದಲ್ಲಿ ‘ಶಾಫ್ಟ್’ ನಿರ್ಮಾಣವಾಗಲಿದೆ. ಅದರಿಂದ ನೂರಾರು ಮರಗಳನ್ನು ಕಡಿಯಬೇಕಾಗುತ್ತದೆ. ಈಗಾಗಲೇ ಮಾರ್ಕಿಂಗ್‌ಗಾಗಿ ಹಲವು ಗಿಡ-ಮರಗಳನ್ನು ಬಿ–ಸ್ಮೈಲ್ ವತಿಯಿಂದ ಕಡಿಯಲಾಗಿದೆ. ಇದಕ್ಕೆ ಅನುಮತಿಯನ್ನೂ ಪಡೆದಿಲ್ಲ. ಸುರಂಗ ರಸ್ತೆ ಯೋಜನೆಗಾಗಿ ಬಳಸಿಕೊಳ್ಳುವ ಆರು ಎಕರೆ ಪ್ರದೇಶದಲ್ಲಿ ಮರ-ಗಿಡಗಳನ್ನು ಕಡಿದು, ಪೈಪ್‌ಗಳನ್ನು ನೆಟ್ಟು, ಟೇಪ್‌ಗಳನ್ನು ಕಟ್ಟಲಾಗಿದೆ.

ಕೆಂಪೇಗೌಡರು ನಿರ್ಮಿಸಿರುವ ಗೋಪುರವನ್ನು ಹೊಂದಿರುವ ಲಾಲ್‌ಬಾಗ್‌ನ ಬೃಹತ್ ಬಂಡೆ ಹಾಗೂ ಇಲ್ಲಿರುವ ಕೆರೆಗೆ ಅಂಟಿಕೊಂಡೇ ‘ಶಾಫ್ಟ್’ ನಿರ್ಮಾಣದ ಯೋಜನೆ ಡಿಪಿಆರ್‌ನಲ್ಲಿ ದಾಖಲಾಗಿದೆ. ಹೀಗಾಗಿ, ಲಾಲ್‌ಬಾಗ್‌ನ ವಾತಾವರಣಕ್ಕೆ ಎಲ್ಲ ರೀತಿಯಲ್ಲೂ ದುಷ್ಪರಿಣಾಮ ಬೀರುವ ಸುರಂಗ ರಸ್ತೆಯ ಯಾವುದೇ ಸೌಲಭ್ಯ ಅಥವಾ ಕಾಮಗಾರಿ ಬೇಡವೇ ಬೇಡ ಎಂಬುದು ಪರಿಸರ ಕಾರ್ಯಕರ್ತರ ಆಗ್ರಹವಾಗಿದೆ.

ಸರ್ಕಾರ ರಚಿಸಿದ್ದ ತಜ್ಞರ ಸಮಿತಿ ಸುರಂಗ ರಸ್ತೆಯ ಅಲೈನ್‌ಮೆಂಟ್ ಹಾಗೂ ಲಾಲ್‌ಬಾಗ್‌ನಲ್ಲಿ ಜೀವವೈವಿಧ್ಯಕ್ಕೆ ಧಕ್ಕೆಯಾಗುವ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದೆ. ಶಾಫ್ಟ್ ಅನ್ನು ಬೇರೆಡೆಗೆ ಸ್ಥಳಾಂತರಿಸಬೇಕು ಎಂದೂ ಸಮಿತಿ ಸಲಹೆ ನೀಡಿದೆ. ಆದರೆ ಈ ಬಗ್ಗೆ ಯಾವುದೇ ವಿವರಣೆಯನ್ನು ಬಿ–ಸ್ಮೈಲ್ ಅಧಿಕಾರಿಗಳು ನೀಡಿಲ್ಲ.

ಲಾಲ್‌ಬಾಗ್‌ನಲ್ಲಿ ಶಾಫ್ಟ್ ನಿರ್ಮಿಸಲು ಮರಗಳ ನಡುವೆ ಗುರುತಿಸಿರುವ ಪ್ರದೇಶ

> ಪರಿಸರ ಸೂಕ್ಷ್ಮ ಪ್ರದೇಶವಾಗಿರುವ ಲಾಲ್‌ಬಾಗ್ ಒಳಗೇ ಸುರಂಗ ರಸ್ತೆಯ ಶಾಫ್ಟ್ ಬರಲಿದೆ ಎಂದು ಡಿಪಿಆರ್‌ನಲ್ಲಿ ಹೇಳಲಾಗಿದೆ. ಪರಿಸರಕ್ಕೆ ಧಕ್ಕೆಯಾಗುವುದನ್ನು ತಪ್ಪಿಸಲು ಈ ಸ್ಥಳದಿಂದ ಶಾಫ್ಟ್ ಅನ್ನು ಸ್ಥಳಾಂತರಿಸಬೇಕು
> ತಜ್ಞರ ಸಮಿತಿಯ ಅಭಿಪ್ರಾಯ

ಯೋಜನೆ ಕೈಬಿಡಿ: ದೇವರೆ

‘ಸುರಂಗ ರಸ್ತೆ ಲಾಲ್‌ಬಾಗ್‌ಗೆ ಧಕ್ಕೆಯನ್ನುಂಟು ಮಾಡಲಿದ್ದು, ವೈಜ್ಞಾನಿಕವಾಗಿ ಅಧ್ಯಯನ ಮಾಡದೆ ಯೋಜನೆಯನ್ನು ರೂಪಿಸಲಾಗಿದೆ. ಇದರಿಂದ, ಲಾಲ್‌ಬಾಗ್‌ನಲ್ಲಿರುವ ಜೀವವೈವಿಧ್ಯದ ಜೊತೆಗೆ ಜಲಮೂಲ, ಬೃಹತ್ ಬಂಡೆಗಳಿಗೆ ಧಕ್ಕೆಯಾಗುತ್ತದೆ. ರಾಜ್ಯ ಸರ್ಕಾರ ಈ ಯೋಜನೆಯನ್ನೇ ಕೈಬಿಡುವುದು ಉತ್ತಮ’ ಎಂದು ಪರಿಸರ ಕಾರ್ಯಕರ್ತ ಡಿ.ಟಿ. ದೇವರೆ ಹೇಳಿದರು.

ಹಸಿರು ನಾಶ: ವಿಜಯ್ ನಿಶಾಂತ್

‘ಲಾಲ್‌ಬಾಗ್‌ನಲ್ಲಿ ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಬಂಡೆ ಬಗ್ಗೆ ಹಲವು ರೀತಿಯ ವ್ಯಾಖ್ಯಾನಗಳಿವೆ. ಇದಕ್ಕೆ ಹೊಂದಿಕೊಂಡಂತೆಯೇ ಮೂರ್ನಾಲ್ಕು ಜಲಮೂಲಗಳಿವೆ. ಸುರಂಗ ರಸ್ತೆ ಇವುಗಳ ಕೆಳಗೆ ನಿರ್ಮಾಣವಾಗುವುದರಿಂದ ತೊಂದರೆಯಾಗುವುದು ನಿಶ್ಚಿತ. ಇನ್ನು ಮೇಲ್ಭಾಗದಲ್ಲಿ ‘ಶಾಫ್ಟ್’ ನಿರ್ಮಾಣವಾದರೆ ವಾಹನ ದಟ್ಟಣೆಯ ಜೊತೆಗೆ ಜನದಟ್ಟಣೆಯೂ ಉಂಟಾಗುತ್ತದೆ. ಲಾಲ್‌ಬಾಗ್‌ನ ಹಸಿರನ್ನು ನಾಶ ಮಾಡುವ ಇಂತಹ ಅಭಿವೃದ್ಧಿ ಕಾರ್ಯ ನಮಗೆ ಬೇಕಿಲ್ಲ’ ಎಂದು ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್ ಅಭಿಪ್ರಾಯಪಟ್ಟರು.

ಲಾಲ್‌ಬಾಗ್‌ನಲ್ಲಿ ನಿರ್ಮಾಣವಾಗಲಿರುವ ಶಾಫ್ಟ್ ಮಾದರಿ

ಸುರಂಗ ರಸ್ತೆಯ ಪ್ರವೇಶ, ನಿರ್ಗಮನದಲ್ಲಿ ನಿರ್ಮಾಣ

ಸುರಂಗ ರಸ್ತೆಯ ಪ್ರವೇಶ ಮತ್ತು ನಿರ್ಗಮನ ಪ್ರದೇಶದಲ್ಲಿ ಬಸ್ ನಿಲ್ದಾಣ, ಆಟೊ–ಟ್ಯಾಕ್ಸಿ ನಿಲ್ದಾಣ, ಮಾರುಕಟ್ಟೆಯಂತಹ ಸೌಲಭ್ಯಗಳನ್ನು ಕಲ್ಪಿಸಲು ‘ಶಾಫ್ಟ್’ ನಿರ್ಮಿಸಲಾಗುತ್ತಿದೆ.

ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗಿನ ಸುರಂಗ ರಸ್ತೆ ಯೋಜನೆಯಲ್ಲಿ ಐದು ಶಾಫ್ಟ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಹೆಬ್ಬಾಳ, ಅರಮನೆ ಮೈದಾನ, ರೇಸ್‌ಕೋರ್ಸ್, ಲಾಲ್‌ಬಾಗ್, ಸಿಲ್ಕ್ ಬೋರ್ಡ್‌ನಲ್ಲಿ ಶಾಫ್ಟ್‌ಗಳು ನಿರ್ಮಾಣವಾಗಲಿವೆ.

‘ಶಾಫ್ಟ್’ ಪ್ರದೇಶ ಮೊದಲು ಸುರಂಗ ರಸ್ತೆ ನಿರ್ಮಾಣ ಕಾರ್ಯಗಳಿಗೆ ಬಳಕೆಯಾಗಲಿದೆ. ನಂತರ ಇದು ‘ಇಂಟರ್ ಮಾಡೆಲ್ ಇಂಟರ್‌ಚೇಂಜ್ ಹಬ್’ ಆಗಲಿದೆ. ಸುರಂಗ ರಸ್ತೆ ನಿಲ್ದಾಣದ ಸುರಕ್ಷತೆಗೆ ಒತ್ತು ನೀಡಿ, ಪ್ರಯಾಣಿಕರು ಎಲ್ಲ ರೀತಿಯ ಸೌಲಭ್ಯ ಪಡೆಯಲು ‘ಶಾಫ್ಟ್’ ವಿನ್ಯಾಸಗೊಳಿಸಲಾಗಿದೆ.



ಮೇಲ್ಭಾಗದಲ್ಲಿ ಏನೇನಿರಲಿದೆ?

ಬಸ್ ನಿಲ್ದಾಣ, ಆಟೊ–ಟ್ಯಾಕ್ಸಿ ನಿಲ್ದಾಣ, ಸ್ಕೈವಾಕ್, ವಾಣಿಜ್ಯ ಸಂಕೀರ್ಣ, ಲ್ಯಾಂಡ್‌ಸ್ಕೇಪ್ಡ್ ಪ್ಲಾಜಾ, ಡ್ರಾಪ್–ಆಫ್ ಝೋನ್.

ಕಾರು ನಿಲ್ದಾಣ, ಇವಿ ಚಾರ್ಜಿಂಗ್ ಕೇಂದ್ರ, ತುರ್ತು ನಿರ್ಗಮನ, ಸಿ.ಸಿ. ಟಿ.ವಿ ಕ್ಯಾಮೆರಾ, ಎಸ್ಕಲೇಟರ್, ಎಲಿವೇಟರಸ್ ಮತ್ತು ಸೂಚನಾ ಫಲಕಗಳಿರಲಿವೆ.

‘ಶಾಫ್ಟ್’ ಕೆಳಭಾಗದಲ್ಲಿ ಏನು ಇರಲಿದೆ?

ಶಾಫ್ಟ್‌ನ ಕೆಳ ಅಂತಸ್ತುಗಳಲ್ಲಿ ಗಾಳಿಯಾಡುವ (ವೆಂಟಿಲೇಷನ್) ಸೌಲಭ್ಯವಿದ್ದು, ಇದರಲ್ಲಿ ಗಾಳಿ ಗುಣಮಟ್ಟ ನಿರ್ವಹಣೆ, ಬೃಹತ್ ಪ್ರಮಾಣದಲ್ಲಿ ಗಾಳಿಯನ್ನು ಹೊರಹಾಕುವ ವ್ಯವಸ್ಥೆ ಇರಲಿದೆ.

ತುರ್ತು ಸೌಕರ್ಯಗಳಲ್ಲಿ, ಬೆಂಕಿ ಕಾಣಿಸಿಕೊಂಡ ಸಂದರ್ಭದಲ್ಲಿ ಅದನ್ನು ಶಮನಗೊಳಿಸುವ ಪರಿಣಾಮಕಾರಿ ವ್ಯವಸ್ಥೆ ಇರಲಿದೆ. ಜೊತೆಗೆ, ಅಧಿಕ ಸಾಮರ್ಥ್ಯದ ತುರ್ತು ಲಿಫ್ಟ್‌ಗಳನ್ನು ಅಳವಡಿಸಲಾಗುತ್ತದೆ.

ವಿದ್ಯುತ್ ವಿತರಣೆ ಸೌಲಭ್ಯದೊಂದಿಗೆ, ಪವರ್ ಜನರೇಟರ್, ತಡೆರಹಿತ ವಿದ್ಯುತ್ ಸರಬರಾಜು ಘಟಕವಿರಲಿದೆ. ಒಳಚರಂಡಿ ವ್ಯವಸ್ಥೆ ಜೊತೆಗೆ ಕುಡಿಯುವ ನೀರು, ಅಗ್ನಿಶಾಮಕಕ್ಕೆ ನೀರನ್ನು ಶೇಖರಿಸಿಡಲಾಗುತ್ತದೆ. ತುರ್ತು ಸಂದರ್ಭದಲ್ಲಿ ಅನುಕೂಲವಾಗಲು ಇಂಟರ್ ಕಾಮ್, ತುರ್ತು ಸಂಪರ್ಕ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ

ನೀರಿನ ಮರುಬಳಕೆ: ನ.6ರಿಂದ ರಾಷ್ಟ್ರೀಯ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುದ್ಧೀಕರಿಸಿದ ತ್ಯಾಜ್ಯ ನೀರಿನ ಮರುಬಳಕೆಯನ್ನು ದೇಶದಾದ್ಯಂತ ಕಡ್ಡಾಯಗೊಳಿಸುವ ಸಮಗ್ರ ರಾಷ್ಟ್ರೀಯ ಯೋಜನೆ ರೂಪಿಸುವುದಕ್ಕಾಗಿ ಕೇಂದ್ರ ನೀತಿ ಆಯೋಗವು ಬೆಂಗಳೂರು ಜಲಮಂಡಳಿ ಸಹಯೋಗದಲ್ಲಿ ನವೆಂಬರ್ 6 ಮತ್ತು 7 ರಂದು ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಿದೆ.

ಕಾರ್ಯಾಗಾರದಲ್ಲಿ ದೇಶದ ವಿವಿಧ ರಾಜ್ಯಗಳ ಉನ್ನತ ಅಧಿಕಾರಿಗಳು, ಜಲ ತಜ್ಞರು ಮತ್ತು ಕೈಗಾರಿಕೆಗಳ ಮುಖ್ಯಸ್ಥರು ಭಾಗವಹಿಸಲಿದ್ದು, ನೀತಿ ನಿಯಮಗಳು, ಹಣಕಾಸು ಮಾದರಿಗಳು, ನೂತನ ತಂತ್ರಜ್ಞಾನದ ಅಳವಡಿಕೆ ಕುರಿತು ಚರ್ಚೆಯಾಗಲಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾರ್ಯಾಗಾರಕ್ಕೆ ಚಾಲನೆ ನೀಡುವರು.

‘ಬ್ರ್ಯಾಂಡ್ ಬೆಂಗಳೂರು ಅಭಿಯಾನದ ಅಡಿಯಲ್ಲಿ ತ್ಯಾಜ್ಯ ನೀರಿನ ಸಮರ್ಪಕ ಬಳಕೆಗೆ ಒತ್ತು ನೀಡಲಾಗಿದೆ. ತ್ಯಾಜ್ಯ ನೀರಿನ ಬಳಕೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ಜಲಮಂಡಳಿ ಮಾದರಿಯಾಗಿದೆ’ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಬೆಂಗಳೂರು ನಗರದಲ್ಲಿ ಶೇ 90ರಷ್ಟು ಒಳಚರಂಡಿ ಶುದ್ಧೀಕರಣ ಸಾಮರ್ಥ್ಯವನ್ನು ಹೊಂದಿದ್ದು, 1,348 ಎಂ.ಎಲ್.ಡಿ ಯಷ್ಟು ನೀರನ್ನು ಶುದ್ಧೀಕರಿಸಲಾಗುತ್ತಿದೆ. ಈ ನೀರನ್ನು ಸಮರ್ಪಕವಾಗಿ ಬಳಸಿಕೊಂಡು ಕೆರೆ ತುಂಬಿಸಲಾಗುತ್ತಿದೆ. ಪಾರ್ಕ್ ಮತ್ತು ಉದ್ಯಾನಗಳ ನಿರ್ವಹಣೆ ಜತೆಯಲ್ಲಿಯೇ ಕೈಗಾರಿಕೆಗಳಿಗೂ ಪೂರೈಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಮೈಸೂರು ರೇಸ್

ಶ್ಯಾಮ್‌ರಾಕ್ ಗೆಲ್ಲುವ ನಿರೀಕ್ಷೆ

ಮೈಸೂರು ರೇಸ್ ಕ್ಲಬ್ ಆನಿವರ್ಸರಿ ಕಪ್-2025 ಶನಿವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶ್ಯಾಮ್‌ರಾಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬ್ರೇಕ್ ಅವೇ 1, ಪೆಟ್ಟೀಸ್ ಚಾಯ್ಸ್ 5, ಡಿ ಅಡ್ಮಿರಲ್ 11
2ನೇ ರೇಸ್: ಟೈಗರ್‌ಕಿಂಗ್ 10, ವಾಲ್ಟರ್ 4, ಬಾಲ್ಟಿಮೋರ್ 5
3ನೇ ರೇಸ್: ಸಿಲ್ವರ್ ಕ್ವೆಸ್ಟ್ 8, ಸೂಪರ್‌ನಲ್ 9, ಪ್ರಿನ್ಸ್ ಆಫ್ ವೇಲ್ಸ್ 4
4ನೇ ರೇಸ್: ಆರೆಲ್ 3, ಇಸಾಬೆಲ್ 8, ಲಿಟ್ಲ್ ಮಿನಿಸ್ಟರ್ 1
5ನೇ ರೇಸ್: ದಿ ಗೋಲ್ಡನ್ ಸನ್‌ರೈಸ್ 7, ವಂಧಿಯಾಥೇವನ್ 3, ಕನ್ಯಾ ರಾಶಿ 2
6ನೇ ರೇಸ್: ಶ್ಯಾಮ್‌ರಾಕ್ 1, ಸೀಝ್ ಕರೇಜಿಯಸ್ 4, ಮಾಂಟೆವರ್ಡಿ 2
7ನೇ ರೇಸ್: ಯೂಕಿಕಾಜೆ 10, ಅನಿಗ್ರಹ 9, ಬಾಷಾ 7
8ನೇ ರೇಸ್: ಡಾಲೀಸ್ ಗೋಲ್ಡ್ 6, ಒನ್ ಡೈಮಂಡ್ 1, ನ್ಯಾಚುರಲ್ ಲುಕ್ 5

ಉತ್ತಮ ಬೆಟ್: ಬ್ರೇಕ್ ಅವೇ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	3,4,5	6,7,8

‘ಜನರಿಗೆ ಯಾವ ಸಂದೇಶ ನೀಡುತ್ತೀರಿ?’

ಸ್ಫೋಟಕ ಪತ್ತೆ: ಸಂಘ ಪರಿವಾರದವರಿಗೆ ಸಾಹಿತಿ ಬಂಜಗೆರೆ ಜಯಪ್ರಕಾಶ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇರಳದಲ್ಲಿ ಸಂಘ ಪರಿವಾರದ ಕಾರ್ಯಕರ್ತರೊಬ್ಬರ ಮನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಸ್ಫೋಟಕಗಳು ಪತ್ತೆಯಾಗಿದ್ದವು. ಹೀಗಿರುವಾಗ ಲಾಠಿ ಹಿಡಿದು ಜನರಿಗೆ ಯಾವ ಸಂದೇಶ ನೀಡುತ್ತೀರಿ?’ ಎಂದು ಸಾಹಿತಿ ಬಂಜಗೆರೆ ಜಯಪ್ರಕಾಶ್ ಪ್ರಶ್ನಿಸಿದರು.

ನಗರದಲ್ಲಿ ಶುಕ್ರವಾರ ಸೌಹಾರ್ದ ಕರ್ನಾಟಕ ಆಯೋಜಿಸಿದ್ದ ಕಾರ್ಪೊರೇಷನ್ ವೃತ್ತದಿಂದ ಪುರಭವನದವರೆಗೆ ‘ಸೌಹಾರ್ದ ದೀಪಾವಳಿ’ ಮೆರವಣಿಗೆ ಬಳಿಕ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

‘ಸ್ಫೋಟಕಗಳನ್ನು ಪಟಾಕಿ ಹಬ್ಬ ಮಾಡಲು ಸಂಗ್ರಹಿಸಿದ್ದಲ್ಲ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ಅಕ್ರಮವಾಗಿ ಸ್ಫೋಟಕಗಳನ್ನು ಸಂಗ್ರಹಿಸುವವರನ್ನು ಪತ್ತೆ ಮಾಡಿ, ಬಂಧಿಸಬೇಕು. ದೇಶದ ಇತರೆ ರಾಜ್ಯಗಳಲ್ಲಿಯೂ ಈ ರೀತಿ ಸ್ಫೋಟಕಗಳನ್ನು ಸಂಗ್ರಹಿಸಿ, ಯಾವ ಕಾರಣಕ್ಕೆ ಬಳಸುತ್ತಾರೆ ಎಂಬುದನ್ನು ವಿವರಿಸಿ ಹೇಳಬೇಕಿಲ್ಲ. ಲಾಠಿಗಳನ್ನು ಹಿಡಿದು ಹೇಳಲು ಹೊರಟಿರುವ ಸಂದೇಶ ಜನರನ್ನು ಬೇರ್ಪಡಿಸಿ ಕಲಹ ಉಂಟು ಮಾಡುವುದು. ಅದಕ್ಕೆ ಬದಲಾಗಿ ಭಾವೈಕ್ಯ ದೀಪವನ್ನು ಹಚ್ಚಿ, ಬೆಳಕಿನ ಹಬ್ಬವನ್ನು ಶಾಶ್ವತವಾಗಿ ಮಾಡಬೇಕಿದೆ’ ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ‘ದೇಶದಲ್ಲಿ ಇತ್ತೀಚೆಗೆ ಕೋಮುವಾದದ ಕತ್ತಲು ಆವರಿಸಿದೆ. ನಾವು ಕೈಯಲ್ಲಿ ಲಾಠಿ ಹಿಡಿದಿಲ್ಲ, ಯಾವುದೇ ಘೋಷಣೆ ಕೂಗಿಲ್ಲ. ನಮ್ಮ ಎದೆಯೊಳಗೆ ಪ್ರೀತಿ, ಅಹಿಂಸೆ, ಸೌಹಾರ್ದ, ಸಹಬಾಳ್ವೆ ಎಂಬ ಆಯುಧಗಳನ್ನು ಹಿಡಿದುಕೊಂಡಿದ್ದೇವೆ. ಮುಂದೆ ಜಗತ್ತಿನಲ್ಲಿ ಶಾಂತಿ ಲಭ್ಯವಾಗುವುದಿದ್ದರೆ ಅದಕ್ಕೆ ಅಹಿಂಸೆಯೇ ಅಸ್ತ್ರ ಎಂಬುದನ್ನು ಗಾಂಧೀಜಿ ಹೇಳಿದ್ದರು. ಲಾಠಿ ದೇಶವನ್ನು ನಾಶ ಮಾಡುತ್ತದೆ. ನಾನು ಪೊಲೀಸರ ಲಾಠಿ ಬಗ್ಗೆ ಹೇಳುತ್ತಿಲ್ಲ. ಇದು ದೊಣ್ಣೆ, ದೇಶವನ್ನು ನಾಶ ಮಾಡುವಂತಹದು’ ಎಂದು ಪರೋಕ್ಷವಾಗಿ ಸಂಘ ಪರಿವಾರದ ವಿರುದ್ಧ ಕಿಡಿಕಾರಿದರು.

ಹೋರಾಟಗಾರ ಜಿ.ಎನ್. ನಾಗರಾಜ್, ‘ಸಾರ್ವಜನಿಕ ಪ್ರದೇಶಗಳ ಪ್ರಯೋಜನವನ್ನು ಕಿತ್ತುಕೊಳ್ಳಲಾಗುತ್ತಿದೆ. ಹಿಂದೆ ನಗರದ ಸುತ್ತಮುತ್ತ 50–60 ಕಡೆ ಪ್ರತಿಭಟನೆಗಳು ನಡೆಯುತ್ತಿತ್ತು. ಈಗ ಕೆ.ಆರ್.ಪುರ ಹಾಗೂ ದಾಸರಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾದರೆ ಅವರು ಸ್ವಾತಂತ್ರ್ಯ ಉದ್ಯಾನಕ್ಕೆ ಬರಬೇಕು. ಪ್ರಜಾಪ್ರಭುತ್ವದ ಆಶಯಗಳು ಮರಳಿ ಸಿಗಬೇಕು ಎನ್ನುವ ಆಶಯದೊಂದಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದಲ್ಲಿ ಅನ್ಯಾಯ ನಡೆಯುತ್ತಿರುವುದು ದುರಂತ’ ಎಂದು ಬೇಸರ ವ್ಯಕ್ತಪಡಿಸಿದರು.

ದಲಿತ ಮುಖಂಡ ಮಾವಳ್ಳಿ ಶಂಕರ್, ‘ದೇಶ ಎಂತಹ ಹಾದಿಯಲ್ಲಿದೆ ಎಂಬುದನ್ನು ನೋಡುತ್ತಿದ್ದೇವೆ. ಹೃದಯ ಅರಳಿಸುವ ಹಬ್ಬಗಳಿಗೆ ಕೋಮು ಬಣ್ಣ ಬಳಿಯಲಾಗುತ್ತಿದೆ. ಬಡತನ, ನಿರುದ್ಯೋಗ, ಹಸಿವು, ದುಡಿಯುವ ಮಹಿಳೆಯರ ಸಮಸ್ಯೆ ಬಗೆಹರಿದಿಲ್ಲ. ಬಡ ಜನರು ಬದುಕು ಬೆಳಗಿಸುವ ದೀಪಾವಳಿ ಬರಬೇಕಿದೆ’ ಎಂದು ಆಶಿಸಿದರು.

ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ ಮಾತನಾಡಿದರು. ಮಂಜುಳಾ ಭಾರ್ಗವಿ, ಮಾಲತೇಶ್, ಸಬ್ಬನಹಳ್ಳಿ ರಾಜು ಹಾಡಿದರು. ಲೇಖಕಿ ಡಾ. ವಸುಂಧರಾ ಭೂಪತಿ ಅವರು ಸಂವಿಧಾನ ಪೀಠಿಕೆ ಬೋಧಿಸಿದರು.

ಕಾರ್ಯಕ್ರಮದಲ್ಲಿ ಸೌಹಾರ್ದ ಕರ್ನಾಟಕದ ಕೆ.ಎಸ್.ವಿಮಲಾ, ಸಾಹಿತಿ ಕೆ. ಮರುಳಸಿದ್ದಪ್ಪ, ಡಾ.ವಿಜಯಾ, ಸುಕನ್ಯಾ ಮಾರುತಿ ಪಾಲ್ಗೊಂಡಿದ್ದರು.

ಸಾಹಿತಿಗಳು, ಹೋರಾಟಗಾರರು, ಪ್ರಗತಿಪರ ಚಿಂತಕರು ‘ಸೌಹಾರ್ದ ದೀಪಾವಳಿ’ ಮೆರವಣಿಗೆ ನಡೆಸಿದರು ಪ್ರಜಾವಾಣಿ ಚಿತ್ರ

ಸಾರ್ವಜನಿಕರ ಮೇಲೆ ದರ್ಪದ ವರ್ತನೆ ಸಲ್ಲದು: ಸಲೀಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕಾರ ದುರುಪಯೋಗ ಪಡಿಸಿಕೊಂಡು ಸಾರ್ವಜನಿಕರ ಮೇಲೆ ಅನಗತ್ಯ ಬಲ ಪ್ರಯೋಗ ಮಾಡುವುದು ಅಥವಾ ದರ್ಪದಿಂದ ವರ್ತಿಸುವುದು ಇಲಾಖೆಯ ಘನತೆಗೆ ತಕ್ಕುದಾದ ನಡವಳಿಕೆಯಲ್ಲ. ನಾಗರಿಕರ ಹಕ್ಕುಗಳಿಗೆ ಗೌರವ ನೀಡುವ ಮೂಲಕ ಸಂಯಮದಿಂದ ವರ್ತಿಸಬೇಕು ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಸೂಚಿಸಿದ್ದಾರೆ.

ಎಂ.ಎ.ಸಲೀಂ

ಈ ಸಂಬಂಧ ಸುತ್ತೋಲೆ ಹೊರಡಿಸಿರುವ ಅವರು, ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚನೆ ನೀಡಿದ್ದಾರೆ.

ಇಲಾಖೆಯ ಮೇಲಿನ ಗೌರವ ಮತ್ತು ನಂಬಿಕೆಗಳು ಪ್ರತಿ ಅಧಿಕಾರಿಯು ಯಾವ ರೀತಿ ನಡೆದುಕೊಳ್ಳುತ್ತಾನೆ ಎಂಬುದರ ಮೇಲೆ ಅವಲಂಬಿತವಾಗಿದೆ ಎಂಬುದನ್ನು ಮರೆಯಬಾರದು. ಇಲಾಖೆಯ ಎಲ್ಲಾ ಅಧಿಕೃತ ವ್ಯವಹಾರಗಳು ಮತ್ತು ಕಾರ್ಯವಿಧಾನದಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಠಾಣೆಗೆ ಭೇಟಿ ನೀಡುವ ಯಾವುದೇ ವ್ಯಕ್ತಿಯ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ ಗಮನಿಸದೇ ಸಮಾನವಾಗಿ ಪರಿಗಣಿಸಬೇಕು ಎಂದು ಹೇಳಿದ್ದಾರೆ.

ದೂರುಗಳ ಸ್ಥಿತಿ ಮತ್ತು ಬಾಕಿ ಇರುವ ಪ್ರಕರಣಗಳ ಕುರಿತು ನಾಗರಿಕರಿಗೆ ಮಾಹಿತಿ ನೀಡಬೇಕು. ನ್ಯಾಯಾಂಗ ಮತ್ತು ಆಡಳಿತಾತ್ಮಕ ಅಧಿಕಾರಿಗಳಿಗೆ ಪೂರ್ಣ ಸಹಕಾರ ನೀಡಿ, ಶೋಧ, ಬಂಧನ ಅಥವಾ ವಿಚಾರಣೆ ವೇಳೆ ಸಾರ್ವಜನಿಕರ ಖಾಸಗಿತನ ಮತ್ತು ಘನತೆಯನ್ನು ಗೌರವಿಸಬೇಕು. ಬೇರೆ ಠಾಣಾ ವ್ಯಾಪ್ತಿಯ ದೂರು ಬಂದಲ್ಲಿ ದೂರುದಾರರನ್ನು ಸಂಬಂಧಿಸಿದ ಠಾಣೆಗೆ ಹೋಗಿ ದೂರು ನೀಡುವಂತೆ ಹೇಳದೇ, ಠಾಣೆಯಲ್ಲಿ ಶೂನ್ಯ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ, ಬಳಿಕ ವ್ಯಾಪ್ತಿಯ ಸಂಬಂಧಪಟ್ಟ ಠಾಣೆಗೆ ದೂರು ವರ್ಗಾಯಿಸುವಂತೆ ಸ್ಪಷ್ಟವಾಗಿ ಹೇಳಿದ್ದಾರೆ.

ಮಹಿಳೆಯರನ್ನು ಸಂಜೆ 6 ಗಂಟೆಯ ಬಳಿಕ ಠಾಣೆಗೆ ವಿಚಾರಣೆಗೆ ಅಥವಾ ಹೇಳಿಕೆ ಪಡೆಯಲು ಕರೆತರಬಾರದು. ಒಂದು ವೇಳೆ ಆಕೆ ಆರೋಪಿಯಾಗಿದ್ದಲ್ಲಿ ಅಥವಾ ಸಂತ್ರಸ್ತೆಯಾಗಿದ್ದಲ್ಲಿ ಮಹಿಳಾ ಪೊಲೀಸ್ ಅಧಿಕಾರಿಯ ನೆರವಿನೊಂದಿಗೆ ಮಹಿಳೆಯ ವಾಸದ ಸ್ಥಳ/ ಮನೆಯಲ್ಲಿಯೇ ವಿಚಾರಣೆ ಮಾಡಬೇಕು. ಕ್ರಿಮಿನಲ್ ಪ್ರಕರಣಗಳಲ್ಲಿ ಅವರನ್ನು ಬಂಧಿಸಿ, ವಿಚಾರಣೆ ನಡೆಸಿದಾಗ ಅವರನ್ನು ಠಾಣೆಯಲ್ಲಿ ಇರಿಸದೇ, ಗೃಹ ಆಶ್ರಯ ತಾಣಗಳಲ್ಲಿ ಇರಿಸಬೇಕು ಎಂದಿದ್ದಾರೆ.

ಆರೋಗ್ಯ ಉಚಿತ ಶಿಬಿರ ನಾಳೆ

ಬೆಂಗಳೂರು: ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ರಜತ ಮಹೋತ್ಸವದ ಅಂಗವಾಗಿ ಇದೇ ಭಾನುವಾರ ‘ಫನಾ ಕ್ರಿಕೆಟ್ ಪಂದ್ಯಾವಳಿ’ ಹಾಗೂ ಆರೋಗ್ಯ ಉಚಿತ ಶಿಬಿರ ಹಮ್ಮಿಕೊಂಡಿದೆ.

ಬೆಳಿಗ್ಗೆ 7 ಗಂಟೆಯಿಂದ ಬಸವೇಶ್ವರನಗರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಾವಳಿ ಹಾಗೂ ಆರೋಗ್ಯ ಶಿಬಿರ ನಡೆಯಲಿದೆ. ಉಚಿತವಾಗಿ ಎಕ್ಸ್‌-ರೇ, ಇಸಿಜಿ, ಜಿಆರ್‌ಬಿಎಸ್, ಎಚ್‌ಬಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ತಜ್ಞ ವೈದ್ಯರಿಂದಲೂ ಉಚಿತವಾಗಿ ಸಲಹೆಗಳು ದೊರೆಯಲಿವೆ ಎಂದು ಫನಾ ಅಧ್ಯಕ್ಷ ಡಾ. ಶೋಭಾ ಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿ ಕಿ.ಮೀ ಗೆ ₹2 ಕೋಟಿ ವೆಚ್ಚ; ₹1,100 ಕೋಟಿಗೆ ಪ್ರಸ್ತಾವ

550 ಕಿ.ಮೀ ಉದ್ದದ ರಸ್ತೆಗೆ ಡಾಂಬರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ 550 ಕಿ.ಮೀ ಉದ್ದದ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಿಗೆ ಒಂದು ಲೇಯರ್ ಡಾಂಬರು ಹಾಕಲು ಸರ್ಕಾರಕ್ಕೆ ಜಿಬಿಎ ಪ್ರಸ್ತಾವ ಸಲ್ಲಿಸಿದೆ.

ಮೇಲ್ಮೈ ಪದರ ಡಾಂಬರು ಹಾಕಲು ಪ್ರತಿ ಕಿ.ಮೀ ಗೆ ₹2 ಕೋಟಿ ವೆಚ್ಚವಾಗಲಿದೆ. ₹1,100 ಕೋಟಿ ವೆಚ್ಚದಲ್ಲಿ 550 ಕಿ.ಮೀ ಉದ್ದದ ರಸ್ತೆಗಳಿಗೆ ಡಾಂಬರು ಹಾಕಲು ಯೋಜಿಸಲಾಗಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಸರ್ಕಾರದಿಂದ ಅನುಮೋದನೆ ದೊರೆತ ಕೂಡಲೇ ಡಾಂಬರೀಕರಣ ಕಾಮಗಾರಿ ಆರಂಭಿಸಲಾಗುತ್ತದೆ ಎಂದರು.

ನಿರ್ವಹಣಾ ಅವಧಿ ಮುಗಿದಿರುವ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿ ಜಿಬಿಎ ವತಿಯಿಂದ ಡಾಂಬರು ಹಾಕಲಾಗುತ್ತದೆ. ನಿರ್ವಹಣಾ ಅವಧಿ ಇರುವ ರಸ್ತೆಗಳಲ್ಲಿ ಆಯಾ ಗುತ್ತಿಗೆದಾರರಿಂದಲೇ ಗುಂಡಿ ದುರಸ್ತಿ ಕಾಮಗಾರಿಗಳನ್ನು ನಡೆಸಲು ಸೂಚಿಸಲಾಗಿದೆ ಎಂದು ಹೇಳಿದರು.

ವಾರ್ಡ್ ರಸ್ತೆಗಳಲ್ಲೂ ಗುಂಡಿ ಮುಚ್ಚುವ ಅಥವಾ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನಗರ ಪಾಲಿಕೆಗಳ ವತಿಯಿಂದ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಗಾಂಧಿ ನಗರ ವಿಧಾನ ಸಭೆ ಕ್ಷೇತ್ರದಲ್ಲಿ ವೈಟ್ ಟಾಪಿಂಗ್ ಕಾಮಗಾರಿಗೆ ಅ.21ರಂದು ಚಾಲನೆ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ‘ಎಲ್ಲ ರಸ್ತೆಗಳಿಗೆ ಒಂದು ಲೇಯರ್ ಡಾಂಬರು ಹಾಕಿ’ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ವೇದಿಕೆಯಲ್ಲೇ ಆದೇಶ ನೀಡಿದ್ದರು. ಇದಾದ ಎರಡೇ ದಿನದಲ್ಲಿ ಜಿಬಿಎ ವತಿಯಿಂದ ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಲಾಗಿದೆ.

ಕ್ರಿಯಾ ಯೋಜನೆಗೆ ಸೂಚನೆ: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ₹1,100 ಕೋಟಿ, ವಾರ್ಡ್ ರಸ್ತೆ, ಚರಂಡಿ ಅಭಿವೃದ್ಧಿಗೆ ₹1,100 ಕೋಟಿ ವೆಚ್ಚದ ಎರಡು ಕ್ರಿಯಾಯೋಜನೆಗಳನ್ನು ಸಲ್ಲಿಸುವಂತೆ ಜಿಬಿಎಗೆ ನಗರಾಭಿವೃದ್ಧಿ ಇಲಾಖೆ ಆ.15 ರಂದು ಸೂಚಿಸಿತ್ತು.

ಮುಖ್ಯ ಮತ್ತು ಉಪಮುಖ್ಯ ರಸ್ತೆಗಳ ಅಭಿವೃದ್ಧಿಗೆ ₹1,100 ಕೋಟಿ ಕ್ರಿಯಾ ಯೋಜನೆಯನ್ನು ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆಯಡಿ ಪ್ರಸ್ತಾವ ಸಲ್ಲಿಸಬೇಕು. ವಾರ್ಡ್‌ಗಳ ರಸ್ತೆ, ಚರಂಡಿ ಅಭಿವೃದ್ಧಿ, ನಿರ್ವಹಣೆ ಕಾಮಗಾರಿಗಳ ₹1,100 ಕೋಟಿ ಕ್ರಿಯಾ ಯೋಜನೆಯನ್ನು ಮುಖ್ಯಮಂತ್ರಿಯವರ ವಿವೇಚನಾ ನಿಧಿಯಲ್ಲಿ ಕೈಗೊಳ್ಳಲು ಪ್ರಸ್ತಾವ ಸಲ್ಲಿಸಬೇಕು ಎಂದು ತಿಳಿಸಲಾಗಿತ್ತು.

ಎರಡೂ ಕ್ರಿಯಾ ಯೋಜನೆಗಳನ್ನು ಐದು ನಗರ ಪಾಲಿಕೆಗಳಿಂದ ಪಡೆದು, ಪರಿಶೀಲಿಸಿ, ಕ್ರೋಡೀಕರಿಸಿ ಸರ್ಕಾರಕ್ಕೆ ಶೀಘ್ರ ಸಲ್ಲಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತರಿಗೆ ಸೂಚಿಸಲಾಗಿತ್ತಾದರೂ, 500 ಕಿ.ಮೀ ಉದ್ದದ ಮುಖ್ಯ ಮತ್ತು ಉಪಮುಖ್ಯ ರಸ್ತೆಗಳಿಗೆ ಒಂದು ಲೇಯರ್ ಡಾಂಬರು ಹಾಕಲು ಮಾತ್ರ ಪ್ರಸ್ತಾವ ಸಲ್ಲಿಸಲಾಗಿದೆ.

ನಗರದಲ್ಲಿ ಇಂದು

ಸ್ತನ ಕ್ಯಾನ್ಸರ್ ಜಾಗೃತಿಗೆ ಬೈಕ್ ರ‍್ಯಾಲಿ: ಮಾತನಾಡುವವರು: ಡಾ. ರಾಹುಲ್ ಎಸ್. ಕನಕ, ಡಾ. ನೀಲೇಶ್ ರೆಡ್ಡಿ, ಡಾ. ರಾಜೇಶ್ ವಿ. ಹೆಳವರ್, ಡಾ. ಗಣೇಶ ಕುಮಾರ್ ಕೆ.ಆರ್., ಆಯೋಜನೆ ಮತ್ತು ರ‍್ಯಾಲಿ ಪ್ರಾರಂಭಿಸುವ ಸ್ಥಳ: ಮಣಿಪಾಲ್ ಯಶವಂತಪುರ, ಬೆಳಿಗ್ಗೆ 8

ಮಕ್ಕಳ ವಚನ ಮೇಳ: ವಚನ ರಸಪ್ರಶ್ನೆ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

‘ಎಸ್.ವಿ.ಆರ್.@50’ ಸಾಧನೆ, ಸಂಭ್ರಮ, ಚಿತ್ರೋತ್ಸವ: ಬೆಳಿಗ್ಗೆ 10.30ಕ್ಕೆ ‘ಬಂಧನ’, ಮಧ್ಯಾಹ್ನ 2.30ಕ್ಕೆ ‘ಗಂಡಭೇರುಂಡ’ ಚಲನಚಿತ್ರಗಳ ಪ್ರದರ್ಶನ: ಆಯೋಜನೆ: ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ, ಸ್ಥಳ: ಡಾ. ರಾಜ್‌ಕುಮಾರ್ ಭವನ, ಕರ್ನಾಟಕ ಕಲಾವಿದರ ಸಂಘ, ಚಾಮರಾಜಪೇಟೆ

‘ಸ್ಕ್ರೀನ್, ಸೆಲ್ಫ್ ಆ್ಯಂಡ್ ಅಲ್ಗೋರಿದಮ್ಸ್’ ಉಪನ್ಯಾಸ: ಡಾ. ಶೇಖರ್ ಶೇಷಾದ್ರಿ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11.30

ಬೆಳ್ಳಿ ಮಹೋತ್ಸವ: ಉದ್ಘಾಟನೆ: ಅರವಿಂದ್ ಕುಮಾರ್, ಅತಿಥಿಗಳು: ವಿಭು ಬಖ್ರು, ಡಿ.ಕೆ. ಶಿವಕುಮಾರ್, ವಿ. ಸೋಮಣ್ಣ, ಅಧ್ಯಕ್ಷತೆ: ಎಸ್. ಯತಿರಾಜ್, ಆಯೋಜನೆ: ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ, ಸ್ಥಳ: ಸಿಟಿ ಸಿವಿಲ್ ಕೋರ್ಟ್ ಆವರಣ, ಬೆಳಿಗ್ಗೆ 11.30

ವಿಭು ಬಖ್ರು

ತುರುವನೂರು ಮಂಜುನಾಥ ಅವರ ‘ಅಂತರ್ಮಿತ’ ಪುಸ್ತಕ ಜನಾರ್ಪಣೆ: ಶೂದ್ರ ಶ್ರೀನಿವಾಸ್, ಪುಸ್ತಕದ ಕುರಿತು: ದಾದಾಪೀರ್ ನವಲೇಹಾಳ್, ಜಿ.ಎನ್. ಮೋಹನ್, ಆಯೋಜನೆ: ಕೆಂಧೂಳಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ಜ್ಯೋತಿ ಪ್ರಕಾಶನ, ಸ್ಥಳ: ಬೆಂಗಳೂರು ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 12

‘ಕರಾವಳಿ ರತ್ನ’ ಪ್ರಶಸ್ತಿ, ಪ್ರತಿಭಾ ಪುರಸ್ಕಾರ ಪ್ರದಾನ: ಉದ್ಘಾಟನೆ: ಸದಾನಂದ ಗೌಡ, ಅತಿಥಿಗಳು: ಎಸ್. ಆರ್. ವಿಶ್ವನಾಥ, ಪ್ರಿಯಕೃಷ್ಣ, ಕೆ.ಪಿ. ಪುತ್ತೂರಾಯ, ಅಧ್ಯಕ್ಷತೆ: ಕೆ.ಸಿ. ಬಲ್ಲಾಳ್, ಪ್ರಶಸ್ತಿ ಸ್ವೀಕರಿಸುವವರು: ನಕ್ರೆ ಸತೀಶಚಂದ್ರ ಶೆಟ್ಟಿ, ಸಯ್ಯದ್ ಮೊಹಮ್ಮದ್ ಬ್ಯಾರಿ, ಎಲಿಯಾಸ್ ಸಾಂಕ್ವಿಸ್, ಸೌಂದರ್ಯ ಮಂಜಪ್ಪ, ಆಯೋಜನೆ: ದಕ್ಷಿಣ ಕನ್ನಡಿಗರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಆರ್.ವಿ. ಶೇಷಾದ್ರಿ ಗವಾಯಿಗಳ ಸ್ಮರಣೆ: ಅಧ್ಯಕ್ಷತೆ: ಶಿವರುದ್ರ ಸ್ವಾಮೀಜಿ, ಡಾ.ಸಿ.ಆರ್. ಚಂದ್ರಶೇಖರ್, ಸಂಗೀತ ಶಿರೋಮಣಿ ಪ್ರಶಸ್ತಿ ಸ್ವೀಕರಿಸುವವರು: ಸತೀಶ ಹಂಪಿಹೊಳಿ, ಗೋಪಾಲ್ ಕೆ. ರಾಯಚೂರ್, ಆಯೋಜನೆ: ಪಂಡಿತ ಆರ್.ವಿ. ಶೇಷಾದ್ರಿಗವಾಯಿ ಪುಣ್ಯಸ್ಮೃತಿ ಸಮಿತಿ, ನಾದವಾಹಿನಿ ಶ್ರೀದತ್ತ ಸಂಗೀತ ವಿದ್ಯಾನಿಕೇತನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3ರಿಂದ

ಗಿರಿಜಾಶಾಸ್ತ್ರಿ, ಕೆ. ರಘುನಾಥ್ ಅವರ ‘ಅಮೇರಿಕಾಯಣ ಸಹಪಯಣ’, ಕೆ. ರಘುನಾಥ್ ಅವರ ‘ಅವಗಾಹ’ ಪುಸ್ತಕಗಳ ಜನಾರ್ಪಣೆ: ಕೆ. ಸತ್ಯನಾರಾಯಣ, ಅಧ್ಯಕ್ಷತೆ: ವಿಜಯಾ, ಅತಿಥಿ: ಆರ್. ಪೂರ್ಣಿಮಾ, ಆಯೋಜನೆ: ಗೀತಾಂಜಲಿ ಪ್ರಕಾಶನ, ರೂಪ ಪ್ರಕಾಶನ, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಲಲಿತಕಲಾ ಅಕಾಡೆಮಿ ಪಕ್ಕ, ಜೆ.ಸಿ. ರಸ್ತೆ, ಕನ್ನಡ ಭವನ, ಸಂಜೆ 4

ನೂತನ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭಕ್ಕೆ ಚಾಲನೆ: ನರಹಳ್ಳಿ ಬಾಲಸುಬ್ರಹ್ಮಣ್ಯ, ಅಧ್ಯಕ್ಷತೆ: ಡಾ. ವಸುಂಧರಾ ಭೂಪತಿ, ‘ಸುವರ್ಣ ಲಾಂಛನ’ ಬಿಡುಗಡೆ: ಬಿ.ಎನ್. ಶ್ರೀರಾಮ್, ಅತಿಥಿ: ವಿದ್ಯಾರಶ್ಮಿ ಪೆಲತ್ತಡ್ಕ, ಆಯೋಜನೆ: ಕರ್ನಾಟಕ ಪ್ರಕಾಶಕರ ಸಂಘ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಕೆ.ವಿ. ನರಸಿಂಹನ್ ಅವರಿಗೆ ಸನ್ಮಾನ ಕಾರ್ಯಕ್ರಮ: ಅತಿಥಿಗಳು: ಅರವಿಂದ್ ಕುಮಾರ್, ವೆಂಕಟರಮಣಿ, ದುಷ್ಯಂತ್ ಶ್ರೀಧರ್, ಆಯೋಜನೆ: ಕೆವಿಎನ್@50, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಅನನ್ಯಾ ಭಟ್, ಅತಿಥಿಗಳು: ನಂದಿನಿ ಕೆ. ಮೆಹ್ತಾ, ಶೇಷಾದ್ರಿ ಐಯ್ಯಂಗಾರ್, ಆಯೋಜನೆ: ಶ್ರದ್ಧಾ ಡಾನ್ಸ್ ಸೆಂಟರ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6.15

‘ಅಪ್ಪು’ ಆ್ಯಪ್ ಬಿಡುಗಡೆ: ಅತಿಥಿಗಳು: ಡಿ.ಕೆ. ಶಿವಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್, ಸಮರ್ಥ ನಾಗಭೂಷಣಂ, ಪ್ರಮೋದ್ ಪ್ರಕಾಶ್, ಸ್ಥಳ: ಶೆರಟಾನ್ ಗ್ರ್ಯಾಂಡ್, ಬ್ರಿಗೇಡ್ ಗೇಟ್ ವೇ, ರಾಜಾಜಿನಗರ, ಸಂಜೆ 6.30

‘ಶ್ರೀಮದ್ಭಗವದ್ಗೀತೆ-ಆರನೇ ಅಧ್ಯಾಯ’ ಧಾರ್ಮಿಕ ಪ್ರವಚನ: ಸತ್ಯನಾರಾಯಣಾಚಾರ್ಯ, ಆಯೋಜನೆ: ದಿಗ್ವಿಜಯ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಸ್ಥಳ: ಉತ್ತರಾದಿ ಮಠ, ನ್ಯಾಷನಲ್ ಕಾಲೇಜಿನ ಎದುರು, ಬಸವನಗುಡಿ, ಸಂಜೆ 6.30

‘ಯಕ್ಷ ಷಡಾನನ’– ‘ಧರ್ಮಾಂಗದ’, ‘ಮಾಗಧ’, ‘ರುದ್ರಕೋಪ’, ‘ಮಾಗಧ’, ‘ಗದಾಯುದ್ಧ’ ಐದು ಪೌರಾಣಿಕ ಪ್ರಸಂಗಗಳ ಪ್ರದರ್ಶನ: ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 9.45ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
12 ಗಂಟೆಗಳ ತಡೆರಹಿತ ಶಾಪಿಂಗ್
ಮಳಿಗೆಗಳು 10AM - 10PM ತೆರೆದಿರುತ್ತದೆ
EXCHANGE DHAMAKA
Upto ₹25,000
OFF ON EXCHANGE
OF OLD TELEVISIONS, AIR CONDITIONERS, HOME APPLIANCES, MOBILES & LAPTOPS.
CASH BACK BONANZA
Upto ₹50,000
ಕ್ಯಾಶ್ ಬ್ಯಾಕ್*
BIGGEST Deepavali SALE
ಕೊನೆಯ 2 ದಿನಗಳು
(25 - 26 Oct)
FINANCE BONANZA
Upto ₹15,000
ಕ್ಯಾಶ್ ಬ್ಯಾಕ್*
ಉಚಿತ*
FIRE-BOLTT
SMART CALLING WATCH WORTH ₹20000
HDFC BANK
10% INSTANT CASH BACK ON CC & DC EMI* MIN TXN ₹17,000 MAX CAP ₹3,000
10% INSTANT DISCOUNT* SBI card
*Min. Trxn.: ₹20,000; Max. Discount: ₹3,000 per card; Valid only on EMI Trxns.; Validity: 27 Sep - 31 Oct 2025. T&C Apply.
UPTO 5% OFF INSTANT CASH BACK
MIN TXN ₹10,000 MAX CAP ₹7,500
1 ಇ.ಎಮ್.ಐ ಉಚಿತ*
ಕೇವಲ ಪಾವತಿಸಿ ₹1
LG ಎಲ್ಲಾ ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು*
BT SPEAKER INDUCTION COOKER STEAM IRON KETTLE DRY IRON
SAMSUNG 100 CLASS NEO QLED SMART TV 100QN80F ಹಳೆಯ ಬೆಲೆ ₹6,46,490 ಹಬ್ಬದ ಬೆಲೆ ₹6,15,690
SONY 98 BRAVIA 4K ULTRA HD SMART MINI LED GOOGLE TV 98XR55A ಹಳೆಯ ಬೆಲೆ ₹5,74,190 ಹಬ್ಬದ ಬೆಲೆ ₹5,53,190
Haier 98 QLED 144HZ GOOGLE TV WITH HANDS FREE VOICE CONTROL & LOCAL DIMMING 98S9QT ಹಳೆಯ ಬೆಲೆ ₹2,79,990 ಹಬ್ಬದ ಬೆಲೆ ₹2,49,990
ಉಚಿತ: HAIER 43 4K UHD LED TV WORTH ₹52490
LG 75 4K ULTRA HD SMART LED NANOCELL TV 75NANO83A6A ಹಳೆಯ ಬೆಲೆ ₹99,290 ಹಬ್ಬದ ಬೆಲೆ ₹94,590
LOWEST PRICE CHALLENGE 4K LED 43 4K LED - ₹17,300 | 55 4K LED - ₹28,500 MRP: ₹39,900 MRP: ₹65,900
OPPO F31 ₹19,170* EFFECTIVE PRICE (PRICE AFTER CASH BACK) EMI ₹1,775 Onwards ಉಚಿತ: BT NECKBAND WORTH ₹1649
xiaomi NOTE 14 PRO/ 14 PRO+ ₹20,499* Onwards EFFECTIVE PRICE (PRICE AFTER CASH BACK) EMI ₹1,791 Onwards ಉಚಿತ: BT NECKBAND WORTH ₹1649
vivo V60E/60 ₹24,570* Onwards EFFECTIVE PRICE (PRICE AFTER CASH BACK) EMI ₹2,275 Onwards ಉಚಿತ: BT NECKBAND WORTH ₹1649
SAMSUNG S25 / S25 ULTRA ₹68,999* Onwards EFFECTIVE PRICE (PRICE AFTER CASH BACK) EMI ₹3,125 Onwards MAGSAFE W/L POWER BANK WORTH ₹7999 @ ₹99
iPhone 17/17 PRO ₹76,900* Onwards EFFECTIVE PRICE (PRICE AFTER CASH BACK) EMI ₹3,454 Onwards ಉಚಿತ: COMPLETE DAMAGE PROTECTION 1YR + ZEB BT SPEAKER WORTH ₹12490
LG 14 PLACE SETTIN FREESTANDING DISHWASHER DFB532FP OLD PRICE ₹50,990 ಹಬ್ಬದ ಬೆಲೆ ₹48,590
Haier 230 LITRES, SINGLE DOOR HARD TOP CONVERTIBLE DEEP FREEZER OLD PRICE ₹27,490 ಹಬ್ಬದ ಬೆಲೆ ₹25,890
hp 15 RYZEN 5 7520U 16GB RAM 512GB SSD 15.6" FHD EMI ₹3,666 ಹಬ್ಬದ ಬೆಲೆ ₹43,990 ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
DELL 3530 13TH GEN i5 16GB RAM, 512GB SSD 15.6 FHD WIN 11 MSO 24 EMI ₹4,249 ಹಬ್ಬದ ಬೆಲೆ ₹49,990 ಉಚಿತ: VIP 55CM TROLLEY BAG + COMPANY BAG PACK WORTH ₹9,999
Lenovo SLIM 3I 13TH GEN i7 16GB RAM, 512GB SSD 15.6 WXGA WIN 11 MSO 24 EMI ₹5,249 ಹಬ್ಬದ ಬೆಲೆ ₹62,990 ಉಚಿತ: VIP 55CM TROLLEY BAG + COMPANY BAG PACK WORTH ₹9,999
SAMSUNG 653 LTRS SIDE BY SIDE SMART REFRIGERATOR RS76CB81A333HL ಹಳೆಯ ಬೆಲೆ ₹1,14,990 ಹಬ್ಬದ ಬೆಲೆ ₹1,09,590
Godrej 600LTRS TOUGHENED GLASS DOOR SIDE BY SIDE REFRIGERATOR ಹಳೆಯ ಬೆಲೆ ₹73,490 ಹಬ್ಬದ ಬೆಲೆ ₹69,990
DAIKIN 2.02 TON 3 STAR, INVERTER SPLIT AC ಹಳೆಯ ಬೆಲೆ ₹68,890 ಹಬ್ಬದ ಬೆಲೆ ₹65,590
BOSCH 9 KG FULLY AUTOMATIC FRONT LOAD WASHING MACHINE ಹಳೆಯ ಬೆಲೆ ₹44,990 ಹಬ್ಬದ ಬೆಲೆ ₹43,290
IFB DEEPCLEAN® 6.5 KG TOP LOAD WASHING MACHINE ಹಳೆಯ ಬೆಲೆ ₹19,490 ಹಬ್ಬದ ಬೆಲೆ ₹18,390
GEYSER UPTO 60% OFF
MIXER GRINDER UPTO 63% OFF
CHIMNEY UPTO 50% OFF
WATER PURIFIER UPTO 53% OFF
Panasonic 23 L CONVECTION MICROWAVE ಹಳೆಯ ಬೆಲೆ ₹15,210 ಹಬ್ಬದ ಬೆಲೆ ₹14,480
SONY SOUNDBAR HT-B600 3.1.2 CH,350W, DOLBY ATMOS,DTS:X, WIRELESS SUBWOOFER ಹಳೆಯ ಬೆಲೆ ₹39,990 ಹಬ್ಬದ ಬೆಲೆ ₹34,650
GIRIAS THE CONSUMER DURABLE PEOPLE Since 1971
STORE LOCATOR
179 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com



ಮೈಸೂರುಸಿಲ್ಕ್ ಸೀರೆಯ ಅಂದಕ್ಕೆ ಮನಸೋಲದ ಹೆಂಗಳೆಯರಿಲ್ಲ. ಈ ಸೀರೆಯ ವಿಶಿಷ್ಟವಾದ ಹೊಳಪು, ಮೃದು ಸ್ಪರ್ಶದ ಮೋಡಿಯು ಅದರ ದುಬಾರಿ ಬೆಲೆಯನ್ನೂ ಮೀರಿ ನಿಲ್ಲುತ್ತದೆ. ಉಟ್ಟ ನೀರೆಯ ಮೈಮಾಟದ ಸೊಬಗು ಹೆಚ್ಚಿಸುವ ಈ ಸೀರೆಯು ಉತ್ಕೃಷ್ಟ ಗುಣಮಟ್ಟದ ಕಾರಣದಿಂದ ಕರ್ನಾಟಕದ ಅಸ್ಮಿತೆಯಾಗಿಯೂ ಗುರುತಿಸಿಕೊಂಡಿದೆ

ಮೈಸೂರುಸಿಲ್ಕ್ ಸೀರೆ ಯಾಕಿಷ್ಟು ಅಕ್ಕರೆ ನೀರೆ?

• ಶುಭಶ್ರೀ ಪ್ರಸಾದ್

ಮೈಸೂರು ಅರಮನೆ, ಮೈಸೂರು ದಸರಾ, ನಾಲಗೆಯಲ್ಲಿ ರಸ ಒಸರಿಸುವ ಮೈಸೂರುಪಾಕು, ಮೈಸೂರು ಚಿಗುರು ವೀಳ್ಯದೆಲೆ, ಮೈಸೂರು ವೀರನಗೆರೆ ಬದನೆ, ಘಮಘಮಿಸುವ ಮೈಸೂರು ಮಲ್ಲಿಗೆ ಎಂತೆಲ್ಲ ಹೆಗ್ಗಳಿಕೆಗೆ ಪಾತ್ರವಾಗಿರುವ ಸಾಂಸ್ಕೃತಿಕನಗರಿ ಮೈಸೂರು, ತನ್ನದೇ ಹೆಸರಿನೊಂದಿಗೆ ತಳುಕು ಹಾಕಿಕೊಂಡಿರುವ ರೇಷ್ಮೆಗೂ ಅಷ್ಟೇ ಹೆಸರುವಾಸಿ.

'ಮೈಸೂರು ದಸರಾ ಎಷ್ಟೊಂದು ಸುಂದರ, ಚೆಲ್ಲಿದೆ ನಗೆಯ ಪನ್ನೀರ' ಎಂಬ ಹಾಡಿಗೆ ತಕ್ಕಂತೆ, ನಾಡಹಬ್ಬದ ಕಾರಣದಿಂದ ಮೈಸೂರು ಇತ್ತೀಚೆಗಷ್ಟೇ ಇಂದ್ರನಗರಿ ಅಮರಾವತಿಯಂತೆ ದೀಪಾಲಂಕಾರಗಳಿಂದ ಕಂಗೊಳಿಸಿ ಲಕ್ಷಾಂತರ ಜನರ ಮನಸೂರೆಗೊಂಡ ಈ ಸಂದರ್ಭದಲ್ಲಿ, ಮೈಸೂರುಸಿಲ್ಕು ಎನ್ನುವ ಗಂಧರ್ವಕನ್ಯೆಯ ಕುರಿತು ಹೇಳಲೇಬೇಕು. ಬೇರೆ ರೇಷ್ಮೆ ಸೀರೆಗೂ ಮೈಸೂರುಸಿಲ್ಕಿಗೂ ಏನು ವ್ಯತ್ಯಾಸವಿದೆ? ವಿಶಿಷ್ಟ ಹೊಳಪಿರುವ ಮೈಸೂರುಸಿಲ್ಕ್ ಸೀರೆ ಸ್ವರ್ಗದಿಂದ ಇಳಿದ ದೇವತೆಯ ಹಾಗೆ. ಅದಕ್ಕೇ ಆಕೆಗೆ ಅಷ್ಟು ಮೌಲ್ಯ. ವಾರ್ಡ್‌ರೋಬಿನಲ್ಲಿ ಎಷ್ಟು ಮೈಸೂರುಸಿಲ್ಕ್ ಸೀರೆಗಳಿವೆ ಎಂದರೆ ಆ ಸ್ತ್ರೀಗೆ ಅಷ್ಟೊಂದು ಹೆಮ್ಮೆ ಎನ್ನುವಷ್ಟರ ಮಟ್ಟಿಗೆ ಈ ಸೀರೆ ಮೇಲಿನ ಮೋಹವಿದೆ. ಜಿ.ಐ. ಟ್ಯಾಗಿಂಗ್ ಹೊಂದಿರುವ ಈ ಮೈಸೂರುಸಿಲ್ಕ್ ಬಹುಕಾಲ ಬಾಳಿಕೆ ಬರುವಂಥದ್ದು.

ನೋಡಲು ಅತ್ಯಂತ ಆಡಂಬರ ಎನಿಸದಿದ್ದರೂ ಅದರ ಮೌಲ್ಯದಿಂದಾಗಿಯೇ ಜನ ಅದನ್ನು ಉಟ್ಟವರನ್ನು ಸಿರಿವಂತರೇ ಇರಬಹುದು ಎಂದುಕೊಳ್ಳುವಷ್ಟರ ಮಟ್ಟಿಗೆ ಇದು ಜನಜನಿತವಾಗಿದೆ. ಹಾಗೆ ನೋಡಿದರೆ ಇತ್ತೀಚೆಗೆ ಮೈಸೂರುಸಿಲ್ಕ್ ಇಮಿಟೇಶನ್ ಸೀರೆಗಳು ಬಹಳಷ್ಟು ಬಂದಿವೆ. ಏನೇ ನಕಲು ಬಂದರೂ ಮೂಲ ಮೈಸೂರು ಸಿಲ್ಕಿಗೆ ಇರುವ ಬೆಲೆ ಬೇರೆಯದ್ದಕ್ಕೆ ಲಭ್ಯವಾಗಲು ಸಾಧ್ಯವೇ?

ಇವಳು ಯಾವಾಗಲೂ ಮೈಸೂರುಸಿಲ್ಕ್ ಸೀರೆಯನ್ನೇ ಉಡುತ್ತಾಳೆ ಎಂದು ಕೆಲವರ ಬಗೆಗೆ ಕಿಹಿ ಮಾತನಾಡುವುದನ್ನು ಕೇಳಿದ್ದೇನೆ. ಅದು ಬರೀ ಕುಹಕವಲ್ಲ. ಅವಳ ಬಳಿ ತನಗಿಂತ ಹೆಚ್ಚು ಇವೆ ಎನ್ನುವ ಅಸೂಯಾ ಭಾವವೂ ಹೌದು. 'ಓ ಅವಳಾ ಮೈಸೂರುಸಿಲ್ಕ್ ಪೂರ್ಣಿಮಾ, ಓಹ್ ಇವಳಾ ಮೈಸೂರುಸಿಲ್ಕ್ ರಾಧಾ' ಎಂದೆಲ್ಲ ಹೆಸರಿನ ಜೊತೆ ವಿಶೇಷಣವಾಗಿಯೂ ಮೈಸೂರುಸಿಲ್ಕ್ ಬಳಕೆ ಆಗುತ್ತದೆ ಎಂದರೆ ಇದರ ಮಹಾಮಹಿಮೆ ಅರಿಯಬಹುದು.

ಮೈಸೂರು ಮಹಾರಾಜರ ದೂರದೃಷ್ಟಿತ್ವದ ಫಲವಾಗಿ ಹುಟ್ಟಿಕೊಂಡ ಸೀರೆ ಮೈಸೂರುಸಿಲ್ಕ್. ಪ್ರತಿ ರಾಜ್ಯಕ್ಕೂ ತನ್ನದೇ ಆದ ಕೆಲವು ಐಡೆಂಟಿಟಿ ವಸ್ತುಗಳಿರುತ್ತವೆ. ಅಂತೆಯೇ ನಮ್ಮ ರಾಜ್ಯದಲ್ಲಿ ಮೈಸೂರುಸಿಲ್ಕ್ ಅಂತಹ ಒಂದು ಐಡೆಂಟಿಟಿ ಎಂದರೆ ಅತಿಶಯೋಕ್ತಿಯಲ್ಲ. ಸಹಸ್ರಾರು ಜನರಿಗೆ ಉದ್ಯೋಗ ದೊರಕಿಸಿ ಕೊಡುವಲ್ಲಿ ಇದರ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಹಿಪ್ಪುನೇರಳೆ ಬೆಳೆಗಾರರ ಬದುಕನ್ನು ಬಂಗಾರವಾಗಿಸುವಲ್ಲಿ ಕೂಡ ಇದರ ಹಿರಿಮೆ ಇದೆ.

ನಲ್ಲನ ಸ್ಪರ್ಶದಂತೆ!

ಹೆಂಗಳೆಯರಿಗೇಕೆ ಮೈಸೂರುಸಿಲ್ಕ್ ಸೀರೆ ಎಂದರೆ ಇಷ್ಟೊಂದು ವ್ಯಾಮೋಹ ಎಂಬ ಪ್ರಶ್ನೆಗೆ ಅಚ್ಚರಿಯ ಉತ್ತರ ಸಿಗುತ್ತದೆ. ಈ ಸೀರೆ ಉಟ್ಟಾಗ, ನಲ್ಲನು ತನ್ನನ್ನು ಸ್ಪರ್ಶಿಸಿದಾಗ ಉಂಟಾಗುವಂತಹ ರೋಮಾಂಚಕಾರಿ ಅನುಭವ ಆಗುತ್ತದೆ ಎಂಬುದು ಹಲವು ಹೆಣ್ಣುಮಕ್ಕಳ ಅಂಬೋಣ!

ಮೈಸೂರುಸಿಲ್ಕಿಗೆ ಈಗ ಬರದ ಕಾಲ. ದುಡ್ಡು ಕೊಡುತ್ತೇನೆಂದರೂ ಬೇಕಾದ ಬಣ್ಣದ ಸೀರೆ ಸಿಗುತ್ತಿಲ್ಲ. ಇಂಥ ಕಾಲದಲ್ಲಿ ಹೊಸ ಹೊಸ ಬಣ್ಣಗಳ ಸೀರೆ ಉಡಬೇಕೆಂದು ಬಯಸುವವರಿಗೆ ಬಣ್ಣ ಬದಲಿಸಿಕೊಳ್ಳುವ ಸುವರ್ಣ ಅವಕಾಶವೂ ಇದೆ. ಹಾಗೆ ನೋಡಿದರೆ, ಇಷ್ಟವಾಗದ ಬಣ್ಣದ ಎರಡು ಮೈಸೂರುಸಿಲ್ಕ್ ಸೀರೆಗಳಿಗೆ ನಾನೇ ಬೇರೆ ಚಂದದ ಬಣ್ಣಗಳನ್ನು ಹಾಕಿಸಿ ಉಟ್ಟು ಖುಷಿಪಟ್ಟಿದ್ದೇನೆ. ಮೈಸೂರುಸಿಲ್ಕಿಗೆ ಬಣ್ಣ ಹಾಕುವ ಡೈಯಿಂಗ್ ಅಂಗಡಿಗಳು ಮೈಸೂರು ಮಾತ್ರವಲ್ಲದೆ ಬೆಂಗಳೂರಿನಲ್ಲಿ ಸಹ ಇವೆ. ಈ ಸೀರೆಗಳಿಗೆ ರೀಸೇಲ್ ವ್ಯಾಲ್ಯೂ ಕೂಡಾ ಇದೆ.

ನಾನೊಮ್ಮೆ ಶೃಂಗೇರಿಗೆ ಹೋದಾಗ ಅಲ್ಲಿ ಒಬ್ಬ ಮಹಿಳೆ ಮೈಸೂರುಸಿಲ್ಕ್ ಸೀರೆ ಉಟ್ಟುಕೊಂಡಿದ್ದನ್ನು ನೋಡಿ, ಉಡುಪಿಯ ನನ್ನ ಗೆಳತಿಗೆ 'ನೋಡಿ, ಅವರು ಮೈಸೂರಿನ ಕಡೆಯವರು ಅಂತ ಕಾಣುತ್ತೆ. ಮೈಸೂರುಸಿಲ್ಕ್ ಉಟ್ಟಿದ್ದಾರೆ. ಹೀಗೆಲ್ಲಾ ದೇವಸ್ಥಾನಕ್ಕೆ ಬಂದು ಅಲ್ಲಿ ಇಲ್ಲಿ ಕುಳಿತು ಕರೆಯಾದರೆ ಏನು ಗತಿ? ತುಂಬಾ ಕಾಸ್ಟ್ಲಿ ಸೀರೆ ಅದು' ಎಂದೆ.

ಉಡುಪಿ, ದಕ್ಷಿಣ ಕನ್ನಡದ ಕಡೆಯಲ್ಲೆಲ್ಲಾ ಅಥವಾ ಉತ್ತರ ಕರ್ನಾಟಕದಲ್ಲಿ ಮೈಸೂರು ಸಿಲ್ಕು ಅಷ್ಟೇನೂ ಜನಜನಿತವಲ್ಲ. ಹಾಗಾಗಿ, ನನ್ನ ಗೆಳತಿ 'ಹೌದಾ' ಎಂದು ಆಶ್ಚರ್ಯದಿಂದ ಕೇಳಿದರು. ನಾನು 'ಹೌದು, ಈಕೆ ಉಟ್ಟಿರುವ ಸೀರೆ ₹25,000ಕ್ಕೂ ಮಿಗಿಲು. ಕಳೆದ ಬಾರಿ ನೀವು ಮೈಸೂರಿನಲ್ಲಿ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಿಕ್ಕಾಗ ನಾನು ಉಟ್ಟಿದ್ದೆನಲ್ಲಾ ಅದಕ್ಕೆ ₹20,000 ಎಂದೆ. ಆಕೆಯ ಹುಬ್ಬು ಅರ್ಧ ಇಂಚು ಮೇಲೆ ಏರಿತ್ತು. ಆಕೆಯ ಪತಿಯಂತೂ 'ನೀವೆಲ್ಲಾ ಸಿರಿವಂತರ ಮಡದಿಯರು ಬಿಡಿ' ಎಂದು ತಿಳಿಹಾಸ್ಯ ಮಾಡುತ್ತಾ ನಕ್ಕರು. ಹೌದು, ಮೈಸೂರುಸಿಲ್ಕ್ ಸೀರೆ ಬಹಳ ದುಬಾರಿ.

'ಕಾಸಿಗೆ ತಕ್ಕ ಕಜ್ಜಾಯ' ಎನ್ನುವ ಗಾದೆ ಮಾತಿನ ಹಾಗೆ, ಅಷ್ಟು ದುಡ್ಡು ಕೊಟ್ಟರೂ ಅದನ್ನು ಉಟ್ಟಾಗ ಆಗುವ ಒಂದು ಸುಖದ ಫೀಲ್ ಇದೆಯಲ್ಲ, ಅದು ವರ್ಣನಾತೀತ. ಮೂವತ್ತು ವರ್ಷಗಳ ಹಿಂದೆ ನನ್ನ ಮದುವೆಯಲ್ಲೂ ಒಂದು ಮೈಸೂರುಸಿಲ್ಕ್ ಸೀರೆ ಬೇಕೆಂದು ಇಷ್ಟಪಟ್ಟುಕೊಂಡಿದ್ದೆ. ಅದು ಇಂದಿಗೂ ತನ್ನ ಸೌಂದರ್ಯವನ್ನು ಹಾಗೆಯೇ ಉಳಿಸಿಕೊಂಡಿದೆ. ಝೀರೊ ಸೈಝ್ ಮೋಹಕ್ಕೆ ಬಿದ್ದ ಹೆಂಗಳೆಯರ ಜೊತೆ ಮೈಸೂರುಸಿಲ್ಕ್ ಸೀರೆ ಕೂಡಾ ಸ್ಪರ್ಧೆಗೆ ಇಳಿದಂತಿದೆ. ಅಂದು ಇದ್ದಷ್ಟು ದಪ್ಪ ಈಗಿಲ್ಲ. ಮತ್ತೊಂದು ಬಗೆಯಲ್ಲಿ ಹೇಳುವುದಾದರೆ, ಅದು ಮೈಯಿಗೆ ಅಂಟಿಕೊಂಡು ಕೂರುತ್ತದೆ. ಹಾಗಾಗಿ ತುಸು ದಪ್ಪ ಇರುವವರು ಉಟ್ಟರೂ ಕಾಂಚೀವರಂ ಅಥವಾ ಮೊಳಕಾಲ್ಮುರು ರೇಷ್ಮೆ ಸೀರೆಯ ರೀತಿ ಹರಡಿಕೊಳ್ಳುವುದಿಲ್ಲ. ಅದರಿಂದ ತುಂಬಾ ದಪ್ಪಗೆ ಕಾಣುವುದಿಲ್ಲ ಎನ್ನುವ ಒಂದು ಬಗೆಯ ಸಮಾಧಾನದ ಅನುಭವ ಆ ಹೆಂಗಳೆಯರಿಗೆ.

ಡಿಸ್ಕೌಂಟ್ ಸೇಲ್ ಇದ್ದಾಗ, ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ಸರತಿ ನಿಂತ ಹಾಗೆ ಮೈಸೂರುಸಿಲ್ಕ್ ಸೀರೆ ಕೊಳ್ಳಲು ಹೆಂಗಸರು ಬೆಳಿಗ್ಗೆ ಐದರಿಂದಲೇ ನಿಂತಿದ್ದನ್ನು, ಸೀರೆಯನ್ನು ಆರಿಸಿಕೊಳ್ಳುವಾಗ ಸಣ್ಣ ಸಂಗ್ರಾಮವಾದದ್ದನ್ನು ನೋಡಿದಾಗ 'ಓಹ್ ಏನಮ್ಮಾ ನಿನ್ನ ಲೀಲೆ, ಓ ಮೈಸೂರುಸಿಲ್ಕ್ ತಾಯೇ' ಎಂದು ನನ್ನೊಳಗೇ ಹಾಡಿಕೊಂಡಿದ್ದೆ.

ಇನ್ನು ನೂರು ವರ್ಷಗಳಾದರೂ ಈ ಸೀರೆಗೆ ಇದೇ ಮರ್ಯಾದೆ, ಮಾನ, ಸಮ್ಮಾನಗಳು ಇರುತ್ತವೆ ಎಂದರೆ ನೀವು ನಂಬಲೇಬೇಕು.

ಗುಣಮಟ್ಟದಲ್ಲಿ ರಾಜಿಯೇ ಇಲ್ಲ

ಕೆಎಸ್‌ಐಸಿ (ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ) ಉತ್ಪಾದಿಸುವ ಮೈಸೂರುಸಿಲ್ಕ್ ಸೀರೆ ಶತಮಾನದ ನಂತರವೂ ತನ್ನ ವೈಭವವನ್ನು ಉಳಿಸಿಕೊಂಡಿದೆ. ಈ ಕುರಿತು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಝುಹೀರಾ ನಸೀಂ ಅಭಿಪ್ರಾಯ ಹಂಚಿಕೊಂಡಿದ್ದಾರೆ:

• ಮೈಸೂರುಸಿಲ್ಕ್ ಸೀರೆಗೆ ಅಷ್ಟೊಂದು ಬೇಡಿಕೆ ಏಕೆ?

ಗುಣಮಟ್ಟದಲ್ಲಿ ಎಂದಿಗೂ ರಾಜಿ ಮಾಡಿಕೊಳ್ಳದೇ ಇರುವುದರಿಂದ ಈ ಸೀರೆಯು ಮಹಿಳೆಯರ ಮನಸ್ಸನ್ನು ಸೆಳೆದಿದೆ. ರೇಷ್ಮೆಗೂಡು ಖರೀದಿಸಿ, ದಾರವನ್ನು ತಯಾರಿಸಿ, ವಿವಿಧ ಬಣ್ಣ ಮತ್ತು ವಿನ್ಯಾಸಗಳ ಉತ್ಪನ್ನಗಳನ್ನು ಒಂದೇ ಸೂರಿನಡಿ ಉತ್ಪಾದಿಸುವ ದೇಶದ ಏಕೈಕ ಸಂಸ್ಥೆ ಎನ್ನುವುದು ಕೆಎಸ್‌ಐಸಿ ಹಿರಿಮೆ.

ನೈಸರ್ಗಿಕ ರೇಷ್ಮೆ ಮತ್ತು ಶೇ 100ರಷ್ಟು ಶುದ್ಧ ಚಿನ್ನದ, ಎಂದಿಗೂ ಕಳೆಗುಂದದ ಜರಿಯನ್ನು ಬಳಕೆ ಮಾಡುವುದು ವಿಶೇಷವೇ. ಗುಣಮಟ್ಟ ಖಾತರಿಗಾಗಿ ವಿಶಿಷ್ಟ ಕೋಡ್, ಹಾಲೊಗ್ರಾಂ ಅನ್ನು ಪ್ರತಿ ಜರಿ ಸೀರೆಯಲ್ಲೂ ಹಾಕಲಾಗುತ್ತದೆ. ಭೌಗೋಳಿಕ ಸೂಚ್ಯಂಕದ (ಜಿ.ಐ. ಟ್ಯಾಗ್) ಮಾನ್ಯತೆಯೂ ಇದಕ್ಕೆ ಸಿಕ್ಕಿದೆ. ಈ ಎಲ್ಲ ಕಾರಣಗಳಿಂದಲೂ ಕರ್ನಾಟಕದ ಹೆಮ್ಮೆಯ ರೇಷ್ಮೆ ಸೀರೆಗೆ ಈಗಲೂ ಬೇಡಿಕೆ ಹಾಗೂ ಮಾನ್ಯತೆ.

• ಹೊಸ ವಿನ್ಯಾಸಗಳೇನಾದರೂ ಬಂದಿವೆಯೇ?

ಸೊಗಸಾದ ಜರಿ, ನಾವೀನ್ಯ, ಬಣ್ಣಗಳ ಸಂಯೋಜನೆ, ಉತ್ಪಾದನಾ ಕ್ರಮ, ಆಕರ್ಷಕವಾದ ಕನಿಷ್ಠ ವಿನ್ಯಾಸಗಳು ನಮ್ಮ ಬ್ರ್ಯಾಂಡ್. ವಿಭಿನ್ನ ಬಣ್ಣದ ಸೀರೆಗಳು, ಅದರ ಅಂದ ಹೆಚ್ಚಿಸುವ ಚಿನ್ನಲೇಪಿತ ಜರಿಗಳನ್ನೂ ಹೊಸ ವಿನ್ಯಾಸಗಳೊಂದಿಗೆ ಮಾರುಕಟ್ಟೆಗೆ ತರಲಾಗುತ್ತಿದೆ. ಸುಮಾರು 25 ಬಣ್ಣಗಳ, 300ರಿಂದ 400 ವಿನ್ಯಾಸಗಳ ಸೀರೆಗಳು ನಮ್ಮಲ್ಲಿ ಲಭ್ಯ ಇವೆ. ಈಗ 'ಝಡ್.ಎನ್.20' ಎನ್ನುವ ವಿನ್ಯಾಸದ ಸೀರೆಗಳನ್ನು ಉತ್ಪಾದಿಸಲಾಗುತ್ತಿದೆ. ಕ್ರೇಪ್ ಪ್ರಿಂಟೆಡ್ ಸೀರೆ, ಜರಿ ಕ್ರೇಪ್ ಸೀರೆ, ದುಪಟ್ಟಾ, ಪುರುಷರಿಗೆ ಶರ್ಟ್, ಪಂಚೆ, ಶಲ್ಯ ಸಹಿತ ಸಿದ್ಧ ಉಡುಪುಗಳನ್ನೂ ಕೆಎಸ್‌ಐಸಿ ಉತ್ಪಾದಿಸುತ್ತಿದೆ. ಬೇರೆ ಬ್ರ್ಯಾಂಡ್‌ನ ಸೀರೆಗಳ ವಿನ್ಯಾಸಕ್ಕೂ ಕೆಎಸ್‌ಐಸಿ ರೇಷ್ಮೆ ಸೀರೆಗಳಿಗೂ ಬಹಳಷ್ಟು ವ್ಯತ್ಯಾಸವಿದೆ. ಅದನ್ನು ಧರಿಸಿದಾಗ ಖಂಡಿತವಾಗಿಯೂ ಇದು ತಿಳಿಯುತ್ತದೆ.

• ಎಲ್ಲ ವರ್ಗದವರೂ ಖರೀದಿಸಲು ಅನುವಾಗುವಂತೆ ಮೈಸೂರುಸಿಲ್ಕ್ ಸೀರೆಯನ್ನು ಕಡಿಮೆ ಬೆಲೆಗೆ ಪೂರೈಸುವ ಯೋಜನೆ ಏನಾದರೂ ಇದೆಯೇ?

ನಮ್ಮ ಸೀರೆಗಳು ಕನಿಷ್ಠ ₹16 ಸಾವಿರದಿಂದಲೇ ಆರಂಭವಾಗುತ್ತವೆ. ಲಕ್ಷ ರೂಪಾಯಿ ಬೆಲೆಯ ಸೀರೆಗಳೂ ಇವೆ. ಈ ದರದಲ್ಲಿಯೇ ಬೇಡಿಕೆಯಷ್ಟು ಸೀರೆಗಳನ್ನು ಒದಗಿಸಲು ನಮಗೆ ಆಗುತ್ತಿಲ್ಲ. ಇನ್ನು ಕಡಿಮೆ ದರಕ್ಕೆ ಒದಗುವಂತೆ ಮಾಡಲು ಆಗುವುದೇ ಇಲ್ಲ. ಹಾಗೆ ಕೊಟ್ಟರೆ ಅದು ಮೈಸೂರುಸಿಲ್ಕ್ ಸೀರೆ ಎನ್ನಿಸದು. ಹಾಗಾಗಿ ಅಂತಹ ಯೋಚನೆ ಬಿಟ್ಟು, ಹಿಂದಿನ ಹಿರಿಮೆಯನ್ನೇ ಉಳಿಸಿಕೊಂಡು ಹೋಗುತ್ತಿದ್ದೇವೆ.



ಝುಹೀರಾ ನಸೀಂ

• ವಹಿವಾಟು ಹೇಗಿದೆ? ಹೊಸ ಯೋಜನೆಗಳು ಏನಿವೆ?

ಕೆಎಸ್‌ಐಸಿ ಸೀರೆಗಳ ಮಾರಾಟದ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇದೆ. ವರ್ಷಕ್ಕೆ ಲಕ್ಷಕ್ಕೂ ಹೆಚ್ಚು ಸೀರೆಗಳ ಮಾರಾಟ ಆಗುತ್ತದೆ. ಈಗ ಆನ್‌ಲೈನ್‌ನಲ್ಲೂ ಮಾರಾಟಕ್ಕೆ ಅವಕಾಶ ಇರುವುದರಿಂದ ವಿದೇಶದಿಂದಲೂ ಬೇಡಿಕೆಯಿದೆ. 2024–25ನೇ ಸಾಲಿನಲ್ಲಿ ₹375 ಕೋಟಿ ವಹಿವಾಟು ನಡೆದಿದೆ. ಇದರಲ್ಲಿ ನಿವ್ವಳ ಲಾಭದ ಪ್ರಮಾಣ ₹96 ಕೋಟಿ. ಬೆಂಗಳೂರು, ಮೈಸೂರು, ದಾವಣಗೆರೆ, ಚನ್ನಪಟ್ಟಣ, ಹೈದರಾಬಾದ್ ಸಹಿತ 16 ಮಾರಾಟ ಮಳಿಗೆಗಳನ್ನು ಕೆಎಸ್‌ಐಸಿ ಹೊಂದಿದೆ. ಬೆಂಗಳೂರಿನ ಏರ್‌ಪೋರ್ಟ್ ಆವರಣದಲ್ಲಿ ಸದ್ಯದಲ್ಲೇ ಎರಡು ಮಳಿಗೆಗಳು ಬರಲಿವೆ. ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಆಗಾಗ ಮಾರಾಟ ಮೇಳಗಳನ್ನು ಆಯೋಜಿಸಲಾಗುತ್ತದೆ. ಯಂತ್ರೋಪಕರಣಗಳ ಉನ್ನತೀಕರಣವೂ ಕಾಲಕಾಲಕ್ಕೆ ಆಗುತ್ತಿದೆ. ಇದರಿಂದ ಉತ್ಪಾದನೆಯನ್ನು ನಿಧಾನವಾಗಿ ಹೆಚ್ಚಿಸಲು ಸಾಧ್ಯವಾಗುತ್ತಿದೆ

ಸಂದರ್ಶನ: ಉಮೇಶ ಭಟ್ಟ ಪಿ.ಎಚ್.

ಫಟಾಫಟ್ ತಿಂಡಿ

• ವೇದಾವತಿ ಎಚ್.ಎಸ್.

ಅಡುಗೆಮನೆ ಎಂಬುದು ಸದಾ ಹೊಸತನಕ್ಕೆ ತೆರೆದುಕೊಂಡ ಪ್ರಯೋಗಶಾಲೆ. ಯಾರಾದರೂ ನೆಂಟರು–ಆಪ್ತೇಷ್ಟರು ದಿಢೀರ್ ಎಂದು ಮನೆಗೆ ಬಂದರೆ, ಏನು ಮಾಡುವುದು ಎಂಬುದು ತರಾತುರಿಯಲ್ಲಿ ಹೊಳೆಯುವುದೇ ಇಲ್ಲ. ಇಂತಹ ಸಂದರ್ಭಗಳಲ್ಲಿ, ಹೊರಗಿನಿಂದ ಕುರುಕಲು ತಿಂಡಿ ತರುವುದಕ್ಕಿಂತ ಮನೆಯಲ್ಲಿ ಲಭ್ಯವಿರುವ ಸಾಮಗ್ರಿಗಳಲ್ಲಿಯೇ ಅಚ್ಚುಕಟ್ಟಾಗಿ ಮಾಡಬಹುದಾದ ವಿಶೇಷ ತಿನಿಸುಗಳ ರೆಸಿಪಿಗಳು ಇಲ್ಲಿವೆ.

ರಸಾಸ್ವಾದ

ಆ್ಯಪಲ್ ಡಿಲೈಟ್

ಸೇಬು ಹಣ್ಣಿನಿಂದ ಮಕ್ಕಳಿಗೆ ಇಷ್ಟವಾಗುವ ರೀತಿಯಲ್ಲಿ ಆ್ಯಪಲ್ ಡಿಲೈಟ್ ಅನ್ನು ಸುಲಭವಾಗಿ ತಯಾರಿಸಬಹುದು.

ಬೇಕಾಗುವ ಸಾಮಗ್ರಿ: ಸೇಬು 2, ಹಾಲು 1/2 ಲೀಟರ್, ಕಾರ್ನ್‌ಫ್ಲೋರ್ 1/4 ಕಪ್, ಸಕ್ಕರೆ 1/2 ಕಪ್, ಚೆಕ್ಕೆ ಪುಡಿ 1/4 ಟೀ ಚಮಚ, ಬೆಣ್ಣೆ 1 ಟೇಬಲ್ ಚಮಚ.

ತಯಾರಿಸುವ ವಿಧಾನ: ಒಂದು ಸೇಬನ್ನು ಬೀಜ ತೆಗೆದು ಚಿಕ್ಕದಾಗಿ ಕತ್ತರಿಸಿಕೊಳ್ಳಿ. ಅದಕ್ಕೆ ಹಾಲು ಹಾಕಿ ನುಣ್ಣಗೆ ರುಬ್ಬಿಕೊಂಡು, ಸೋಸಿಕೊಳ್ಳಿ. ಬಳಿಕ ಬಾಣಲೆಗೆ ಹಾಕಿ, ಅದಕ್ಕೆ ಕಾರ್ನ್‌ಫ್ಲೋರ್ ಮತ್ತು ಸಕ್ಕರೆ ಸೇರಿಸಿ ಒಲೆಯ ಮೇಲಿಟ್ಟು, ಮಧ್ಯಮ ಉರಿಯಲ್ಲಿ 5–6 ನಿಮಿಷ ಮಗುಚಿ. ದಪ್ಪಗಿನ ಹದ ಬಂದಾಗ ಒಲೆಯಿಂದ ಇಳಿಸಿ. ಚಿಕ್ಕ ಚಿಕ್ಕ ಬೌಲಿಗೆ ಹಾಕಿ ಅರ್ಧ ಗಂಟೆ ಫ್ರೀಜರ್‌ನಲ್ಲಿಡಿ. ಮತ್ತೊಂದು ಸೇಬಿನ ಸಿಪ್ಪೆ ಮತ್ತು ಬೀಜವನ್ನು ತೆಗೆದು, ಚಿಕ್ಕದಾಗಿ ಕತ್ತರಿಸಿಕೊಂಡು ಬಾಣಲೆಗೆ ಹಾಕಿ. ಅದಕ್ಕೆ ಬೆಣ್ಣೆ, ಚೆಕ್ಕೆ ಪುಡಿ, ಒಂದು ಟೇಬಲ್ ಚಮಚ ಸಕ್ಕರೆ ಹಾಕಿ ಮೆತ್ತಗಾಗುವರೆಗೆ ಹುರಿಯಿರಿ. ಫ್ರೀಜರ್‌ನಿಂದ ಆ್ಯಪಲ್ ಡಿಲೈಟ್ ಹೊರತೆಗೆದು, ಹುರಿದ ಸೇಬಿನ ಹಣ್ಣಿನ ಮಿಶ್ರಣವನ್ನು ಸೇರಿಸಿ.

ಎಲೆಕೋಸಿನ ಪತ್ರೊಡೆ

ಪತ್ರೊಡೆ ಎಂದ ಕೂಡಲೆ ಸಹಜವಾಗಿ ಎಲ್ಲರಿಗೂ ನೆನಪಿಗೆ ಬರುವುದು ಕೆಸುವಿನ ಪತ್ರೊಡೆ. ಕರಾವಳಿ ಮತ್ತು ಮಲೆನಾಡಿನ ಭಾಗದ ಜನರಿಗೆ ಈ ಪತ್ರೊಡೆ ಚಿರಪರಿಚಿತ. ಆದರೆ ಪತ್ರೊಡೆ ತಿನ್ನಬೇಕು ಅನ್ನಿಸಿದಾಗ, ಕೆಸು ಸಿಗದಿದ್ದರೂ ಇಲ್ಲಿ ತಿಳಿಸಿರುವ ರೀತಿ ಎಲೆಕೋಸಿನ ಪತ್ರೊಡೆ ತಯಾರಿಸಿ ಸವಿಯಬಹುದು.

ಬೇಕಾಗುವ ಸಾಮಗ್ರಿ: ಅಕ್ಕಿ 1 ಕಪ್, ಕಡಲೆಬೇಳೆ 3 ಟೇಬಲ್ ಚಮಚ, ಉದ್ದಿನಬೇಳೆ 2 ಟೇಬಲ್ ಚಮಚ, ಮೆಂತ್ಯ 1/2 ಟೇಬಲ್ ಚಮಚ, ದನಿಯಾ 2 ಟೇಬಲ್ ಚಮಚ, ಜೀರಿಗೆ 1 ಟೇಬಲ್ ಚಮಚ, ಒಣಮೆಣಸಿನಕಾಯಿ 8–10, ಅರಸಿನ 1/2 ಟೀ ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಹುಣಸೆಹಣ್ಣು ನಿಂಬೆ ಗಾತ್ರದಷ್ಟು, ಬೆಲ್ಲ 1 ಟೇಬಲ್ ಚಮಚ, ತೆಂಗಿನತುರಿ 1 ಕಪ್, ಎಲೆಕೋಸಿನ ಎಲೆಗಳು 6, ಎಣ್ಣೆ 2–3 ಟೇಬಲ್ ಚಮಚ.

ಒಗ್ಗರಣೆಗೆ: ಎಣ್ಣೆ 1 ಟೇಬಲ್ ಚಮಚ, ಸಾಸಿವೆ, ಎಳ್ಳು, ತಲಾ 1 ಟೀ ಚಮಚ, ಇಂಗು 1/4 ಟೀ ಚಮಚ, ಕರಿಬೇವಿನ ಎಲೆ 10.

ತಯಾರಿಸುವ ವಿಧಾನ: ಅಕ್ಕಿ ಮತ್ತು ಬೇಳೆಗಳನ್ನು ಬಟ್ಟಲಿಗೆ ಹಾಕಿ ಚೆನ್ನಾಗಿ ತೊಳೆದು ನೀರನ್ನು ಸೋಸಿಕೊಳ್ಳಿ. ಜೊತೆಗೆ ಮೆಂತ್ಯ, ದನಿಯಾ, ಜೀರಿಗೆ, ಒಣಮೆಣಸಿನಕಾಯಿ ಸೇರಿಸಿ ಒಂದೂವರೆ ಕಪ್ ನೀರು ಹಾಕಿ ಮೂರು ಗಂಟೆ ನೆನೆಸಿಡಿ. ಬಳಿಕ ನೀರು ಸಹಿತ ಮಿಕ್ಸಿ ಜಾರಿಗೆ ಹಾಕಿ. ಅರಸಿನ, ಉಪ್ಪು, ಹುಣಸೆಹಣ್ಣು, ಬೆಲ್ಲ, ತೆಂಗಿನತುರಿಯನ್ನು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಎಲೆಕೋಸನ್ನು ಬಿಡಿಸಿ ದೊಡ್ಡದಾದ, ಚೆನ್ನಾಗಿರುವ 6 ಎಲೆಗಳನ್ನು ಆರಿಸಿಕೊಳ್ಳಿ. ರುಬ್ಬಿಕೊಂಡ ಮಿಶ್ರಣವನ್ನು ಎಲೆಕೋಸಿನ ಮೇಲೆ ಹರಡಿ. ಒಂದರ ಮೇಲೆ ಒಂದರಂತೆ ಮೂರು ಎಲೆಗೆ ಮಸಾಲೆ ಪೇಸ್ಟ್ ಹಚ್ಚಿ. ಹೀಗೆ ಉಳಿದ ಎಲೆಗಳಿಗೂ ಮಸಾಲೆ ಪೇಸ್ಟ್ ಹಚ್ಚಿ. ಬಳಿಕ ಸುರುಳಿ ಸುತ್ತಿ ಹಬೆಯಲ್ಲಿ 15 ನಿಮಿಷ ಬೇಯಿಸಿ. ಆರಿದ ನಂತರ ನಿಧಾನವಾಗಿ ಕತ್ತರಿಸಿಕೊಳ್ಳಿ. ತವಾಕ್ಕೆ ಎಣ್ಣೆ ಹಾಕಿ ಬಿಸಿ ಮಾಡಿ. ಸಣ್ಣ ಉರಿಯಲ್ಲಿ ಕೆಂಬಣ್ಣ ಬರುವವರೆಗೆ ಎರಡೂ ಬದಿ ಬೇಯಿಸಿ ತೆಗೆದಿಡಿ.

ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿಕೊಂಡು ಒಗ್ಗರಣೆ ತಯಾರಿಸಿ. ಇದನ್ನು ಪತ್ರೊಡೆ ಮೇಲೆ ಉದುರಿಸಿ. ರುಚಿಕರ ಮತ್ತು ಆರೋಗ್ಯಕರವಾದ ಪತ್ರೊಡೆ ಸವಿಯಲು ಸಿದ್ಧ.

ನಿದ್ರೆ ಬಾರದೇ? ಇದೋ ಸರಳ ಸೂತ್ರ

ಸ್ಪಂದನ
ಡಾ. ವೀಣಾ ಎಸ್. ಭಟ್

• ನನಗೆ 50 ವರ್ಷ. ಮುಟ್ಟು ನಿಂತು ಎರಡು ವರ್ಷ ಕಳೆಯಿತು. ಈಗ ಸರಿಯಾಗಿ ನಿದ್ರೆ ಬರುತ್ತಿಲ್ಲ. ರಾತ್ರಿ ತುಂಬಾ ಗೊರಕೆ ಹೊಡೆಯುತ್ತೇನೆ ಎಂದು ನನ್ನ ಪತಿ ದೂರುತ್ತಾರೆ. ತೂಕ ಕೂಡ ದಿನೇ ದಿನೇ ಹೆಚ್ಚುತ್ತಿದೆ. ಈ ಸಮಸ್ಯೆಯಿಂದ ಹೊರಬರುವುದು ಹೇಗೆ?

ಪಂಕಜಾ, ಮೈಸೂರು

ಮೆನೊಪಾಸ್ ಅಥವಾ ಋತುಬಂಧದ ನಂತರ ಬಹಳಷ್ಟು ಮಹಿಳೆಯರು ನಿದ್ರಾಹೀನತೆಯನ್ನು ಅನುಭವಿಸುತ್ತಾರೆ. ಯಾಕೆಂದರೆ ಈ ಹಂತದಲ್ಲಿ, ಹೆಣ್ತನದ ಹಾರ್ಮೋನುಗಳಾದ ಈಸ್ಟ್ರೋಜನ್ ಮತ್ತು ಪ್ರೊಜೆಸ್ಟಿರಾನ್ ಉತ್ಪತ್ತಿ ಮಾಡುವ ಅಂಡಾಶಯದ ಕಾರ್ಯಕ್ಷಮತೆ ಕ್ಷೀಣಿಸುತ್ತಾ ಬರುತ್ತದೆ. ಇದರಿಂದಾಗಿ, ನಿದ್ರೆಗೆ ಪ್ರೇರಕವಾದ ಮೆಲಟೋನಿನ್ ಹಾರ್ಮೋನಿನ ಉತ್ಪಾದನೆಗೆ ತೊಡಕಾಗುವುದರಿಂದ ನಿದ್ರಾಹೀನತೆ ಮತ್ತು ನಿದ್ರೆಗೆ ಸಂಬಂಧಿಸಿದ ಇತರ ಸಮಸ್ಯೆಗಳು ಹೆಚ್ಚಾಗುತ್ತವೆ.

ಈ ಹಂತದಲ್ಲಿ ಶಾರೀರಿಕವಾಗಿ ಕೊಬ್ಬಿನಾಂಶ ಸಂಗ್ರಹದಲ್ಲಿ ಕೂಡ ಬಹಳಷ್ಟು ವ್ಯತ್ಯಾಸಗಳಾಗುತ್ತವೆ. ಹೊಟ್ಟೆಯ ಕೆಳಭಾಗ ಹಾಗೂ ಕುತ್ತಿಗೆಯ ಭಾಗದಲ್ಲಿ ಹೆಚ್ಚು ಕೊಬ್ಬು ಶೇಖರವಾಗುತ್ತದೆ. ಇದರಿಂದ ಕೆಲವರಲ್ಲಿ ಶ್ವಾಸನಾಳದ ಮೇಲ್ಭಾಗದಿಂದ ಗಾಳಿಯ ಸಂಚಾರಕ್ಕೆ ಅಡಚಣೆಯಾಗಿ ಗೊರಕೆ ಹೊಡೆಯುವುದು, ಇನ್ನು ಕೆಲವರಲ್ಲಿ ನಿದ್ರೆಯಲ್ಲಿ ಉಸಿರುಕಟ್ಟಿದಂತೆ ಭಾಸವಾಗುವುದು ಕಂಡುಬರುತ್ತದೆ.

ಈ ರೀತಿ ಗೊರಕೆ ಹೊಡೆಯುವುದನ್ನು ಹೆಚ್ಚಿನವರು ಅದು ಗಾಢ ನಿದ್ರೆಯ ಸಂಕೇತ, ಸುಖದ ಅನುಭವ ಎಂದೆಲ್ಲ ಹೇಳಿಕೊಳ್ಳುತ್ತಾರೆ. ಅದು ಖಂಡಿತ ತಪ್ಪು. ದಿನವೂ ಗೊರಕೆ ಹೊಡೆಯುವವರಲ್ಲಿ ಉಸಿರಾಟದ ತೊಂದರೆ ಇರಬಹುದು. ಕಳಪೆ ಗುಣಮಟ್ಟದ ನಿದ್ರೆ, ಕಡಿಮೆ ನಿದ್ರೆ ಹಾಗೂ ದೀರ್ಘಕಾಲದವರೆಗೆ ನಿದ್ರೆ ಮಾಡುವುದು ಎಲ್ಲವೂ ಅನಾರೋಗ್ಯಕ್ಕೆ ಕಾರಣವಾಗಬಹುದು. ಶ್ವಾಸಕೋಶ ಹಾಗೂ ಮೆದುಳಿಗೆ ರಕ್ತಸಂಚಾರ ಕಡಿಮೆಯಾಗಿ, ಮೆದುಳಿನ ನರಗಳಿಗೆ ತೊಂದರೆಯಾಗಿ ಖಿನ್ನತೆ, ಆತಂಕ, ಮರೆವಿನ ಕಾಯಿಲೆಯಂತಹವು ಹೆಚ್ಚಾಗಬಹುದು.

ಪ್ರತಿದಿನ ಸರಾಸರಿ ಏಳು ಗಂಟೆಯಾದರೂ ರಾತ್ರಿ ನಿದ್ರೆ ಅಗತ್ಯ. ಪ್ರತಿದಿನ ಐದೂವರೆ ಗಂಟೆಗೂ ಕಡಿಮೆ ನಿದ್ರೆ ಮಾಡುವವರಲ್ಲಿ ಅತಿಯಾದ ಹೊಟ್ಟೆಬೊಜ್ಜು, ಹೃದ್ರೋಗ, ಪಾರ್ಶ್ವವಾಯು, ಏರು ರಕ್ತದೊತ್ತಡದಂತಹ ಸಮಸ್ಯೆಗಳು ಕಂಡುಬರಬಹುದು ಎಂದು ತಜ್ಞರು ಎಚ್ಚರಿಸುತ್ತಾರೆ. ನಮ್ಮ ಮೆದುಳು, ಹೃದಯ, ಮೂಳೆ ಹಾಗೂ ಭಾವನಾತ್ಮಕ ಆರೋಗ್ಯ ಎಲ್ಲಕ್ಕೂ ಸುಖ ನಿದ್ರೆ ಅತಿ ಅಗತ್ಯ. ಹಾಗಾಗಿ, ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಇರುವ ಸರಳ ಸೂತ್ರವೆಂದರೆ, ಉತ್ತಮ ನಿದ್ರೆಯ ಸುಖ ಹೊಂದುವುದು.

ಅದಕ್ಕಾಗಿ ನಿಮಗೆ ನೀವೇ ಕೈಗೊಳ್ಳಬಹುದಾದ ಕ್ರಮಗಳೆಂದರೆ:

- ಸದಾ ಮಲಗಲು ಮತ್ತು ಏಳಲು ನಿರ್ದಿಷ್ಟ ಸಮಯ ನಿಗದಿಪಡಿಸಿಕೊಳ್ಳಿ (ಸಾಮಾನ್ಯವಾಗಿ ರಾತ್ರಿ ಹತ್ತು ಗಂಟೆಯಿಂದ ಬೆಳಿಗ್ಗೆ ಆರು ಗಂಟೆ)
- ಮಲಗಲು ಕನಿಷ್ಠ ಎರಡು ತಾಸು ಮೊದಲೇ ಆಹಾರ ಸೇವನೆಯನ್ನು ನಿಲ್ಲಿಸಿ
- ಮಲಗುವ ಕೋಣೆ ಸುರಕ್ಷಿತ, ಸ್ವಚ್ಛ ಹಾಗೂ ಶಾಂತವಾಗಿರಲಿ, ಕತ್ತಲೆಯಿರಲಿ
- ವಿಡಿಯೊಗೇಮ್, ವಾಟ್ಸ್‌ಆ್ಯಪ್, ಅಂತರ್ಜಾಲ ಹುಡುಕಾಟದಂತಹ ಕೆಲಸಗಳನ್ನು ಮಲಗುವ ಎರಡು ಗಂಟೆ ಮೊದಲೇ ನಿಲ್ಲಿಸಿ
- ಕಾಫಿ, ಚಹಾ, ಕೋಲಾ, ಆಲ್ಕೊಹಾಲ್ ಸೇವನೆ ನಿಲ್ಲಿಸಿ ಇಲ್ಲವೇ ಕಡಿಮೆ ಮಾಡಿ
- ಹಗಲಿಡೀ ಚಟುವಟಿಕೆಯಿಂದ ಇರಿ. ಆಗ ರಾತ್ರಿ ನಿದ್ರೆ ಚೆನ್ನಾಗಿ ಬರುತ್ತದೆ. ಮಧ್ಯಮಗತಿಯ ವ್ಯಾಯಾಮ ಹಾಗೂ ವಾಕಿಂಗ್ ಅನ್ನು ಮಲಗುವ ಮೊದಲು ಮಾಡಬಹುದು
- ಹಗಲು ನಿದ್ರೆ ಬೇಡವೇ ಬೇಡ. ಮಾಡಿದರೂ 20 ನಿಮಿಷ ಮಾತ್ರ
- ಸಂಜೆ ಹೊತ್ತು ನಿದ್ರೆಕಾರಕ ಮೆಲಟೋನಿನ್ ಉತ್ಪಾದನೆಗೆ ಸಹಾಯವಾಗುವ ಟ್ರಿಪ್ಟೋಫಾನ್ ಅಂಶವಿರುವ ಹಾಲು, ಕುಂಬಳಬೀಜ, ಬೆರ್ರಿ, ಒಣಹಣ್ಣುಗಳು, ಬಾಳೆಹಣ್ಣಿನಂತಹ ಆಹಾರ ಸೇವಿಸುವುದು ನಿದ್ರೆಗೆ ಸಹಾಯಕ
- ರಾತ್ರಿ ಹೊತ್ತು ಅತಿಯಾದ ಖಾರ ಪದಾರ್ಥದ ಸೇವನೆ ಬೇಡ, ಅತಿ ಆಹಾರ ಸೇವನೆಯೂ ಬೇಡ
- ಇಂಪಾದ ಸಂಗೀತ ಕೇಳುವಿಕೆ, ದೀರ್ಘ ಉಸಿರಾಟ, ಯೋಗನಿದ್ರಾ ಅಭ್ಯಾಸಗಳು ಸಹಾಯಕ
- ಮಲಗುವ ಮೊದಲು ಕಾಲಿನ ಪಾದಗಳಿಗೆ ಶುದ್ಧ ಎಣ್ಣೆ ಅಥವಾ ತುಪ್ಪದಿಂದ 5 ನಿಮಿಷ ಚೆನ್ನಾಗಿ ಮಸಾಜ್ ಮಾಡುವುದು ಉತ್ತಮ ನಿದ್ರೆಗೆ ಸಹಾಯಕ
- ದೇಹವನ್ನು ಸಡಿಲವಾಗಿ ಬಿಟ್ಟು ಶವಾಸನದಲ್ಲಿ ಮಲಗಿ. 100ರಿಂದ 1ರವರೆಗೆ (ಹಿಮ್ಮುಖವಾಗಿ) ಎಣಿಸುತ್ತಾ ಬನ್ನಿ. ಮಧ್ಯದಲ್ಲೇ ನಿದ್ರೆಗೆ ಜಾರುವ ಸಾಧ್ಯತೆ ಹೆಚ್ಚು
- ಅಸ್ತಮಾ, ಸಂದುನೋವು, ಕಾಲುನೋವಿನಂತಹ ತೊಂದರೆಗಳು ನಿದ್ರಾಹೀನತೆಗೆ ಕಾರಣವಾಗುತ್ತಿವೆಯೇ ಎಂದು ಪರಿಶೀಲಿಸಿಕೊಳ್ಳಿ

ಎಲ್ಲ ಪ್ರಯತ್ನಗಳೂ ವಿಫಲವಾದರೆ, ವೈದ್ಯರ ಸಲಹೆಯ ಮೇರೆಗೆ 'ಅರಿವಿನ ವರ್ತನಾ ಚಿಕಿತ್ಸೆ'ಗೆ (ಕಾಗ್ನಿಟಿವ್ ಬಿಹೇವಿಯರಲ್ ಥೆರಪಿ) ಪೂರಕವಾದ ಮಾತ್ರೆಯಂತಹವು ಬೇಕಾಗಬಹುದು. ಒಟ್ಟಿನಲ್ಲಿ, ಮೆನೊಪಾಸ್ ಸಂದರ್ಭದಲ್ಲಿ ಆಗುವ ನಿದ್ರಾಹೀನತೆಯನ್ನು ನಿರ್ಲಕ್ಷಿಸಬೇಡಿ.

ಅಮ್ಮ ಹೇಳ್ತಾಳೆ

ನಳನಳಿಸುವ ಚರ್ಮಕ್ಕೆ

ಕರುಳು ಆರೋಗ್ಯದಿಂದ ಇದ್ದರೆ ಚರ್ಮವು ನಳನಳಿಸುತ್ತದೆ. ಕರುಳಿನಲ್ಲಿ ಒಳ್ಳೆಯ ಬ್ಯಾಕ್ಟೀರಿಯಾಗಳು ಸಕ್ರಿಯವಾಗಿದ್ದರೆ ಜೀರ್ಣಕ್ರಿಯೆ ಸರಾಗವಾಗಿ ಆಗುತ್ತದೆ. ಜೀರ್ಣಕ್ರಿಯೆ ಸರಿಯಾಗಿದ್ದರೆ ಎಲ್ಲ ಅಂಗಾಂಗಗಳು ಸಮರ್ಪಕವಾಗಿ ಕೆಲಸ ಮಾಡುತ್ತವೆ. ವಿಷಕಾರಿ ಆಹಾರ ಸೇವನೆಯನ್ನು ತಪ್ಪಿಸಿದರೆ ರಕ್ತ ಶುದ್ಧಿಯಾಗಿ ಇರುವುದಲ್ಲದೆ ಚರ್ಮದ ಆರೋಗ್ಯದ ಮೇಲೂ ಉತ್ತಮ ಪರಿಣಾಮ ಬೀರುತ್ತದೆ.

ಹಾಗಾಗಿ, ಕರುಳಿನಲ್ಲಿ ಒಳ್ಳೆಯ ಬ್ಯಾಕ್ಟೀರಿಯಾಗಳು ಸಕ್ರಿಯಗೊಳ್ಳಲು ಪ್ರೊಬಯಾಟಿಕ್ ಆಹಾರವನ್ನು ಹೆಚ್ಚು ಸೇವಿಸಬೇಕು. ಗಟ್ಟಿ ಮೊಸರು, ಚೀಸ್, ಮಜ್ಜಿಗೆ, ಯಾವುದೇ ಫ್ಲೇವರ್ ಹಾಕದ ಲಸ್ಸಿ, ನೆನೆಸಿಟ್ಟ ಸೋಯಾಬೀನ್ ಆಹಾರ ಕ್ರಮದಲ್ಲಿ ಇರುವಂತೆ ನೋಡಿಕೊಳ್ಳಬೇಕು.



ಕೊಟ್ಟು ನೋಡಿ ಕರಾಟೆ ತರಬೇತಿ

ಭಾವಯಾನ

ಇತ್ತೀಚೆಗೆ ನಾನು ಕನ್ನಡದ ಟಿ.ವಿ ಚಾನೆಲ್‌ವೊಂದರ ರಿಯಾಲಿಟಿ ಶೋ ನೋಡಿದೆ. ಅದರಲ್ಲಿ ಪಾಲ್ಗೊಂಡಿದ್ದ ಹೆಣ್ಣುಮಕ್ಕಳಿಗೆ ನೀಡಿದ್ದ ಟಾಸ್ಕೊಂದು ಗಮನಸೆಳೆಯಿತು. ಆ ಹೆಣ್ಣುಮಕ್ಕಳು ರಸ್ತೆಯಲ್ಲಿ ಹೋಗುವಾಗ ಕೆಲವು ದುಷ್ಟರು ಹಿಂಬಾಲಿಸಿ ಅವರೊಂದಿಗೆ ಕೆಟ್ಟದಾಗಿ ವರ್ತಿಸುತ್ತಾರೆ. ಆಗ ಅವರು ಸ್ವತಃ ಹೋರಾಡಿ ಆ ವ್ಯಕ್ತಿಗಳಿಂದ ಪಾರಾಗಬೇಕಿರುತ್ತದೆ. ಇಂದಿನ ಹೆಣ್ಣುಮಕ್ಕಳಿಗೆ ಇದು ಒಂದು ಮಾದರಿ ಟಾಸ್ಕ್‌ನಂತೆ ತೋರಿತು.

ಎಲ್ಲಾ ಶಾಲಾ–ಕಾಲೇಜುಗಳಲ್ಲಿ ವಾರದಲ್ಲಿ ಒಂದು ದಿನ ಸರ್ಕಾರದಿಂದ ಅಥವಾ ಯಾವುದೇ ಟ್ರಸ್ಟ್ ವತಿಯಿಂದ ವಿದ್ಯಾರ್ಥಿನಿಯರಿಗೆ ಕಡ್ಡಾಯವಾಗಿ ಕರಾಟೆ ತರಬೇತಿ ನೀಡಬೇಕು. ಅಹಿತಕರ ಸಂದರ್ಭ ಎದುರಾದರೆ, ಪೊಲೀಸರು ಅಥವಾ ಇತರ ವ್ಯಕ್ತಿಗಳ ನೆರವಿಲ್ಲದೆ ಅವರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ. ಇದಕ್ಕಾಗಿ, ಶಾಲಾ–ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರ ರೀತಿಯಲ್ಲಿ ಕರಾಟೆ ತರಬೇತಿ ಶಿಕ್ಷಕರನ್ನೂ ನೇಮಕ ಮಾಡುವುದು ಸೂಕ್ತ.

ತರುಣ ಪೂಜಾರ

ಮಹಿಳೆ, ಮಕ್ಕಳು, ಕುಟುಂಬ, ಸಂಬಂಧ, ಬಾಂಧವ್ಯ, ಭಾವನಾತ್ಮಕ ಬೆಸುಗೆಯಂತಹ ಸಂಗತಿಗಳ ಬಗ್ಗೆ ನೀವು ಲೇಖನ, ಲಹರಿ, ಪುಟ್ಟ ಪುಟ್ಟ ಬರಹಗಳನ್ನು 'ಭೂಮಿಕಾ'ಗೆ ಬರೆಯಬಹುದು. ಆರೋಗ್ಯಕರ ಜೀವನಶೈಲಿಗೆ ಪೂರಕವಾಗುವ ಟಿಪ್ಸ್‌ಗಳನ್ನು ಹಂಚಿಕೊಳ್ಳಬಹುದು.
ನಮ್ಮ ಇ–ಮೇಲ್ ಐ.ಡಿ– bhoomika@prajavani.co.in

ಯತೀಂದ್ರ ದಾಳ: ಯಾರಿಗೆಲ್ಲ 'ಗಾಳ'

● ವೈ.ಗ.ಜಗದೀಶ್

ಸುದ್ದಿ ವಿಶ್ಲೇಷಣೆ

ನವೆಂಬರ್‌ನತ್ತ ನಾಡು ಹೆಜ್ಜೆ ಇಡುವ ಹೊತ್ತಿಗೆ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ 'ಬಿರುಗಾಳಿ'ಯ ಸೂಚನೆಗಳು ಗೋಚರಿಸ ತೊಡಗಿವೆ. ಇಲ್ಲಿಯವರೆಗೆ 'ನಾಯಕತ್ವ ಬದಲಾವಣೆ' ಪದದ ಜಾಗದಲ್ಲಿ ಮಾರ್ದನಿಸುತ್ತಿದ್ದ ನಾಯಕರು, ಸಿದ್ದರಾಮಯ್ಯನವರ 'ಉತ್ತರಾಧಿಕಾರಿ' ಯಾರೆಂಬ ಚರ್ಚೆಯಲ್ಲಿ ತಲ್ಲೀನರಾಗಿದ್ದಾರೆ.

ಸಿದ್ದರಾಮಯ್ಯನವರ ಮಗ ಡಾ.ಯತೀಂದ್ರ ಅವರು ತಮ್ಮ ತಂದೆಯ ಪರವಾಗಿ ಕಾಂಗ್ರೆಸ್‌ನ ಬಣ ರಾಜಕೀಯಕ್ಕೆ ತಮಗೆ ತಿಳಿಯದೆ 'ರಾಜವೈದ್ಯ ವಿದ್ಯೆ' ಮೂಲಕ ಚಿಕಿತ್ಸೆ ನೀಡಲು ಹೊರಟಿದ್ದು, ಚರ್ಚೆಯು ದಿಕ್ಕು ಬದಲಾಗಲು ಕಾರಣ. ಬೆಳಗಾವಿಯಲ್ಲಿ ಪೂಜೆಯ ದಿನ ಬೆಳಗಾವಿಯಲ್ಲಿ ಮಾತನಾಡಿದ ಯತೀಂದ್ರ, 'ನಮ್ಮ ತಂದೆ ರಾಜಕಾರಣದ ಸಂಧ್ಯಾಕಾಲದಲ್ಲಿದ್ದಾರೆ. ಸೈದ್ಧಾಂತಿಕ ರಾಜಕಾರಣದಲ್ಲಿ ನಂಬಿಕೆ ಇಟ್ಟಿರುವ ಸತೀಶ ಜಾರಕಿಹೊಳಿ ಅವರು ಸಿದ್ದರಾಮಯ್ಯ ನಂತರ ಅಹಿಂದ ನಾಯಕತ್ವ ವಹಿಸಿಕೊಳ್ಳಲು ಸಮರ್ಥರು' ಎಂದು ಹೇಳಿದ್ದರು.

'ಮುಂದಿನ ದಸರೆಗಳನ್ನು ನಾನೇ ಉದ್ಘಾಟಿಸುವೆ ಎಂಬ ಭಾವನೆ ಇದೆ. ನಾಯಕತ್ವ ಬದಲಾವಣೆಯ ಪ್ರಶ್ನೆಯೇ ಇಲ್ಲ, ನವೆಂಬರ್ ಕ್ರಾಂತಿ ಏನಿದ್ದರೂ ಭ್ರಾಂತಿ' ಎಂದು ಸಿದ್ದರಾಮಯ್ಯನವರು ಪ್ರತಿಪಾದಿಸುತ್ತಲೇ ಇದ್ದಾರೆ. ಪರಿಸ್ಥಿತಿ ಹೀಗಿರುವಾಗ, ಯತೀಂದ್ರ ಅವರು 'ಉತ್ತರಾಧಿಕಾರಿ' ಪ್ರಶ್ನೆಯನ್ನು ಮುಂಚೂಣಿಗೆ ತಂದಿದ್ದೇಕೆ?

ತಮ್ಮ ತಂದೆಯ ಜತೆ ಚರ್ಚಿಸಿ ಯತೀಂದ್ರ ಇಂತಹ ಮಾತು ಆಡಿದರೇ? ವೇದಿಕೆಯಲ್ಲಿದ್ದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಮೆಚ್ಚಿಸಲು ಆಕಸ್ಮಿಕವಾಗಿ ಇಂತಹ ಅಣಿಮುತ್ತು ಉದುರಿಸಿದರೇ? ಅಥವಾ ಸಿದ್ದರಾಮಯ್ಯನವರ ಸೂಚನೆ ಮೇರೆಗೆ ಹೀಗೆ ಘೋಷಿಸಿದರೇ? ಇಂತಹ ಪ್ರಶ್ನೆಗಳಿಗೆ ಸದ್ಯಕ್ಕಂತೂ ಉತ್ತರವಿಲ್ಲ. ಆದರೆ, ಯತೀಂದ್ರ ಮಾತು ಕಾಂಗ್ರೆಸ್ ಎಂಬ ಸಮುದ್ರದಲ್ಲಿ ಅಲೆಗಳನ್ನೇ ಎಬ್ಬಿಸಿದೆ. ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಂತೂ ಎದ್ದು ಕುಳಿತಿದ್ದಾರೆ.

'ಎರಡೂವರೆ ವರ್ಷದ ಬಳಿಕ ಅಧಿಕಾರ ಬಿಟ್ಟುಕೊಡಲು ತಮ್ಮ ತಂದೆಗೆ ಹೈಕಮಾಂಡ್ ಹೇಳಿಲ್ಲ' ಎಂದು ಯತೀಂದ್ರ ಹೇಳಿದ್ದರು. ಬದಲಾವಣೆ ಇಲ್ಲ ಎಂದ ಮೇಲೆ, ಉತ್ತರಾಧಿಕಾರಿಯಾಗಿ ಸತೀಶ ಜಾರಕಿಹೊಳಿ ಹೆಸರನ್ನು ತೇಲಿ ಬಿಟ್ಟಿದ್ದೇಕೆ? 'ಎರಡೂವರೆ ವರ್ಷದ ಬಳಿಕ ನಾಯಕತ್ವ ಬದಲಾವಣೆಯಾಗಲಿದೆ' ಎಂದು ಮುಖ್ಯಮಂತ್ರಿ ಸ್ಥಾನಕ್ಕಾಗಿ ಭಲದಿಂದ ಕಾಯುತ್ತಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಪ್ತರು ಆಗಾಗ ಹೇಳುತ್ತಲೇ ಬಂದಿದ್ದಾರೆ. 'ಅಂತಹ ಒಪ್ಪಂದ ಏನೂ ಆಗಿಲ್ಲ' ಎಂದು ಸಿದ್ದರಾಮಯ್ಯನವರೇ ಹೇಳಿದ್ದಾರೆ. ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ಇದೇ ನವೆಂಬರ್‌ಗೆ ಎರಡೂವರೆ ವರ್ಷವಾಗಲಿದೆ. ಈ ಹೊತ್ತಿಗೆ 'ಕ್ರಾಂತಿ' ಸಂಭವಿಸಲಿದೆ ಎಂಬ ಚರ್ಚೆ ನಡೆಯುತ್ತಲೇ ಇದೆ.

ಸಂಭಾವ್ಯ ಅಥವಾ ಊಹಾತ್ಮಕ 'ಕ್ರಾಂತಿ'ಯನ್ನು ತಡೆಯಲು ಸಿದ್ದರಾಮಯ್ಯನವರ ಆಪ್ತ ಬಣ ಪದೇ ಪದೇ ದಾಳಗಳನ್ನು ಉರುಳಿಸುತ್ತಲೇ ಇದೆ. 'ನವೆಂಬರ್‌ನಲ್ಲಿ ಸಂಪುಟ ಪುನರ್‌ರಚನೆಯಾಗಲಿದ್ದು, 10–12 ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡಲಾಗುತ್ತದೆ' ಎಂಬ ಸುದ್ದಿಯನ್ನು ಹಬ್ಬಿಸಲಾಗಿತ್ತು. ಅದರ ಮುಂದುವರಿದ ಭಾಗವಾಗಿ 'ಉತ್ತರಾಧಿಕಾರಿ' ದಾಳ ಉರುಳಿಸಲಾಗಿದೆ.

ಬಿಹಾರ ವಿಧಾನಸಭೆ ಚುನಾವಣೆ ಬಳಿಕ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಪ್ರಶ್ನೆ ಮುನ್ನೆಲೆಗೆ ಬಂದರೆ ಅಥವಾ ಇದೇ ವಿಧಾನಸಭೆ ಅವಧಿಯಲ್ಲೇ ಮುಖ್ಯಮಂತ್ರಿ ಆಗಬೇಕೆಂಬ ಹಟಕ್ಕೆ ಡಿಕೆಶಿ ಬಿದ್ದರೆ, ತಮ್ಮದೇ ಆದ ರೀತಿಯಲ್ಲೇ ಕಾರ್ಯಾಚರಣೆಗೆ ಇಳಿದರೆ ಅದಕ್ಕೆ ಪ್ರತಿ ಕಾರ್ಯತಂತ್ರದ ಭಾಗವಾಗಿ 'ಉತ್ತರಾಧಿಕಾರಿ' ವಿಷಯವನ್ನು ಚರ್ಚೆಗೆ ಬಿಡಲಾಗಿದೆ ಎಂಬ ಮಾತುಗಳು ಕಾಂಗ್ರೆಸ್ ಪಡಸಾಲೆಯಲ್ಲಿ ರಿಂಗಣಿಸುತ್ತಿವೆ.

ಈ ಅವಧಿಯನ್ನು ಪೂರ್ಣಗೊಳಿಸಲು ಅಣಿಯಾಗಿರುವ ಸಿದ್ದರಾಮಯ್ಯನವರು, ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ತಮ್ಮದೇ ಆದ ಕಾರ್ಯಶೈಲಿ, ರಾಜಕೀಯ ನಡೆ ಅನುಸರಿಸುತ್ತಿದ್ದಾರೆ. ಅದಕ್ಕಾಗಿಯೇ, ಸಚಿವ ಸಂಪುಟ ಪುನರ್ ರಚನೆಯ ಪ್ರಸ್ತಾವವನ್ನು ಮುಂಚೂಣಿಗೆ ತಂದರು. ಸಚಿವರಾಗಿರುವವರು ತಮ್ಮ ಸ್ಥಾನ ಉಳಿಸಿಕೊಳ್ಳಲು ಹಾಗೂ ಆಕಾಂಕ್ಷಿ ಶಾಸಕರು ಸಚಿವ ಸ್ಥಾನಕ್ಕಾಗಿ ತಮ್ಮ ಸುತ್ತಲೇ ಗಿರಕಿ ಹೊಡೆಯುತ್ತಿರಬೇಕು ಎಂಬುದು ಇದರ ಹಿಂದಿನ ಉದ್ದೇಶವಾಗಿತ್ತು. ಸಚಿವ ಸ್ಥಾನ ಸಿಗದೇ ಇದ್ದರೂ ದೂರವಾಗಬಹುದಾದ ಶಾಸಕರು ಮತ್ತೊಂದು 'ಶಕ್ತಿ ಕೇಂದ್ರ'ದ ಕಡೆ ಆಕರ್ಷಿತರಾಗದಂತೆ ತಡೆಯುವುದೂ ಈ ಚಾಣಾಕ್ಷ ನಡೆಯ ಭಾಗ.

ನವೆಂಬರ್‌ನಲ್ಲಿ ಪದತ್ಯಾಗ ಮಾಡಲೇಬೇಕಾದ ಸಂಭಾವ್ಯ ಸನ್ನಿವೇಶ ಸೃಷ್ಟಿಯಾದರೆ, 2028ರವರೆಗೂ ಕುರ್ಚಿ ಭದ್ರಪಡಿಸಿಕೊಳ್ಳಲು 'ಉತ್ತರಾಧಿಕಾರಿ' ತಂತ್ರವನ್ನು ರೂಪಿಸಲಾಗಿದೆಯೇ ಎಂಬ ಚರ್ಚೆಯೂ ಇದೆ. ನಾಯಕತ್ವ ಬದಲಾವಣೆಯ ಸಂದರ್ಭ ಎದುರಾದರೆ, ಶಿವಕುಮಾರ್ ಸಹಜ ಉತ್ತರಾಧಿಕಾರಿಯಾಗುತ್ತಾರೆ. ಅವರಿಗೆ ಎದುರಾಗಿ ಮೂರ್ನಾಲ್ಕು ಪ್ರಬಲ ಸ್ಪರ್ಧಾಕಾಂಕ್ಷಿಗಳನ್ನು ಸೃಷ್ಟಿಸಿದರೆ, ಪೈಪೋಟಿ ಶುರುವಾಗುತ್ತದೆ. ಸರ್ಕಾರವನ್ನು ಮುನ್ನಡೆಸುತ್ತಿರುವ ಸಿದ್ದರಾಮಯ್ಯ, ಕಾಂಗ್ರೆಸ್ ಹೆಗ್ಗುರುತುಗಳ 'ಗ್ಯಾರಂಟಿ'ಗಳಿಗೆ ಕುತ್ತು ಬರದಂತೆ ಕಾಪಾಡುತ್ತಿದ್ದಾರೆ. ಹೀಗಿರುವಾಗ, ನಾಯಕತ್ವದ ಪೈಪೋಟಿಯಿಂದ ಸರ್ಕಾರವನ್ನು ಕೆಡವಿಕೊಳ್ಳುವುದಕ್ಕಿಂತ ಇರುವ ನಾಯಕನನ್ನೇ ಮುಂದುವರಿಸುವ ತೀರ್ಮಾನಕ್ಕೆ ಹೈಕಮಾಂಡ್ ಬರಲಿ ಎಂಬ ಲೆಕ್ಕಾಚಾರ 'ಉತ್ತರಾಧಿಕಾರಿ' ಪ್ರಸ್ತಾವದ ಹಿಂದೆ ಇದೆ.

ಸತೀಶ ಜಾರಕಿಹೊಳಿ ಹೆಸರನ್ನು ಯತೀಂದ್ರ ಪ್ರಸ್ತಾಪಿಸುತ್ತಿದ್ದಂತೆ, 'ನಾವ್ಯಾರೂ ಸನ್ಯಾಸಿಗಳಲ್ಲ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ. ತಾವೂ ಒಬ್ಬ ಆಕಾಂಕ್ಷಿ ಎಂಬುದನ್ನು ಬಿಡೋಣ ಎಂದು ಗೃಹ ಸಚಿವ ಜಿ. ಪರಮೇಶ್ವರ ಅಣಿಯಾಗಿದ್ದಾರೆ. ಹೀಗೆ, ಹಲವರು ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟು ಹೈಕಮಾಂಡ್ ಮೇಲೆ ಒತ್ತಡ ಹಾಕಿದರೆ, ನಾಯಕತ್ವ ಬದಲಾವಣೆಯ ಗೋಜಿಗೆ ಹೋಗುವುದು ಬೇಡ ಎಂಬ ಮನಸ್ಥಿತಿಗೆ ಪಕ್ಷದ ರಾಷ್ಟ್ರೀಯ ನೇತಾರರು ಬರಬಹುದು ಎಂಬ ತರ್ಕವೇ ಹೊಸ ಬೆಳವಣಿಗೆಯ ಹಿಂದಿದೆ ಎಂಬುದು ರಹಸ್ಯವೇನಲ್ಲ.

ಡಿ.ಕೆ.ಶಿವಕುಮಾರ್ ಮೌನ 'ಕ್ರಾಂತಿ'

ಸಿದ್ದರಾಮಯ್ಯನವರ ಬಣ ಎಷ್ಟೇ ಪ್ರಚೋದಿಸಿದರೂ ಶಿವಕುಮಾರ್ ಮಾತ್ರ ಪ್ರತಿಕ್ರಿಯೆಯನ್ನೇ ನೀಡದೇ ಮೌನಕ್ಕೆ ಶರಣಾಗಿದ್ದಾರೆ. 'ನಾಯಕತ್ವ ಬದಲಾವಣೆ ಇಲ್ಲ' ಎಂದು ಮೇಲಿಂದ ಮೇಲೆ ಅವರು ಹೇಳುತ್ತಿದ್ದಾರಾದರೂ ಹೈಕಮಾಂಡ್ ವರ ಕೊಡಬಹುದೆಂಬ ನಿರೀಕ್ಷೆ ಅವರದ್ದು. ಸಿದ್ದರಾಮಯ್ಯನವರ ಬಣದ ಹೇಳಿಕೆಗಳಿಗೆ ನಿಷ್ಠುರವಾಗಿ ತಿರುಗೇಟು ಕೊಟ್ಟರೆ ಅದನ್ನೇ ಅಸ್ತ್ರವಾಗಿ ಬಳಸಿಕೊಂಡು ತಮ್ಮನ್ನು 'ಅಹಿಂದ' ವಿರೋಧಿ ಎಂದು ಬಿಂಬಿಸಬಹುದು ಎಂಬ ಭಯವೂ ಅವರಲ್ಲಿದ್ದಂತಿದೆ.

ಹೀಗಾಗಿ ಮೌನ 'ಕ್ರಾಂತಿ'ಯ ಏಣಿಕೆಯಲ್ಲಿರುವ ಶಿವಕುಮಾರ್, ಎಲ್ಲದಕ್ಕೂ ನಿರ್ಲಿಪ್ತರಾಗಿದ್ದಾರೆ. 'ಸಮಯ ಬಂದಾಗ ಪ್ರತಿಕ್ರಿಯಿಸುವೆ, ಎಲ್ಲಿ ಮಾತನಾಡಬೇಕೋ ಅಲ್ಲಿ ಮಾತನಾಡುವೆ, ನನಗೂ ಸಮಯ ಪ್ರಜ್ಞೆ ಇದೆ' ಎಂದು ಪ್ರತಿಪಾದಿಸುತ್ತಾ ಬಂದಿದ್ದಾರೆ. ನವೆಂಬರ್‌ನಲ್ಲಿ 'ವರ' ಸಿಗಲೆಂದು 'ದೇಗುಲಗಳ ಪ್ರದಕ್ಷಿಣೆ' ಮಾಡುವುದನ್ನು ಮಾತ್ರ ಅವರು ಬಿಟ್ಟಿಲ್ಲ.

ಅರಣ್ಯ ಸಂರಕ್ಷಣೆ: 'ಲೋಕಾ' ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಪ್ರದೇಶಗಳ ಸಂರಕ್ಷಣೆ, ಅಭಿವೃದ್ಧಿ ಕುರಿತಾಗಿ ರಾಜ್ಯದ 16 ಜಿಲ್ಲೆಗಳ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ವಲಯ ಅರಣ್ಯಾಧಿಕಾರಿಗಳ ವಿರುದ್ಧ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

ಅರಣ್ಯ ಒತ್ತುವರಿ ತೆರವು, ಹಸಿರು ಹೊದಿಕೆ ಸಂರಕ್ಷಣೆ ಮತ್ತು ಅಭಿವೃದ್ಧಿ, ಈ ಎಲ್ಲ ಕಾರ್ಯಗಳಿಗಾಗಿ ಮೂರು ವರ್ಷಗಳಲ್ಲಿ ಮಾಡಿದ ವೆಚ್ಚ ಮತ್ತಿತರ ವಿವರಗಳನ್ನು ಸಲ್ಲಿಸಿ ಎಂದು ಸೂಚಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ, ಬೀದರ್, ಬಳ್ಳಾರಿ, ಬಾಗಲಕೋಟೆ, ಬೆಳಗಾವಿ, ದಕ್ಷಿಣ ಕನ್ನಡ, ದಾವಣಗೆರೆ, ಹಾವೇರಿ, ಕಲಬುರಗಿ, ಕೊಪ್ಪಳ, ಕೋಲಾರ, ಮಂಡ್ಯ, ರಾಯಚೂರು, ತುಮಕೂರು, ವಿಜಯನಗರ ಮತ್ತು ಉಡುಪಿ ಜಿಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ವಲಯ ಅರಣ್ಯಾಧಿಕಾರಿಗಳ ವಿರುದ್ಧ 16 ಸ್ವಯಂಪ್ರೇರಿತ ದೂರು ದಾಖಲಿಸಿದ್ದಾರೆ.

ದೂರುಗಳ ಪ್ರತಿಯನ್ನು ಅರಣ್ಯ ಸಚಿವ, ಆಯಾ ಜಿಲ್ಲಾ ಉಸ್ತುವಾರಿ ಸಚಿವರು, ಆಯಾ ಜಿಲ್ಲಾಧಿಕಾರಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ಕಳುಹಿಸಿ ಎಂದು ಸೂಚಿಸಿದ್ದಾರೆ.

ಉಪಲೋಕಾಯುಕ್ತರು ಕೇಳಿದ ಮಾಹಿತಿ...

ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಈ ಮುಂದಿನ ಮಾಹಿತಿ ನೀಡಬೇಕು ಎಂದು ಉಪ ಲೋಕಾಯುಕ್ತರು ಸೂಚಿಸಿದ್ದಾರೆ.

- ಅರಣ್ಯಗಳು ನೈಸರ್ಗಿಕವಾಗಿಯೇ ಅಭಿವೃದ್ಧಿಯಾಗಿದ್ದರ ಮತ್ತು ನಾಶವಾದದರ ಹೆಕ್ಟೇರ್‌ವಾರು ದತ್ತಾಂಶ
- ಅರಣ್ಯ ಜಾಗೃತ ದಳ ಸ್ಥಳ ಪರಿಶೀಲನೆ ನಡೆಸಿದ ಮತ್ತು ಸಂಬಂಧಿಸಿದ ವರದಿಯ ವಿವರ
- ಅರಣ್ಯ ಪ್ರದೇಶದಲ್ಲಿ ಹೊಸದಾಗಿ ನೆಡಲಾದ ಗಿಡ, ಅವುಗಳ ನಿರ್ವಹಣೆ ಲೆಕ್ಕಪತ್ರ
- ಸಸಿ ನೆಡಲು ಸರ್ಕಾರದಿಂದ ಮಂಜೂರಾದ ಮತ್ತು ಬಳಕೆಯಾದ ಅನುದಾನದ ದತ್ತಾಂಶ
- ತಾಲ್ಲೂಕುವಾರು ಡೀಮ್ಡ್ ಮತ್ತು ಪ್ರಾದೇಶಿಕ ಅರಣ್ಯ ಸಂರಕ್ಷಣಾ ಕ್ರಮ
- ಅಕ್ರಮ ಕಲ್ಲು ಮತ್ತು ಮರಳು ಗಣಿಗಾರಿಕೆ ಪ್ರಕರಣಗಳು ಹಾಗೂ ಅವುಗಳ ತಡೆಗೆ ತೆಗೆದುಕೊಂಡ ಕ್ರಮ
- ಕಾಳ್ಗಿಚ್ಚು ತಡೆಗೆ ರಚಿಸಿದ ಬೆಂಕಿ ರೇಖೆ, ಜನರಲ್ಲಿ ಜಾಗೃತಿ ಮೂಡಿಸಲು ನಡೆಸಿದ ಕಾರ್ಯಕ್ರಮಗಳ ವಿವರ

'ಎಷ್ಟು ದಲಿತರನ್ನು ಬೆಳೆಸಿದ್ದೀರಿ?'

ಪ್ರಜಾವಾಣಿ ವಾರ್ತೆ

ನಾರಾಯಣಸ್ವಾಮಿ

ಬೆಂಗಳೂರು: 'ಪ್ರಿಯಾಂಕ್ ಖರ್ಗೆ ಅವರ ಬುಡಕ್ಕೆ ಬೆಂಕಿ ಬಿದ್ದಾಗ ಮಾತ್ರ ದಲಿತರು ನೆನಪಾಗುತ್ತಾರೆ. ಖರ್ಗೆ ಕುಟುಂಬ ಎಷ್ಟು ದಲಿತರನ್ನು ಬೆಳೆಸಿದೆ? ದಲಿತರ ಪರ ಎಷ್ಟು ಹೋರಾಟಗಳನ್ನು ಮಾಡಿದೆ' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಚಿತ್ತಾಪುರ ವಿಚಾರದಲ್ಲಿ ಆಯ್ದ ಕೆಲವು ದಲಿತ ಮುಖಂಡರನ್ನು ಎತ್ತಿಕಟ್ಟಿ ಆಟ ಆಡುತ್ತಿದ್ದಾರೆ ಎಂದು ದೂರಿದರು.

'ಚಿತ್ತಾಪುರದಲ್ಲಿ ನ.2 ರಂದು ಹಲವು ದಲಿತ ಸಂಘಟನೆಗಳು ಪಥಸಂಚಲನ ಮಾಡುತ್ತೇವೆ ಎಂದು ನ್ಯಾಯಾಲಯದಲ್ಲಿ ಅನುಮತಿಗಾಗಿ ಅರ್ಜಿ ಹಾಕಿವೆ. ಈ ಕಾರಣಕ್ಕೆ ಶಾಂತಿ ಸಭೆ ಮಾಡುವಂತೆ ನ್ಯಾಯಾಲಯವೂ ಆದೇಶ ನೀಡಿದೆ. ನಾವು (ಬಿಜೆಪಿ) ಯಾವ ರೀತಿ 'ಐ ಲವ್ ಆರ್‌ಎಸ್‌ಎಸ್' ಎನ್ನುತ್ತೇವೆಯೊ ಅದೇ ರೀತಿ ಡಿಎಸ್‌ಎಸ್ ಸಂಘಟನೆಗಳನ್ನೂ ಪ್ರೀತಿಯಿಂದ ಕಾಣುತ್ತೇವೆ' ಎಂದರು.

'ದಲಿತ ಸಂಘಟನೆಗಳು ಯಾವತ್ತೂ ಪಥ ಸಂಚಲನ ಮಾಡಿಲ್ಲ. ಆದರೆ ಈಗ ನಾವೂ ಪಥ ಸಂಚಲನ ಮಾಡುತ್ತೇವೆ ಎಂದಿದ್ದು ಏಕೆ? ಇವರು ಯಾವುದಾದರೂ ಧರ್ಮದ ಪರವೇ? ಅಥವಾ ದಲಿತ ಸಮುದಾಯಗಳ ಪರವೇ? ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಿಯಾಂಕ್ ಖರ್ಗೆ ಕುಟುಂಬದ ಪರವೇ? ಎಂಬುದನ್ನು ಸ್ಪಷ್ಟಪಡಿಸಬೇಕು' ಎಂದು ಛಲವಾದಿ ಒತ್ತಾಯಿಸಿದರು.

'ಪ್ರಿಯಾಂಕ್ ಅವರು ಎಷ್ಟು ಜನ ದಲಿತರನ್ನು ಗುತ್ತಿಗೆದಾರರನ್ನಾಗಿ ಮಾಡಿದ್ದಾರೆ? ಎಷ್ಟು ಜನರಿಗೆ ಕೊಳವೆ ಬಾವಿ ಹಾಕಿಸಿಕೊಟ್ಟಿದ್ದಾರೆ? ಎಷ್ಟು ಜನ ವಿದ್ಯಾರ್ಥಿಗಳ ಶಾಲಾ– ಕಾಲೇಜು ಶುಲ್ಕವನ್ನು ಕಟ್ಟಿದ್ದಾರೆ. ಎಷ್ಟು ದಲಿತ ಅಭ್ಯರ್ಥಿಗಳಿಗೆ ನೌಕರಿ ಕೊಡಿಸಿದ್ದಾರೆ ಎಂಬ ಲೆಕ್ಕ ನೀಡಲಿ' ಎಂದರು

ಚಿಟಿಕೆ ಸುದ್ದಿ

ಕೆಎಸ್‌ಡಿಎಲ್: ಸರ್ಕಾರಕ್ಕೆ ₹135 ಕೋಟಿ ಹಸ್ತಾಂತರ

ಬೆಂಗಳೂರು: ಸಾರ್ವಜನಿಕ ವಲಯದ ಉದ್ದಿಮೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) 2024-25ನೇ ಸಾಲಿನ ಲಾಭಾಂಶದ ಪಾಲು ₹135 ಕೋಟಿಯನ್ನು ಸರ್ಕಾರಕ್ಕೆ ನೀಡಿದೆ.

ಕೆಎಸ್‌ಡಿಎಲ್ ಅಧ್ಯಕ್ಷ ಅಪ್ಪಾಜಿ ನಾಡಗೌಡ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಚೆಕ್ ಹಸ್ತಾಂತರಿಸಿದ ಬಳಿಕ ಮಾತನಾಡಿದ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, 'ಕೆಎಸ್‌ಡಿಎಲ್ 2024–25ನೇ ಸಾಲಿನಲ್ಲಿ ₹1,700 ಕೋಟಿ ವಹಿವಾಟು ನಡೆಸಿ, ಕಾರ್ಖಾನೆಯ ಇತಿಹಾಸದಲ್ಲೇ ಅತಿ ಹೆಚ್ಚು ಅಂದರೆ, ₹451 ಕೋಟಿ ಲಾಭ ಗಳಿಸಿದೆ. ಲಾಭದಲ್ಲಿ ನಿಯಮದಂತೆ ಶೇ 30ರಷ್ಟು ಮೊತ್ತವನ್ನು ಸರ್ಕಾರಕ್ಕೆ ನೀಡಿದ್ದೇವೆ' ಎಂದರು. 2022-23ರಲ್ಲಿ ಬಿಜೆಪಿ ಆಡಳಿತವಿತ್ತು. ಆಗ ಸರ್ಕಾರಕ್ಕೆ ₹54 ಕೋಟಿ ಲಾಭಾಂಶ ಕೊಡಲಾಗಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ 2023-24ರಲ್ಲಿ ₹108 ಕೋಟಿ ಹಸ್ತಾಂತರಿಸಲಾಗಿತ್ತು. ಈಗ ₹27 ಕೋಟಿ ಹೆಚ್ಚುವರಿ ನೀಡಲಾಗಿದೆ ಎಂದರು.

ನ.6ಕ್ಕೆ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ಬೆಂಗಳೂರು: ನಿವೃತ್ತಿಯಾಗಿರುವ ಎಲ್ಲ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಗ್ರಾಚ್ಯುಯಿಟಿ ನೀಡುವಂತೆ ಆಗ್ರಹಿಸಿ ನವೆಂಬರ್ 6ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ತಿಳಿಸಿದೆ.

'ಸುಮಾರು 20 ಸಾವಿರ ವಯೋವೃದ್ಧರು ಯಾವುದೇ ಆರ್ಥಿಕ ಆಸರೆ ಇಲ್ಲದೇ ಜೀವನ ನಡೆಸುತ್ತಿದ್ದಾರೆ. ಅವರೆಲ್ಲರಿಗೂ ಗ್ರಾಚ್ಯುಯಿಟಿ ನೀಡಬೇಕು ಎಂದು ಸಮಿತಿಯು ಆಗ್ರಹಿಸಿದೆ.

ರಾಜ್ಯೋತ್ಸವ ಮಾದರಿಯಲ್ಲಿ 'ಪ್ರಶಸ್ತಿ'

ಸಹಕಾರ ಸಪ್ತಾಹ ಪೂರ್ವಭಾವಿ ಸಭೆಯಲ್ಲಿ ಸಿದ್ದರಾಮಯ್ಯ

ಬೆಂಗಳೂರು: ಕರ್ನಾಟಕ ಸಹಕಾರ ರತ್ನ ಪ್ರಶಸ್ತಿಯನ್ನು ರಾಜ್ಯೋತ್ಸವ ಪ್ರಶಸ್ತಿ ಮಾದರಿಯಲ್ಲಿ ನೀಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ 72ನೇ ಸಹಕಾರ ಸಪ್ತಾಹದ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾಗಿದೆ.

ಸಭೆಯ ನಂತರ ಈ ಕುರಿತು ಮಾಹಿತಿ ನೀಡಿದ ಸಿದ್ದರಾಮಯ್ಯ, 'ರಾಜ್ಯೋತ್ಸವ ಪ್ರಶಸ್ತಿಯನ್ನು ಮೊದಲು ನೂರಕ್ಕೂ ಹೆಚ್ಚು ಜನರಿಗೆ ನೀಡಲಾಗುತ್ತಿತ್ತು. ಈಗ ಎಷ್ಟನೆ ವರ್ಷದ ಆಚರಣೆ ಮಾಡಲಾಗುತ್ತಿದೆಯೋ, ಅಷ್ಟೇ ಪ್ರಶಸ್ತಿ ನೀಡಲಾಗುತ್ತಿದೆ. ಅದೇ ಮಾದರಿಯಲ್ಲಿ ಸಹಕಾರ ರತ್ನ ಪ್ರಶಸ್ತಿಯನ್ನು ನೀಡಬಹುದು. ಜಿಲ್ಲೆಗೆ ಒಂದರಂತೆ ಹಾಗೂ ಬೆಂಗಳೂರಿಗೆ ಐದು ಪ್ರಶಸ್ತಿಗಳನ್ನು ನೀಡಬಹುದು ಎನ್ನುವ ಕುರಿತು ಸಲಹೆ ನೀಡಲಾಗಿದೆ. ಪ್ರಶಸ್ತಿಗೆ ಹೆಸರು ಸೂಚಿಸುವ ಜವಾಬ್ದಾರಿಯನ್ನು ನನಗೇ ಕೊಟ್ಟಿದ್ದಾರೆ. ಸಹಕಾರ ಮಹಾ ಮಂಡಳದ ಅಧ್ಯಕ್ಷರು, ಸಮಿತಿ ಜತೆ ಚರ್ಚಿಸಿ, ಆಯ್ಕೆ ಮಾಡಲಾಗುವುದು' ಎಂದರು.

'ಹಾಲು ಒಕ್ಕೂಟಗಳನ್ನು ಬಲಪಡಿಸಿರುವಂತೆ, ಸಹಕಾರ ತತ್ವದಡಿ ಬರುವ ನೇಕಾರ, ಬಡಗಿ, ಮೀನುಗಾರರ ಸಹಕಾರ ಸಂಘ ಸೇರಿದಂತೆ ವೃತ್ತಿಮೂಲ ಸಂಘಗಳನ್ನು ಸಬಲೀಕರಣಗೊಳಿಸಬೇಕು. ಸಹಕಾರ ಬ್ಯಾಂಕ್‌ಗಳ ವ್ಯವಸ್ಥಾಪಕರ ಸೇವಾವಧಿಯನ್ನು ಮರುಪರಿಶೀಲಿಸಲು ಮಾಡಿರುವ ಮನವಿಯಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು' ಎಂದು ಮಾಹಿತಿ ನೀಡಿದರು.

'ಸಹಕಾರ ಕ್ಷೇತ್ರ ರಾಜ್ಯದ ವ್ಯಾಪ್ತಿಗೆ ಬರುವ ವಿಚಾರ. ಕೇಂದ್ರದ ವ್ಯಾಪ್ತಿಗೆ ಬರುವುದಿಲ್ಲ. ರಾಜ್ಯ ಸರ್ಕಾರಗಳು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಸಹಕಾರ ಕ್ಷೇತ್ರದ ಪ್ರಗತಿ ನಿಂತಿರುತ್ತದೆ. ಹಾಗಾಗಿ, ಸಹಕಾರ ಸಪ್ತಾಹದ ಘೋಷವಾಕ್ಯಗಳನ್ನು ಕೇಂದ್ರದ ಬದಲಿಗೆ ಆಯಾ ರಾಜ್ಯಗಳೇ ಘೋಷಿಸಬೇಕು' ಎಂದು ಅಭಿಪ್ರಾಯಪಟ್ಟರು.

ಸಹಕಾರ ಸಪ್ತಾಹ: ನ.14ಕ್ಕೆ ಉದ್ಘಾಟನೆ

ಸಹಕಾರ ಚಳವಳಿ ಇನ್ನಷ್ಟು ಪರಿಣಾಮಕಾರಿಯಾಗಿ ಮುನ್ನಡೆಸಲು ನ.14ರಂದು ಜವಾಹರಲಾಲ್ ನೆಹರೂ ಅವರ ಜಯಂತಿ ದಿನವೇ 72ನೇ ಸಹಕಾರ ಸಪ್ತಾಹ ಉದ್ಘಾಟಿಸಲಾಗುವುದು. ಅರಮನೆ ಮೈದಾನದಲ್ಲಿ ಸಪ್ತಾಹದ ಉದ್ಘಾಟನೆ ನಡೆಯಲಿದೆ. ಅಂದೇ ಸಹಕಾರ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಮಂಗಳೂರು, ರಾಯಚೂರು, ಹಾವೇರಿ, ಹೊಸಪೇಟೆ, ಕೊಪ್ಪಳದಲ್ಲೂ ಸಪ್ತಾಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನ. 20 ರಂದು ಚಾಮರಾಜನಗರದಲ್ಲಿ ಸಮಾರೋಪ ಇರುತ್ತದೆ' ಎಂದು ಮಾಹಿತಿ ನೀಡಿದರು.

'ನಮ್ಮವರಿಗೆ ಸಚಿವ ಸ್ಥಾನ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಸಮುದಾಯದ 16 ಶಾಸಕರಿದ್ದೇವೆ. ಸಚಿವ ಸ್ಥಾನದಿಂದ ಇಬ್ಬರನ್ನು ಇಳಿಸಲಾಗಿದೆ. ಆ ಸ್ಥಾನಗಳನ್ನು ತುಂಬಲೇಬೇಕು' ಎಂದು ಕಾಂಗ್ರೆಸ್ ಶಾಸಕ ಕೆ.ಎನ್.ರಾಜಣ್ಣ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ನಾನು ದೆಹಲಿಗೆ ಹೋಗುತ್ತೇನೆ. ಸಚಿವ ಸ್ಥಾನ ಕೇಳಲು ಅಲ್ಲ. ಬದಲಿಗೆ, ನಾನು ಯಾವುದೇ ತಪ್ಪು ಮಾಡಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಲು. ಬಿಹಾರ ಚುನಾವಣೆಯ ಫಲಿತಾಂಶದ ನಂತರ ಹೈಕಮಾಂಡ್ ನನಗೆ ಸಮಯ ನೀಡಬೇಕು' ಎಂದರು. ಸಚಿವ ಸಂಪುಟಕ್ಕೆ ಮರಳುವ ಸಮಯ ಬಂದಿದೆಯೇ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, 'ಸಚಿವ ಸಂಪುಟಕ್ಕೆ ಮರಳುವ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಆದರೆ ನಮ್ಮ ಸಮುದಾಯದವರಿಗೆ ಸಂಪುಟದಲ್ಲಿ ಸ್ಥಾನ ನೀಡಲೇಬೇಕು' ಎಂದರು.

ಆರ್‌ಎಸ್‌ಎಸ್ ವಿರೋಧಿಸಿ ದಲಿತ ಸೇನೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಸಚಿವ ಪ್ರಿಯಾಂಕ್ ಖರ್ಗೆ ತೇಜೋವಧೆ, ಸಾರ್ವಜನಿಕವಾಗಿ ನಿಂದಿಸುತ್ತಿರುವ ಆರ್‌ಎಸ್‌ಎಸ್ ಹಾಗೂ ಅದರ ಅಂಗ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು' ಎಂದು ಆಗ್ರಹಿಸಿ ದಲಿತ ಸೇನೆ ಜಿಲ್ಲಾ ಘಟಕದಿಂದ ಶುಕ್ರವಾರ ಇಲ್ಲಿ ಪ್ರತಿಭಟಿಸಲಾಯಿತು.

ನಗರದ ಜಗತ್ ವೃತ್ತದಲ್ಲಿ ಜಮಾಯಿಸಿದ ದಲಿತ ಸೇನೆಯ ಮುಖಂಡರು ಹಾಗೂ ನೂರಾರು ಕಾರ್ಯಕರ್ತರು, ಜಿಲ್ಲಾಧಿಕಾರಿ ಕಚೇರಿ ತನಕ ಪ್ರತಿಭಟನಾ ಮೆರವಣಿಗೆ ನಡೆಸಿದರು. ಕೈಯಲ್ಲಿ ನೀಲಿ ಬಾವುಟ, ಸಂವಿಧಾನ ಪೀಠಿಕೆ, ಡಾ.ಅಂಬೇಡ್ಕರ್ ಚಿತ್ರ, ಸುಪ್ರೀಂಕೋರ್ಟ್ ಸಿಜೆ ಬಿ.ಆರ್. ಗವಾಯಿ, ಸಚಿವ ಪ್ರಿಯಾಂಕ್ ಖರ್ಗೆ ಚಿತ್ರ ಹಿಡಿದು ಸಾಗಿದರು.

ದಲಿತ ಸೇನೆ ಮುಖಂಡ ಹನುಮಂತ ಯಳಸಂಗಿ ಮಾತನಾಡಿ, 'ಆರ್‌ಎಸ್‌ಎಸ್ ಸಂವಿಧಾನ ಮತ್ತು ಡಾ.ಅಂಬೇಡ್ಕರ್‌ರನ್ನು ಒಪ್ಪಿಲ್ಲ. ಅದನ್ನು ನಿಷೇಧಿಸಬೇಕು' ಎಂದು ಆಗ್ರಹಿಸಿದರು.

ಮನವಿ ಸಲ್ಲಿಕೆ: ಮತ್ತೊಂದೆಡೆ, ಚಿತ್ತಾಪುರದಲ್ಲಿ ನ.2ರಂದು ಪ್ರತಿಭಟಿಸಲು ಅವಕಾಶ ನೀಡುವಂತೆ ಕೋರಿ ರಾಜ್ಯ ಕೋಲಿ ಕಬ್ಬಲಿಗ ಎಸ್ಟಿ ಹೋರಾಟ ಸಮಿತಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದೆ.

'ಕೋಲಿ, ಕಬ್ಬಲಿಗ, ಅಂಬಿಗ, ಬೆಸ್ತ ಸಮುದಾಯಗಳನ್ನು ಎಸ್‌ಟಿ ಪಟ್ಟಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡುವಂತೆ ಹಾಗೂ 2019ರ ಚುನಾವಣೆ ಸಂದರ್ಭದಲ್ಲಿ 'ನಾನು ಕೋಲಿ ಸಮುದಾಯವನ್ನು ನೆನಪು ಇಟ್ಟುಕೊಳ್ಳುವೆ' ಎಂದಿದ್ದ ಪ್ರಧಾನಿ ನರೇಂದ್ರ ಮೋದಿ ಬಳಿಕ ಮರೆತಿರುವುದನ್ನು ಖಂಡಿಸಿ ನ.2ರಂದು ಚಿತ್ತಾಪುರದಲ್ಲಿ ಪ್ರತಿಭಟನೆ ನಡೆಸಲು ಅನುಮತಿ ನೀಡಿ ಪೊಲೀಸ್ ಭದ್ರತೆ ಒದಗಿಸಬೇಕು' ಎಂದು ಮನವಿಯಲ್ಲಿ ಕೋರಿದೆ.

28ಕ್ಕೆ ಶಾಂತಿ ಸಭೆ: 'ಹೈ' ಸೂಚನೆ

ಒಂದನೇ ಪುಟದಿಂದ...

ಒಂದು ವೇಳೆ ಪಥಸಂಚಲನಕ್ಕೆ ಅನುಮತಿ ನೀಡಿದರೆ ಕಾನೂನು ಮತ್ತು ಸುವ್ಯವಸ್ಥೆ ನಿಭಾವಣೆಯ ಕಷ್ಟ ಎದುರಾಗಲಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಅಧಿಕಾರಿಗಳು ಸಂಘಟಕರೊಂದಿಗೆ ಶಾಂತಿ ಸಮಿತಿ ಸಭೆ ನಡೆಸಲು ನಿರ್ಧರಿಸಿದ್ದಾರೆ. ಎರಡು ವಾರಗಳಲ್ಲಿ ಈ ವಿಷಯವನ್ನು ಪರಿಹರಿಸಲಾಗುವುದು.

ಪಥಸಂಚಲನದ ಮಾರ್ಗದಲ್ಲಿ ನ.2ರಂದು ಸಂಚಾರ ದಟ್ಟಣೆಯಾಗುವ ಸಾಧ್ಯತೆ ಇದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಹೀಗಾಗಿ, ಯಾವುದೇ ಸಂಘಟನೆಗೂ ಪಥಸಂಚಲನಕ್ಕೆ ಅನುಮತಿ ನೀಡಬಾರದು, ಪರಿಸ್ಥಿತಿ ತಿಳಿಯಾದ ನಂತರ ಕೆಲವು ವಾರಗಳ ಬಳಿಕ ಪಥಸಂಚಲನ ನಡೆಸುವುದು ಸೂಕ್ತ ಎಂದು ವರದಿಯಲ್ಲಿ ತಿಳಿಸಿದ್ದಾರೆ. ಅಷ್ಟಕ್ಕೂ ನಾವು ಅರ್ಜಿದಾರರ ಮನವಿಯನ್ನು ತಿರಸ್ಕರಿಸಿಲ್ಲ. ಎಂಟು ವಿವಿಧ ಸಂಘಟನೆಗಳು ಪಥಸಂಚಲನಕ್ಕೆ ಅನುಮತಿ ಕೋರಿವೆ. ಅವುಗಳಲ್ಲಿ ಯಾವುದನ್ನೂ ಪರಿಗಣಿಸಿಲ್ಲ. ಎಲ್ಲರೂ ತಂತಮ್ಮ ಪಥಸಂಚಲನದ ಬಗ್ಗೆ ಒಂದೊಂದು ರೀತಿಯ ಹೇಳಿಕೆ ನೀಡಿದ್ದಾರೆ. ಹೀಗಾಗಿ, ಎರಡು ವಾರಗಳಲ್ಲಿ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುತ್ತೇವೆ.

ಅರ್ಜಿದಾರರ ಪರ ಅರುಣ್ ಶ್ಯಾಮ್ ಪ್ರತಿವಾದ: ನವೆಂಬರ್ 2 ರಂದು ಪಥಸಂಚಲನ ನಡೆಸಲು ಒಪ್ಪಿಕೊಂಡಿದ್ದೇವೆ. ಆದರೆ, ಸರ್ಕಾರ ವಿನಾಕಾರಣ ಸಮಸ್ಯೆಯನ್ನು ಸೃಷ್ಟಿಸುತ್ತಿದೆ. ಪಥಸಂಚಲನ ತಡೆಯಲು ಇತರ ಸಂಘಟನೆಗಳೂ ಅದೇ ದಿನ ಮೆರವಣಿಗೆ ನಡೆಸಲು ಉದ್ದೇಶಿಸಿವೆ.

ಕಳೆದ ವಿಚಾರಣೆಯಲ್ಲೇ ಮಾರ್ಗದ ವಿವರವನ್ನು ನೀಡುವ ಬಗ್ಗೆ ಒಪ್ಪಂದ ವಾಗಿತ್ತು. ನಾವು ಸರ್ಕಾರಕ್ಕೆ ಸಾಕಷ್ಟು ಸಮಯ ನೀಡಿದ್ದೇವೆ. ಈಗ ಹತ್ತು ಸಂಘಟನೆಗಳು ಮುಂದೆ ಬಂದು ಒಂದೇ ದಿನ ಮತ್ತು ಒಂದೇ ಸಮಯದಲ್ಲಿ ಪಥಸಂಚಲನ ನಡೆಸಲು ಬಯಸುತ್ತಿವೆ ಎಂದು ಹೇಳಲಾಗುತ್ತಿದೆ. ಸರ್ಕಾರ ಸೂಕ್ತ ರಕ್ಷಣೆ ನೀಡಲಿ ಮತ್ತು ಇತರ ಸಂಘಟನೆಗಳ ಮೆರವಣಿಗೆ ಅಥವಾ ಪಥಸಂಚಲನಕ್ಕೆ ಬೇರೆ ದಿನ ನಿಗದಿಪಡಿಸಲಿ.

ಪಥಸಂಚಲನ ನಡೆಸುವುದು ನಮ್ಮ ಮೂಲಭೂತ ಹಕ್ಕು. ಒಂದು ವೇಳೆ ರಾಜ್ಯ ಸರ್ಕಾರಕ್ಕೆ ಕಾನೂನು ಪಾಲನೆ ಸಾಧ್ಯವಾಗದೇ ಹೋದರೆ ಕೇಂದ್ರದ ಪಡೆ ನಿಯೋಜಿಸುವಂತೆ ನಾವು ಮನವಿ ಮಾಡಲು ಸಿದ್ಧರಿದ್ದೇವೆ.

> ಸರ್ಕಾರ ಅಂತಿಮ ವರದಿ ಸಲ್ಲಿಸುವ ಬದಲು ಪ್ರಾಥಮಿಕ ವರದಿ ಸಲ್ಲಿಸಿದೆ. ಹಲವು ಸಂಘಟನೆಗಳು ಏಕಕಾಲಕ್ಕೆ ಮೆರವಣಿಗೆ ನಡೆಸಿದರೆ ಕಾನೂನು ಸುವ್ಯವಸ್ಥೆಯ ಆತಂಕ ವ್ಯಕ್ತಪಡಿಸಿರುವ ಜಿಲ್ಲಾಡಳಿತ ತನ್ನ ಅಸಮರ್ಥತೆ ತೋರಿಸಿಕೊಂಡಂತಾಗಿದೆ
>
> **ಕಾಡ್ಲೂರು ಸತ್ಯನಾರಾಯಣಾಚಾರ್ಯ,** ಅರ್ಜಿದಾರರ ಪರ ವಕೀಲ

> ನ.2ರಂದು ಹಲವು ಸಂಘಟನೆಗಳು ಮೆರವಣಿಗೆಗೆ ಅವಕಾಶ ಕೋರಿದ್ದಾಗಿ ಸರ್ಕಾರ ಹೇಳಿದೆ. ಅದಕ್ಕೆ ಕೋರ್ಟ್ ಶಾಂತಿಸಭೆ ಮೂಲಕ ಪರಿಹಾರ ಕಂಡುಕೊಳ್ಳುವ ಮಾರ್ಗ ತೋರಿದೆ
>
> **ಅಶೋಕ ಪಾಟೀಲ,** ಅರ್ಜಿದಾರ, ಆರ್‌ಎಸ್‌ಎಸ್ ಮುಖಂಡ

NOTICE INVITING APPLICATIONS FOR ALLOTMENT OF VARIOUS REGIMENTAL SHOPS AT TRAINING BATTALION-III, MADRAS ENGINEER GROUP & CENTRE, BANGALORE-560033

1. Commanding Officer, Training Battalion-III, Madras Engineer Group & Centre, Bangalore-33 invites applications for allotment of five Regimental shops on rental basis at this Battalion. Shops would be allotted to the highest bidder based on undermentioned priority in descending order of applications :-
   1.1. War widows/widows of Defence personnel killed while on duty.
   1.2. Disabled Soldiers.
   1.3. Ex-Servicemen.
   1.4. Spouse/ Widow of Ex-Servicemen.
2. Details of shops and sequence of auction are as under :-

Ser No	Building No	Type of Shops	Area in Square Feet
1	T-21/4	Tailor Shop	250
2	T-21/5	Cafeteria	250
3	T-26/1	WET Canteen	600
4	T-29/2	General Store	250
5	T-29/5	Tailor Shop	250

3. The license fees, rebate and other terms & condition will be intimated during collection of application form.
4. Application forms will be available at 'Q' Branch at Training Battalion-III. The date wise timelines are as under :-
   4.1. Issue of Application form to be collected by applicants. : 27 October to 31 October 2025 (0900 Hours to 1300 Hours daily for above mentioned five days)
   4.2. Date of receipt of application : 01 November 2025 (0001 Hours) to 02 November 2025 (2359 Hours)
   4.3. Proposed date of auction : 08 November 2025 (1000 Hours)
   4.4. DD in favour of : REGT FUND ACCOUNT TB-III payable at SBI, TB-III MEG & Centre, Bangalore
   4.5 DD Amount: 500/- (refundable to those, who will not be allotted shop & will be adjusted towards security deposit of those who will be allotted shop).
5. Allotment of shop will be for the period of 11 months.

ಪಟ್ಟಣ ಪಂಚಾಯತ್ ಕಾರ್ಯಾಲಯ
ಬೈಂದೂರು–576214, ಉಡುಪಿ ಜಿಲ್ಲೆ

ಸಂ: ಬೈ.ಪ.ಪ/ಕಿ.ಅ/SBM 2.0/ಸಿಆರ್/104/2025–26 ದಿ: 18/10/2025

ಈ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಆದ್ಯಾದೇಶ 1999 ನಿಯಮಾವಳಿಗಳು 2000 ರಂತೆ ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಸ್ವಚ್ಛ ಭಾರತ್ ಮಿಷನ್ (ನಗರ) 2.0 ನಿಧಿಯಡಿಯಲ್ಲಿ ನಿರ್ವಹಿಸಬೇಕಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ CLASS III ಮತ್ತು ಮೇಲ್ಪಟ್ಟ ದರ್ಜೆಯ ಅರ್ಹ ಸಿವಿಲ್ ಗುತ್ತಿಗೆದಾರರಿಂದ KPPP ಪೋರ್ಟಲ್‌ನಲ್ಲಿ Standard Tender Document KW-4 ರಂತೆ ಮರು ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿ: 28/10/2025 ರಂದು ಅಪರಾಹ್ನ ಸಮಯ: 5.00 ಗಂಟೆ ಆಗಿರುತ್ತದೆ.

ಕಾಮಗಾರಿ ಹೆಸರು ಮತ್ತು ಟೆಂಡರ್ ಸಂಖ್ಯೆ: (1) Construction of office Building (II) Construction of Security Building (III) Construction of Toilet Building (IV) Development of Rain Water Harvesting (RWH) (V) Construction of Compound Wall & Gate (VI) Sinking of Borewell and Installation of Submersible Pump (VII) Construction of Weigh Bridge Platform (VIII) External electrification works (IX) Construction of Internal CC Road (X) Construction of Internal CC Drain at Proposed SWM Site in the limits of Byndoor TP (DMA/2025-26/OW/WORK_INDENT38758/CALL-3)

ಟೆಂಡರಿಗಿಟ್ಟ ಮೊತ್ತ: ರೂ. 1,52,00,000/–, ಇಎಮ್‌ಡಿ: ರೂ.2,00,000/–

ಕಾಮಗಾರಿ ಆಸಕ್ತ ಗುತ್ತಿಗೆದಾರರು https://kppp.karnataka.gov.in/ ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚುವರಿ ಮಾಹಿತಿಗಾಗಿ ಈ ಕಚೇರಿಯ ಕೆಲಸದ ವೇಳೆಯಲ್ಲಿ ಕಿರಿಯ ಅಭಿಯಂತರರ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

ಸಹಿ/–, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ಬೈಂದೂರು
ಸಹಿ/–, ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ್, ಬೈಂದೂರು

ವಾಸಾಇ/ಸನಿಉ/ಕೆಎಸ್‌ಎಂಪಿಎ/484/25–26 ದಿ: 24.10.2025

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರಿ ಉದ್ಯಮ)
ನಂ–39–821, ಸುಬೇದಾರ್ ಛತ್ರ ರಸ್ತೆ, ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು, ಶೇಷಾದ್ರಿಪುರಂ, ಬೆಂಗಳೂರು – 560020.

ಸಂಖ್ಯೆ:ಕ.ಅ.ಅ.ನಿ/ ಸಿ.ಬಿ.ಟಿ/2025–26 ದಿನಾಂಕ: 18.10.2025

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2025–26 ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಸಮುದಾಯದ ಯುವಕ/ ಯುವತಿಯರಿಗೆ ಸಮುದಾಯ ಆಧಾರಿತ ತರಬೇತಿ ಯೋಜನೆಯಡಿ ವಿವಿಧ ಕಾರ್ಯಕ್ರಮಗಳ ಬಗ್ಗೆ ತರಬೇತಿ ನೀಡಲು ತರಬೇತಿ ಸಂಸ್ಥೆಗಳನ್ನು ಆಯ್ಕೆ ಮಾಡಲು ಅರ್ಹ/ಆಸಕ್ತ ಉಳ್ಳ ಸಂಸ್ಥೆಗಳಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ ಟೆಂಡರ್ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಟೆಂಡರ್ ನಂ	ಕಾರ್ಯಾಕ್ರಮ / ಸೇವೆಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1.	KMDCL/2025-26/ SE0014	ಐಟಿ/ಐಟಿಇಎಸ್ ವಲಯದಲ್ಲಿ ಉದ್ಯಮ ಸಿದ್ಧ ಭವಿಷ್ಯದ ಕೌಶಲ್ಯ ತರಬೇತಿ	264.00	10.11.2025 ಸಂಜೆ: 5:30 ಗಂಟೆಗೆ
2.	KMDCL/2025-26/ SE0015	ರಿಮೋಟ್ ಪೈಲಟ್ ವಿಮಾನ (ಡ್ರೋನ್ ಆಪರೇಟರ್) ತರಬೇತಿ	135.00	10.11.2025 ಸಂಜೆ: 5:30 ಗಂಟೆಗೆ
3.	KMDCL/2025-26/ SE0016	VERTICAL TRANSPORTATION (ELEVATOR) TECHNICIAN Training	40.00	10.11.2025 ಸಂಜೆ: 5:30 ಗಂಟೆಗೆ
4.	KMDCL/2025-26/ SE0017	ಕೌಶಲ್ಯ ಅಭಿವೃದ್ಧಿ ತರಬೇತಿ A.Guest Service Associate (Food & Beverage) B. Solar PV Installer Electrical	61.60	10.11.2025 ಸಂಜೆ: 5:30 ಗಂಟೆಗೆ

ವಿವರಗಳಿಗೆ https://kppp.karnataka.gov.in/ ವೆಬ್ ಸೈಟ್ ವಿಳಾಸವನ್ನು ನೋಡಬಹುದಾಗಿದೆ, ವಿವರಗಳಿಗೆ ಸಂಪರ್ಕಿಸಲು ದೂರವಾಣಿ: 080–22860999 ಹೆಚ್ಚಿನ ಮಾಹಿತಿಗಾಗಿ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ), ಬೆಂಗಳೂರು ಇವರನ್ನು ಸಂಪರ್ಕಿಸುವುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

DIPR/CP/RO3405/AAPL/2025-26

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ವಿಜಯಪುರ ಮಹಾನಗರಪಾಲಿಕೆ, ವಿಜಯಪುರ ಕೇಂದ್ರ ಕಛೇರಿ
ಬಾಗಲಕೋಟೆ ರಸ್ತೆ, ಜಲನಗರ–586109
ದೂರವಾಣಿ : 08352–278536 ಸಹಾಯವಾಣಿ : 08352–222474 ಫ್ಯಾಕ್ಸ್ : 08352–278532
Website: www.vijayapuracity.mrc.gov.in E-mail: itstaff_ulb_bijapur@yahoo.co.in

ನಂ.ಮನಪಾವಿ:/ಕೇ.ಕಂ/ಪವಿ/2025–26/3450 ದಿನಾಂಕ: 21.10.2025

ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ವಿಲೇವಾರಿ ವಿಭಾಗಕ್ಕೆ ಸಂಬಂಧಿಸಿದಂತೆ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಆಸಕ್ತ, ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪ್ಲಾಟ್‌ಫಾರಂ ಮೂಲಕ ಟೆಂಡರ್ ದಸ್ತಾವೇಜಿನಲ್ಲಿ ನಿಗದಿಪಡಿಸಿದ ನಿಬಂಧನೆಗಳಿಗೊಳಪಟ್ಟು ಪ್ರಸ್ತಾವನೆಗಳನ್ನು ಆಹ್ವಾನಿಸುತ್ತದೆ. ಆಸಕ್ತರು ತಮ್ಮ ಪ್ರಸ್ತಾವನೆಗಳನ್ನು ನಿಗದಿತ ದಿನಾಂಕದೊಳಗೆ https://kppp.karnataka.gov.in ಪ್ಲಾಟ್‌ಫಾರಂ ಮೂಲಕ ಸಲ್ಲಿಸಲು ಕೋರಿದೆ.

ಅ. ನಂ	ಇಂಡೆಂಟ್ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸುವ ಅವಧಿ
1	DMA/2025-26/ SE6286	ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಗಾರ್ಡನಗಳ ನಿರ್ವಹಣೆಗಾಗಿ ಹೊರಗುತ್ತಿಗೆ ಆಧಾರದಡಿ ಗಾರ್ಡನರ್‌ಗಳನ್ನು ಪೂರೈಸುವುದು.	111.00	01 ವರ್ಷ
2	DMA/2025-26/SE6287	ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಾರ್ಯನಿರ್ವಹಿಸಲು ಹೊರಗುತ್ತಿಗೆ ಆಧಾರದಡಿ ನೌಕರರನ್ನು ಪೂರೈಸುವುದು.	146.00	01 ವರ್ಷ
3	DMA/2025-26/SE6288	ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಬೀದಿ ನಾಯಿಗಳ ಸಂತಾನ ಹರಣ ಚಿಕಿತ್ಸೆ ಕೈಗೊಳ್ಳುವುದು.	82.50	01 ವರ್ಷ
4	DMA/2025-26/SE6289	ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ವಿಲೇವಾರಿ ವಾಹನಗಳಿಗೆ ಚಾಲಕರು/ ಸಹಾಯಕರನ್ನು ಹೊರಗುತ್ತಿಗೆ ಆಧಾರದಡಿ ನೌಕರರನ್ನು ಪೂರೈಸುವುದು.	158.00	01 ವರ್ಷ

* ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11.11.2025 ರಂದು ಸಾಯಂಕಾಲ 4.30 ಗಂಟೆವರೆಗೆ.
* ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.11.2025 ರಂದು ಸಾಯಂಕಾಲ 5.00 ಗಂಟೆಗೆ.
* ಆರ್ಥಿಕ ಬಿಡ್ ತೆರೆಯುವ ದಿನಾಂಕ: 14.11.2025 ರಂದು ಬೆಳಿಗ್ಗೆ 11.30 ಗಂಟೆಗೆ.
* ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಪ್ಲಾಟ್‌ಫಾರಂನಲ್ಲಿ ವೀಕ್ಷಿಸಬಹುದಾಗಿರುತ್ತದೆ / ಕಛೇರಿ ಸಮಯದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರವರಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಘ.ವ.ನಿ)
ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/411/ಕೆಎಸ್‌ಎಂಸಿಎ/2025–26

ಚಿಟಿಕೆ ಸುದ್ದಿ

ಪೌರಕಾರ್ಮಿಕರಿಗೆ 'ತಾರಾ' ಆತಿಥ್ಯ

ಹಾಸನ: ಹಾಸನಾಂಬ ದರ್ಶನೋತ್ಸವದಲ್ಲಿ ದುಡಿದ ಪೌರಕಾರ್ಮಿಕರಿಗೆ ತಾರಾ ಹೋಟೆಲ್‌ನಲ್ಲಿ ಔತಣ ನೀಡಿ ಪಾಲಿಕೆ ಅಧಿಕಾರಿಗಳು ಗೌರವ ಸಲ್ಲಿಸಿದರು. ಇದೇ ಮೊದಲು ಹೀಗೆ ವಿಶೇಷ ಗೌರವ ಸಲ್ಲಿಸಿದ್ದು, ವಿವಿಧ ಭಕ್ಷ್ಯಗಳನ್ನು ಬಡಿಸಿ ಕೃತಜ್ಞತೆ ಸಲ್ಲಿಸಿದರು.

15 ದಿನದಿಂದ ನಿರಂತರವಾಗಿ ಹಾಸನಾಂಬ ದೇವಿ, ಸಿದ್ದೇಶ್ವರ ಸ್ವಾಮಿ ದೇವಾಲಯದ ಸುತ್ತ ಸೇರಿ ನಗರವನ್ನು ಸ್ವಚ್ಛವಾಗಿಡಲು 170 ಪೌರಕಾರ್ಮಿಕರು ಶ್ರಮಿಸಿದ್ದರು.

ಇವರಿಗಾಗಿ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ, ಎಂಜಿನಿಯರ್ ಕವಿತಾ ಅವರು ಔತಣ ಕೂಟ ಏರ್ಪಡಿಸಿದ್ದರು. ಪಾಲಿಕೆಯ ಈ ನಡೆಗೆ ಸಾರ್ವಜನಿಕರಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

ವಿದೇಶಿ ಕರೆನ್ಸಿ ಅಕ್ರಮ ಸಾಗಣೆ: ವ್ಯಕ್ತಿ ಬಂಧನ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಮಡಗಾಂವ್‌ನಿಂದ ಭಟ್ಕಳಕ್ಕೆ ದಾಖಲೆಗಳಿಲ್ಲದೆ ಅಮೆರಿಕದ ಕರೆನ್ಸಿ ನೋಟುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ, ಭಟ್ಕಳದ ನಿವಾಸಿ ರುಕ್ಸುದ್ದೀನ್ ಸುಲ್ತಾನ್ ಬಾಷಾ (62) ಎಂಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬಾಷಾ ಸ್ಕೂಟರ್‌ನಲ್ಲಿ ತಂದು ಸ್ಥಳೀಯರಾದ ಕಪ್ಪಾ ಮುಜೀಬ್ ಅವರಿಗೆ ನೀಡಲು ಪ್ರಯತ್ನಿಸುವಾಗ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. 100 ಡಾಲರ್ ಮುಖಬೆಲೆ 14 ನೋಟು, 50 ಡಾಲರ್ ಮುಖಬೆಲೆಯ 156 ನೋಟು ಸೇರಿ ಒಟ್ಟಾರೆ ₹ 8 ಲಕ್ಷಮೌಲ್ಯದ ಹಣ ಸಿಕ್ಕಿದೆ.

ವಿಷಾನಿಲ ಸೋರಿಕೆ: ಯುವತಿಯರ ಸಾವು

ಸಿಮ್ರಾನ್ ತಾಜ್, ಗುಲ್ವಮ್ ತಾಜ್

ಪಿರಿಯಾಪಟ್ಟಣ: ಸ್ನಾನದ ಕೋಣೆಯಲ್ಲಿದ್ದ ಗ್ಯಾಸ್ ಗೀಸರ್‌ನಿಂದ ಕಾರ್ಬನ್ ಮೊನಾಕ್ಸೈಡ್ ಸೋರಿಕೆಯಾಗಿ ಉಸಿರುಗಟ್ಟಿ ಗುಲ್ವಮ್ ತಾಜ್ (23) ಮತ್ತು ಸಿಮ್ರಾನ್ ತಾಜ್ (21) ಎಂಬ ಸಹೋದರಿಯರು ಗುರುವಾರ ರಾತ್ರಿ ಮೃತಪಟ್ಟಿದ್ದಾರೆ.

'ಪಟ್ಟಣದ ಕಾವಾಡಗೇರಿಯಲ್ಲಿರುವ ಮನೆಯಲ್ಲಿ ರಾತ್ರಿ 7ರ ಸಮಯದಲ್ಲಿ ಒಟ್ಟಿಗೆ ಸ್ನಾನದ ಕೋಣೆಗೆ ತೆರಳಿದ್ದಾಗ ದುರ್ಘಟನೆ ಸಂಭವಿಸಿದೆ. ಕೋಣೆಯಲ್ಲಿ ಕಿಟಕಿ ಇರಲಿಲ್ಲ' ಎಂದು ಅವರ ತಂದೆ ಅಲ್ತಾಫ್ ಪಾಷಾ ಪಟ್ಟಣ ಠಾಣೆಗೆ ದೂರಿನಲ್ಲಿ ತಿಳಿಸಿದ್ದಾರೆ.

'ಕುರ್ಚಿ ಭದ್ರಕ್ಕೆ ಸತೀಶ ಹೆಸರು ಪ್ರಸ್ತಾಪ'

ಧಾರವಾಡ/ವಿಜಯಪುರ: 'ಸಿದ್ದರಾಮಯ್ಯ ಅವರು ಕುರ್ಚಿ ಭದ್ರ ಮಾಡಿಕೊಳ್ಳಲು ಮುಂದಿನ ಸಿ.ಎಂ ಸ್ಥಾನಕ್ಕೆ ಸತೀಶ ಜಾರಕಿಹೊಳಿ ಅವರ ಹೆಸರು ತೇಲಿಬಿಟ್ಟು ಗೊಂದಲ ಸೃಷ್ಟಿಸಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

'ಕೆಲ ದಿನಗಳ ಬಳಿಕ ಜಿ.ಪರಮೇಶ್ವರ, ನಂತರ ಡಾ.ಎಚ್.ಸಿ.ಮಹದೇವಪ್ಪ ಅವರ ಹೆಸರು ತೇಲಿಬಿಡುತ್ತಾರೆ. ಆನಂತರ ಖರ್ಗೆ ಬರುತ್ತಾರೆ ಎಂದು ಸುದ್ದಿ ಹಬ್ಬಿಸುತ್ತಾರೆ. ಸಿದ್ದರಾಮಯ್ಯ ಜಾಣ ರಾಜಕಾರಣಿ' ಎಂದೂ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇಲ್ಲ ಎಂಬುದಕ್ಕೆ ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆ ಸಾಕ್ಷಿ. ಡಿ.ಕೆ. ಶಿವಕುಮಾರ್ ಸಿ.ಎಂ ಆಗಬಾರದೆಂದು ಸಿದ್ದರಾಮಯ್ಯ ಅವರೇ ಹೇಳಿಕೆ ಕೊಡಿಸಿದ್ದಾರೆ ಎಂದು

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ

ಪೋಕ್ಸೊ: ಮೂವರ ಬಂಧನ

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಮೂವರು ಯುವಕರ ವಿರುದ್ಧ ಹೊನ್ನಾವರ ಠಾಣೆ ಪೊಲೀಸರು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಶುಕ್ರವಾರ ಬಂಧಿಸಿದ್ದಾರೆ.

'ಮಾವಿನಕುರ್ವದ ಅಭಿ ಗೌಡ (22), ಕವಲಕ್ಕಿಯ ಹೇಮಂತ ನಾಯ್ಕ (21) ಮತ್ತು ಗೇರುಸೊಪ್ಪದ ದೇವೇಂದ್ರ ನಾಯ್ಕ (26) ಬಂಧಿತರು. ಬಾಲಕಿ ಗರ್ಭಿಣಿಯಾದ ಬಳಿಕ ಕೃತ್ಯ ಗೊತ್ತಾಗಿದೆ. ಪಾಲಕರು ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ದಂತ ವೈದ್ಯನ 'ಕಾಡು ಕೃಷಿ' ಪ್ರೇಮ

ಕಾಡಾಯಿತು 10.34 ಎಕರೆ ಜಮೀನು– ವಿವಿಧ ತಳಿಯ 15 ಸಾವಿರ ಗಿಡಗಳು

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಮುಖ್ಯಾಂಶಗಳು

- ಮಳೆ ನೀರು ಹರಿದುಹೋಗದಂತೆ ಕ್ರಮ
- ಸಾವಯವ ಗೊಬ್ಬರಕ್ಕೆ ₹1.50 ಲಕ್ಷ ವ್ಯಯ
- ಪ್ರಾಣಿ, ಪಕ್ಷಿಗಳನ್ನು ಆಕರ್ಷಿಸುತ್ತಿರುವ ಕಾಡು

ಗದಗ: ನಗರದ ದಂತ ವೈದ್ಯ ಪ್ರದೀಪ್ ಉಗಲಾಟದ ಅವರ ಹಸಿರು ಪ್ರೀತಿಯಿಂದಾಗಿ 10.34 ಎಕರೆ ಜಮೀನು ಇಂದು ಕಾಡಾಗಿದೆ. ತಾಲ್ಲೂಕಿನ ಹುಯಿಲಗೋಳ ಗ್ರಾಮದ ಬಳಿಯ ಅವರ ಜಮೀನಿನಲ್ಲಿ 150ಕ್ಕೂ ಅಧಿಕ ತಳಿಯ 15 ಸಾವಿರಕ್ಕೂ ಹೆಚ್ಚು ಮರಗಿಡಗಳಿವೆ. ಅಸಂಖ್ಯ ಪಕ್ಷಿಗಳಿಗೆ ನೆಲೆ ಆಗಿವೆ.

'ಅರಣ್ಯ ನಾಶದ ಬಗ್ಗೆ ಎಲ್ಲರೂ ಮಾತಿನಲ್ಲೇ ಆತಂಕ ವ್ಯಕ್ತಪಡಿಸುತ್ತಾರೆ. ಆದರೆ, ಅರಣ್ಯ ರಕ್ಷಣೆ ವಿಚಾರದಲ್ಲಿ ನಾನೇನು ಮಾಡಬಹುದು ಎಂಬ ಯೋಚನೆ ತಲೆ ಹೊಕ್ಕಾಗ ಕಾಡುಕೃಷಿಯ ಕಲ್ಪನೆ ಹೊಳೆಯಿತು' ಎಂದು ಡಾ. ಪ್ರದೀಪ್ ಉಗಲಾಟದ ತಿಳಿಸಿದರು.

ಡಾ.ಪ್ರದೀಪ್ ಅವರು ಕಾಡುಕೃಷಿಗೆ ಮುಂದಾದಾಗ ಅಲ್ಲಿ ನೀರಿನ ಕೊರತೆ ಇತ್ತು. ಮಳೆನೀರು ವ್ಯರ್ಥವಾಗಿ ಹರಿಯದಂತೆ ತಡೆಯಲು ಜಮೀನಿನ ಸುತ್ತ ಮೂರು ಅಡಿಯ ಕಂದಕ ತೆಗೆಸಿದರು. ಬಳಿಕ ಗಿಡ ನೆಟ್ಟರು. ಐದು ವರ್ಷ ಸಾವಯವ ಗೊಬ್ಬರಕ್ಕೆ ವಾರ್ಷಿಕ ₹1.50 ಲಕ್ಷ ವ್ಯಯಿಸಿದರು.

ಆರನೇ ವರ್ಷದಿಂದ ಖರ್ಚು ಮಾಡಿಲ್ಲ. ಡಾ.ಪ್ರದೀಪ್ ನೆಟ್ಟಿದ್ದ ಗಿಡಗಳಲ್ಲಿ ಶೇ 10ರಷ್ಟು ಮಾತ್ರ ಉಳಿದವು. ಉಳಿದ ಗಿಡಗಳೆಲ್ಲವೂ ನೈಸರ್ಗಿಕವಾಗಿಯೇ ಬೆಳೆದಿವೆ. ಕಾಡಿನ ಪರಿಸರದ ಸೆಳೆತಕ್ಕೆ ಒಳಗಾಗಿ ಬಂದ ಪಕ್ಷಿಗಳು ಬೇರೆ ಕಡೆ ತಂದ ಹಣ್ಣುಗಳನ್ನು ತಿಂದು ಉದುರಿಸಿದ ಬೀಜಗಳು, ಇಲ್ಲಿಗೆ ಮೇಯಲು ಬರುತ್ತಿದ್ದ ಕುರಿಗಳು ಹಾಕಿದ ಹಿಕ್ಕೆಯಲ್ಲಿದ್ದ ಬೀಜಗಳು ಗಿಡಗಳಾಗಿ ಬೆಳೆದಿವೆ. ಹೀಗೆ ನಿಸರ್ಗದತ್ತವಾಗಿಯೇ ಬೆಳೆದ ಕಾಡು ಶೇ 90ರಷ್ಟಿದೆ. ಅರಣ್ಯ ಇಲಾಖೆಯಿಂದ ಯಾವುದೇ ಸೌಲಭ್ಯ ಪಡೆದಿಲ್ಲ.

ಜಮೀನಿನಲ್ಲಿ ಇಂದು ಶ್ರೀಗಂಧ, ಸುಬಾಬುಲ್, ಹೆಬ್ಬೇವು, ಮಹಾಗನಿ, ಹೊಂಗೆ, ಬಿದಿರು ಸೇರಿ ವಿವಿಧ ಜಾತಿಯ ಮರಗಳಿವೆ. ಕೆಲವು 20 ಅಡಿಗೂ ಎತ್ತರ ಇವೆ. ಕಾಡು ಹಣ್ಣಿನ ಗಿಡಗಳೂ ಸಾಕಷ್ಟಿವೆ. ಒಟ್ಟು ಜಮೀನಿನಲ್ಲಿ ಶೇ 70ರಷ್ಟು ಕಾಡು ಇದ್ದು, ಶೇ 30ರಷ್ಟು ಹುಲ್ಲುಗಾವಲು ಇದೆ. ಅಲ್ಲೂ ವೈವಿಧ್ಯದ ಹುಲ್ಲು ಬೆಳೆದಿದೆ. ಈ ಪ್ರದೇಶ ತೋಳದಂತಹ ಕಾಡುಪ್ರಾಣಿಗಳನ್ನೂ ಆಕರ್ಷಿಸುತ್ತಿದೆ.

'2016ರಲ್ಲಿ ಹೊಳೆದ ಕಾಡುಕೃಷಿ ಕಲ್ಪನೆಗೆ ಜೀವ ಕೊಡಲು ಮುಂದಾದಾಗ ಮನೆಯವರಿಂದ ವಿರೋಧ ವ್ಯಕ್ತವಾಯಿತು. ಹೆಸರು, ಹತ್ತಿ, ಕಡಲೆ ಬೆಳೆಯುತ್ತಿದ್ದ ಜಮೀನಿನಲ್ಲಿ ಕಾಡುಕೃಷಿ ಏಕೆ ಎಂದು ಕೇಳಿದರು. ಆದರೆ, ಈಗ ಇಲ್ಲಿಗೆ ಬಂದವರೆಲ್ಲರೂ ಪುಟ್ಟ ಕಾಡು ಕಂಡು, ಕಪ್ಪತ್ತಗುಡ್ಡ ನೋಡಿದ ಅನುಭವ ನೀಡುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ' ಎಂದು ಡಾ.ಪ್ರದೀಪ್ ತಿಳಿಸಿದರು.

ಡಾ. ಪ್ರದೀಪ್ ಉಗಲಾಟದ ಅವರ ಜಮೀನಿನಲ್ಲಿ ಬೆಳೆದಿರುವ ಮರಗಿಡಗಳು

ಕಾಡು ಕೃಷಿಯಿಂದ ಆದಾಯದ ನಿರೀಕ್ಷೆ ಇಲ್ಲ. ಪರಿಸರದ ಮೇಲಿನ ಕಾಳಜಿ ಹಾಗೂ ಮನಸ್ಸಿನ ಸಂತೋಷಕ್ಕಾಗಿಯೇ ಕಾಡು ಬೆಳೆಸುತ್ತಿದ್ದೇನೆ

ಡಾ. ಪ್ರದೀಪ್ ಉಗಲಾಟದ, ಕಾಡು ಕೃಷಿಕ

ಧರ್ಮಾಧಿಕಾರಿ ಸೇವೆ ಅನನ್ಯ: ಸಿದ್ಧಗಂಗಾ ಶ್ರೀ

ಧರ್ಮಸ್ಥಳದಲ್ಲಿ ವೀರೇಂದ್ರ ಹೆಗ್ಗಡೆ ಪಟ್ಟಾಭಿಷೇಕದ 58ನೇ ವರ್ಧಂತ್ಯುತ್ಸವ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): 'ಸರ್ವಧರ್ಮ ಸಮನ್ವಯ ಕೇಂದ್ರವಾದ ಧರ್ಮಸ್ಥಳ ನಾಡಿನ ಪವಿತ್ರ ಪುಣ್ಯಕ್ಷೇತ್ರ. ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರು ಮಾತೃಹೃದಯದಿಂದ ಮಾಡುವ ಸಮಾಜಸೇವೆ ಅನನ್ಯ ಮತ್ತು ಅನುಪಮ' ಎಂದು ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ಅವರು ಶುಕ್ರವಾರ ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರ ಪಟ್ಟಾಭಿಷೇಕದ 58ನೇ ವರ್ಧಂತ್ಯುತ್ಸವ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಮಹಾತ್ಮಗಾಂಧಿ ಅವರ ಗ್ರಾಮರಾಜ್ಯದ ಮೂಲಕ ರಾಮರಾಜ್ಯದ ಕನಸನ್ನು ಹೆಗ್ಗಡೆಯವರು ಗ್ರಾಮಾಭಿವೃದ್ಧಿ ಯೋಜನೆ, ಮನಃಪರಿವರ್ತನೆ ಮೂಲಕ ಮದ್ಯವರ್ಜನ ಶಿಬಿರದೊಂದಿಗೆ ನನಸು ಮಾಡಿದ್ದಾರೆ. ಪ್ರಧಾನಿ ಮೋದಿಯವರ ವಿಕಸಿತ ಭಾರತ ಕಲ್ಪನೆಯನ್ನು ಅನುಷ್ಠಾನಗೊಳಿಸಿದ್ದಾರೆ. ದೀನ– ದಲಿತರ, ಮಹಿಳೆಯರ ಬದುಕಿಗೆ ತಾಯಿ– ತಂದೆ, ಪೋಷಕರಂತೆ ಪ್ರೀತಿ– ವಿಶ್ವಾಸದಿಂದ ಪ್ರೇರಣೆ ಮಾರ್ಗದರ್ಶನ, ಪ್ರೋತ್ಸಾಹ ನೀಡಿ ನವ ಚೈತನ್ಯದೊಂದಿಗೆ ಸ್ವಾವಲಂಬಿ ಜೀವನ ಮಾಡಲು ದಾರಿದೀಪವಾಗಿದ್ದಾರೆ ಎಂದರು.

ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರು ಹೊಸ ಯೋಜನೆಗಳನ್ನು ಪ್ರಕಟಿಸಿದರು. ಉಜಿರೆಯಲ್ಲಿ ನರ್ಸಿಂಗ್ ಕಾಲೇಜು ಪ್ರಾರಂಭ, ಎಂ.ಆರ್.ಐ. ಘಟಕ, 2000ನೇ ಮದ್ಯವರ್ಜನ ಶಿಬಿರ ಧರ್ಮಸ್ಥಳದಲ್ಲಿ ನವೆಂಬರ್ 6ರಂದು ನಡೆಯಲಿದ್ದು, 1,35,000 ವ್ಯಸನಮುಕ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಶಾಸಕ ಹರೀಶ್ ಪೂಂಜ, ಕಂಚಿಕಾಮಕೋಟಿ ಪೀಠದ ಪ್ರತಿನಿಧಿ ಗುರುಚರಣಮೂರ್ತಿ ಮಾತನಾಡಿದರು. ವಿಘ್ನರಾಜ, ಪವನ್ ಸಂಪಾದಿಸಿದ 'ವೃಷಭೇಶ್ವರ' ಗ್ರಂಥವನ್ನು ಸ್ವಾಮೀಜಿ ಲೋಕಾರ್ಪಣೆ ಮಾಡಿದರು. ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್ ಸ್ವಾಗತಿಸಿದರು. ಪ್ರಾಂಶುಪಾಲ ಸುನಿಲ್ ಪಂಡಿತ್ ಕಾರ್ಯಕ್ರಮ ನಿರ್ವಹಿಸಿದರು.

ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಆಶೀರ್ವಚನ ನೀಡಿದರು

ಬಕೆಟ್ ನೀರಿನಲ್ಲಿ ಮುಳುಗಿ ಮಗು ಸಾವು

ಪ್ರಜಾವಾಣಿ ವಾರ್ತೆ

ಹಾವೇರಿ: ಇಲ್ಲಿಯ ಶಿವಬಸವನಗರದ ಮನೆಯೊಂದರ ಎದುರು ತುಂಬಿಸಿಟ್ಟಿದ್ದ ಬಕೆಟ್ ನೀರಿನಲ್ಲಿ ಮುಳುಗಿ 14 ತಿಂಗಳ ಮಗು, ದಕ್ಷಿತ್ ಗುರುವಾರ ಮೃತಪಟ್ಟಿದೆ.

'ಅಕ್ಟೋಬರ್ 19ರ ಬೆಳಿಗ್ಗೆ ಮಗು ಆಟವಾಡುತ್ತ ಬಕೆಟ್ ಬಳಿ ಬಂದು, ಆಕಸ್ಮಿಕವಾಗಿ ತಲೆ ಕೆಳಗಾಗಿ ನೀರಿನಲ್ಲಿ ಮುಳುಗಿದೆ. ಪ್ರಜ್ಞೆ ತಪ್ಪಿದ್ದ ಮಗುವನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು. ಆದರೆ, ಪ್ರಯೋಜನವಾಗಲಿಲ್ಲ' ಎಂದು ಹಾವೇರಿ ಶಹರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮಗುವಿನ ತಂದೆ ರವಿ ಯಳಂಬ್ಲಿಮಠ ನೀಡಿದ ಮಾಹಿತಿ ಆಧರಿಸಿ, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ದಕ್ಷಿತ್

ಸುದ್ದಿ 2 ನಿಮಿಷ

ಅಂಬೇಡ್ಕರ್ ಚಿತ್ರ, ವಿಗ್ರಹಕ್ಕೆ ಹಾನಿ

ಚಾಮರಾಜನಗರ: ತಾಲ್ಲೂಕಿನ ಜ್ಯೋತಿ ಗೌಡನಪುರದ ಹಳೆ ಹಾಗೂ ಹೊಸ ಬಡಾವಣೆಯಲ್ಲಿ ಕಿಡಿಗೇಡಿಗಳು ಅಂಬೇಡ್ಕರ್ ಭಾವಚಿತ್ರವಿದ್ದ ಫ್ಲೆಕ್ಸ್ ಹರಿದು, ಬೋರ್ಡ್ ವಿರೂಪಗೊಳಿಸಿ, ಬೌದ್ಧ ವಿಹಾರದೊಳಗಿದ್ದ ಬುದ್ಧ ಹಾಗೂ ಅಂಬೇಡ್ಕರ್ ವಿಗ್ರಹಗಳನ್ನು ಒಡೆದು ಹಾಕಿದ್ದಾರೆ.

ಸುದ್ದಿ ಹರಡಿದಂತೆ ಗ್ರಾಮದಲ್ಲಿ ಬಿಗುವಿನ ಸ್ಥಿತಿ ನಿರ್ಮಾಣವಾಯಿತು. ಸುತ್ತಲಿನ ಗ್ರಾಮಗಳಿಂದ ಅಂಬೇಡ್ಕರ್ ಅನುಯಾಯಿಗಳು ಸ್ಥಳದಲ್ಲಿ ಸೇರಿ ಪ್ರತಿಭಟಿಸಿದರು

ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ ಸ್ಥಳಕ್ಕೆ ತೆರಳಿ ಪರಿಸ್ಥಿತಿ ನಿಯಂತ್ರಣಕ್ಕೆ ತಂದರು.

'ವಿಕೃತಿ ಮೆರೆದಿರುವ ಕಿಡಿಗೇಡಿಗಳನ್ನು ಬಂಧಿಸಬೇಕು' ಎಂದು ಒತ್ತಾಯಿಸಿ ಗ್ರಾಮದ ಮುಖಂಡರು, ಮಹಿಳೆಯರು ಬೆಳಿಗ್ಗೆಯಿಂದ ಸಂಜೆಯವರೆಗೂ ಪ್ರತಿಭಟನೆ ನಡೆಸಿದರು.

ಈ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಿದ್ದು ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಪುರಸಭೆ ಕಚೇರಿ ಕಡತಗಳಿಗೆ ಬೆಂಕಿ: ಸೇವೆ ವಿಳಂಬದಿಂದ ಆಕ್ರೋಶ?

ಸಕಲೇಶಪುರ (ಹಾಸನ): ಇಲ್ಲಿನ ಪುರಸಭೆಯ ಮುಖ್ಯಾಧಿಕಾರಿ ಮಹೇಶ್ವರಪ್ಪ ಅವರ ಕೊಠಡಿಯಲ್ಲಿ ಟೇಬಲ್ ಮೇಲೆ ಇರಿಸಿದ್ದ ಕಡತಗಳಿಗೆ ಶುಕ್ರವಾರ ದುಷ್ಕರ್ಮಿಯೊಬ್ಬ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದಾನೆ.

ಶುಕ್ರವಾರ ಮಧ್ಯಾಹ್ನದಿಂದ ಕಚೇರಿ ಕಾರಿಡಾರ್‌ನಲ್ಲಿ ಆತ ಓಡಾಡುತ್ತಿದ್ದುದು ಹಾಗೂ ಬೆಂಕಿ ಹಚ್ಚಿದ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಪೊಲೀಸರು ಆರೋಪಿಗಾಗಿ ಶೋಧ ನಡೆಸಿದ್ದಾರೆ. ಆತನನ್ನು ಪುರಸಭೆ ಸದಸ್ಯರೊಬ್ಬರು ಹಾಗೂ ಸಿಬ್ಬಂದಿ ನೋಡಿದ್ದರು. ಕಚೇರಿ ಒಳಗೆ ಬಂದು ಆತ ಚೀರಾಡಿದ್ದ ಎನ್ನಲಾಗಿದೆ.

ಮಾಹಿತಿ ದೊರೆತ ನಂತರ ಸ್ಥಳಕ್ಕೆ ಬಂದ ಪೊಲೀಸರು, 'ಸಿಬ್ಬಂದಿ ಇರುವಾಗಲೇ ಕಡತಗಳಿಗೆ ಬೆಂಕಿ ಹಚ್ಚಿ, ಕಚೇರಿ ಬಳಿ ನಿಲ್ಲಿಸಿದ್ದ ಸ್ಕೂಟರ್ ಏರಿ ಹೋಗುವವರೆಗೆ ಏಕೆ ಹಿಡಿಯಲಿಲ್ಲ? ಕೈಯಲ್ಲಿ ಚಾಕು ಇದ್ದರೂ ಏಕೆ ಮಾಹಿತಿ ನೀಡಲಿಲ್ಲ' ಎಂದು ಸಿಬ್ಬಂದಿಯನ್ನು ಪ್ರಶ್ನಿಸಿದರು.

'ಇ–ಖಾತೆ ಸೇರಿದಂತೆ ಕಚೇರಿ ಕೆಲಸಗಳಿಗೆ ಜನರು ಅಲೆದಾಡುವಂತಾಗಿದೆ. ಅದರಿಂದ ಬೇಸತ್ತು ಈ ಕೃತ್ಯ ಎಸಗಿರಬಹುದು' ಎಂಬ ಶಂಕೆ ವ್ಯಕ್ತವಾಗಿದೆ. ಪ್ರಕರಣ ದಾಖಲಾಗಿದೆ.

ಎಸ್.ಬಂಗಾರಪ್ಪ ಜನ್ಮದಿನ ಆಚರಣೆ ಸಾಧಕರಿಗೆ ಪ್ರಶಸ್ತಿ ಪ್ರದಾನ ನಾಳೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮಾಜಿ ಮುಖ್ಯಮಂತ್ರಿ, ದಿವಂಗತ ಎಸ್.ಬಂಗಾರಪ್ಪ ಅವರ 93ನೇ ಜನ್ಮದಿನ ಆಚರಣೆ ಸಮಾರಂಭ ಅ.26ರಂದು ಜಿಲ್ಲೆಯ ಸೊರಬದಲ್ಲಿರುವ 'ಬಂಗಾರಧಾಮ'ದಲ್ಲಿ ನಡೆಯಲಿದೆ.

'ಎಸ್.ಬಂಗಾರಪ್ಪ– ಶಕುಂತಲಾ ದಂಪತಿಯ ಸಮಾಧಿ ಸ್ಥಳವಾದ 'ಬಂಗಾರಧಾಮ' ಸಚಿವ ಮಧು ಎಸ್.ಬಂಗಾರಪ್ಪ ಅವರ ಕನಸಿನಂತೆ ಆಕರ್ಷಕವಾಗಿ ವಿನ್ಯಾಸಗೊಂಡಿದೆ. ರಾಜ್ಯ ಸರ್ಕಾರ ಅದನ್ನು ಪ್ರವಾಸಿ ಸ್ಥಳ ಎಂದು ಗುರುತಿಸಿದೆ. ಹೀಗಾಗಿ ಈ ಬಾರಿ ಬಂಗಾರಪ್ಪ ಅವರ ಹುಟ್ಟುಹಬ್ಬದ ಸಂಭ್ರಮ ಇಮ್ಮಡಿಸಿದೆ' ಎಂದು ಬಂಗಾರಪ್ಪ ವಿಚಾರ ವೇದಿಕೆ ಅಧ್ಯಕ್ಷ ವೇಣುಗೋಪಾಲ ನಾಯಕ್ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿವಿಧ ಕ್ಷೇತ್ರಗಳ ಸಾಧಕರಿಗೆ ಸಮಾರಂಭದಲ್ಲಿ 'ಬಂಗಾರ' ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಬೆಂಗಳೂರಿನ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ, ಸಾಹಿತಿ ಕಾಳೇಗೌಡ ನಾಗವಾರ, ಚೌಡಿಕೆ ಕಲಾವಿದೆ ರಾಧಾಬಾಯಿ ಮಾದರ ಹಾಗೂ ರಂಗ ಕಲಾವಿದ ಜೇವರ್ಗಿ ರಾಜಣ್ಣ ಪ್ರಸಕ್ತ ಸಾಲಿನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸಚಿವರಾದ ಕೆ.ಎಚ್. ಮುನಿಯಪ್ಪ, ಆರ್.ವಿ.ದೇಶಪಾಂಡೆ, ಸಂತೋಷ್ ಲಾಡ್ ಪ್ರದಾನ ಮಾಡಲಿದ್ದಾರೆ ಎಂದು ವಿವರಿಸಿದರು.

ಶಾಸಕ ಬೇಳೂರು ಗೋಪಾಲಕೃಷ್ಣ, ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್ ಸಂಸ್ಥೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ತಿಲಕ್‌ಕುಮಾರ್, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಪಾಲ್ಗೊಳ್ಳುವರು. ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಎಸ್. ಬಂಗಾರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಅಂದು ಬಂಗಾರಪ್ಪನವರ ಚಿಂತನೆಗಳು ಕುರಿತು ವಿಚಾರ ಸಂಕಿರಣ ಹಾಗೂ ಆಳ್ವಾಸ್ ಸಾಂಸ್ಕೃತಿಕ ವೈಭವ ಕೂಡ ಗರಿಗೆದರಲಿದೆ ಎಂದು ಹೇಳಿದರು.

ಸೊರಬದ ಬಂಗಾರಧಾಮದ ನೋಟ

'ಕೆಂಡ ಹಾಯುವುದು ಅಪರಾಧ'

ಹಾಸನ: ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ವೇಳೆ ಕೆಂಡ ಹಾಯ್ದಿದ್ದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರಿಗೆ ರಾಷ್ಟ್ರೀಯ ವಿಚಾರವಾದಿಗಳ ಸಂಘದ ಅಧ್ಯಕ್ಷ ಪ್ರೊ.ನರೇಂದ್ರ ನಾಯಕ್ ಪತ್ರ ಬರೆದಿದ್ದು, 'ಕಾಯ್ದೆಯಡಿ ಇದು ಅಪರಾಧ' ಎಂದಿದ್ದಾರೆ.

'ಅಲೌಕಿಕ ಶಕ್ತಿ ಹಸ್ತಕ್ಷೇಪದ ಅಗತ್ಯವಿಲ್ಲದೇ ಜನ ಕೆಂಡ ಹಾಯುತ್ತಾರೆ. ಆದರೆ, ಕರ್ನಾಟಕ ಮೌಢ್ಯ ನಿಯಂತ್ರಣ ಕಾಯ್ದೆ 2017 ರಡಿ ಇದೊಂದು ಅಪರಾಧ. ಜನರನ್ನು ಬೆಂಕಿಯಲ್ಲಿ ನಡೆಯುವಂತೆ ಒತ್ತಾಯಿಸುವುದನ್ನು ನಿಷೇಧಿಸಲಾಗಿದೆ ಎಂಬುದನ್ನು ಗಮನಿಸಿ' ಎಂದಿದ್ದಾರೆ.

'ವೈಜ್ಞಾನಿಕ ಮನೋಭಾವವನ್ನು ಮೂಡಿಸಲು ಹಾಸನದಲ್ಲಿ ವಿವಿಧ ಸಂಸ್ಥೆಗಳ ಕಾರ್ಯಕರ್ತರೊಂದಿಗೆ ಜಾಗೃತಿ ಕಾರ್ಯಕ್ರಮ ನಡೆಸಲು ಉದ್ದೇಶಿಸಿದ್ದೇವೆ. ಅದಕ್ಕಾಗಿ ವ್ಯವಸ್ಥೆ ಮಾಡುತ್ತೀರಿ ಎಂದು ಭಾವಿಸುವೆ' ಎಂದೂ ಪತ್ರದಲ್ಲಿ ತಿಳಿಸಿದ್ದಾರೆ.

ಭಾರಿ ಮಳೆ, ನೆಲ ಕಚ್ಚಿದ ಬೆಳೆ

ಒಂದನೇ ಪುಟದಿಂದ...

ಆತ್ಮಹತ್ಯೆಗೆ ರೈತ ಯತ್ನ

ಕೊಪ್ಪಳ ವರದಿ: ಮಳೆ ಹಾಗೂ ಗಾಳಿಯಿಂದ ಜಿಲ್ಲೆಯಲ್ಲಿ ಭತ್ತದ ಬೆಳೆಗೆ ಹಾನಿಯಾಗಿದ್ದು, ಇದರಿಂದ ಮನನೊಂದು ಕೊಪ್ಪಳ ತಾಲ್ಲೂಕಿನ ಬಸಾಪುರ ಗ್ರಾಮದ ರೈತ ಲಕ್ಷ್ಮಣ ರಾಜರಾಮಪೇಟೆ ಕ್ರಿಮಿನಾಶಕ ಸೇವಿಸಲು ಮುಂದಾಗಿದ್ದ ಘಟನೆ ಶುಕ್ರವಾರ ನಡೆದಿದೆ.

ಅಕ್ಕಪಕ್ಕದಲ್ಲಿದ್ದರು ರೈತನನ್ನು ತಡೆದು ಸಮಾಧಾನ ಪಡಿಸಿದ್ದಾರೆ. ಲಕ್ಷ್ಮಣ ಅವರು ಎಂಟು ಎಕರೆಯಲ್ಲಿ ಭತ್ತ ಬೆಳೆದಿದ್ದು, ಬೆಳೆ ನಷ್ಟದ ಭೀತಿಯಲ್ಲಿದ್ದಾರೆ.

ಕೊಪ್ಪಳ, ಗಂಗಾವತಿ, ಕಾರಟಗಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಭತ್ತದ ಬೆಳೆ ಮಳೆ, ಗಾಳಿಗೆ ನೆಲಕ್ಕೊರಗಿದೆ. ಗುರುವಾರ ರಾತ್ರಿ ಹಾಗೂ ಶುಕ್ರವಾರ ಸಂಜೆ ತನಕ ಮಳೆಯಾಗಿದೆ. 'ಇಲಾಖೆ ಸಿಬ್ಬಂದಿ ಭೇಟಿ ನೀಡಿ ಬೆಳೆ ಹಾನಿ ಪರಿಶೀಲಿಸಿದ್ದಾರೆ. ಮಳೆ ನಿಂತ ಬಳಿಕ ಹಾನಿ ಪ್ರಮಾಣ ಗೊತ್ತಾಗಲಿದೆ' ಎಂದು ಜಂಟಿ ಕೃಷಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್. ತಿಳಿಸಿದರು.

ಬೀದರ್ ಜಿಲ್ಲೆಯ ಬೀದರ್, ಹುಮನಾಬಾದ್, ಹುಲಸೂರ ಹಾಗೂ ಭಾಲ್ಕಿಯಲ್ಲಿ ಶುಕ್ರವಾರ ಸಂಜೆ ಒಂದು ಗಂಟೆಗೂ ಹೆಚ್ಚು ಕಾಲ ಬಿರುಸಿನಿಂದ ಮಳೆಯಾಯಿತು.ಯಾದಗಿರಿ ಜಿಲ್ಲೆಯ ಹಲವೆಡೆ ಮಳೆಯಾಗಿದೆ. ಜಿಟಿಜಿಟಿ ಮಳೆಯಿಂದ ಹಿಂಗಾರು ಹಂಗಾಮಿನ ಬಿತ್ತನೆ ಚಟುವಟಿಕೆಗೆ ಹಿನ್ನಡೆಯಾಗಿದೆ. ತೆನೆ ಕಟ್ಟಿದ ಭತ್ತದ ಪೈರು ಕೆಲವೆಡೆ ನೆಲಕಚ್ಚಿದೆ. ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಭಾರಿ ಮಳೆ ಮತ್ತು ಗಾಳಿಯಿಂದಾಗಿ ಕೊಯ್ಲಿಗೆ ಬಂದ ಭತ್ತದ ಬೆಳೆ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ.



ಹೊಸಪೇಟೆ ಸಮೀಪದ ತುಂಗಭದ್ರಾ ಅಣೆಕಟ್ಟೆಯ ಮೂರು ಕ್ರೆಸ್ಟ್‌ಗೇಟ್ ತೆರೆದು ಶುಕ್ರವಾರ ನದಿಗೆ ನೀರು ಹರಿಸಲಾಯಿತು –ಚಿತ್ರ/ ಲವ ಕೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯೂಸೆಕ್‌ಗಳಲ್ಲಿ)	
ಕೆ ಆರ್ ಎಸ್ *	124.80	124.80	37,007	36,750
ಹಾರಂಗಿ	2,859	2,858.09	1,197	2,266
ಕಬಿನಿ	2,284.00	2,283.96	5,427	5,325
ಹೇಮಾವತಿ	2,922	2,922	17,962	12,320
ಲಿಂಗನಮಕ್ಕಿ	1,819	1,815.35	5,935	5,800
ಸೂಪಾ (ಮೀ)	564	558.42	1,351.98	3,626.61
ಮಾಣಿ	595	593.64	233	674
ತುಂಗಭದ್ರಾ	1,633	1,626.06	22,938	22,938
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2175	2,174.91	813	175
ಭದ್ರಾ *	186	184.6	5,904	5,904
ಆಲಮಟ್ಟಿ (ಮೀ)	519.60	519.59	00	1430
ನಾರಾಯಣಪುರ (ಮೀ)	492.25	491.55	3,500	7,746

* ನೆಲಮಟ್ಟದಿಂದ

ಗೋಡೆ ಕುಸಿದು ಮಹಿಳೆ ಸಾವು

ಹಾಸನ: ಅರಕಲಗೂಡು ತಾಲ್ಲೂಕಿನ ಮತ್ತಿಗೋಡಿನಲ್ಲಿ ಶುಕ್ರವಾರ ಬೆಳಗಿನ ಜಾವ 5.30 ರ ವೇಳೆಯಲ್ಲಿ ಮಳೆಯಿಂದ ಮನೆಯ ಶಿಥಿಲ ಗೋಡೆ ಕುಸಿದು ಜವರಮ್ಮ (63) ಎಂಬವರು ಮೃತಪಟ್ಟರು. ಅವರ ಪುತ್ರ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಜಿಲ್ಲೆಯಾದ್ಯಂತ ಮಳೆ ಮುಂದುವರಿದಿದ್ದು, ಹೇಮಾವತಿ ಜಲಾಶಯ ಮತ್ತೊಮ್ಮೆ ಜಲಾಶಯ ಭರ್ತಿಯಾಗಿದೆ.

ಮಹಿಳೆ ಕೂದಲು ಕತ್ತರಿಸಿ, ತಲೆಗೆ ಸುಣ್ಣ ಹಚ್ಚಿ, ಖಾರದ ಪುಡಿ ಹಾಕಿದ ಕೃತ್ಯ

ಇಬ್ಬರ ಬಂಧನ, ಒಂಬತ್ತು ಮಂದಿ ಪರಾರಿ

ಪ್ರಜಾವಾಣಿ ವಾರ್ತೆ

ಯಾದಗಿರಿ: ಶಹಾಪುರ ತಾಲ್ಲೂಕಿನ ಚಾಮನಾಳ ತಾಂಡಾದ ಮಹಿಳೆಯೊಬ್ಬರ ಕೂದಲು ಕತ್ತರಿಸಿ, ತಲೆಗೆ ಸುಣ್ಣ ಹಚ್ಚಿ, ಖಾರದ ಪುಡಿ ಹಾಕಿ ಅಮಾನುಷವಾಗಿ ವರ್ತಿಸಿದ್ದು, ಕೆಂಭಾವಿ ಠಾಣೆ ಪೊಲೀಸರು ಈ ಕುರಿತು ಇಬ್ಬರನ್ನು ಬಂಧಿಸಿದ್ದಾರೆ.

11ಕ್ಕೂ ಹೆಚ್ಚು ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಗಂಗಾಬಾಯಿ ಶಂಕರ ಚಿನ್ನಾರಾಠೋಡ ಸಂತ್ರಸ್ತೆ. ಕಸ್ತೂರಿಬಾಯಿ ಡಾಕಪ್ಪ ಮತ್ತು ಡಾಕಪ್ಪ ಚಿನ್ನಾರಾಠೋಡ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಜಯಕುಮಾರ ಕಿಶನ್ ರಾಠೋಡ (ರೌಡಿ ಶೀಟರ್) ಮತ್ತು ಇತರೆ ಹತ್ತು ಮಂದಿ ಆರೋಪಿಗಳು ತಮ್ಮ ಮೊಬೈಲ್ ಫೋನ್‌ಗಳನ್ನು ಸ್ವಿಚ್ಡ್ ಆಫ್ ಮಾಡಿದ್ದು, ಮುಂಬೈ, ಪುಣೆಯಲ್ಲಿ ತಲೆಮರೆಸಿಕೊಂಡಿರುವ ಶಂಕೆ ಇದೆ ಎಂದು ಮಾಹಿತಿ ನೀಡಿದರು.

ಆರೋಗ್ಯ ಸಮಸ್ಯೆಯಿಂದ ಮಹಿಳೆ ಆಗಾಗ್ಗೆ ಚಿಕ್ಕಮ್ಮನ ಮನೆಗೆ, ಅಳಿಯ ಅನಿಲ್ ರಾಮು ರಾಠೋಡ ಕರೆದುಕೊಂಡು ಹೋಗುತ್ತಿದ್ದರು. 'ಅಳಿಯನ ಜೊತೆಗೆ ಸಂಬಂಧ ಇಟ್ಟುಕೊಂಡು ಓಡಿ ಹೋಗಿ ಮರ್ಯಾದೆ ತೆಗೆದಿದ್ದೀಯಾ' ಎಂದು ನಿಂದಿಸಿ ಹಲ್ಲೆ ಮಾಡಿದ್ದರು ಎಂದು ದೂರು ನೀಡಲಾಗಿದೆ.

ತಿಪ್ಪಣ್ಣ ಎಂಬವರು ಮಹಿಳೆಗೆ ಒದ್ದು ನೆಲಕ್ಕೆ ಕೆಡವಿದರು. ಅನುಶಾಬಾಯಿ ತಲೆ ಕೂದಲು ಹಿಡಿದರೆ, ರೂಪ್ಲಿಬಾಯಿ ಅವರು ಕತ್ತರಿಯಿಂದ ಕತ್ತರಿಸಿದರು. ಚಾವಳಿ ಬಾಯಿ ಮತ್ತು ದೇವಿಬಾಯಿ ಅವರು ತಲೆಗೆ ಸುಣ್ಣ ಹಚ್ಚಿದರು. ಆ ಬಳಿಕ ತಿಪ್ಪಿಬಾಯಿ ಅವರು ಖಾರದ ಪುಡಿಯನ್ನು ಸಂತ್ರಸ್ತೆ ಮೈಮೇಲೆ ಹಾಕಿದರು. ವಿಜಯಕುಮಾರ ಸೇರಿ ಉಳಿದವರು ಮಹಿಳೆಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರು ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಸ್ತೂರಿಬಾಯಿ

ಡಾಕಪ್ಪ

ಹಾವೇರಿ: ಕನ್ನಡ ಶಾಲೆ ದಾಖಲಾತಿ ಹೆಚ್ಚಳಕ್ಕೆ ಮುಖ್ಯ ಶಿಕ್ಷಕನ ಪ್ರಯತ್ನ

'ನಲಿಕಲಿ' ಮಕ್ಕಳಿಗೆ ದಿನಕ್ಕೊಂದು ರೂಪಾಯಿ

• ಪ್ರದೀಪ ಕುಲಕರ್ಣಿ

ರಟ್ಟೀಹಳ್ಳಿ (ಹಾವೇರಿ ಜಿಲ್ಲೆ): ತಾಲ್ಲೂಕಿನ ಲಿಂಗದೇವರಕೊಪ್ಪ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ 'ನಲಿ ಕಲಿ' ಶಿಕ್ಷಣದ ಮಕ್ಕಳಿಗೆ ದಿನಕ್ಕೆ ₹ 1 ನೀಡಲು ಮುಖ್ಯ ಶಿಕ್ಷಕ ಎಂ.ಕೆ. ಹೊಳಜೋಗಿ ತೀರ್ಮಾನಿಸಿದ್ದು, ದಾಖಲಾತಿ ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ.

ಶಾಲೆಯಲ್ಲಿ 1ರಿಂದ 3ನೇ ತರಗತಿಯವರೆಗೆ ನಲಿ–ಕಲಿ ಶಿಕ್ಷಣ ಕ್ರಮವಿದೆ. 1, 2ನೇ ತರಗತಿಯಲ್ಲಿ 7 ಮಕ್ಕಳಿದ್ದಾರೆ. 3ನೇ ತರಗತಿಯಲ್ಲಿ ಮಕ್ಕಳಿಲ್ಲ. ಹೀಗಾಗಿ, ದಾಖಲಾತಿ ಹೆಚ್ಚಳಕ್ಕಾಗಿ ಹೊಳಜೋಗಿ ಅವರು 'ದಿನಕ್ಕೆ ₹ 1 ಯೋಜನೆ' ರೂಪಿಸಿದ್ದಾರೆ.

ಸರ್ಕಾರಿ ಕನ್ನಡ ಶಾಲೆಗೆ ದಾಖಲಾಗುವ ಮಕ್ಕಳ ಹೆಸರಿನಲ್ಲಿ ಸದ್ಯ ₹ 1,111 ಠೇವಣಿ ಇರಿಸಿರುವ ಹೊಳಜೋಗಿ, ಅದರ ಜೊತೆಗೆ ದಿನಕ್ಕೆ ₹ 1 ನೀಡುವುದಾಗಿ ಘೋಷಿಸಿದ್ದಾರೆ.

'2025ನೇ ಶೈಕ್ಷಣಿಕ ವರ್ಷದಲ್ಲಿ ಜೂನ್ ತಿಂಗಳಲ್ಲಿ 1ನೇ ತರಗತಿಗೆ ನಾಲ್ವರು ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಅವರ ಹೆಸರಿನಲ್ಲಿ ತಲಾ ₹ 1,111 ಠೇವಣಿ ಇರಿಸಲಾಗಿದೆ. ಈಗ ನವೆಂಬರ್‌ನಿಂದ 2026ರ ಏಪ್ರಿಲ್‌ವರೆಗೂ 7 ಮಕ್ಕಳಿಗೆ ದಿನಕ್ಕೆ ₹ 1 ನೀಡಲು ತೀರ್ಮಾನಿಸಲಾಗಿದೆ' ಎಂದು ಎಂ.ಕೆ.ಹೊಳಜೋಗಿ 'ಪ್ರಜಾವಾಣಿ'ಗೆ ತಿಳಿಸಿದರು.

'ಮಕ್ಕಳ ಹೆಸರಿನಲ್ಲಿ ಪೋಷಕರು ಈಗಾಗಲೇ ಬ್ಯಾಂಕ್ ಖಾತೆ ತೆರೆದಿದ್ದಾರೆ. ಅದೇ ಖಾತೆಗೆ ದಿನದ ಲೆಕ್ಕದಲ್ಲಿ ಪ್ರತಿ ತಿಂಗಳೂ ಹಣ ಜಮೆ ಮಾಡುತ್ತೇನೆ. ಮಕ್ಕಳು ಸರ್ಕಾರಿ ಶಾಲೆಗೆ ಬರಲಿ ಎಂಬ ಕಾರಣಕ್ಕೆ ಈ ಕ್ರಮ ವಹಿಸಿದ್ದೇನೆ. ಜೊತೆಗೆ, ಹಣ ಉಳಿತಾಯದ ಬಗ್ಗೆಯೂ ಮಕ್ಕಳಲ್ಲಿ ಜಾಗೃತಿ ಮೂಡುತ್ತದೆ' ಎಂದು ಅವರು ಅಭಿಪ್ರಾಯಪಟ್ಟರು.

ಪೋಷಕ ಮಂಜಪ್ಪ ಲಮಾಣಿ ಅವರು,' ಮುಖ್ಯ ಶಿಕ್ಷಕರ ಕೆಲಸ ಮೆಚ್ಚುವಂಥದ್ದು. ನನ್ನ ಮಗ ಹಾಗೂ ನನ್ನ ಅಣ್ಣನ ಮಗಳ ಖಾತೆಗೆ ಈಗಾಗಲೇ ತಲಾ ₹ 1,111 ಠೇವಣಿ ಜಮೆ ಮಾಡಿದ್ದಾರೆ' ಎಂದರು.

ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸಲು ಮನಸ್ಸು ಮಾಡಬೇಕು. ಮಕ್ಕಳ ಖಾತೆಗೆ ಜಮೆ ಮಾಡಿದ ಹಣ, ಶೈಕ್ಷಣಿಕ ಲೇಖನ ಸಾಮಗ್ರಿ ಖರೀದಿಗೆ ನೆರವಾಗಲಿದೆ

ಎಂ.ಕೆ.ಹೊಳಜೋಗಿ, ಮುಖ್ಯ ಶಿಕ್ಷಕ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ

ಒಳ್ಳೆ ಸುದ್ದಿ

ನಿಧನ ವಾರ್ತೆ

ಪುರುಷೋತ್ತಮ ಭಾರತೀ ಸ್ವಾಮೀಜಿ

ಬೆಂಗಳೂರು: ನೆಲಮಂಗಲ ತಾಲ್ಲೂಕು ದಾಬಸ್‌ಪೇಟೆ ಸಮೀಪದಲ್ಲಿರುವ ಶೃಂಗೇರಿ ಶಿವಗಂಗಾ ಮಠದ 19ನೇ ಪೀಠಾಧಿಪತಿ ಪುರುಷೋತ್ತಮ ಭಾರತೀ ಸ್ವಾಮೀಜಿ (73) ಶುಕ್ರವಾರ ನಿಧನರಾದರು. ಮಠದ ಆವರಣದಲ್ಲಿಯೇ ಸಂಜೆ ಅಂತ್ಯಕ್ರಿಯೆ ನಡೆಯಿತು.

'ದೀಪಾವಳಿ ಹಬ್ಬದ ದಿನ ತೀವ್ರ ಅಸ್ವಸ್ಥರಾಗಿದ್ದ ಸ್ವಾಮೀಜಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ' ಎಂದು ವಕೀಲ ಅಶೋಕ್ ಹಾರನಹಳ್ಳಿ ತಿಳಿಸಿದ್ದಾರೆ.

ಆಂಧ್ರ ಪ್ರದೇಶದ ಕೃಷ್ಣಾ ಜಿಲ್ಲೆಯ ವೆಲ್ಲಟೂರು ಇವರ ಹುಟ್ಟೂರು. ಸೇತು ಮಾಧವ ಅವಧಾನಿ ಮತ್ತು ಕಲ್ಯಾಣಿ ಬಾಲಾ ತ್ರಿಪುರಸುಂದರಮ್ಮ ಅವರ ಪುತ್ರರಾದ ಇವರ ಪೂರ್ವಾಶ್ರಮದ ಹೆಸರು ಕಮ್ಮಂಬಾಟಿ ನಾಗೇಶ್ವರ ಅವಧಾನಿ. ವಿಜಯವಾಡದಲ್ಲಿ ವಿದ್ಯಾಭ್ಯಾಸ ಪೂರೈಸಿದ ಬಳಿಕ ಅಲ್ಲಿಯೇ ಶೃಂಗೇರಿ ಮಠದಲ್ಲಿ ಪಂಚ ಕಾವ್ಯ, ಜ್ಯೋತಿಷ ಶಾಸ್ತ್ರವನ್ನು ಅಧ್ಯಯನ ಮಾಡಿದರು. ಮೈಸೂರಿನ ಅವಧೂತ ದತ್ತಪೀಠದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. 2014ರ ಮಾ.3ರಂದು ಅವರನ್ನು ಶಿವಗಂಗಾ ಮಠದ ಪೀಠಾಧಿಪತಿಯಾಗಿ ನೇಮಿಸಲಾಗಿತ್ತು.



ಪುರುಷೋತ್ತಮ ಭಾರತೀ ಸ್ವಾಮೀಜಿ

ಕಲಾವಿದ ಸುಜನಾ ಸುಳ್ಯ

ಸುಳ್ಯ (ದಕ್ಷಿಣ ಕನ್ನಡ): ತೆಂಕು ತಿಟ್ಟಿನ ಯಕ್ಷಗಾನ ಕಲಾವಿದ, ಸುಳ್ಯದ 'ರಂಗಮನೆ'ಯ ಯಜಮಾನ ಸುಜನಾ ಸುಳ್ಯ (89) ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಅವರಿಗೆ ಪುತ್ರ, ರಂಗಕರ್ಮಿ ಜೀವನರಾಂ ಸುಳ್ಯ ಮತ್ತು ಪುತ್ರಿ ಇದ್ದಾರೆ.

ಸುಳ್ಯದ ಪ್ರಸಿದ್ಧ ನಾವೂರು ಮನೆತನದಲ್ಲಿ ಜನಿಸಿದ ಸುಜನಾ ಅವರು ನಾಟಕ ನಟರಾಗಿ ವೃತ್ತಿ ಆರಂಭಿಸಿದರು. ಮಾವ ಕಾವು ಶ್ರೀನಿವಾಸ ರಾಯರ ಪ್ರೇರಣೆಯಿಂದ ಯಕ್ಷಗಾನ ಕಲಾವಿದರಾಗಿ ಬಳ್ಳಂಬೆಟ್ಟು, ಧರ್ಮಸ್ಥಳ, ಇರಾ ಸೋಮನಾಥೇಶ್ವರ, ಕುದ್ರೋಳಿ, ಕೂಡ್ಲು, ಆದಿಸುಬ್ರಹ್ಮಣ್ಯ, ಸುಂಕದಕಟ್ಟೆ, ಕಟೀಲು ಮೇಳಗಳಲ್ಲಿ 36 ವರ್ಷ ಕಲಾಸೇವೆ ಮಾಡಿದರು. ಹಾಸ್ಯ ಪಾತ್ರಗಳಲ್ಲಿ ವಿಶೇಷ ಪ್ರಸಿದ್ಧಿ ಪಡೆದಿದ್ದ ಅವರು ಎಲ್ಲಾ ರೀತಿಯ ಸ್ತ್ರೀ, ಪುರುಷ ಪಾತ್ರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಕಲಾಭಿಮಾನಿಗಳ ಪ್ರೀತಿಗೆ ಪಾತ್ರರಾಗಿದ್ದರು. ಹಿಮ್ಮೇಳದ ಎಲ್ಲಾ ವಿಭಾಗಗಳಲ್ಲೂ ಪರಿಣತರಾಗಿದ್ದು, ತಾಳಮದ್ದಲೆ ಅರ್ಥಧಾರಿಯಾಗಿ, ಪ್ರಸಾಧನ ತಜ್ಞರಾಗಿ ಯಕ್ಷಗಾನದ ಸರ್ವಾಂಗವನ್ನೂ ಬಲ್ಲ ಕಲಾವಿದರಾಗಿದ್ದರು.ಸುಳ್ಯದಲ್ಲಿ 'ವಿದೇಯದೇವಿ ನಾಟ್ಯಕಲಾ ಸಂಘ' ಸ್ಥಾಪಿಸಿ, ರಂಗ ಮನೆಯ 'ಸುಜನಾ ಯಕ್ಷಗಾನ ಅಧ್ಯಯನ ಕೇಂದ್ರ'ದ ಮೂಲಕ ಯಕ್ಷಗಾನ ಕಲಿಕೆಗೆ ಪ್ರೇರಕ ಶಕ್ತಿಯಾಗಿದ್ದರು.



ಸುಜನಾ ಸುಳ್ಯ

ಉದ್ಯೋಗಕ್ಕಾಗಿ ಬಂದವರು ಬೆಂದು ಹೋದರು

ಒಂದೇ ಕುಟುಂಬದ ನಾಲ್ವರು, ನಾಲ್ವರು ಟೆಕಿಗಳು ಸೇರಿ ಎಂಟು ಮಂದಿ ಸಜೀವ ದಹನ, ಮತ್ತೊಬ್ಬ ಟೆಕಿ ಪಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ಕರ್ನೂಲ್ ಬಳಿ ಶುಕ್ರವಾರ ಮುಂಜಾನೆ ಸಂಭವಿಸಿದ ದುರಂತದಲ್ಲಿ ಕಾವೇರಿ ಟ್ರಾವೆಲ್‌ಗೆ ಸೇರಿದ ಬಸ್ ಸುಟ್ಟು ಕರಕಲಾಗಿದ್ದು, ಉದ್ಯೋಗ ಅರಸಿ ನಗರಕ್ಕೆ ಬಂದು ನೆಲೆಸಿದ್ದ ಎಂಟು ಮಂದಿ ಸಜೀವದಹನವಾಗಿದ್ದಾರೆ.

ಅವಘಡದಲ್ಲಿ ಒಂದೇ ಕುಟುಂಬದ ನಾಲ್ವರು ಹಾಗೂ ನಾಲ್ವರು ಸಾಫ್ಟ್‌ವೇರ್ ಎಂಜಿನಿಯರ್‌ಗಳು ಮೃತಪಟ್ಟಿದ್ದಾರೆ.

ಟೆಕಿಯೊಬ್ಬರು ಬಸ್‌ನಿಂದ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ. ಎಲ್ಲರೂ ಆಂಧ್ರಪ್ರದೇಶದವರಾಗಿದ್ದು, ನಗರದ ಬೇರೆ ಬೇರೆ ಬಡಾವಣೆಗಳಲ್ಲಿ ನೆಲಸಿದ್ದರು ಎಂದು ತಿಳಿದುಬಂದಿದೆ.

ಬೆಂಗಳೂರಿಗೆ ಬಸ್‌ನಲ್ಲಿ ಬರುತ್ತಿದ್ದವರೆಲ್ಲರೂ ದೀಪಾವಳಿ ಹಬ್ಬಕ್ಕೆಂದು ತಮ್ಮ ಊರಿಗೆ ತೆರಳಿದ್ದರು. ಹಬ್ಬ ಮುಗಿಸಿಕೊಂಡು ಸಂತೋಷದಿಂದಲೇ ಗುರುವಾರ ರಾತ್ರಿ ಬಸ್ ಹತ್ತಿದ್ದರು. ಕುಟುಂಬಸ್ಥರೂ ನಗುಮೊಗದಿಂದಲೇ ಅವರನ್ನು ಬೀಳ್ಕೊಟ್ಟಿದ್ದರು. ಆದರೆ, ಮಾರ್ಗಮಧ್ಯೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಸುಟ್ಟು ಕರಕಲಾಗಿದ್ದಾರೆ.


ಅಗ್ನಿ ಅನಾಹುತದಲ್ಲಿ ಸಜೀವ ದಹನವಾದ ಗೊಳ್ಳ ರಮೇಶ್ ಕುಟುಂಬ

'ನಗರದಲ್ಲೇ ಉದ್ಯೋಗ ಮಾಡಿಕೊಂಡು ನೆಲಸಿದ್ದ ಎಂಟು ಮಂದಿ ಮೃತಪಟ್ಟಿರುವ ಮಾಹಿತಿ ಸಿಕ್ಕಿದೆ. ಸಾರಿಗೆ ಇಲಾಖೆ ಅಧಿಕಾರಿಗಳ ತಂಡವು ಕರ್ನೂಲ್‌ಗೆ ತೆರಳಿದೆ. ನಗರದಲ್ಲಿ ನೆಲಸಿದ್ದವರು ಇನ್ನೂ ಯಾರಾದರೂ ತೊಂದರೆಗೆ ಸಿಲುಕಿದ್ದಾರೆಯೇ ಎಂಬುದರ ಕುರಿತು ತಂಡವು ಪರಿಶೀಲನೆ ನಡೆಸುತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಟೆಕಿ ಅನುಷಾ

ವೇಣುಗೊಂಡ

ಆಂಧ್ರಪ್ರದೇಶದ ನೆಲ್ಲೂರಿನ ಗೊಳ್ಳ ರಮೇಶ್ (38) ಅವರ ಕುಟುಂಬವು ನಗರದ ಕಮ್ಮನಹಳ್ಳಿಯಲ್ಲಿ ನೆಲಸಿತ್ತು. ಪತ್ನಿ ಅನುಷಾ (35), ಮಕ್ಕಳಾದ ಶಶಾಂಕ್ (12) ಹಾಗೂ ಮಾನ್ವಿತಾ (10) ಜತೆಗೆ ಹುಟ್ಟೂರಿಗೆ ತೆರಳಿದ್ದರು. ಈ ಕುಟುಂಬವು ದುರಂತಕ್ಕೀಡಾದ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಪುಟ್ಟ ಮಕ್ಕಳು, ದಂಪತಿ ನಿದ್ದೆಯಲ್ಲಿ ಇದ್ದರು. ಹೊರಕ್ಕೆ ಬರಲು ಸಾಧ್ಯವಾಗದೇ ಇಡೀ ಕುಟುಂಬವೇ ಅಗ್ನಿಯಲ್ಲಿ ಬೆಂದು ಹೋಗಿದೆ.

ಇದೇ ಬಸ್‌ನಲ್ಲಿದ್ದ ಸಾಫ್ಟ್‌ವೇರ್ ಎಂಜಿನಿಯರ್‌ಗಳಾದ ಮೇಘನಾಥ್(24), ಅನುಷಾ ರೆಡ್ಡಿ(26), ಚಂದನಾ ಹಾಗೂ ಜಿ.ಧಾತ್ರಿ ಅವರೂ ದುರಂತ ಅಂತ್ಯ ಕಂಡಿದ್ದಾರೆ.

ಅಗ್ನಿ ಅವಘಡದಿಂದಾಗಿ ಸುಟ್ಟು ಕರಕಲಾಗಿರುವ ಬಸ್ —ಪಿಟಿಐ ಚಿತ್ರ

ಯಾದಾದ್ರಿಯ ನಿವಾಸಿ ಅನುಷಾ ರೆಡ್ಡಿ ಅವರು ಹೈದರಾಬಾದ್‌ನಲ್ಲಿ ಬಸ್ ಹತ್ತಿ ಬೆಂಗಳೂರಿಗೆ ಮರಳುತ್ತಿದ್ದರು. ಆದರೆ, ಈ ಬಸ್ ಬೆಂಕಿಗೆ ಆಹುತಿಯಾದ ಪರಿಣಾಮ ಅನುಷಾ ಕೂಡ ಅಸುನೀಗಿದ್ದಾರೆ. ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಭವಿಷ್ಯ ರೂಪಿಸಿಕೊಳ್ಳುವ ಕನಸು ಕಂಡಿದ್ದ ಅನುಷಾ ಅವರು ಅವಘಡದಲ್ಲಿ ಬೆಂದು ಹೋಗಿದ್ದಾರೆ. ಟೆಕಿ ವೇಣುಗೊಂಡ ಎಂಬುವವರು ತುರ್ತು ನಿರ್ಗಮನ ದ್ವಾರದ ಮೂಲಕ ಹೊರಬಂದು ಜೀವ ಉಳಿಸಿಕೊಂಡಿದ್ದಾರೆ.

'ಕಣ್ಣೆದುರೇ ಬಸ್ ಹೊತ್ತಿ ಉರಿಯುತ್ತಿದ್ದರೂ ಇತರ ಪ್ರಯಾಣಿಕರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ. ಎಲ್–13 ಸಂಖ್ಯೆಯ ಸೀಟ್‌ನಲ್ಲಿದ್ದೆ. ತುರ್ತುನಿರ್ಗಮನ ದ್ವಾರ ತೆರೆದುಕೊಳ್ಳಲಿಲ್ಲ. ಬಳಿಕ, ಅದರ ಗಾಜು ಒಡೆದು 15 ಮಂದಿ ಹೊರಕ್ಕೆ ಬಂದೆವು. ಉಳಿದವರಿಗೆ ಹೊರಗೆ ಬರಲು ಸಾಧ್ಯವಾಗಲಿಲ್ಲ' ಎಂದು ವೇಣುಗೊಂಡ ತಿಳಿಸಿದ್ದಾರೆ.

'ಅಗ್ನಿ ಅನಾಹುತಕ್ಕೀಡಾದ ಬಸ್, ದೇಶದಾದ್ಯಂತ ಸಂಚರಿಸುವ ಪರವಾನಗಿ ಹೊಂದಿತ್ತು. ಬೆಂಗಳೂರು ಸೇರಿ ಹೊರರಾಜ್ಯದ ಬೇರೆ ನಗರಕ್ಕೂ ಈ ಬಸ್ ತೆರಳುತ್ತಿತ್ತು ಎಂಬ ಮಾಹಿತಿ ಸಿಕ್ಕಿದೆ. ದೀಪಾವಳಿ ಹಬ್ಬದ ಕಾರಣಕ್ಕೆ ಈ ಬಸ್ ಬೆಂಗಳೂರಿಗೆ ಬರುತ್ತಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದುರಂತದಲ್ಲಿ ತಮ್ಮವರನ್ನು ಕಳೆದುಕೊಂಡು ರೋದಿಸುತ್ತಿರುವ ಕುಟುಂಬಸ್ಥರು

ಕ್ಷಣಾರ್ಧದಲ್ಲಿ ಆವರಿಸಿದ ಬೆಂಕಿ.. ಹಲವರು ಚಿರನಿದ್ರೆಗೆ...

ಕರ್ನೂಲು (ಆಂಧ್ರಪ್ರದೇಶ) (ಪಿಟಿಐ): ಪ್ರಯಾಣಿಕರೆಲ್ಲ ಗಾಢನಿದ್ರೆಯಲ್ಲಿದ್ದಾಗ ಬೆಂಕಿ ಅವಘಡ ಸಂಭವಿಸಿದೆ. ಬೆಂಕಿ ಕೆನ್ನಾಲಿಗೆಯ ಬಿಸಿ ತಾಗಿ, ಏನು ನಡೆಯುತ್ತಿದೆ ಎಂದು ಅರಿಯುವಷ್ಟರಲ್ಲಿಯೇ 19 ಜನರು ಸಜೀವ ದಹನವಾಗಿ, ಚಿರನಿದ್ರೆಗೆ ಜಾರಿದ್ದಾರೆ...

ಇದು, ಶುಕ್ರವಾರ ನಸುಕಿನಲ್ಲಿ ಜಿಲ್ಲೆಯ ದಿನ್ನೆಟೇಕೂರು ಗ್ರಾಮದ ಬಳಿ, ಹೈದರಾಬಾದ್‌ನಿಂದ ಬೆಂಗಳೂರಿಗೆ ಹೊರಟಿದ್ದ ಖಾಸಗಿ ಬಸ್‌ನಲ್ಲಿದ್ದವರ ದಾರುಣ ಅಂತ್ಯ ಕಂಡ ಬಗೆ. ಬೆಂಕಿಯ ತೀವ್ರತೆಗೆ ಸಂಪೂರ್ಣವಾಗಿ ಸುಟ್ಟುಹೋಗಿರುವ ಬಸ್, ಲೋಹದ ಅಸ್ಥಿಪಂಜರದಂತೆ ಕಾಣುತ್ತಿದೆ.

'ನಮ್ಮಲ್ಲಿ ಕೆಲವರು ತಕ್ಷಣವೇ ಎಚ್ಚರಗೊಂಡೆವು. ಬೆಂಕಿ ಆವರಿಸಿಕೊಂಡಿದ್ದ ಬಸ್‌ನಿಂದ ಪಾರಾಗಲು ಹರಸಾಹಸಪಟ್ಟೆವು. ತುರ್ತು ನಿರ್ಗಮನದ ಗಾಜನ್ನು ಒಡೆದು ಹೊರಬಂದು ಜೀವ ಉಳಿಸಿಕೊಂಡೆವು' ಎಂದು ಈ ಅವಘಡದಲ್ಲಿ ಬದುಕುಳಿದವರು ಆ ಭೀಕರ ಕ್ಷಣಗಳನ್ನು ಮೆಲುಕುಹಾಕಿದರು.

ಜೀವ ಉಳಿಸಿಕೊಳ್ಳುವ ಈ ಪ್ರಯತ್ನದಲ್ಲಿ ಕೆಲವರಿಗೆ ಗಾಯಗಳೂ ಆಗಿವೆ. ಕೆಲವರು ಕಾಲುಗಳನ್ನು ಮುರಿದುಕೊಂಡಿದ್ದಾರೆ.

'ನನಗೆ ಎಚ್ಚರವಾದಾಗ ಇಡೀ ಬಸ್ ಹೊತ್ತಿ ಉರಿಯುತ್ತಿತ್ತು. ಪ್ರಯಾಣಿಕರೊಬ್ಬರು ಅದಾಗಲೇ ಹಿಂದಿನ ಬಾಗಿಲನ್ನು ಮುರಿದಿದ್ದರು. ನಾವು ಕೆಲವರು ಆ ಬಾಗಿಲು ಮೂಲಕವೇ ಹೊರಜಿಗಿದು ಪ್ರಾಣ ಉಳಿಸಿಕೊಂಡೆವು. ನನ್ನ ಹಣೆಗೆ ಗಾಯಗಳಾಗಿವೆ' ಎಂದು ನೆಲ್ಲೂರಿನ ಎಸ್.ಹಾರಿಕಾ ಹೇಳಿದರು.

ವೃತ್ತಿಯಿಂದ ಐ.ಟಿ ಉದ್ಯೋಗಿಯಾಗಿರುವ ಹಾರಿಕಾ ಈಗ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.

'ನಾನು ಚೆನ್ನೈನಲ್ಲಿರುವ ಐ.ಟಿ ಕಂಪನಿಯಲ್ಲಿ ನೌಕರಿ ಮಾಡುತ್ತಿದ್ದು, ವೈಯಕ್ತಿಕ ಕಾರ್ಯದ ನಿಮಿತ್ತ ಹೈದರಾಬಾದ್‌ನಿಂದ ಬೆಂಗಳೂರಿಗೆ ಹೊರಟಿದ್ದೆ' ಎಂದರು.

'ಐ.ಟಿ ಕಂಪನಿಯೊಂದರ ಸಂದರ್ಶನ ಶನಿವಾರ ಇತ್ತು. ಹೀಗಾಗಿ ಬೆಂಗಳೂರಿಗೆ ಹೊರಟಿದ್ದೆ. ತಡರಾತ್ರಿ ಬೆಂಕಿ ಕಾಣಿಸಿಕೊಂಡಿತು. 15 ಅಡಿ ಎತ್ತರದಿಂದ ಹೊರಗೆ ಜಿಗಿದು ಪ್ರಾಣ ಉಳಿಸಿಕೊಂಡೆ. ನನ್ನ ಕಾಲುಗಳು ಮುರಿದಿವೆ. ಆದರೆ, ಶೀಘ್ರವೇ ಗುಣಮುಖನಾಗುವೆ ಎಂಬುದಾಗಿ ವೈದ್ಯರು ಹೇಳಿದ್ದಾರೆ' ಎಂದು ಹೈದರಾಬಾದ್ ನಿವಾಸಿ ಸೂರ್ಯ ಅವರು ಹೇಳಿದರು.

'ನನ್ನ ಸಹಪ್ರಯಾಣಿಕ ನವೀನ್ ಕೂಡ ಐ.ಟಿ ಉದ್ಯೋಗಿ. ಆತ ಸಹ ಬಸ್‌ನಿಂದ ಜಿಗಿದು, ಪಾರಾಗಿದ್ದಾನೆ. ನನ್ನ ಪಕ್ಕದ ಹಾಸಿಗೆಯಲ್ಲಿ ಆತನಿಗೂ ಚಿಕಿತ್ಸೆ ನೀಡಲಾಗುತ್ತಿದೆ. ನಮ್ಮನ್ನು ಊರಿಗೆ ಕರೆದೊಯ್ಯಲು ಸ್ಥಳೀಯ ಆಡಳಿತ ವ್ಯವಸ್ಥೆ ಮಾಡಿದೆ' ಎಂದೂ ಅವರು ವಿವರಿಸಿದರು.

ಕೆಲಸದ ಸ್ಥಳದತ್ತ ಹೊರಟಿದ್ದವರು ಹಾದಿ ಹೆಣವಾದರು...

ಕರ್ನೂಲು: ಜಿಲ್ಲೆಯಲ್ಲಿ ಖಾಸಗಿ ಸಂಸ್ಥೆಯ ಬಸ್‌ಗೆ ಬೆಂಕಿ ಹೊತ್ತಿಕೊಂಡು ಸಂಭವಿಸಿದ ಅವಘಡದಲ್ಲಿ ಮೃತಪಟ್ಟ ವ್ಯಕ್ತಿಯನ್ನು ಬಬ್ಬೂರ ಶಿವಶಂಕರ(21) ಎಂದು ಗುರುತಿಸಲಾಗಿದೆ.

ಜಿಲ್ಲೆಯ ಬಿ.ತಾಂಡ್ರಪಾಡು ಗ್ರಾಮದ ಶಿವಶಂಕರ ಅವರು ಅಮೃತಶಿಲೆ ಕತ್ತರಿಸುವುದು, ಕಟ್ಟಡಗಳಲ್ಲಿ ಅವುಗಳನ್ನು ಜೋಡಿಸುವ ಕೆಲಸ ಮಾಡುತ್ತಿದ್ದರು. 'ಸಮೀಪದ ಧೋಣಿ ಪಟ್ಟಣದಲ್ಲಿ ಕೆಲಸಕ್ಕೆ ಹಾಜರಾಗುವುದಕ್ಕೆ ಶಿವಶಂಕರ ಹೊರಟಿದ್ದ. ಬೆಳಿಗ್ಗೆ 7.30ಕ್ಕೆ ಕೆಲಸದ ಸ್ಥಳದಲ್ಲಿ ಹಾಜರಿರಬೇಕಿತ್ತು. ಹೀಗಾಗಿ ರಾತ್ರಿಯೇ ಮನೆಯಿಂದ ಹೊರಟಿದ್ದ. ಕೆಲಸಕ್ಕೂ ಗೆಳೆಯನೊಂದಿಗೆ ಕಳೆದಿದ್ದ ಶಿವಶಂಕರ, ಮಳೆಯನ್ನೂ ಲೆಕ್ಕಿಸದೇ ಧೋಣಿಯತ್ತ ಪ್ರಯಾಣ ಬೆಳೆಸಿದ್ದ' ಎಂದು ಕುಟುಂಬದ ಸದಸ್ಯರು ಹೇಳಿದ್ದಾರೆ.

'ಅಮೃತಶಿಲೆ ಕತ್ತರಿಸುವುದು ಹಾಗೂ ಕಟ್ಟಡ ಕಾರ್ಮಿಕನಾಗಿ ಕೆಲಸ ಮಾಡುವುದರೊಂದಿಗೆ ನನ್ನ ಶಿವಶಂಕರ ಬೈಕ್ ಮೆಕಾನಿಕ್ ಆಗಿದ್ದ. ಜೊತೆಗೆ, ಉತ್ತಮ ಬೈಕ್ ಸವಾರ ಕೂಡ ಆಗಿದ್ದ. ಕುಟುಂಬ ನಿರ್ವಹಣೆಗೆ ಆದಾಯ ಸಾಲದ ಕಾರಣ, ಆತ ಮಾರ್ಬಲ್ ಕತ್ತರಿಸುವುದರೊಂದಿಗೆ ಬೇರೆ ಕೆಲಸಕ್ಕೆ ಸೇರಿಕೊಂಡಿದ್ದ' ಎಂದು ಮೃತ ಶಿವಶಂಕರ ಅವರ ಅಣ್ಣ ಶ್ರೀಹರಿ ಹೇಳಿದರು.

ನಗರದ ಸರ್ಕಾರಿ ಆಸ್ಪತ್ರೆಯ ಶವಾಗಾರದ ಬಳಿ ಸುದ್ದಿಗಾರರ ಜೊತೆ ಮಾತನಾಡಿದ ಶ್ರೀಹರಿ, 'ಬಸ್ ಅವಘಡಕ್ಕೆ ಸಂಬಂಧಿಸಿ ವಾಟ್ಸ್‌ಆ್ಯಪ್‌ನಲ್ಲಿ ಹಂಚಿಕೊಳ್ಳಲಾಗಿದ್ದ ಚಿತ್ರವನ್ನು ಬೆಳಿಗ್ಗೆ 6.30ರ ವೇಳೆಗೆ ನೆರೆಮನೆಯವರೊಬ್ಬರು ತೋರಿಸಿದಾಗ, ಶಿವಶಂಕರ ಸಾವಿನ ಬಗ್ಗೆ ತಿಳಿಯಿತು. ಮೊದಲು ನಾವು ಈ ಸುದ್ದಿಯನ್ನು ನಂಬಲಿಲ್ಲ' ಎಂದು ಕಣ್ಣೀರಿಟ್ಟರು.

'ಕೆಲ ವರ್ಷಗಳ ಹಿಂದೆ ತಂದೆ ತೀರಿಕೊಂಡ ಬಳಿಕ, ತಾಯಿಯೊಂದಿಗೆ ನಾವಿಬ್ಬರು ಸಹೋದರರು ವಾಸಿಸುತ್ತಿದ್ದೆವು. ಈಗ ನಾನು ಮತ್ತು ನನ್ನ ತಾಯಿ ಮಾತ್ರ ಉಳಿದೆವು' ಎಂದು ಗದ್ಗದಿತರಾದರು.

ಹೊತ್ತಿ ಉರಿದ ಬಸ್, 20 ಸಾವು

ಒಂದನೇ ಪುಟದಿಂದ...

'ಅದೇ ಹೆದ್ದಾರಿಯಲ್ಲಿ ಸಾಗುತ್ತಿದ್ದ ವ್ಯಕ್ತಿಯೊಬ್ಬರು, ಬಸ್‌ಗೆ ಬೆಂಕಿ ಹೊತ್ತಿಕೊಂಡಿದ್ದನ್ನು ನೋಡಿ, ಚಾಲಕನ ಗಮನಕ್ಕೆ ತಂದಿದ್ದಾರೆ. ಅಷ್ಟರೊಳಗೆ ಬೆಂಕಿಯು ಇಡೀ ಬಸ್‌ಗೆ ವ್ಯಾಪಿಸಿತ್ತು' ಎಂದು ವಿವರಿಸಿದ್ದಾರೆ.

'ಬಸ್‌ನಲ್ಲಿದ್ದ ಅಗ್ನಿಶಾಮಕ ಸಾಧನ ಬಳಸಿ, ಬೆಂಕಿ ನಂದಿಸಲು ಚಾಲಕ ಪ್ರಯತ್ನಿಸಿದ್ದಾನೆ. ಬೆಂಕಿಯ ತೀವ್ರತೆಯನ್ನು ಗಮನಿಸಿದ ಬಳಿಕ ಆತ, ಸ್ಥಳದಿಂದ ಕಾಲ್ಕಿತ್ತಿದ್ದಾನೆ' ಎಂದು ಅಧಿಕಾರಿ ಹೇಳಿದ್ದಾರೆ.

44 ಜನರು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಚಾಲಕರು ಸೇರಿ 27 ಮಂದಿ ಪಾರಾಗುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಗೃಹ ಸಚಿವೆ ವಿ.ಅನಿತಾ ತಿಳಿಸಿದ್ದಾರೆ.

'ಬಸ್‌ನಿಂದ 19 ಮೃತದೇಹಗಳನ್ನು ಹೊರ ತೆಗೆಯಲಾಗಿದೆ. ಬೈಕ್ ಸವಾರನ ಮೃತದೇಹವನ್ನು ಶವಾಗಾರದಲ್ಲಿ ಇಡಲಾಗಿದೆ' ಎಂದು ಕರ್ನೂಲು ವಲಯ ಡಿಐಜಿ ಕೋಯಾ ಪ್ರವೀಣ ತಿಳಿಸಿದ್ದಾರೆ.

'ಪಾರಾಗಿರುವ ಪ್ರಯಾಣಿಕರು ಸುರಕ್ಷಿತವಾಗಿದ್ದು, ಯಾವುದೇ ಅಪಾಯ ಇಲ್ಲ' ಎಂದು ಜಿಲ್ಲಾಧಿಕಾರಿ ಎ.ಸಿರಿ ಹೇಳಿದ್ದಾರೆ.

ಅಜಾಗರೂಕ ಚಾಲನೆ: ₹23,120 ದಂಡ ಪಾವತಿ ಬಾಕಿ

ಸಂಚಾರ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿ, ಅಗ್ನಿ ಅವಘಡದಲ್ಲಿ ಸುಟ್ಟು ಹೋಗಿರುವ ಈ ಬಸ್ ವಿರುದ್ಧ 16 ಚಲನ್‌ಗಳು ಬಾಕಿ ಇವೆ ಎಂದು ಗೊತ್ತಾಗಿದೆ. ಅಜಾಗರೂಕ ಮತ್ತು ಅಪಾಯಕಾರಿ ಚಾಲನೆಗೆ ಸಂಬಂಧಿಸಿದ ₹23,120 ದಂಡ ಪಾವತಿ ಬಾಕಿ ಇದೆ.

ಬಸ್‌ನ ನೋಂದಣಿ ಸಂಖ್ಯೆ ಡಿಡಿ01 ಎನ್9490 ಇದ್ದು, 2018ರ ಮೇ 2ರಂದು ದಮನ್ ಮತ್ತು ದಿಯುವಿನಲ್ಲಿ ಪ್ರವಾಸಿ ವಾಹನ ಪರವಾನಗಿ ನೀಡಲಾಗಿದೆ. ಪರವಾನಗಿ ಅವಧಿ 2030ರ ಏಪ್ರಿಲ್ 30ರ ವರೆಗೆ ಇದೆ. 2027ರ ಮಾರ್ಚ್ 31ರ ವರೆಗೆ ಉತ್ತಮ ಸ್ಥಿತಿಯಲ್ಲಿರುವ ಬಗ್ಗೆ ಪ್ರಮಾಣಪತ್ರ ಹಾಗೂ 2026ರ ಏಪ್ರಿಲ್ 20ರ ವರೆಗೆ ವಿಮೆ ಹೊಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪರಿಹಾರ: 'ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಲ್ಲಿ ಬಸ್‌ಗೆ ಬೆಂಕಿ ಹೊತ್ತಿ ಸಂಭವಿಸಿದ ಅವಘಡದಲ್ಲಿ ಮೃತಪಟ್ಟರ ಕುಟುಂಬಗಳಿಗೆ ತಲಾ ₹2 ಲಕ್ಷ ಹಾಗೂ ಗಾಯಾಳುಗಳಿಗೆ ತಲಾ ₹50 ಸಾವಿರ ಪರಿಹಾರ ನೀಡಲಾಗುವುದು' ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.

ತೆಲಂಗಾಣ ಸರ್ಕಾರ ಕೂಡ ಪರಿಹಾರ ಘೋಷಿಸಿದೆ. ಮೃತಪಟ್ಟವರ ಕುಟುಂಬಗಳಿಗೆ ತಲಾ ₹5 ಲಕ್ಷ, ಗಾಯಾಳುಗಳಿಗೆ ತಲಾ ₹2 ಲಕ್ಷ ಪರಿಹಾರ ನೀಡಲಾಗುವುದು ಎಂದು ಸಾರಿಗೆ ಸಚಿವ ಪೊನ್ನಮ್ ಪ್ರಭಾಕರ ತಿಳಿಸಿದ್ದಾರೆ.

ಸಹಾಯವಾಣಿ: ಪ್ರಯಾಣಿಕರ ಸಂಬಂಧಿಕರ ನೆರವಿಗಾಗಿ ತೆಲಂಗಾಣ ಸರ್ಕಾರ ಸಹಾಯವಾಣಿ ಸ್ಥಾಪಿಸಿದೆ. ಎಂ. ಶ್ರೀರಾಮಚಂದ್ರ (9912919545), ಇ.ಚಿಟ್ಟಿಬಾಬು (9440854433) ಅವರನ್ನು ಸಂಪರ್ಕಿಸಬಹುದು.

> ಅವಘಡಕ್ಕೆ ಕಾರಣವಾದ ಅಂಶಗಳ ಪತ್ತೆಗಾಗಿ ತನಿಖೆ ಕೈಗೊಳ್ಳಲಾಗಿದೆ. ಒಬ್ಬ ಚಾಲಕ ತಲೆಮರೆಸಿಕೊಂಡಿದ್ದಾರೆ
> **ವಿಕ್ರಾಂತ ಪಾಟೀಲ,** ಕರ್ನೂಲು ಎಸ್‌ಪಿ

'ಮಹಾ'ನಲ್ಲೂ ನಡೆದಿತ್ತು ಅವಘಡ

ಮಹಾರಾಷ್ಟ್ರದ ವಿದರ್ಭ ಪ್ರದೇಶದ ಬುಲ್ಡಾನ ಜಿಲ್ಲೆ ಮೂಲಕ ಹಾದುಹೋಗುವ ಸಮೃದ್ಧಿ ಕಾರಿಡಾರ್‌ನಲ್ಲಿ ಕೂಡ ಬಸ್‌ವೊಂದು ಬೆಂಕಿ ಆಕಸ್ಮಿಕದಲ್ಲಿ ಹೊತ್ತಿ ಉರಿದಿತ್ತು. 2023ರ ಜುಲೈ 1ರಂದು ನಡೆದ ದುರ್ಘಟನೆಯಲ್ಲಿ 26 ಜನರು ಸಜೀವ ದಹನವಾಗಿದ್ದರು.

ಜೈಸಲ್ಮೇರ್‌ನಿಂದ ಜೋಧಪುರಕ್ಕೆ ಹೊರಟಿದ್ದ ಖಾಸಗಿ ಬಸ್‌ವೊಂದಕ್ಕೆ ಇದೇ ಅಕ್ಟೋಬರ್ 14ರಂದು ಬೆಂಕಿ ಹೊತ್ತಿಕೊಂಡ ಪರಿಣಾಮ 20 ಪ್ರಯಾಣಿಕರು ಸಜೀವ ದಹನವಾಗಿದ್ದರು.

ತನಿಖೆ: ಸಮಿತಿ ರಚಿಸಿದ ಆಂಧ್ರ ಸರ್ಕಾರ

ಬಸ್‌ಗೆ ಬೆಂಕಿ ಹೊತ್ತಿಕೊಂಡು 20 ಮಂದಿ ಮೃತಪಟ್ಟ ಘಟನೆ ಕುರಿತು ತನಿಖೆ ನಡೆಸಲು ಆಂಧ್ರಪ್ರದೇಶ ಸರ್ಕಾರ ಉನ್ನತಾಧಿಕಾರ ಸಮಿತಿಯೊಂದನ್ನು ಶುಕ್ರವಾರ ರಚಿಸಿದೆ. ರಸ್ತೆ ಮತ್ತು ಸಾರಿಗೆ, ಕಂದಾಯ ಇಲಾಖೆ ಅಧಿಕಾರಿಗಳನ್ನು ಸಮಿತಿ ಒಳಗೊಂಡಿದೆ. ಸಮಿತಿ ನೀಡುವ ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವೆ ವಿ.ಅನಿತಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಇ–ಆಡಳಿತ ಕೇಂದ್ರ
CEG CENTRE FOR e-GOVERNANCE e-Enabling Government
4ನೇ ಮಹಡಿ, ಅರವಿಂದ ಭವನ, ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಂಗಳೂರು–560001.
ದೂ: 080–22234115, 22230960, ಇಮೇಲ್: pdeproc@karnataka.gov.in
ಸಂಖ್ಯೆ: CEG/13011/5/2024 ದಿನಾಂಕ: 24-10-2025
ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಪ್ರಕಟಣೆ
ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 618 ವೆಚ್ಚ–12/2025 ದಿನಾಂಕ: 14/10/2025 ರನ್ವಯ ಎಲ್ಲಾ ಸಂಗ್ರಹಣಾ ಘಟಕಗಳ ಟೆಂಡರ್ ಆಹ್ವಾನ ಪ್ರಾಧಿಕಾರ ಹಾಗೂ ಟೆಂಡರ್ ಅಂಗೀಕಾರ ಪ್ರಾಧಿಕಾರಗಳು ಇ–ಸಂಗ್ರಹಣಾ ತಂತ್ರಾಂಶ 1.0 ಆವೃತ್ತಿಯಲ್ಲಿನ ಟೆಂಡರ್ / ಹರಾಜುಗಳಿಗೆ ಸಂಬಂಧಿಸಿದಂತೆ ಇಲಾಖಾ ಮಟ್ಟದಲ್ಲಿ ಬಿಡ್ಡುದಾರರಿಗೆ ಮರುಪಾವತಿಸದೇ ಬಾಕಿ ಉಳಿಸಿಕೊಂಡಿರುವ ಮುಂಗಡ ಹಣ (ಇ.ಎಂ.ಡಿ) ಮೊತ್ತವನ್ನು ಈ ಪತ್ರಿಕಾ ಪ್ರಕಟಣೆಯ ದಿನದಿಂದ **ಮೂರು ತಿಂಗಳುಗಳ ಒಳಗಾಗಿ** ಮರುಪಾವತಿಸಲು ತುರ್ತಾಗಿ ಕ್ರಮ ವಹಿಸಲು ತಿಳಿಸಿದೆ.
ಮೂರು ತಿಂಗಳ ಒಳಗೆ ಮುಂಗಡ ಹಣ (ಇ.ಎಂ.ಡಿ) ಮೊತ್ತವನ್ನು ಬಿಡ್ಡುದಾರರಿಗೆ ಮರುಪಾವತಿಸದೇ ಇದ್ದಲ್ಲಿ, ಆ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸರ್ಕಾರದ ಸಂಚಿತ ನಿಧಿಗೆ ಜಮೆ ಮಾಡಲಾಗುವುದು.
ಸಹಿ/– ಕಾರ್ಯಕ್ರಮ ನಿರ್ದೇಶಕರು
ಇ–ಸಂಗ್ರಹಣಾ ಕೋಶ
DIPR/CP/YC/3400/2025-26

ನೋಂದಣಿ ಮತ್ತು ಮುದ್ರಾಂಕ ಇಲಾಖೆ
ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಚೇರಿ, ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009
ದೂ: 080–22220436, ಇ–ಮೇಲ್: aigrcomp@karnataka.gov.in
ಸಂ.: Comp/53/2025-26 ದಿನಾಂಕ: 18.10.2025
ಟೆಂಡರ್ ಪ್ರಕಟಣೆ
ನೋಂದಣಿ ಮತ್ತು ಮುದ್ರಾಂಕ ಇಲಾಖೆಯು **Digital Signature Certificates Class-III, Encryption Certificates and Tokens**ಗಳನ್ನು ಸರಬರಾಜು ಮಾಡಲು ಏಜೆನ್ಸಿಯನ್ನು ಆಯ್ಕೆ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ಫಾರಂಗಳು ಮತ್ತು ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in**ನಲ್ಲಿ ಪಡೆಯಬಹುದು. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: **17.11.2025ರ ಸಂಜೆ 5.00 ಗಂಟೆಯವರೆಗೂ** ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಗಣಕೀಕರಣ) ಮತ್ತು ಯೋಜನಾ ನಿರ್ದೇಶಕರು, ಕಾವೇರಿ (**ಇ–ಮೇಲ್: aigrcomp@karnataka.gov.in**) ಇವರನ್ನು ಸಂಪರ್ಕಿಸಿ.
ಸಹಿ/– ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು
DIPR/CP/YC/3401/2025-26

ಭಾರತ ಚುನಾವಣಾ ಆಯೋಗ
ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ,
ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು – 560 001.
ಕರ್ನಾಟಕ ವಿಧಾನ ಪರಿಷತ್ತಿನ ಪದವೀಧರರ ಮತಕ್ಷೇತ್ರಗಳ ಮತದಾರರ ಪಟ್ಟಿ ತಯಾರಿಕೆ
ಮತದಾರರ ನೋಂದಣಿ ನಿಯಮಗಳು 1960ರ 31(4)ನೇ ನಿಯಮದ ಮೇರೆಗೆ ಸೂಚನೆ
ಮತದಾರರ ನೋಂದಣಿ ನಿಯಮಗಳು 1960ರ 31(4)ನೇ ನಿಯಮದ ಅನುಸಾರ 1) **ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರ ಮತ್ತು 2) ಕರ್ನಾಟಕ ಆಗ್ನೇಯ ಪದವೀಧರರ ಮತಕ್ಷೇತ್ರಗಳ** ಮತದಾರರ ನೋಂದಣಾಧಿಕಾರಿಗಳು ದಿನಾಂಕ : 30ನೇ ಸೆಪ್ಟೆಂಬರ್ 2025 ರಂದು ಪ್ರಕಟಿಸಲಾದ ಸೂಚನೆಯಲ್ಲಿ ಸಂಬಂಧಿಸಿದ ಪದವೀಧರರ ಮತಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹರಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ನೋಂದಣಿ ನಿಯಮಗಳು, 1960ಕ್ಕೆ ಲಗತ್ತಿಸಿರುವ ಮತ್ತು ದಿನಾಂಕ **30ನೇ ಸೆಪ್ಟೆಂಬರ್ 2025ರ 1) ಟೈಮ್ಸ್ ಆಫ್ ಇಂಡಿಯಾ (ಕರ್ನಾಟಕ ಆವೃತ್ತಿ), 2) ದಿ ಹಿಂದೂ (ಕರ್ನಾಟಕ ಆವೃತ್ತಿ), 3) ವಿಜಯ ಕರ್ನಾಟಕ (ಕರ್ನಾಟಕ ಆವೃತ್ತಿ) ಮತ್ತು 4) ಪ್ರಜಾವಾಣಿ (ಕರ್ನಾಟಕ ಆವೃತ್ತಿ)** ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುವ ಎರಡನೇ ಅನುಸೂಚಿಯಲ್ಲಿ ಪುನರುದ್ಧರಿಸಿರುವ ನಮೂನೆ 18 ರಲ್ಲಿ ಅರ್ಜಿಯನ್ನು **6ನೇ ನವೆಂಬರ್ 2025** ಅಥವಾ ಅದಕ್ಕೂ ಮೊದಲು ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳ ಕಛೇರಿಗೆ ಕಳುಹಿಸಲು ಅಥವಾ ತಲುಪಿಸಲು ಕರೆ ನೀಡಲಾಗಿತ್ತು.
ಮೇಲೆ ತಿಳಿಸಲಾದ ಎಲ್ಲಾ ವ್ಯಕ್ತಿಗಳು ತಮ್ಮ ಹೆಸರನ್ನು ಇದುವರೆವಿಗೂ ಸೇರಿಸದೇ ಇದ್ದಲ್ಲಿ ನಿಗದಿತ ನಮೂನೆ 18ರಲ್ಲಿ ದಿನಾಂಕ **6ನೇ ನವೆಂಬರ್ 2025 ರೊಳಗೆ** ಅಥವಾ ಅದಕ್ಕೂ ಮುಂಚೆ ಅರ್ಜಿಗಳನ್ನು ಸಲ್ಲಿಸಬಹುದು. ಮೇಲ್ಕಂಡ ವಿವರಗಳು ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ಇವರ ಅಧಿಕೃತ ವೆಬ್‌ಸೈಟ್ ವಿಳಾಸ : **www.ceo.karnataka.gov.in** ರಲ್ಲಿ ಸಹ ಲಭ್ಯವಿದೆ.
ವಾಸಾಸಂಇ/ವಾಪ್ರ/ಜೆಎ/3402/2025–26

ಕರ್ನಾಟಕ ಉಚ್ಚ ನ್ಯಾಯಾಲಯ,
ಬೆಂಗಳೂರು–560001
ಸಂಖ್ಯೆ: ಹೆಚ್‌ಸಿಆರ್‌ಬಿ/ಸಿಜೆಆರ್–1/2024 ದಿನಾಂಕ : 22.09.2025
ಸಿವಿಲ್ ನ್ಯಾಯಾಧೀಶರ ನೇಮಕಾತಿಯ ಸಂಕ್ಷಿಪ್ತ ಅಧಿಸೂಚನೆ
ದಿನಾಂಕ 11.10.2025 ರಂದು ನಡೆಯಲಿರುವ ಸಿವಿಲ್ ನ್ಯಾಯಾಧೀಶರ ಹುದ್ದೆಯ ಪೂರ್ವಭಾವಿ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಸೂಚನಾ ಪತ್ರ ಸಂಖ್ಯೆ: ಹೆಚ್‌ಸಿಆರ್‌ಬಿ/ಸಿಜೆಆರ್–1/2024 ದಿನಾಂಕ : 22.09.2025 ಅನ್ನು ಕರ್ನಾಟಕ ಹೈಕೋರ್ಟ್‌ನ ಅಧಿಕೃತ ವೆಬ್‌ಸೈಟ್‌ನಲ್ಲಿ **https://judiciary.karnataka.gov.in** ಪ್ರಕಟಿಸಲಾಗಿದೆ.
ಸಹಿ/–
ಮಹಾವಿಲೇಖನಾಧಿಕಾರಿ ಹಾಗೂ ಕಾರ್ಯದರ್ಶಿ,
ಸಿವಿಲ್ ನ್ಯಾಯಾಧೀಶರುಗಳ ನೇಮಕಾತಿ ಸಮಿತಿ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು,
DIPR/CP/3393/Zen/2025-26

ಭಾರತ ಚುನಾವಣಾ ಆಯೋಗ
ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ,
ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು – 560 001.
ಕರ್ನಾಟಕ ವಿಧಾನ ಪರಿಷತ್ತಿನ ಶಿಕ್ಷಕರ ಮತಕ್ಷೇತ್ರಗಳ ಮತದಾರರ ಪಟ್ಟಿ ತಯಾರಿಕೆ
ಮತದಾರರ ನೋಂದಣಿ ನಿಯಮಗಳು 1960ರ 31(4)ನೇ ನಿಯಮದ ಮೇರೆಗೆ ಸೂಚನೆ
ಮತದಾರರ ನೋಂದಣಿ ನಿಯಮಗಳು 1960ರ 31(4)ನೇ ನಿಯಮದ ಅನುಸಾರ 1) **ಬೆಂಗಳೂರು ಶಿಕ್ಷಕರ ಮತಕ್ಷೇತ್ರ ಮತ್ತು 2) ಕರ್ನಾಟಕ ಈಶಾನ್ಯ ಶಿಕ್ಷಕರ ಮತಕ್ಷೇತ್ರಗಳ** ಮತದಾರರ ನೋಂದಣಾಧಿಕಾರಿಗಳು ದಿನಾಂಕ : **30ನೇ ಸೆಪ್ಟೆಂಬರ್ 2025 ರಂದು** ಪ್ರಕಟಿಸಲಾದ ಸೂಚನೆಯಲ್ಲಿ ಸಂಬಂಧಿಸಿದ ಶಿಕ್ಷಕರ ಮತಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹರಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ನೋಂದಣಿ ನಿಯಮಗಳು, 1960ಕ್ಕೆ ಲಗತ್ತಿಸಿರುವ ಮತ್ತು ದಿನಾಂಕ **30ನೇ ಸೆಪ್ಟೆಂಬರ್ 2025ರ 1) ಟೈಮ್ಸ್ ಆಫ್ ಇಂಡಿಯಾ (ಕರ್ನಾಟಕ ಆವೃತ್ತಿ), 2) ದಿ ಹಿಂದೂ (ಕರ್ನಾಟಕ ಆವೃತ್ತಿ), 3) ವಿಜಯ ಕರ್ನಾಟಕ (ಕರ್ನಾಟಕ ಆವೃತ್ತಿ) ಮತ್ತು 4) ಪ್ರಜಾವಾಣಿ (ಕರ್ನಾಟಕ ಆವೃತ್ತಿ)** ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುವ ಎರಡನೇ ಅನುಸೂಚಿಯಲ್ಲಿ ಪುನರುದ್ಧರಿಸಿರುವ ನಮೂನೆ 19 ರಲ್ಲಿ ಅರ್ಜಿಯನ್ನು **6ನೇ ನವೆಂಬರ್ 2025** ಅಥವಾ ಅದಕ್ಕೂ ಮೊದಲು ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳ ಕಛೇರಿಗೆ ಕಳುಹಿಸಲು ಅಥವಾ ತಲುಪಿಸಲು ಕರೆ ನೀಡಲಾಗಿತ್ತು.
ಮೇಲೆ ತಿಳಿಸಲಾದ ಎಲ್ಲಾ ವ್ಯಕ್ತಿಗಳು ತಮ್ಮ ಹೆಸರನ್ನು ಇದುವರೆವಿಗೂ ಸೇರಿಸದೇ ಇದ್ದಲ್ಲಿ ನಿಗದಿತ ನಮೂನೆ 19ರಲ್ಲಿ ದಿನಾಂಕ **6ನೇ ನವೆಂಬರ್ 2025 ರೊಳಗೆ** ಅಥವಾ ಅದಕ್ಕೂ ಮುಂಚೆ ಅರ್ಜಿಗಳನ್ನು ಸಲ್ಲಿಸಬಹುದು. ಮೇಲ್ಕಂಡ ವಿವರಗಳು ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ಇವರ ಅಧಿಕೃತ ವೆಬ್‌ಸೈಟ್ ವಿಳಾಸ : **www.ceo.karnataka.gov.in** ರಲ್ಲಿ ಸಹ ಲಭ್ಯವಿದೆ.
ವಾಸಾಸಂಇ/ವಾಪ್ರ/ಜೆಎ/3403/2025–26

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.
ಸಂ:ಕಾಇಂ:ಗ್ರಾ.ಕು.ನೀ & ನೈ ವಿ /ದಾ/ಕಿ.ಇಂ–2/ಎಂ.ವಿ.ಎಸ್ ಓ&ಎಂ/ಟೆಂಡರ್
ದಿನಾಂಕ:23/10/2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
2024–25ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ವಾರ್ಷಿಕ ನಿರ್ವಹಣೆ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 06/11/2025 ರ ಸಂಜೆ5.00ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ: 08192–262126 ಅಥವಾ kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಕಾಮಗಾರಿಯ ಹೆಸರು:– Operation and Maintenance of Single village water supply scheme to Ukkadagatri villages in Harihara Taluk, Davangere District.
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–50.00
ಯಾವುದೇ ಕಾರಣವನ್ನು ನೀಡದೇ ಟೆಂಡರ್ ಕಾಮಗಾರಿಗಳನ್ನು ಮುಂದೂಡುವ, ಅಂಗೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿ ಮಾಡಿರುವವರು ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.
ವಾಸಾಇ/ಡಿವಿಜಿ/433/ ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈ. ವಿಭಾಗ, ದಾವಣಗೆರೆ.

ಕರ್ನಾಟಕ ಸರಕಾರ
ಜಿಲ್ಲಾ ಪೊಲೀಸ್ ಅಧೀಕ್ಷಕರ ಕಾರ್ಯಾಲಯ, ಕೊಪ್ಪಳ.
ಸಂ:ಜಿಪಿಎಕೆಕೆ/ಸಂಗ್ರಹ/2025–26/1281 ದಿನಾಂಕ: 17–10–2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕೊಪ್ಪಳ ಜಿಲ್ಲಾ ಪೊಲೀಸ್ ಅಧೀಕ್ಷಕರು ಇವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000ರನ್ವಯ ಮತ್ತು ಟೆಂಡರ್ ಡಾಕ್ಯೂಮೆಂಟ್ ನಿಯಮಗಳಂತೆ ಈ ಕೆಳಕಂಡ ಪೂರೈಕೆಗೆ ಹಾಗೂ ಕಾಮಗಾರಿಗೆ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ http://www.kppp.karnataka.gov.in ನಲ್ಲಿ ಅರ್ಹ ಏಜೆನ್ಸಿ / ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂ ಬೆಲೆಯನ್ನು ಮತ್ತು ಇ.ಎಂ.ಡಿ. ಮೊತ್ತವನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
ಕಾಮಗಾರಿಗಳ ವಿವರ : KSP/2025-26/IND0348 (1) Supply and Installation of Automatic Number Plate recognition cameras (ANPR) and CCTV Surveillance System for Anegundi City. ಅಂದಾಜು ಮೊತ್ತ (ರೂ. ಗಳಲ್ಲಿ) : **5263120.00** ಇ. ಎಂ. ಡಿ ಮೊತ್ತ (ರೂ.ಗಳಲ್ಲಿ) **: 105263.00 ಅರ್ಹ ಗುತ್ತಿಗೆದಾರರ ದರ್ಜೆ : ಅರ್ಹ ಏಜೆನ್ಸಿದಾರರು / ಗುತ್ತಿಗೆದಾರರು.**
ಷರತ್ತುಗಳು : (1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ:–27–10–2025 ಸಂಜೆ 5.30 ಗಂಟೆಯವರೆಗೆ** (2) ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮಾರ್ಗಸೂಚಿಗಳಂತೆ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:–29–10–2025 ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.** (3) ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮಾರ್ಗಸೂಚಿಗಳಂತೆ ಆರ್ಥಿಕ ಬಿಡ್ ತೆರೆಯುವ **ದಿನಾಂಕ:–03–11–2025 ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.** (4) ಪೂರೈಕೆಯನ್ನು ಪೂರೈಸಲು ನಿಗದಿಗೊಳಿಸಿರುವ ಕಾಲಾವಧಿ : **03 ತಿಂಗಳು** (5) ಜಿಲ್ಲಾ ಪೊಲೀಸ್ ಅಧೀಕ್ಷಕರ ಕಾರ್ಯಾಲಯ, ಕೊಪ್ಪಳ ಟೆಂಡರ್‌ನ್ನು ಅಂಗೀಕರಿಸುವ ಹಾಗೂ ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತದೆ. (6) **ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್ (http://www.kppp.karnataka.gov.in)** ಮೂಲಕ **ಪಡೆಯಬಹುದಾಗಿದೆ.**
ಸಹಿ/– ಪೊಲೀಸ್ ಅಧೀಕ್ಷಕರು. ಕೊಪ್ಪಳ ಜಿಲ್ಲೆ.
ವಾ.ಸಾ.ಇ/ಕೊಪ್ಪಳ/404/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಶಿರಾಳಕೊಪ್ಪ–577428
ಹಿರೇಕೆರೂರು ರಸ್ತೆ, ಸರ್ಕಾರಿ ಪಬ್ಲಿಕ್ ಸ್ಕೂಲ್ ಎದುರು ಭಾಗ, ಶಿರಾಳಕೊಪ್ಪ
ಶಿಕಾರಿಪುರ (ತಾ) ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ
web: www.shiralakoppa.mrc.gov.in
e-mail:ka.shirlakoppa.tmc@gmail.com
ಸಂಖ್ಯೆ:ಶಿಪು/ಜೆ.ಇ/ಉದ್ದಿಮೆ ನಿಧಿ/ಕಾಮಗಾರಿ//01/25–26 Date: 23.10.2025
"ಟೆಂಡರ್ ಪ್ರಕಟಣೆ"
(ಕರ್ನಾಟಕ ಸರ್ಕಾರದ ಸಾರ್ವಜನಿಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಶಿರಾಳಕೊಪ್ಪ ಪುರಸಭೆಯ ಉದ್ದಿಮೆ ನಿಧಿಯಡಿ ಹಾಗೂ 15ನೇ ಹಣಕಾಸು ಯೋಜನೆಯಡಿ ಈ ಕೆಳಕಂಡ ಕಾಮಗಾರಿಯ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಪ್ರಸಕ್ತ ಬ್ಲಾಕ್ ಅವಧಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಯನ್ನು ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ಸ್‌ರಂತೆ ಕರ್ನಾಟಕ ಸರ್ಕಾರದ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಇಚ್ಛಿಸುವ ಗುತ್ತಿಗೆದಾರರರು/ಏಜನ್ಸಿಯವರು ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದು ಭಾಗವಹಿಸಬಹುದಾಗಿದೆ.
ENT Fund
Sl.No. 1. Indent number: DMA/2025-26/BD/WORK_INDENT 49883 **Amount (in Lakh)** : 45.00 **Reservation:** Others
Sl.No. 2. Indent number: DMA/2025-26/BD/WORK_INDENT 49938 **Amount (in Lakh)** : 30.00 **Reservation:** Others
15th Finance Grant
Sl.No. 3. Indent number: DMA/2025-26/OW/WORK_INDENT 44603/CALL-4 **Amount (in Lakh)** : 4.00 **Reservation:** SC
*) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ:05.11.2025 ಸಮಯ: ಸಂಜೆ:5.30 ಗಂಟೆ ವರೆಗೆ. *) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 07.11.2025 ಸಮಯ: ಸಂಜೆ:5.30 ಗಂಟೆವರೆಗೆ. *)ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.11.2025 ಸಮಯ: ಬೆಳಿಗ್ಗೆ 11.00ಗಂಟೆವರೆಗೆ.*) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.11.2025 ಸಮಯ: ಬೆಳಿಗ್ಗೆ 11.00ಗಂಟೆವರೆಗೆ.
ಸಹಿ/– ಮುಖ್ಯಾಧಿಕಾರಿ ಪುರಸಭೆ, ಶಿರಾಳಕೊಪ್ಪ
ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/25–26/107/11/1134

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, 1ನೇ ಮಹಡಿ,
ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 080 22220227
E-Portal : https://kppp.karnataka.gov.in/#/portal/portal-home
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 10/2025–26
ದಿನಾಂಕ: 23–10–2025
ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ–2000ರನ್ವಯ ಕೆಡಬ್ಲ್ಯೂ–1 & ಕೆಡಬ್ಲ್ಯೂ–2 ನಿಯಮಗಳಂತೆ ಕ್ರಮ ಸಂಖ್ಯೆ 01 ರಿಂದ 15ನೇ ಕಾಮಗಾರಿಗಳಿಗೆ ಬೆಂಗಳೂರಿನ ವಸತಿಗೃಹಗಳಿಗೆ ಸಂಬಂಧಿಸಿದ ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್‌ಟಲ್ ಮೂಲಕ (https://kppp.karnataka.gov.in/) ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ.
1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 23.10.2025 ರಿಂದ 01.11.2025 ಸಂಜೆ 4.30 ಗಂಟೆಯವರೆಗೆ.
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 01.11.2025 ಸಂಜೆ 4.30 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ : 03.11.2025 ರಂದು ಸಂಜೆ 4.30 ಕ್ಕೆ ತೆರೆಯಲಾಗುವುದು.
ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
DIPR/CP/3415/Zen/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
No: EE/ UTP /RNR/Rajakaluve/SD-4/ PB-4/2025-26/ 1710
Date: 23-10-2025.
(ಕೆ.ಪಿ.ಪಿ ಪೋರ್ಟಲ್ ಮುಖಾಂತರ) ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ
ದ್ವಿ – ಲಕೋಟೆ ಪದ್ಧತಿ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ರಾಜಕಾಲುವೆ ಮುಂದುವರೆದ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 4701 ಯು.ಟಿ.ಪಿ. ಎಂ.&ಎಂ.ಐ. ರಡಿ ಕಾಮಗಾರಿಯ ಟೆಂಡರ್‌ನ್ನು ಉಲ್ಲೇಖಿತ ಪತ್ರ (1) ರನ್ವಯ ಆಹ್ವಾನಿಸಲಾಗಿದೆ.
ಸದರಿ ಕಾಮಗಾರಿಯ ಟೆಂಡರ್ ಮೊತ್ತ ರೂ. 499.66 ಲಕ್ಷಗಳು (GST ಸೇರಿ) ಇರುತ್ತದೆ ಮತ್ತು ಇ.ಎಂ.ಡಿ ಮೊತ್ತವು ರೂ:6.35 ಲಕ್ಷಗಳ ವರೆಗೆ ಇರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) https://kppp.karnataka.gov.in ನಲ್ಲಿ ನೋಡಿಕೊಂಡು ತುಂಬತಕ್ಕದ್ದು. (1) ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ:27–10–2025 ರಿಂದ 06–11–2025 ರ ಸಂಜೆ 5.00 ರ ವರೆಗೆ (2) ಪ್ರೀ –ಬಿಡ್ ಮೀಟಿಂಗ್ ದಿನಾಂಕ:03–11–2025 ಮುಂಜಾನೆ 11.30 (3) ಟೆಂಡ್‌ರ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 05–11–2025 ಸಂಜೆ 4.00 ರ ವರೆಗೆ (4) ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 06–11–2025 ರ ಸಂಜೆ 5.00 ರ ವರೆಗೆ (5) ದಿನಾಂಕ 07–11–2025 ರಂದು ಸಂಜೆ 5.30 ಗಂಟೆಗೆ ತಾಂತ್ರಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು.
ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ/ ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನುಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ,
ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.
1138

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಹೃದಯವಂತಿಕೆ ಇರುವವರನ್ನು ಸುಲಭವಾಗಿ ಹೆದರಿಸುವುದು ಸಾಧ್ಯವಿಲ್ಲ.

–ಸಾಕ್ರಟಿಸ್

ಸಂಪಾದಕೀಯ

‘ಮಾಹಿತಿ ಹಕ್ಕು ಕಾಯ್ದೆ’ ದುರ್ಬಲ ಪ್ರಜಾಪ್ರಭುತ್ವ ಬಲವರ್ಧನೆಗೆ ಪೆಟ್ಟು

ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ)ಗೆ ಇಪ್ಪತ್ತು ವರ್ಷಗಳು ತುಂಬಿರುವ ಸಂದರ್ಭದಲ್ಲೇ, ಅದು ತನ್ನ ಬಹುತೇಕ ಸಾಮರ್ಥ್ಯವನ್ನು ಕಳೆದುಕೊಂಡಿದೆ ಹಾಗೂ ಅಸ್ತಿತ್ವನಾಶದ ಆತಂಕವನ್ನು ಎದುರಿಸುತ್ತಿದೆ. ನಾಗರಿಕರನ್ನು ಸಬಲೀಕರಣಗೊಳಿಸುವ ಹಾಗೂ ಆಡಳಿತವನ್ನು ಪಾರದರ್ಶಕಗೊಳಿಸುವ ನಿಟ್ಟಿನಲ್ಲಿ ದೊರೆತ ಶಾಸನಾತ್ಮಕ ಅಧಿಕಾರ ಎನ್ನುವ ಬಣ್ಣನೆಗೊಳಗಾಗಿದ್ದ ಆರ್‌ಟಿಐ, ಇದೀಗ ರಕ್ತ–ಮಾಂಸಗಳಿಲ್ಲದ ಬೆದರುಗೊಂಬೆಯಂತೆ ಕಾಣಿಸುತ್ತಿದೆ. ಸರ್ಕಾರದ ತಿದ್ದುಪಡಿಗಳು, ಕಾಯ್ದೆಯ ಅನುಷ್ಠಾನವನ್ನು ತಡೆಯುವ ಪ್ರಯತ್ನಗಳು, ಚಟುವಟಿಕೆಗಳಿಗೆ ಅಗತ್ಯವಾದ ಮೂಲ ಸೌಕರ್ಯಗಳು ಹಾಗೂ ಸಂಪನ್ಮೂಲಗಳ ನಿರಾಕರಣೆಯಿಂದ ಆರ್‌ಟಿಐ ದುರ್ಬಲಗೊಂಡಿದೆ. ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸುವ, ಆಡಳಿತದ ತತ್ತ್ವಗಳಿಗೆ ಹೊಂದಿಕೆ ಆಗುವಂತಹ ಸಾಮರ್ಥ್ಯ ಹೊಂದಿದ್ದ ಈ ಕಾಯ್ದೆ, ಪ್ರಗತಿಪರ ಹಾಗೂ ಪರಿವರ್ತನೆಯ ಆಯಾಮವನ್ನೂ ಒಳಗೊಂಡಿತ್ತು. ಇಂಥ ಮಹತ್ವದ ಕಾಯ್ದೆ ಎರಡು ದಶಕಗಳನ್ನು ಪೂರೈಸಿರುವ ಸಂದರ್ಭ ಪ್ರಜಾಪ್ರಭುತ್ವವಾದಿಗಳ ಸಂಭ್ರಮಾಚರಣೆಗೆ ಕಾರಣವಾಗಬೇಕಿತ್ತು. ಆದರೆ, ಈ ಸನ್ನಿವೇಶ ಅದರ ವೈಫಲ್ಯಗಳ ಅವಲೋಕನ ಹಾಗೂ ಅನಿಶ್ಚಿತ ಭವಿಷ್ಯ ಕುರಿತ ಚರ್ಚೆಯ ಸಂದರ್ಭವಾಗಿ ಬದಲಾಗಿದೆ.

ಅಕ್ಟೋಬರ್ 12, 2005ರಂದು ‘ಮಾಹಿತಿ ಹಕ್ಕು ಕಾಯ್ದೆ’ ಜಾರಿಗೆ ಬಂದಾಗ, ಸರ್ಕಾರವನ್ನು ಜನಸಾಮಾನ್ಯರಿಗೆ ಉತ್ತರದಾಯಿಯಾಗಿಸುವ ಅವಕಾಶ ದೊರೆಯಿತೆಂದು ಭಾವಿಸಲಾಗಿತ್ತು. ಆದರೆ, ಎರಡು ದಶಕಗಳ ಅವಧಿಯಲ್ಲಿ ಆ ನಿರೀಕ್ಷೆ ಸುಳ್ಳಾಗಿದೆ. ದಯನೀಯ ಸ್ಥಿತಿ ತಲಪಿರುವ ‘ಕೇಂದ್ರ ಮಾಹಿತಿ ಆಯೋಗ’ ಮುಖ್ಯಸ್ಥರಿಲ್ಲದೆ ಕಾರ್ಯ ನಿರ್ವಹಿಸುತ್ತಿದೆ. ಹನ್ನೊಂದು ಆಯುಕ್ತರು ಇರಬೇಕಾದ ಸ್ಥಳದಲ್ಲಿ ಕೇವಲ ಇಬ್ಬರಷ್ಟೇ ಉಳಿದುಕೊಂಡಿದ್ದಾರೆ. ದೇಶದ ವಿವಿಧ ಭಾಗಗಳಲ್ಲಿ ಬಾಕಿಯುಳಿದಿರುವ ಪ್ರಕರಣಗಳ ಸಂಖ್ಯೆ ನಾಲ್ಕು ಲಕ್ಷ ದಾಟಿದೆ. 2024ರಲ್ಲಿ ರಾಜ್ಯಮಟ್ಟದ ಆರು ಮಾಹಿತಿ ಆಯೋಗಗಳು ಕಾರ್ಯ ನಿರ್ವಹಿಸದೆ ನಿಷ್ಕ್ರಿಯವಾಗಿದ್ದವು. ಕಾನೂನಿನ ಅಡಿಯಲ್ಲಿ ಮಾಹಿತಿ ಕೋರಿದ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸುತ್ತಿರುವ ಉದಾಹರಣೆಗಳೂ ಹೆಚ್ಚಾಗುತ್ತಿವೆ. ಉತ್ತರಗಳನ್ನು ನೀಡಲು ಗೊತ್ತುಪಡಿಸಿದ ಗಡುವುಗಳನ್ನು ಉಲ್ಲಂಘಿಸಲಾಗುತ್ತಿದೆ ಹಾಗೂ ಆ ಲೋಪಗಳಿಗೆ ದಂಡನೆಯೂ ಆಗುತ್ತಿಲ್ಲ. ತಪ್ಪು ಉತ್ತರ ನೀಡಿಯೂ ನುಣುಚಿಕೊಳ್ಳುತ್ತಿರುವ ಅಧಿಕಾರಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕಾನೂನಿನಡಿಯಲ್ಲಿ ಮಾಹಿತಿ ಬಯಸುವ ನಾಗರಿಕರ ಮೇಲೆ ದಾಳಿಗಳು ನಡೆಯುತ್ತಿವೆ ಹಾಗೂ ಕೆಲವು ಮಾಹಿತಿ ಹಕ್ಕು ಕಾರ್ಯಕರ್ತರ ಕೊಲೆಗಳೂ ನಡೆದಿವೆ. ಅಧಿಕಾರಿಗಳು, ರಾಜಕಾರಣಿಗಳು ಹಾಗೂ ಸ್ವಹಿತಾಸಕ್ತಿ ಹೊಂದಿರುವ ಗುಂಪುಗಳ ದುಷ್ಟಕೂಟ, ಆರ್‌ಟಿಐ ಕಾನೂನನ್ನು ನಿಷ್ಕ್ರಿಯಗೊಳಿಸಲು ಪ್ರಯತ್ನಿಸುತ್ತಿದೆ. ಈ ದುಷ್ಟಕೂಟಕ್ಕೆ, ಸಾರ್ವಜನಿಕರಿಗೆ ಮಾಹಿತಿ ದೊರೆಯದಿರುವುದು ತನ್ನ ಹಿತಾಸಕ್ತಿಗೆ ಪೂರಕವೆಂದು ಭಾವಿಸಿರುವ ಸರ್ಕಾರಗಳ ಕುಮ್ಮಕ್ಕು ಬಲ ನೀಡುತ್ತಿದೆ.

ಸರ್ಕಾರವನ್ನು ನಾಗರಿಕರಿಗೆ ಉತ್ತರದಾಯಿಯಾಗಿಸುವ ‘ಆರ್‌ಟಿಐ’, ಎರಡು ದಶಕಗಳ ಅವಧಿಯಲ್ಲಿ ದುರ್ಬಲಗೊಂಡಿದೆ. ಅದರ ಬೆನ್ನುಮೂಳೆಯ ಶಕ್ತಿಯನ್ನು ಸರ್ಕಾರವೇ ವ್ಯವಸ್ಥಿತವಾಗಿ ಕಸಿದುಕೊಂಡಿದೆ.

ಮಾಹಿತಿ ಹಕ್ಕು ಆಯೋಗದ ಕಾರ್ಯ ಚಟುವಟಿಕೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್‌ ನೀಡಿರುವ ನಿರ್ದೇಶನಗಳು ಕೂಡ ಫಲಕಾರಿಯಾಗಿಲ್ಲ. ಅಧಿಕಾರಿಗಳ ನೇಮಕದಲ್ಲಿ ಆಗುತ್ತಿರುವ ವಿಳಂಬ ನೀತಿಯನ್ನು ಟೀಕಿಸಿರುವ ಕೋರ್ಟ್‌, ಕಾಲಕ್ಕೆ ಸರಿಯಾಗಿ ನೇಮಕಾತಿ ಪ್ರಕ್ರಿಯೆ ನಡೆಸಬೇಕೆಂದು ಹೇಳಿದ್ದರೂ, ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಮಾಹಿತಿ ಆಯುಕ್ತರ ವೇತನ ಹಾಗೂ ಸೇವಾ ಷರತ್ತುಗಳನ್ನು ನಿರ್ಣಯಿಸುವ ಅಧಿಕಾರವನ್ನು 2019ರಲ್ಲಿ ಸರ್ಕಾರ ವಹಿಸಿಕೊಂಡ ನಂತರ, ಆಯುಕ್ತರು ನೇರವಾಗಿ ಸರ್ಕಾರದ ಅಧೀನಕ್ಕೆ ಬರುವಂತಾಯಿತು. ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಅವಕಾಶವನ್ನು ಆಯೋಗವು ಕಳೆದುಕೊಂಡ ಮೇಲೆ, ಅದು ಯಾವ ಉದ್ದೇಶಕ್ಕಾಗಿ ರೂಪುಗೊಂಡಿತೋ ಆ ಕಾರ್ಯಸಾಧನೆಯಲ್ಲಿ ಯಶಸ್ವಿಯಾಗುತ್ತದೆಂದು ಹೇಗೆ ತಾನೆ ನಿರೀಕ್ಷಿಸಲು ಸಾಧ್ಯ? 2023ರ ಡಿಜಿಟಲ್ ವೈಯಕ್ತಿಕ ದತ್ತಾಂಶಗಳ ಸಂರಕ್ಷಣಾ ಕಾಯ್ದೆಯು, ಗೋಪ್ಯತೆ ಹೆಸರಿನಲ್ಲಿ ಆರ್‌ಟಿಐಗೆ ಅಂಕುಶ ಹಾಕಲಿಕ್ಕಾಗಿಯೇ ರೂಪುಗೊಂಡಂತಿದೆ. ಸರ್ಕಾರಗಳನ್ನು ಅದರ ನೀತಿ ನಿಲುವುಗಳಿಗೆ ಉತ್ತರದಾಯಿಗಳನ್ನಾಗಿಸುವ ಉದ್ದೇಶದ ಆರ್‌ಟಿಐ ಅನ್ನು ಪ್ರಜಾಪ್ರಭುತ್ವ ಬಲಗೊಳಿಸುವ ಕಾರಣಕ್ಕಾಗಿ ರೂಪಿಸಲಾಗಿತ್ತು. ಆದರೆ, ಮಹತ್ತರ ಉದ್ದೇಶದ ಕಾನೂನಿನ ಬೆನ್ನುಮೂಳೆಯನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಲಾಗಿದೆ. ನಿಧಾನವಾಗಿ ನಿಷ್ಕ್ರಿಯಗೊಳ್ಳುತ್ತಿರುವ ಮಾಹಿತಿ ಹಕ್ಕು ಕಾಯ್ದೆಯಿಂದಾಗಿ, ಪ್ರಜಾಪ್ರಭುತ್ವದ ಅಂಗಸಂಸ್ಥೆಗಳು ಮತ್ತು ಅವುಗಳ ಮೂಲಭೂತ ಚಿಂತನೆಗಳಲ್ಲಿ ಪಾರದರ್ಶಕತೆ ಇಲ್ಲವಾಗುತ್ತಿದೆ.

ಚಾಟಿ

ದಿಕ್ಕು ತಪ್ಪಿದ ಚರ್ಚೆ

ಯತೀಂದ್ರ ಅವರು ಹೇಳಿದ್ದು ಸಿದ್ದರಾಮಯ್ಯ ಅವರ ನಂತರ ಮುಂದಿನ ‘ಅಹಿಂದ ನಾಯಕತ್ವ’ದ ಬಗ್ಗೆ. ಆದರೆ, ಚರ್ಚೆ ಆಗುತ್ತಿರುವುದು ‘ಮುಂದಿನ ಮುಖ್ಯಮಂತ್ರಿ’ ಬಗ್ಗೆ!

ಎಂ. ಜವರಾಜ್, ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ದೇಶದಲ್ಲಿ ಉದ್ಯೋಗ ಸೃಷ್ಟಿ ಆಗುತ್ತಿದ್ದರೂ, ರಾಜ್ಯಕ್ಕೆ ಸಮರ್ಪಕ ತೆರಿಗೆ ಪಾಲು ನೀಡಿದರೂ, ಕಾಂಗ್ರೆಸ್ ಸುಳ್ಳು ಹೇಳುತ್ತಿದೆ. ನಿಜವಾಗಿ ಕಾಂಗ್ರೆಸ್ಸಿಗರಿಗೆ ಉದ್ಯೋಗವಿಲ್ಲ. ರಾಜಕೀಯವಾಗಿ ನಿರುದ್ಯೋಗಿಗಳಾಗಿದ್ದಾರೆ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಬುಧವಾರ, 25-10-2000

• **ಹಿರಿಯ ಕಾಂಗ್ರೆಸ್ ನಾಯಕ ಸೀತಾರಾಂ ಕೇಸರಿ ನಿಧನ**

ನವದೆಹಲಿ, ಅ. 24 (ಯುಎನ್‌ಐ)– ಕಳೆದ ಕೆಲವು ದಿನಗಳಿಂದ ತೀವ್ರವಾಗಿ ಅಸ್ವಸ್ಥಗೊಂಡು ಇಲ್ಲಿನ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಮತ್ತು ಕೇಂದ್ರದ ಮಾಜಿ ಸಚಿವ ಸೀತಾರಾಂ ಕೇಸರಿ ಇಂದು ರಾತ್ರಿ ನಿಧನರಾದರು.

ಉಸಿರಾಟದ ತೊಂದರೆಯಿಂದ ಅವರನ್ನು ತೀವ್ರ ನಿಗಾ ಘಟಕದಲ್ಲಿ ಕಳೆದ ಕೆಲವು ದಿನಗಳಿಂದ ಇರಿಸಲಾಗಿತ್ತು.

ಅವರ ಆರೋಗ್ಯದಲ್ಲಿ ಏರುಪೇರು ಆಗುತ್ತಿದ್ದು, ಇಂದು ರಾತ್ರಿ ಉಸಿರಾಟ ನಿಂತು ಕೊನೆಯುಸಿರೆಳೆದರು. ಕೇಸರಿ ಅವರಿಗೆ 81 ವರ್ಷವಾಗಿತ್ತು.

• **ಗೋವಾ: ಮೊಟ್ಟ ಮೊದಲ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ**

ಪಣಜಿ, ಅ. 24– ಮನೋಹರ್ ಪರಿಕ್ಕರ್ ನೇತೃತ್ವದಲ್ಲಿ ಗೋವಾದ ಮೊಟ್ಟ ಮೊದಲ ಬಿಜೆಪಿ ನೇತೃತ್ವದ 14 ಮಂದಿ ಸಚಿವ ಸಂಪುಟದ ಸಮ್ಮಿಶ್ರ ಸರ್ಕಾರ ಇಂದು ಅಧಿಕಾರಕ್ಕೆ ಬಂದಿತು.

ಬಿಜೆಪಿ ಶಾಸಕಾಂಗ ಪಕ್ಷದ ಮುಖಂಡ ಮನೋಹರ್ ಪರಿಕ್ಕರ್ ಅವರಿಗೆ ರಾಜ್ಯಪಾಲ ಮೊಹಮ್ಮದ್ ಫಜಲ್ ಅವರು, ಇಂದು ಸಂಜೆ ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಧಿಕಾರ ಮತ್ತು ಗೋಪ್ಯತೆಯ ಪ್ರಮಾಣ ವಚನ ಬೋಧಿಸಿದರು.

75 ವರ್ಷಗಳ ಹಿಂದೆ

ಬುಧವಾರ, 25-10-1950

• **ಸಿಂಧ್ ಹೈದ್ರಾಬಾದ್ ಜನರ ಮೇಲೆ ಗುಂಡು: 10 ಮರಣ**

ಕರಾಚಿ, ಅ. 24– ಸೋಮವಾರ ರಾತ್ರಿ ಸಿಂಧ್ ಹೈದರಾಬಾದಿನಲ್ಲಿ ಉದ್ರೇಕಗೊಂಡ ಜನರ ಮೇಲೆ ಪೊಲೀಸರು ಗುಂಡು ಹಾರಿಸಿದ್ದರಿಂದ ಹತ್ತು ಮಂದಿ ಮೃತರಾದರು. 42 ಮಂದಿಗೆ ಗಾಯಗಳಾಗಿವೆ ಎಂದು ಕರಾಚಿಗೆ ಬಂದಿರುವ ಸುದ್ದಿಯಿಂದ ಗೊತ್ತಾಗಿದೆ.

ಮುಸಲ್ಮಾನರ ಎರಡು ಪಂಗಡಗಳಲ್ಲಿ ತೊಂದರೆಯನ್ನುಂಟು ಮಾಡಲು ಪ್ರಯತ್ನಿಸುತ್ತಿದ್ದರೆಂದು ಬೆಳಗ್ಗೆ ಮೂವರ ದಸ್ತಗಿರಿಯಾಗಿ-ತ್ತೆಂದೂ, ಮೂವರನ್ನೂ ಬಿಡುಗಡೆ ಮಾಡಬೇಕೆಂದು ಹೈದರಾಬಾದಿನ (ಸಿಂಧ್) ನಗರ ಪೊಲೀಸ್ ಠಾಣೆ ಬಳಿ 20 ಸಾವಿರ ಜನರ ಗುಂಪು ಸೇರಿ ಉದ್ರೇಕಗೊಂಡಿದ್ದರಿಂದ ಗುಂಡು ಹಾರಿಸಬೇಕಾಯ್ತೆಂದು ಗೊತ್ತಾಗಿದೆ.

ಧೂಮಕೇತು: ವದಂತಿಗಳೇ ಬಾಲ

ವಿಶ್ಲೇಷಣೆ

ಬಿ.ಎಸ್. ಶೈಲಜಾ

ಜುಲೈ ತಿಂಗಳಲ್ಲಿ ಅಟ್ಲಾಸ್ ಎಂಬ ವೀಕ್ಷಣಾಲಯ (ಆಸ್ಟೆರಾಯ್ಡ್ ಟೆರೆಸ್ಟ್ರಿಯಲ್ ಇಂಪಾಕ್ಟ್ ಲಾಸ್ಟ್ ಅಲರ್ಟ್ ಸಿಸ್ಟಂ) ಪತ್ತೆ ಮಾಡಿದ ಒಂದು ಧೂಮಕೇತು ಕೆಲವೇ ದಿನಗಳಲ್ಲಿ ತನ್ನ ವೈಶಿಷ್ಟ್ಯಗಳನ್ನು ಪ್ರದರ್ಶಿಸಿತು. ವೇಗದ ಆಧಾರದ ಮೇಲೆ ಇದು ಸೌರಮಂಡಲದ ಆಚೆಯಿಂದ ಬಂದದ್ದು ಎಂಬ ಬಹುಮುಖ್ಯ ಮಾಹಿತಿ ಒದಗಿದ ಕೂಡಲೇ ವಿಜ್ಞಾನಿಗಳ ಚಿಂತನೆಯ ದಿಕ್ಕು ಬದಲಾಯಿತು. ಭೂಮಿಯಿಂದ ಸಾಕಷ್ಟು ದೂರದಲ್ಲಿರುವ ಈ ಧೂಮಕೇತು, ಅನ್ಯಲೋಕದ ಬುದ್ಧಿಜೀವಿಗಳ ಕರಾಮತ್ತು ಎಂಬಲ್ಲಿಗೂ ವಿಸ್ತರಿಸಿ, ಸುದ್ದಿ ಮಾಧ್ಯಮಗಳ ಮುಖಪುಟವನ್ನು ಕಸಿದುಕೊಂಡಿದೆ.

ಯಾವುದೇ ಧೂಮಕೇತು ಪತ್ತೆಯಾಗುವುದು ಒಂದು ಕ್ಷೀಣವಾದ ಚುಕ್ಕೆಯ ಹಾಗೆ. ಅದು ಹೊಸಕಾಯ ಎಂದು ತಿಳಿದುಕೊಳ್ಳಲು ಎಲ್ಲ ಸರ್ವೇಕ್ಷಕ ದೂರದರ್ಶಕಗಳೂ ಅದರತ್ತ ತಿರುಗುತ್ತವೆ. ಅದರ ಪಥವನ್ನು ಲೆಕ್ಕ ಹಾಕಲು ಅವಶ್ಯವಾದ ಮಾಹಿತಿಯನ್ನು ಒದಗಿಸುತ್ತವೆ. ತದನಂತರ ಅದು ಕ್ಷುದ್ರಗ್ರಹವೇ ಅಥವಾ ಧೂಮಕೇತುವೇ ಎಂಬುದು ನಿರ್ಧಾರವಾಗಿ, ಅದಕ್ಕೊಂದು ಅಂಕಿತನಾಮ ಸಿಗುತ್ತದೆ. ಹೀಗೆ ಸಿಕ್ಕ ಸಂಖ್ಯೆ ‘3ಐ’; ಅಂದರೆ ಸೌರಮಂಡಲದ ಹೊರಗಿನಿಂದ ಬಂದಿರುವ ಧೂಮಕೇತುಗಳ ಪಟ್ಟಿಯಲ್ಲಿ ಇದು ಮೂರನೆಯದು (ಒಯುಮುಯ, ಬೋರಿಸೋವ್ –ಇವೆರಡು ಈಗಾಗಲೇ ಬಂದುಹೋಗಿರುವಂತಹವು). ‘ಐ’ ಎಂದರೆ ಇಂಟರ್ ಸ್ಟೆಲ್ಲಾರ್– ಈ ಅಕ್ಷರ ಅದು ನಮ್ಮ ಸೌರಮಂಡಲದ್ದಲ್ಲ ಎಂದು ಸೂಚಿಸುತ್ತದೆ. ‘ಅಟ್ಲಾಸ್’ ಎಂಬುದು ಅದನ್ನು ಕಂಡುಹಿಡಿದ ಸಂಸ್ಥೆಯ ಹೆಸರು.

ಹಬಲ್ ದೂರದರ್ಶಕ, ಜೇಮ್ಸ್ ವೆಬ್ ದೂರದರ್ಶಕ, ವೇರಾ ರೂಬೆನ್ ದೂರದರ್ಶಕ ಮುಂತಾಗಿ ಎಲ್ಲ ದೊಡ್ಡ ದೂರದರ್ಶಕಗಳೂ ಈ ಧೂಮಕೇತುವಿನ ಬೆಳವಣಿಗೆಯನ್ನು ವಿವರವಾಗಿ ಪರಿಶೀಲಿಸತೊಡಗಿದವು. ಆರಂಭದಲ್ಲಿ ಇದಕ್ಕೆ ಬಾಲ ಮೂಡುವ ಸೂಚನೆಯೇ ಇರದಿದ್ದ ಕಾರಣ, ಇದು ಧೂಮಕೇತು ಹೌದೋ ಅಲ್ಲವೋ ಎಂಬ ಅನುಮಾನ ಎದ್ದಿತು. ಕ್ರಮೇಣ ತಲೆ (ಕೋಮಾ ಅಂದರೆ ಧೂಮಕೇತುವಿನ ಮೂಲ ಬಂಡೆಯಿಂದ ಆವಿಯಾಗಿ ಅದರ ಸುತ್ತಲೂ ಆವರಿಸಿಕೊಳ್ಳುವ ದೂಳು ಮತ್ತು ಅನಿಲ) ಮತ್ತು ಬಾಲದ ಜೊತೆಗೆ ರೋಹಿತದಲ್ಲಿ ಕಾರ್ಬನ್ ಮಾನಾಕ್ಸೈಡ್, ಸಯನೈಡ್– ಹೀಗೆ ಇತರ ಗುಣವಿಶೇಷಗಳು ಪ್ರಕಟಗೊಂಡವು.

ಸಾಮಾನ್ಯವಾಗಿ ಧೂಮಕೇತುಗಳ ಕಕ್ಷೆ ದೀರ್ಘ ವೃತ್ತಾಕಾರ ಆಗಿರುತ್ತದೆ. ತೀರಾ ಚಪ್ಪಟೆಯಾಗಿರುವ ಕಾರಣ ಅವು ಇತರ ಗ್ರಹಗಳ ಪಥವನ್ನು ಸೂಚಿಸುವ ರಾಶಿಚಕ್ರದ ಉತ್ತರಕ್ಕೋ ದಕ್ಷಿಣಕ್ಕೋ ಹಾದು ಹೋಗುವುದು ಸಾಧ್ಯ. ಕೆಲವು (ಉದಾಹರಣೆಗೆ 1996ರ ಹಯಾಕುಟಾಕೆ) ಧ್ರುವ ನಕ್ಷತ್ರದ ಸಮೀಪವೂ ಕಾಣಬಹುದು. ಈ ಹೊಸ ಕಾಯ ದಕ್ಷಿಣದಿಂದ ಬಂದಿದೆ. ಅದರ ಕಕ್ಷೆ ದೀರ್ಘವೃತ್ತವಲ್ಲ. ಅಪರವಲಯ (ಹೈಪರ್ಬೋಲ) ಅಂದರೆ ಅದು ಪುನಃ ಹಿಂದಿರುಗಿ ಬರುವ ಸಾಧ್ಯತೆಯೇ ಇಲ್ಲ. ಇದು ಭೂಮಿಯನ್ನು ಸಮೀಪಿಸುವುದಿಲ್ಲ. ಅಕ್ಟೋಬರ್ ಮೊದಲ ವಾರದಲ್ಲಿ ಮಂಗಳ ಗ್ರಹವನ್ನು ಸಮೀಪಿಸಿದ ಸಂದರ್ಭವನ್ನು ಬಳಸಿಕೊಂಡು, ಅನೇಕ ಗಗನನೌಕೆಗಳು ಅದರ ವಿವರಗಳನ್ನು ಅಧ್ಯಯನ ಮಾಡಿದವು. ಇದೊಂದು ವಿಶಿಷ್ಟ ಕಾಯ ಎಂಬುದಂತೂ ಮನದಟ್ಟಾಯಿತು.

‘3ಐ ಅಟ್ಲಾಸ್’ನ ‘ಕೋಮಾ’ (ತಲೆ) ಇದೀಗ ವಿಸ್ತಾರವಾಗುತ್ತಾ ಬೆಳೆದಿದೆ. ಸಾಮಾನ್ಯವಾಗಿ ಬಾಲ, ಸೂರ್ಯನ ವಿರುದ್ಧ ದಿಕ್ಕಿನಲ್ಲಿ ಒತ್ತರಿಸುವ ದೂಳಿನಿಂದ ಉಂಟಾಗುತ್ತದೆ. ಆದರೆ, ಇಲ್ಲಿ ಸೂರ್ಯನತ್ತಲೇ ಚಾಚಿಕೊಂಡಿರುವುದು ವಿಚಿತ್ರ. ಹಿಂದೆ ಕೊಹೊಟೆಕ್ ಮುಂತಾದ ಧೂಮಕೇತುಗಳಿಗೆ ಹೀಗೆ ವಿಮುಖಬಾಲ (ಆಂಟಿ ಟೇಯ್ಲ್) ಕಂಡಿತ್ತು. ಭೂಮಿ–ಸೂರ್ಯ–ಧೂಮಕೇತುಗಳ ವಿಶಿಷ್ಟ ಸ್ಥಾನಗಳೇ ಇದಕ್ಕೆ ಕಾರಣ ಎಂಬ ವಿವರಣೆ ಸಿಕ್ಕಿತ್ತು.

> ಅನ್ಯಜೀವಿಗಳ ಹುಡುಕಾಟ ಇಂದು ನಿನ್ನೆಯದಲ್ಲ; ಅದಕ್ಕಾಗಿ ಎಲ್ಲ ಬಗೆಯ ಮಾಹಿತಿಗಳನ್ನು ಕೂಲಂಕಷವಾಗಿ ವಿಶ್ಲೇಷಿಸಬಲ್ಲ ಪರಿಣತಿ ಈಗ ಲಭ್ಯವಿದೆ. ಆದರೆ, ಸತ್ಯದ ಹುಡುಕಾಟದ ಬದಲು ಕಪೋಲಕಲ್ಪಿತ ಸಿದ್ಧಾಂತಗಳೇ ಹೆಚ್ಚು ಪ್ರಚಾರಕ್ಕೆ ಬರುವುದು ದುರದೃಷ್ಟಕರ. ಅಕ್ಟೋಬರ್ 29ರಂದು ಸೂರ್ಯನನ್ನು ಸಮೀಪಿಸುವ ‘3ಐ ಅಟ್ಲಾಸ್’ ಧೂಮಕೇತುವಿಗೆ ಸಂಬಂಧಿಸಿದಂತೆಯೂ ಗಾಳಿಸುದ್ದಿಗಳೇ ಹೆಚ್ಚಾಗಿವೆ.

ಇಲ್ಲಿಯೂ ಹಾಗೆಯೇ ಆಗಿರಬಹುದು ಎನ್ನಲು ಒಂದು ಅಡ್ಡಿ ಇದೆ. ಅದೆಂದರೆ, ಸೂರ್ಯನ ವಿರುದ್ಧ ದಿಕ್ಕಿಗಿಂತ ಇದು ದೊಡ್ಡದಾಗಿದ್ದುದು. ಚಿಮ್ಮುತ್ತಿರುವ ದೂಳಿನ ಪ್ರಮಾಣ ಅತಿಹೆಚ್ಚು ಇರಬೇಕು ಎಂಬುದು ಇನ್ನೊಂದು ವಾದ.

ಕಳೆದ ಒಂದು ತಿಂಗಳಲ್ಲಿ ದೊರಕಿದ ಮಾಹಿತಿಗಳಿಂದ ಅದು ಧೂಮಕೇತು ಎಂಬುದು ಖಚಿತವಾಗಿದೆ. ಆದರೂ, ವಿಚಿತ್ರವಾದ ಜಿಜ್ಞಾಸೆಗಳು ತಲೆ ಎತ್ತುತ್ತಿವೆ. ಅಮೆರಿಕದ ‘ಸ್ಪೇಸ್ ಎಕ್ಸ್’ನ ಇಲಾನ್ ಮಸ್ಕ್ ಮುಂತಾದ ಖ್ಯಾತನಾಮರು ಇದು ಯಾವುದೋ ಅನ್ಯಲೋಕದ ಬುದ್ಧಿಜೀವಿಗಳು ಕಳುಹಿಸಿರುವ ನೌಕೆ ಎಂದು ಹೇಳಿಕೆ ಕೊಟ್ಟರು. ಅದು ಭೂಮಿಯನ್ನು ಅಪ್ಪಳಿಸಲು ನಿಯೋಜಿತವಾದದ್ದು ಎಂಬ ವದಂತಿಯೂ ಹರಡಿತು. ಆದರೆ, ಅದು ಭೂಮಿಯನ್ನು ಸಮೀಪಿಸುವುದಿಲ್ಲ ಎಂದು ಖಚಿತವಾದಾಗ, ಅದಕ್ಕೆ ಅನುಗುಣವಾಗಿ ‘ಬರೀ ವೀಕ್ಷಣೆಗಾಗಿ ಬಂದ ನೌಕೆ’ ಎಂಬ ಗಾಳಿಸುದ್ದಿ ಹಬ್ಬಿತು. ಇತ್ತೀಚೆಗೆ ಹಾರ್ವರ್ಡ್ ವಿಶ್ವವಿದ್ಯಾಲಯದ ವಿಜ್ಞಾನಿಯೊಬ್ಬರು ಪ್ರಕಟಿಸಿದ ಸಂಶೋಧನಾ ಪ್ರಬಂಧವೂ ಅದನ್ನು ಎತ್ತಿ ಹಿಡಿದು ಟೀಕೆಗೆ ಒಳಗಾಯಿತು. ಅದು ಯಾವುದೇ ವಿದ್ವತ್‌ಪೂರ್ಣ ನಿಯತಕಾಲಿಕೆಯಲ್ಲಿ ಪ್ರಕಟವಾಗದಿದ್ದರೂ ಪ್ರಚಾರ ಗಿಟ್ಟಿಸಿಕೊಂಡಿತು. ಅದರಲ್ಲಿಯ ಅಪಕ್ವ ಪರಿಕಲ್ಪನೆಗಳನ್ನು ಅನೇಕರು ತಿರಸ್ಕರಿಸಿದರಾದರೂ, ನಂಬುವವರ ಸಂಖ್ಯೆಯೂ ಹೆಚ್ಚಿತು. ಅನ್ಯಗ್ರಹ ಜೀವಿಗಳು ಭೂಮಿಯ ಬದಲು ಮಂಗಳ ಗ್ರಹಕ್ಕೆ ದಾಳಿ ಇಡುತ್ತಿದ್ದಾರೆ ಎಂಬಂತಹ ವಿಚಿತ್ರ–ವಿಕೃತ ವಿಶ್ಲೇಷಣೆಗಳು ಜನಸಾಮಾನ್ಯರ ಮನಸ್ಸನ್ನು ತಲ್ಲಣಗೊಳಿಸುತ್ತಿವೆ.

ಭೂಮಿಯ ಮೇಲಿನ ದೊಡ್ಡ ದೊಡ್ಡ ದೂರದರ್ಶಕಗಳಲ್ಲದೆ ಹಲವಾರು ಗಗನ ವೀಕ್ಷಣಾಲಯಗಳು ‘3ಐ’ ಅಟ್ಲಾಸ್ ಅನ್ನು ವಿವರವಾಗಿ ಪರಿಶೀಲಿಸಿವೆ. ಸ್ಫೆರೆಕಸ್, ಸ್ವಿಫ್ಟ್, ಜೇಮ್ಸ್ ವೆಬ್ ಮತ್ತು ಹಬಲ್‌ನಂತಹ ಭೂಕಕ್ಷೆಯ ಗಗನ ವೀಕ್ಷಣಾಲಯಗಳಲ್ಲದೆ, ಮಂಗಳ ಗ್ರಹವನ್ನು ಸುತ್ತುತ್ತಿರುವ ಟ್ರೇಸ್ ಗ್ಯಾಸ್ ಆರ್ಬೈಟರ್, ಮಾರ್ಸ್ ರೆಕೊನೊಸೈನ್ಸ್ ಆರ್ಬೈಟರ್, ಮಾರ್ಸ್ ಎಕ್ಸ್‌ಪ್ರೆಸ್, ಇವೆಲ್ಲವೂ ಈ ಧೂಮಕೇತುವನ್ನು ವೀಕ್ಷಿಸಿವೆ. ಈ ಧೂಮಕೇತು ಅಕ್ಟೋಬರ್ 29ರಂದು ಸೂರ್ಯನನ್ನು ಸಮೀಪಿಸಿ ಹಿಂದಿರುಗುವಾಗ ಗುರುಗ್ರಹದ ಸಮೀಪ ಹಾದುಹೋಗುತ್ತದೆ. ಆಗ ಜೂನೋ, ಅಲ್ಲದೆ ಸೈಕೆ ಎಂಬ ಕ್ಷುದ್ರಗ್ರಹದತ್ತ ಹೊರಟಿರುವ ಗಗನನೌಕೆ ಇದರ ವೀಕ್ಷಣೆ ನಡೆಸಲಿವೆ.

ಇದುವರೆಗೆ ದೊರಕಿರುವ ಮಾಹಿತಿಗಳಿಂದ ಕೆಲವು ವಿಲಕ್ಷಣ ಚಟುವಟಿಕೆಗಳನ್ನು ಗುರುತಿಸುವುದು ಸಾಧ್ಯವಾಗಿದೆ. ಉದಾಹರಣೆಗೆ, ಅದರ ಮೂಲ ಬಂಡೆಯ ವ್ಯಾಸ 5 ಕಿ.ಮೀ ಇರಬಹುದು; 10 ಕಿ.ಮೀ.ಗಿಂತ ಹೆಚ್ಚೂ ಇರಬಹುದು ಎಂದು ಕೆಲವು ಅಳತೆಗಳು ತೋರಿಸಿವೆ. (ಹ್ಯಾಲೀ ಧೂಮಕೇತುವಿನ ಉದ್ದ ಸುಮಾರು 10 ಕಿ.ಮೀ). ಕೋಮಾದ ಗಾತ್ರ 10,000 ಕಿ.ಮೀ. ಅಥವಾ ಇನ್ನೂ ಹೆಚ್ಚು. ಅನಿಲಗಳಿಗಿಂತ ಮೈಕ್ರಾನ್ ಗಾತ್ರದ ಕಣಗಳು ಹೆಚ್ಚಿರುವಂತೆ ತೋರುತ್ತದೆ. ಅದರ ಬಣ್ಣ ನಸುಗೆಂಪು; ಹಾಗಾಗಿ ಕ್ಷುದ್ರಗ್ರಹ ಎಂದು ಭಾವಿಸಲಾಗಿತ್ತು. ಅತಿ ಕೌತುಕಮಯ ವಿಷಯವೆಂದರೆ, ಇದರಲ್ಲಿ ಕಬ್ಬಿಣ ಕಂಡುಬಂದಿಲ್ಲ; ನಿಕ್ಕಲ್ ಧಾರಾಳವಾಗಿಯೇ ಇದೆ. ಸಾಮಾನ್ಯವಾಗಿ ಈ ಎರಡೂ ಧಾತುಗಳು ಸಮ ಪ್ರಮಾಣದಲ್ಲಿ ಕಂಡುಬರುತ್ತವೆ. ಇದು ನೈಸರ್ಗಿಕ ಕಾಯ ಅಲ್ಲ ಎಂದು ವಾದಿಸುವವರು, ಕಬ್ಬಿಣದ ಈ ಕೊರತೆಯನ್ನೇ ಮುಖ್ಯ ಕಾರಣವನ್ನಾಗಿಸಿಕೊಂಡಿದ್ದಾರೆ.

‘3ಐ’ ಅಟ್ಲಾಸ್ ಧೂಮಕೇತುವಿನ ಅತಿವೇಗ ಅದೆಲ್ಲಿಂದಲೋ ಅದು ಧಾವಿಸಿ ಬರುತ್ತಿದೆ ಎಂದು ಹೇಳುತ್ತದೆಯಾದರೂ, ನಿರ್ದಿಷ್ಟವಾಗಿ ಇದೇ ನಕ್ಷತ್ರದಿಂದ ಎಂದು ಖಚಿತಪಡಿಸುವುದು ಸಾಧ್ಯವಿಲ್ಲ. ಆದರೆ, ಇದರ ರಾಸಾಯನಿಕ ಸಂಯೋಜನೆ (ಮುಖ್ಯವಾಗಿ ಕಬ್ಬಿಣದ ಕೊರತೆ) ಮೂಲ ನಕ್ಷತ್ರದ ಕುರಿತು ಸುಳಿವು ನೀಡುತ್ತದೆ. ಹಾಗೆಯೇ ಇದು ಮುಂದೆ ಎಲ್ಲಿಗೆ ಹೋಗುತ್ತದೆ ಎಂಬುದೂ ಯಕ್ಷಪ್ರಶ್ನೆಯೇ ಸರಿ.

ಅಕ್ಟೋಬರ್ 29ರಂದು ಇದು ಸೂರ್ಯನನ್ನು ಸಮೀಪಿಸುತ್ತದೆ; ಗಣಿತದ ಭಾಷೆಯಲ್ಲಿ ಹೇಳುವುದಾದರೆ, ಅದು ಪುರರವಿ (ಪೆರಿಹೀಲಿಯನ್) ಎಂಬ ಬಿಂದುವನ್ನು ದಾಟುತ್ತದೆ. ಆಗ ಅದು ಸೂರ್ಯನಿಂದ (ಸಮೀಪ ಎಂದರೂ) ಸುಮಾರು 2 ದಶಲಕ್ಷ ಕಿ.ಮೀ ದೂರದಲ್ಲಿರುತ್ತದೆ. ಆದ್ದರಿಂದ ಸೂರ್ಯನ ಪ್ರಭಾವ ದೊಡ್ಡ ಬಾಲ ಮೂಡುವಷ್ಟು ಇರಲಾರದು ಎಂಬುದು ಲೆಕ್ಕಾಚಾರ. ಅದೇನೆ ಆದರೂ, ಇದು ಖಗೋಳ ವಿಜ್ಞಾನಿಗಳ ಕೇಂದ್ರಬಿಂದು. ಜನಸಾಮಾನ್ಯರಿಗೆ ನೋಡಲೂ ಸಿಗುವುದಿಲ್ಲ.

ಸದ್ಯದಲ್ಲಿ ನಮ್ಮ ಸೌರ ಮಂಡಲದ ಎರಡು ಧೂಮಕೇತುಗಳು ದೂರದರ್ಶಕ/ ದುರ್ಬೀನುಗಳಿಗೆ ಕಾಣುವಷ್ಟು ಪ್ರಕಾಶ ಪಡೆದಿವೆ. ಸ್ವಾತಿ ನಕ್ಷತ್ರದ ಸಮೀಪ 2025 ಎ 6 ಲೆಮ್ಮಾನ್ ಎಂಬ ಧೂಮಕೇತು (1336 ವರ್ಷಗಳಿಗೊಮ್ಮೆ ಬರುವುದು), ಮಕರ ರಾಶಿಯಲ್ಲಿ 2025 ಆರ್ 2 ಸ್ವಾನ್ ಎಂಬ ಧೂಮಕೇತು (671 ವರ್ಷಗಳಿಗೊಮ್ಮೆ ಬರುವುದು) ಸಂಜೆ ಕಾಣುತ್ತವೆ. ಪ್ರಕಾಶ ಮಾಲಿನ್ಯವಿಲ್ಲದ ಸ್ಥಳಗಳಿಂದ ನೋಡಲು ಪ್ರಯತ್ನಿಸಬಹುದು. ಸುದ್ದಿ ಮಾಡುತ್ತಿರುವ ‘3ಐ’ ಅಟ್ಲಾಸ್ ಮಾತ್ರ ಬರಿಗಣ್ಣಿಗೆ ಇರಲಿ, ಸಣ್ಣ ದೂರದರ್ಶಕಕ್ಕೂ ಕಾಣುವುದಿಲ್ಲ.

ವಾಚಕರ ವಾಣಿ

ಹೆಣ್ಣುಭ್ರೂಣ ಹತ್ಯೆಗೆ ಕಡಿವಾಣ ಬೀಳಲಿ

ಹಳೇ ಮೈಸೂರು ಭಾಗದಲ್ಲಿ ಕಾನೂನು ಧಿಕ್ಕರಿಸಿ ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳು ವರದಿಯಾಗುತ್ತಿವೆ. ಈ ಅನಿಷ್ಟ ಪಿಡುಗಿನ ವಿರುದ್ಧ ಗಟ್ಟಿಧ್ವನಿಗಳು ಕೇಳಿಸುತ್ತಿಲ್ಲ. ಮತ್ತೊಂದೆಡೆ ಯುವಕರು ತಮಗೆ ಹೆಣ್ಣು ಸಿಗುತ್ತಿಲ್ಲವೆಂದು ದೇವರು, ಸರ್ಕಾರದ ಮೊರೆ ಹೋಗುವುದು ನಡೆದಿದೆ. ತಮ್ಮ ಮನೆಗಳಲ್ಲಿ ಹೆಣ್ಣುಮಕ್ಕಳು ಹುಟ್ಟಬಾರದು; ಯಾರಾದರೂ ಸಾಕಿ ಬೆಳೆಸಿದ ಹೆಣ್ಣನ್ನು ಇವರಿಗೆ ಧಾರೆ ಎರೆಯಬೇಕು ಎಂದರೆ ಹೇಗೆ? ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಹೆಣ್ಣುಕುಲಕ್ಕೆ ಮಾತ್ರವಲ್ಲ, ಮನುಕುಲಕ್ಕೂ ಅಪಾಯ ತಪ್ಪಿದ್ದಲ್ಲ.

ಮಧುಸೂದನ್ ಬಿ.ಎಸ್., ಬೆಂಗಳೂರು

ರೈಲು ಪ್ರಯಾಣಿಕರ ಬವಣೆಗೆ ಸ್ಪಂದಿಸಿ

ಕಲಬುರಗಿ ಮತ್ತು ಬೆಂಗಳೂರು ನಡುವಿನ ರೈಲು ಪ್ರಯಾಣಿಕರ ದಟ್ಟಣೆ ಹೆಚ್ಚಾಗಿರುವುದನ್ನು ಅಂಕಿಅಂಶಗಳೇ ಸಾಕ್ಷೀಕರಿಸುತ್ತವೆ. ಕಲಬುರಗಿಯಿಂದ 20 ಬೋಗಿಗಳ ಎರಡು ರೈಲು ಓಡಿಸಿದರೂ ಪ್ರಯಾಣಿಕರ ದಟ್ಟಣೆ ಕಡಿಮೆಯಾಗಿಲ್ಲ. ಆದರೆ, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಇನ್ನೂ ಈ ಭಾಗದ ಪ್ರಯಾಣಿಕರ ಮೇಲೆ ಕರುಣೆ ಬಂದಂತಿಲ್ಲ. ಕೊನೆಯ ಪಕ್ಷ ದುಬಾರಿ ದರದ ಬೇಡಿಕೆಯ ರೈಲನ್ನಾದರೂ ಓಡಿಸಿ ಪ್ರಯಾಣಿಕರ ಬವಣೆ ನೀಗಿಸಲು ರೈಲ್ವೆ ಇಲಾಖೆ ಮುಂದಾಗಲಿ.

ವೆಂಕಟೇಶ್ ಮುದಗಲ್, ಕಲಬುರಗಿ

ಜಿಎಸ್‌ಟಿ ಇಳಿಕೆಯ ಸುತ್ತಲಿನ ವಾಸ್ತವ

ಆರೋಗ್ಯ ವಿಮೆ ಸೇರಿ ವಿವಿಧ ವೈದ್ಯಕೀಯ ವೆಚ್ಚದ ಮೇಲೆ ಶೇ 18ರವರೆಗೂ ಜಿಎಸ್‌ಟಿ ಹೇರಿದ್ದ ಕೇಂದ್ರ ಸರ್ಕಾರವು, ಎಂಟು ವರ್ಷಗಳ ಕಾಲ ವೃದ್ಧರು, ಪಿಂಚಣಿದಾರರು ಒಳಗೊಂಡಂತೆ ಎಲ್ಲರನ್ನೂ ಸುಲಿಗೆ ಮಾಡಿತ್ತು. ಇದೀಗ ಜಿಎಸ್‌ಟಿ ಇಳಿಕೆಯ ತನ್ನ ನಿರ್ಧಾರವನ್ನು ದೇಶಕ್ಕೆ ತಾನು ನೀಡಿರುವ ಉಡುಗೊರೆ ಎಂದು ಬಿಂಬಿಸಿಕೊಳ್ಳುತ್ತಿದೆ. ಈಗ ನನ್ನ ವಿಮಾ ಕಂಪನಿಯು ಆರೋಗ್ಯ ವಿಮೆಯ ಕನಿಷ್ಠ ಮಿತಿಯನ್ನು ಏರಿಸಿ, ಪ್ರೀಮಿಯಂ ಮೊತ್ತವನ್ನೇ ಹೆಚ್ಚಿಸಿದೆ. ಆ ಮೂಲಕ ಜಿಎಸ್‌ಟಿ ಉಳಿಕೆಯಿಂದ ಆಗುವ ಲಾಭವನ್ನು ಸಂಪೂರ್ಣವಾಗಿ ಕಸಿದುಕೊಳ್ಳುತ್ತಿದೆ. ಈ ಪರಿಯ ವೆಚ್ಚ ಭರಿಸಲಾರದೆ ನಾನು ಈ ಬಾರಿ ಆರೋಗ್ಯ ವಿಮೆಯನ್ನೇ ಕೈಬಿಟ್ಟಿದ್ದೇನೆ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಚಿಂತೆ

ರಾಜ್ಯದ ಗೃಹಲಕ್ಷ್ಮಿಯರ
ಸಬಲೀಕರಣಕ್ಕಾಗಿ
ಸಹಕಾರ ಸಂಘ ರಚಿಸಲು
ಸರ್ಕಾರದ ಸಿದ್ಧತೆ:
ಇದು ಬಲಗೈಯಲ್ಲಿ ಕೊಟ್ಟು
ಎಡಗೈಯಲ್ಲಿ ವಾಪಾಸು
ಪಡೆಯೋ ತಂತ್ರವಾ
ಎಂಬುದೇ ‘ಲಕ್ಷ್ಮಿ’ಯರ ಚಿಂತೆ!

ಎಸ್. ಭಗವತಿ, ಗೊರೂರು

ಗ್ರಾಮೀಣ ಪ್ರದೇಶದ ಸಂಕೀರ್ಣ ಸಮಸ್ಯೆ

2031ರ ವೇಳೆಗೆ ರಾಜ್ಯದ ನಗರವಾಸಿಗಳ ಜನಸಂಖ್ಯೆ ಶೇ 47.8ರಷ್ಟಕ್ಕೆ ಮುಟ್ಟಲಿದೆಯೆಂದು ಅಂದಾಜಿಸಲಾಗಿದೆ. ಅಂದರೆ ನೂರಕ್ಕಿಂತ ಹೆಚ್ಚು ಶಾಸಕರು ನಗರ ಪ್ರದೇಶವನ್ನು ಪ್ರತಿನಿಧಿಸುತ್ತಾರೆ! ಆದರೆ, ಗ್ರಾಮೀಣ ಹಾಗೂ ನಗರ ಪ್ರದೇಶದ ಸಮಸ್ಯೆ, ಆದ್ಯತೆ ಭಿನ್ನವಾಗಿರುತ್ತವೆ. ಕುಡಿಯುವ ನೀರು, ವಿದ್ಯುತ್, ರಸ್ತೆ ಇತ್ಯಾದಿ ಮೂಲ ಸೌಕರ್ಯ ಒದಗಿಸಿ, ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯ ಆಗಿದ್ದರೆ ನಗರ ಪ್ರದೇಶದವರನ್ನು ತೃಪ್ತಿಪಡಿಸಬಹುದು. ಆದರೆ, ಗ್ರಾಮೀಣ ಸಮಸ್ಯೆಗಳು ಸಂಕೀರ್ಣ. ಮೂಲ ಸೌಕರ್ಯ ಒದಗಿಸುವುದು ಕಷ್ಟದ ಕೆಲಸ. ಹಾಗಾಗಿ, ನಗರ ಪ್ರದೇಶದ ಜನಸಂಖ್ಯೆ ಹೆಚ್ಚಾಗುವುದರಿಂದ ಮುಂದಿನ ವರ್ಷಗಳಲ್ಲಿ ರಾಜಕೀಯ ಪಕ್ಷಗಳ ಕೆಲಸ ಸುಲಭವಾಗಲಿದೆ.

ಟಿ. ಜಯರಾಂ, ಕೋಲಾರ

ಪಟಾಕಿ ಅವಘಡ: ಎಚ್ಚೆತ್ತುಕೊಳ್ಳದ ಜನ

ಸುಮಾರು ಮೂವತ್ತು ಮಕ್ಕಳು ಪಟಾಕಿ ಸಿಡಿತದಿಂದಾದ ಕಣ್ಣಿನ ಗಾಯಕ್ಕೆ ಚಿಕಿತ್ಸೆಗೆ ದಾಖಲಾಗಿರುವ ವರದಿಯಾಗಿದೆ. ದೀಪಾವಳಿ ಸಮಯದಲ್ಲಿ ಪ್ರತಿವರ್ಷ ಅವಘಡಗಳು ಸಂಭವಿಸುತ್ತಿದ್ದರೂ ಜನ ಎಚ್ಚೆತ್ತುಕೊಳ್ಳುವ ಬದಲಿಗೆ ಪಟಾಕಿ ಸಿಡಿಸದಿದ್ದರೆ ಹಬ್ಬದ ಆಚರಣೆ ಅರ್ಥಪೂರ್ಣವಾಗುವುದಿಲ್ಲ ಎಂಬ ನಂಬಿಕೆಗೆ ಒಗ್ಗಿಹೋಗಿದ್ದಾರೆ. ಅವಘಡಕ್ಕೆ ತುತ್ತಾದ ಕಂದಮ್ಮಗಳು ಜೀವನಪೂರ್ತಿ ದೃಷ್ಟಿ ದೋಷದಿಂದ ಬಳಲಿ ಪೋಷಕರಿಗೆ ಭಾರವಾಗಿ ಅನುಭವಿಸುವ ವೇದನೆಯನ್ನು ಊಹಿಸಲಾಗದು. ಜನರ ಮನಃಸ್ಥಿತಿ ಇನ್ನಾದರೂ ಬದಲಾಗಬೇಕಿದೆ.

ಶಾಂತಕುಮಾರ್, ಸರ್ಜಾಪುರ

‘ಐಪಿ’ ಕೋಟಾ ಹೆಚ್ಚಿಸುವುದು ಅಗತ್ಯ

ಪ್ರಸ್ತುತ ದೇಶದ ಇಎಸ್‌ಐಸಿ ವೈದ್ಯಕೀಯ ಕಾಲೇಜುಗಳಲ್ಲಿ ಇನ್ಶೂರ್ಡ್ ಪರ್ಸನ್ (ಐಪಿ) ಕೋಟಾ ಪ್ರಮಾಣ ಶೇ 35ರಷ್ಟಿದೆ. ಇಎಸ್‌ಐ ಯೋಜನೆಗೆ ದೇಶದಾದ್ಯಂತ ಲಕ್ಷಾಂತರ ಉದ್ಯೋಗಿಗಳು ಮತ್ತು ಅವರ ಕುಟುಂಬದ ಸದಸ್ಯರು ಒಳಗೊಂಡಿದ್ದಾರೆ. ಇಎಸ್‌ಐ ಯೋಜನೆಗೆ ಕಾರ್ಮಿಕರು ತಮ್ಮ ಮಾಸಿಕ ವೇತನದ ಒಂದು ಭಾಗ ಪಾವತಿಸುವ ಮೂಲಕ ನೇರವಾಗಿ ಕೊಡುಗೆ ನೀಡುತ್ತಾರೆ. ಆದ್ದರಿಂದ, ಅವರ ಮಕ್ಕಳಿಗೆ ವೈದ್ಯಕೀಯ ಶಿಕ್ಷಣದ ಹೆಚ್ಚಿನ ಅವಕಾಶ ಒದಗಿಸುವುದು ನ್ಯಾಯಯುತ ಹಾಗೂ ಸಾಮಾಜಿಕ ಸಮಾನತೆಯ ದೃಷ್ಟಿಯಿಂದ ಅತ್ಯಗತ್ಯ. ಪ್ರಸ್ತುತ ವೈದ್ಯಕೀಯ ಕ್ಷೇತ್ರದಲ್ಲಿ ಕಾರ್ಮಿಕ ವರ್ಗದ ಮಕ್ಕಳ ಪ್ರಾತಿನಿಧಿತ್ವ ಅತ್ಯಲ್ಪ. ಹಾಲಿ ಇರುವ ಐಪಿ ಕೋಟಾವನ್ನು ಕನಿಷ್ಠ ಶೇ 45ಕ್ಕೆ ಹೆಚ್ಚಿಸುವುದು ನ್ಯಾಯಸಮ್ಮತ. ಇದು ಕಾರ್ಮಿಕ ಕುಟುಂಬಗಳ ಶೈಕ್ಷಣಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ನಾಂದಿಯಾಗಲಿದೆ. ವೈದ್ಯಕೀಯ ಶಿಕ್ಷಣದಲ್ಲಿ ಸಮಾನ ಅವಕಾಶ ಮತ್ತು ಸಾಮಾಜಿಕ ನ್ಯಾಯದ ಆದರ್ಶವನ್ನೂ ಪಾಲಿಸಿದಂತಾಗುತ್ತದೆ.

ವಿಜಯಕುಮಾರ್ ಎಚ್.ಕೆ., ರಾಯಚೂರು

ಚುರುಮುರಿ

ಸಿದ್ಧಾಂತದ ಫಲ!

• ಚಂದ್ರಕಾಂತ ವಡ್ಡು

ಹಬ್ಬದ ವಿರಾಮದ ನಂತರ ಬೈಟು ಬಳಗದಲ್ಲಿ ಹೊಸ ಉತ್ಸಾಹ ಮೂಡಿತ್ತು.

‘ನೀವೇನೇ ಹೇಳಿ ಪ್ರಯತ್ನಕ್ಕಿಂತ ಪ್ರಾರ್ಥನೆಯೇ ಫಲ ನೀಡೋದು…’

‘ಇರಬಹುದು, ಆದರೆ ಪ್ರಾರ್ಥನೆಗೆ ದೇವರನ್ನು ಆಯ್ಕೆ ಮಾಡೋದು ಹೇಗೆ?’

‘ಹೆಣ್ಣು ದೇವರಿಗೇ ಶಕ್ತಿ ಹೆಚ್ಚು. ಮೈಸೂರವ್ವ, ಹಾಸನವ್ವಗೆ ಇರುವಷ್ಟು ಭಕ್ತರು ಮೋದಿ ಮಾಮಾಗೂ ಇಲ್ಲ’.

‘ಮತ್ತೆ… ಕೋಟಿ ಕೋಟಿ ಆದಾಯ ಸುಮ್ಮನೇ ಬರುತ್ತಾ?’

‘ಅದಕ್ಕೇ ಪಕ್ಷ ಭೇದವಿಲ್ಲದೇ ನಾಯಕರೆಲ್ಲಾ ಪ್ರಾರ್ಥನೆಗೆ ಮುಗಿ ಬೀಳುತ್ತಿರುವುದು’.

‘ಆದರೆ, ಒಂದೇ ಕ್ಷೇತ್ರದ ಮತದಾರರನ್ನು ನಂಬದವರಂತೆ ಒಂದೇ ದೇವರನ್ನು ನಂಬದವರೂ ಇದ್ದಾರೆ. ಟೆಂಪಲ್ ರನ್ನಿಂಗ್ ರೇಸ್‌ನಲ್ಲಿ ಗೆಲ್ಲುವವರಾರೋ…’

‘ಇನ್ನೇನು ನವೆಂಬರ್ ಬಂದೇಬಿಟ್ಟಿತು, ಪಕ್ಷಗಳಲ್ಲಿ ನಾಯಕತ್ವ ಕ್ರಾಂತಿ, ಆಕಾಂಕ್ಷಿಗಳಲ್ಲಿ ರಾಜ್ಯೋತ್ಸವ ಪ್ರಶಸ್ತಿಯ ಭ್ರಾಂತಿ ಕರಗುವ ಸಮಯ. ಯಾರ ಪ್ರಾರ್ಥನೆಗೆ ಯಾವ ಫಲ ತಿಳಿದೇಬಿಡುತ್ತದೆ’.

‘ಈ ನಾಯಕರ ನಾಡಿ ಭವಿಷ್ಯ ಹೇಳುವವರು ಯಾರೂ ಇಲ್ಲ. ಆದರೆ, ‘ಬಾಡಿ ಭವಿಷ್ಯ’ದಲ್ಲಿ ಸುಳಿವು ಸಿಗುತ್ತದೆ’.

‘ಅದೇನಪ್ಪಾ ಹೊಸ ಆವಿಷ್ಕಾರ… ಬಾಡಿ ಭವಿಷ್ಯ?’

‘ನಾಡಿಯಂತೆ ಬಾಡಿಗೂ ಮಿಡಿತ ಇರುತ್ತದೆ, ಬಾಡಿ ಭಾಷೆಯಲ್ಲಿ ಭವಿಷ್ಯ ಕಾಣಿಸುತ್ತದೆ’.

‘ನಾಡಿ ಮತ್ತು ಬಾಡಿಯಂತೆ ನುಡಿಯಲ್ಲಿಯೂ ಭವಿಷ್ಯ ಇರುತ್ತದೆ. ತಂದೆ ರಾಜಕೀಯ ಸಂಧ್ಯಾಕಾಲದಲ್ಲಿದ್ದಾರೆ ಅಂತ ನುಡಿದರೆ ಮಗನ ಭವಿಷ್ಯ ತೆರೆದಂತಲ್ಲವೇ…?’

‘ತಂದೆ ತಾವು ಅಧಿಕಾರದಲ್ಲಿರುವ ತನಕ ಮಗನಿಗೆ ಮಂತ್ರಿ ಪದವಿ ಇಲ್ಲ ಎಂದೂ ನುಡಿಯಲಾಗಿದೆ…’

‘ಹಾಗಾದರೆ ‘ಪ್ರಾರ್ಥನೆ’ ಪಂಥದವರು ‘ಪ್ರಯತ್ನ’ ಸಿದ್ಧಾಂತಕ್ಕೆ ಬದಲಾಗುವುದು ಒಳ್ಳೆಯದು. ಸಿದ್ಧಾಂತದ ಫಲ ನೀಡಿದರೆ ವರುಣೇಂದ್ರಗೆ ಮಂತ್ರಿ ಪದವಿ, ಕನಕರಾಜಗೆ ಸಾಮ್ರಾಟ ಪಟ್ಟ’, ತಿಂಗಳೇಶ ಭವಿಷ್ಯ ನುಡಿದ!

ಸಂಗತ

ಮೌಲ್ಯಶಿಕ್ಷಣ: ಕಳೆದುಕೊಂಡ ನಿಧಿ ಮರಳಲಿ

ಮೌಲ್ಯಶಿಕ್ಷಣ ಪರಿಚಯಿಸುವ ಸರ್ಕಾರದ ನಿರ್ಧಾರ ಯಾಂತ್ರಿಕ ಆಗದಿರಲಿ; ಮೌಲ್ಯಶಿಕ್ಷಣದಿಂದ ಹಿಂದಿದ್ದ ಸಾಂಸ್ಕೃತಿಕ ವಾತಾವರಣ ಮರಳುವಂತಾಗಲಿ.

• ಸರ್ಫ್ರಾಜ್ ಚಂದ್ರಗುತ್ತಿ

ಇಂದಿನ ಶಿಕ್ಷಣ ಕ್ರಮ ಮೌಲ್ಯಶಿಕ್ಷಣಕ್ಕೆ ಒತ್ತು ನೀಡದ, ನಿರಂತರವಾದ ಓದು ಹಾಗೂ ನೆನಪಿನ ಶಕ್ತಿಯನ್ನು ಮಾತ್ರ ಪರೀಕ್ಷಿಸುವ ಯಾಂತ್ರಿಕ ವಿಧಾನವಾಗಿದೆ. ಪರೀಕ್ಷೆ ಹಾಗೂ ಅಂಕಗಳನ್ನು ಆಧರಿಸಿದ ಕಲಿಕಾ ವಿಧಾನದಿಂದ ಯಾಂತ್ರಿಕ ವ್ಯಕ್ತಿತ್ವಗಳನ್ನು ಹುಟ್ಟುಹಾಕಲಾಗುತ್ತಿದೆ. ಇದು ಶಿಕ್ಷಣ ಇಲಾಖೆಗೂ ಮನವರಿಕೆಯಾದಂತಿದೆ. ಹಾಗಾಗಿಯೇ, ಕಲಿಕೆಯಲ್ಲಿ ನೀತಿಶಿಕ್ಷಣವನ್ನು ಅಳವಡಿಸುವ ತೀರ್ಮಾನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಮೌಲ್ಯಶಿಕ್ಷಣದ ಸ್ವರೂಪ ಕುರಿತಾಗಿ ಕೆಲವು ಸಂಗತಿಗಳನ್ನು ಚರ್ಚಿಸುವ ಅಗತ್ಯವಿದೆ.

ಮೌಲ್ಯಶಿಕ್ಷಣದ್ದು ಮಗುವಿನ ಮನೋಧರ್ಮವನ್ನು ರೂಪಿಸುವ ಕೆಲಸ. ಬದುಕಿಗೆ ಬೇಕಾದ ಪ್ರೀತಿ, ಸ್ನೇಹ, ನಂಬಿಕೆ, ಸಹಕಾರ, ಸತ್ಯ, ಪ್ರಾಮಾಣಿಕತೆ ಹಾಗೂ ಜೀವಕಾರುಣ್ಯದ ಮನೋಭಾವ ಬೆಳೆಸುವ ದಿಸೆಯಲ್ಲಿ ಮೌಲ್ಯಶಿಕ್ಷಣದ ಸ್ವರೂಪವನ್ನು ರೂಪಿಸಬೇಕಾಗಿದೆ.

ಇಂದಿನ ಶಿಕ್ಷಣದ ಬಹುದೊಡ್ಡ ಸಮಸ್ಯೆ, ಅದು ಬರೀ ಜ್ಞಾನಾಧಾರಿತ ಆಗಿರುವುದು. ಕ್ರೀಡೆ, ಕಲೆ, ಸಾಹಿತ್ಯ ಮೊದಲಾದ ಸೃಜನಶೀಲ ಆಸಕ್ತಿಯು ಇಲಾಖೆಗಳು ನಡೆಸುವ ಔಪಚಾರಿಕ ಕಾರ್ಯಕ್ರಮಗಳಾಗಿ ಉಳಿದಿವೆ. ಒಂದು ಪರೀಕ್ಷೆ ಬರೆದು ಹಗುರಾದೆ ಎಂಬ ನಿರಾಳತೆ ಅನುಭವಿಸಲೂ ಬಿಡದೆ ಇನ್ನೊಂದು ಪರೀಕ್ಷೆಯನ್ನು ಎದುರಿಗೆ ತಂದು ನಿಲ್ಲಿಸುವ ಶಿಕ್ಷಣ ಪದ್ಧತಿಯು ವಿದ್ಯಾರ್ಥಿಗಳ ಸೃಜನಶೀಲತೆಯನ್ನು ಹತ್ತಿಕ್ಕಿ ಹೈರಾಣಾಗಿಸಿದೆ.

ಮಗುವಿನ ಮನೋಲೋಕವನ್ನು ಕಟ್ಟುವಲ್ಲಿ ಭಾಷೆ– ಸಾಹಿತ್ಯ ಮೊದಲಾದ ಸೃಜನಶೀಲ ಕಲಾಮಾಧ್ಯಮಗಳು ಮಹತ್ತರವಾದ ಪಾತ್ರವಹಿಸುತ್ತವೆ ಎಂಬುದನ್ನು ನಾವಿಂದು ಸಂಪೂರ್ಣ ಮರೆತಿದ್ದೇವೆ. ಭಾವನೆ, ಸ್ಪಂದನ, ಮಾನವೀಯ ಗುಣಗಳಿಲ್ಲದ ವಿದ್ಯಾರ್ಥಿ ಸಮುದಾಯವನ್ನು ಬೆಳೆಸುತ್ತಿದ್ದೇವೆ. ಇದು ‘ಎ.ಐ’ ಎಂಬ ರೋಬೊಗಳಂತಹ ಯಾಂತ್ರಿಕ ವ್ಯಕ್ತಿತ್ವಗಳಿಗಿಂತ ಭಿನ್ನವೇನಲ್ಲ. ನಮ್ಮ ವಿದ್ಯಾರ್ಥಿಗಳು ಜ್ಞಾನಾಧಾರಿತ ರೋಬೊಗಳಾಗದೆ, ಮಾನವೀಯ ಸ್ಪಂದನಗಳಿರುವ ರಕ್ತ–ಮಾಂಸದ ವ್ಯಕ್ತಿತ್ವಗಳಾಗಿ ರೂಪುಗೊಳ್ಳುವಂತೆ ಶಿಕ್ಷಣದ ಸ್ವರೂಪ ಇರಬೇಕಾಗಿದೆ.

ಜ್ಞಾನಕ್ಕಿಂತ ಕಲ್ಪನೆ ದೊಡ್ಡದು ಎಂಬ ಮಾತನ್ನು ದಾರ್ಶನಿಕ ವಿಜ್ಞಾನಿ ಐನ್‌ಸ್ಟೀನ್ ಹೇಳಿದ್ದ. ಹೆಲಿಕಾಪ್ಟರ್ ಇಲ್ಲದ ಹದಿನಾರನೇ ಶತಮಾನದಲ್ಲಿ ಲಿಯೊನಾರ್ಡೊ ಡಾ ವಿಂಚಿ ತನ್ನ ಕಲ್ಪನೆಯ ಲೋಕದಲ್ಲಿ ಅಂತಹದ್ದೊಂದು ಚಿತ್ರವನ್ನು ಬರೆದಿದ್ದ. ವಿಮಾನವೇ ಇಲ್ಲದ ರಾಮಾಯಣದ ಕಾಲದಲ್ಲಿ ವಾಲ್ಮೀಕಿ ‘ಪುಷ್ಪಕ ವಿಮಾನ’ದ ಕಲ್ಪನೆ ಹೊಂದಿದ್ದ. ಸೃಜನಶೀಲ ಮನಸ್ಸು ಕಲ್ಪಿಸಿದ ಕನಸನ್ನು ಆ ನಂತರದ ವಿಜ್ಞಾನ ನನಸಾಗಿಸಿತು. ಕಲ್ಪನೆ–ಕನಸುಗಳನ್ನು ಅರಳಿಸುವಲ್ಲಿ ಮಹತ್ವದ ಪಾತ್ರವಹಿಸುವ ಭಾಷೆ ಹಾಗೂ ಸಾಹಿತ್ಯದ ಕಲಿಕೆಯನ್ನು ಶಿಕ್ಷಣದ ಎಲ್ಲಾ ಹಂತಗಳಲ್ಲಿ ಸಾರ್ವತ್ರಿಕಗೊಳಿಸಬೇಕಾಗಿತ್ತು. ಬದಲಿಗೆ ನಾವಿಂದು ಕಲಾ ವಿಭಾಗವನ್ನು ಉದ್ದೇಶಪೂರ್ವಕವಾಗಿಯೇ ನಿರ್ಲಕ್ಷಿಸಿದ್ದೇವೆ.

ವರ್ತಮಾನದ ಶಿಕ್ಷಣ ಪದ್ಧತಿ ಕಲ್ಪನೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿ ಜ್ಞಾನ (ಮಾಹಿತಿ) ಆಧಾರಿತ ಮಾರ್ಗವನ್ನು ಮುನ್ನೆಲೆಗೆ ತಂದ ಪರಿಣಾಮ ಕಣ್ಣ ಮುಂದಿದೆ. ಇದರ ಪರಿಣಾಮವಾಗಿ ಇಂದಿನ ವಿದ್ಯಾರ್ಥಿಗಳು ನೀತಿಶಿಕ್ಷಣದಿಂದ ವಂಚಿತರಾಗಿದ್ದಾರೆ. ಕಥೆಗಳು ನಮ್ಮ ಮನೋಲೋಕವನ್ನು ರೂಪಿಸುವಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸುತ್ತವೆ ಮಾತ್ರವಲ್ಲ, ಪರೋಕ್ಷವಾಗಿ ನಮ್ಮ ಭವಿಷ್ಯದ ಬದುಕಿಗೆ ಬೇಕಾದ ಜೀವನಮೌಲ್ಯಗಳನ್ನು ಕಲಿಸಬಲ್ಲವು. ಕಾವ್ಯಮೀಮಾಂಸೆ ಹೇಳುವ ಕಾಂತಾಸಮ್ಮಿತೆಯ ವಿಧಾನ ಅದರದು. ಶಿಕ್ಷಣದಲ್ಲಿ ಕಥೆಗಳ ಮಹತ್ವವನ್ನು ಅರಿತಿದ್ದ ಯು.ಆರ್. ಅನಂತಮೂರ್ತಿಯವರು ‘ಕಥೆ ಹೇಳಲು ಅಜ್ಜಿಯರನ್ನು ನೇಮಿಸಿಕೊಳ್ಳಿ’ ಎಂದಿದ್ದರು.

‘ಸಾವಿರದ ಒಂದು ರಾತ್ರಿ’ ಕಥೆ ಹೇಳಿದ ‘ಅರೇಬಿಯನ್ ನೈಟ್ಸ್’ನ ಶಹಜಾದೆ, ತನ್ನ ಕ್ರೂರ ಗಂಡ ಬಾದಶಹನಿಂದ ಸಾವನ್ನು ಗೆದ್ದು ಬರುತ್ತಾಳೆ. ‘ಪಂಚತಂತ್ರ’ದ ವಿಷ್ಣುಗುಪ್ತ ಕಥೆಗಳ ಮೂಲಕವೇ ಅರಸನ ಶತದಡ್ಡ ಮಕ್ಕಳಿಗೆ ರಾಜನೀತಿಯ ಪಾಠ ಹೇಳಿ ಅವರನ್ನು ವಿದ್ಯಾವಂತರನ್ನಾಗಿಸುತ್ತಾನೆ. ಆಧುನಿಕವಾದ ಹಾಗೂ ಅತಿ ತಾಂತ್ರಿಕ ಶಿಕ್ಷಣ ನೀಡಲು ಹೊರಟಿರುವ ನಾವಿಂದು, ಭಾಷೆ–ಸಾಹಿತ್ಯದ ಕಲಿಕೆಯಿಂದ ವಿಮುಖರಾದ ಪರಿಣಾಮವಾಗಿ ಮೌಲ್ಯಶಿಕ್ಷಣದಿಂದಲೂ ವಂಚಿತರಾಗಿದ್ದೇವೆ. ಬದುಕಿಗೆ ಬೇಕಾದ ಜೀವಜಲವನ್ನು ಉದ್ದೀಪಿಸುವ ಕಲೆ–ಸಾಹಿತ್ಯದ ಕಲಿಕೆಯ ವಾತಾವರಣವನ್ನು ಮರುರೂಪಿಸುವುದರಿಂದ ಮೌಲ್ಯಶಿಕ್ಷಣವು ತನ್ನಿಂತಾನೇ ಸಾಕಾರಗೊಳ್ಳುತ್ತದೆಯೇ ಹೊರತು, ವಾರಕ್ಕೊಂದು ದಿನ ಹೇಳುವ ಕಥೆಗಳಿಂದ ಅದು ಸಾಧ್ಯವಾಗಲಾರದು.

ದಿನಕ್ಕೊಂದು ಕಥೆ, ದಿನಕ್ಕೊಂದು ಹಾಡು, ದಿನದ ಒಂದು ಗಂಟೆಯಾದರೂ ಆಟದ ಮೈದಾನ– ಇವೆಲ್ಲ ಮಕ್ಕಳ ಮೈಮನಸ್ಸುಗಳನ್ನು ಅರಳಿಸಬಲ್ಲವು. ಕನಸು ಕಾಣುವುದಿರಲಿ, ನಿದ್ರಿಸಲೂ ಬಿಡದ ನಿರಂತರ ಪರೀಕ್ಷೆಗಳು, ಆನ್‌ಲೈನ್ ತರಗತಿಗಳು, ಟ್ಯೂಷನ್ ಕ್ಲಾಸ್‌ಗಳು, ಪರಿಹಾರ ಬೋಧನೆಗಳು, ರಜಾದಿನದ ತರಗತಿಗಳು ವಿದ್ಯಾರ್ಥಿಗಳ ಬದುಕುವ ಹಕ್ಕನ್ನೂ ಕಸಿದುಕೊಳ್ಳುತ್ತಿರುವುದನ್ನು ಎಲ್ಲರೂ ಅಸಹಾಯಕತೆಯಿಂದ ನೋಡುತ್ತಿದ್ದೇವೆ. ಹುಟ್ಟಿದಾರಭ್ಯ ಮಕ್ಕಳು ಓದಿನ ಹಿಂದೆ ಓಡುತ್ತಲೇ ಇರುವಂತಾಗಿದೆ. ಈ ಓಟದ ಸ್ಪರ್ಧೆಯಿಂದಾಗಿ ಬಸವಳಿದಿರುವ ಮಕ್ಕಳು ತಮ್ಮ ಸುತ್ತಲ ಪರಿಸರವನ್ನು ದ್ವೇಷ ಭಾವನೆಯಿಂದ ನೋಡುವಂತಹ ಸನ್ನಿವೇಶ ಸೃಷ್ಟಿಯಾಗಿದೆ. ಈ ಬೆಳವಣಿಗೆಯನ್ನು ತಡೆಗಟ್ಟಲು ನಾವು ಮೊದಲು ಏನನ್ನು ಕಳೆದುಕೊಂಡಿದ್ದೇವೆಯೋ ಅದನ್ನು ಮರಳಿ ಪಡೆದುಕೊಳ್ಳಲು ಪ್ರಯತ್ನಿಸಬೇಕಾಗಿದೆ.

ಹಿಂದಿದ್ದ ಸಾಂಸ್ಕೃತಿಕ ವಾತಾವರಣವನ್ನು ಮರಳಿ ಕಟ್ಟಿಕೊಳ್ಳಬೇಕಾಗಿದೆ. ಶಾಲಾ–ಕಾಲೇಜುಗಳು ಟ್ಯೂಷನ್ ಕ್ಲಾಸುಗಳಾಗದೆ ಅವು ಕಲಿಕೆಯೊಂದಿಗೆ ಸಾಂಸ್ಕೃತಿಕ ತಾಣಗಳಾಗಿಯೂ ಬದಲಾಗಬೇಕಾಗಿದೆ. ಇಲ್ಲದಿದ್ದರೆ ನಾವೇ ಸೃಷ್ಟಿಸಿದ ಮರುಭೂಮಿಯಲ್ಲಿ ಹಸುರನ್ನು ಹುಡುಕುವ ವ್ಯರ್ಥ ಪ್ರಯತ್ನ ಮಾಡಿದಂತಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸುಧಾರಣೆಯ ಹಾದಿಯಲ್ಲಿ ಎನ್‌ಪಿಎಸ್

ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ಬದಲಾವಣೆಯ ಹಾದಿಯಲ್ಲಿದೆ. ಈ ವ್ಯವಸ್ಥೆಯಿಂದ ಹೊರಬರುವ ಮತ್ತು ಅದರಲ್ಲಿ ತೊಡಗಿಸಿರುವ ಹಣ ಹಿಂಪಡೆಯುವ ಸಂಬಂಧದ ನಿಯಮಗಳನ್ನು ಸರಳೀಕರಣಗೊಳಿಸಲು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು ಕರಡು ಪ್ರಕಟಿಸಿದೆ. ಮುಖ್ಯವಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೌಕರರನ್ನು ಹೊರತುಪಡಿಸಿ ಉಳಿದೆಲ್ಲಾ ಚಂದಾದಾರರಿಗೆ (ಟೈರ್–1) ಪಿಂಚಣಿ ಯೋಜನೆಯಿಂದ ಹೊರಬರಲು ಪ್ರಸ್ತುತ ಇರುವ 60 ವರ್ಷ ವಯಸ್ಸಿನ ಮಿತಿಯನ್ನು ಕಡಿಮೆ ಮಾಡಲು ಪ್ರಸ್ತಾವಿಸಲಾಗಿದೆ. ಇದೇ ರೀತಿ, ಚಂದಾದಾರರ ಅಗತ್ಯಗಳಿಗೆ ತಕ್ಕಂತೆ ಹೆಚ್ಚು ಹಣ ಹಿಂಪಡೆಯಲು ಅವಕಾಶ ಕಲ್ಪಿಸುವ ಪ್ರಸ್ತಾವವನ್ನೂ ಕರಡು ಒಳಗೊಂಡಿದೆ

• ಕೆ.ಎಚ್.ಓಬಳೇಶ್

ಖಾಸಗಿ ವಲಯದ ಬಹುತೇಕ ಉದ್ಯೋಗಿಗಳು ಬಾಳಿನ ಮುಸ್ಸಂಜೆಯಲ್ಲಿ ಜೀವನ ನಿರ್ವಹಣೆಗೆ ಇಡುಗಂಟು ಇಲ್ಲದೆ ತೊಂದರೆಗೆ ಸಿಲುಕುತ್ತಾರೆ. ನಿವೃತ್ತಿ ನಂತರದ ಬದುಕಿನ ಬಂಡಿ ಎಳೆಯಲು ಪೂರ್ವಸಿದ್ಧತೆ ಇಲ್ಲದವರ ಕೊರಳಿಗೆ ಸಂಕಷ್ಟಗಳ ಸಂಕೋಲೆ ಬೀಳುತ್ತದೆ. ಅಂಥವರಿಗೆ ನೆರವಾಗಲೆಂದೇ ಕೇಂದ್ರ ಸರ್ಕಾರವು ಪಿಂಚಣಿ ಯೋಜನೆಯನ್ನು ಖಾಸಗಿಯವರಿಗೂ ವಿಸ್ತರಿಸಿತ್ತು.

2004ರಲ್ಲಿ ಕೇಂದ್ರ ಸರ್ಕಾರವು ಹಳೆಯ ಪಿಂಚಣಿ ವ್ಯವಸ್ಥೆಯನ್ನು (ಒಪಿಎಸ್) ರದ್ದುಪಡಿಸಿ, ಸಾಮಾಜಿಕ ಭದ್ರತೆಯ ಭಾಗವಾಗಿ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು (ಎನ್‌ಪಿಎಸ್) ಜಾರಿಗೊಳಿಸಿತು. ಆರಂಭದಲ್ಲಿ ಈ ಯೋಜನೆಯು ಕೇಂದ್ರ ಸರ್ಕಾರಿ ನೌಕರರಿಗಷ್ಟೆ ಸೀಮಿತವಾಗಿತ್ತು. 2009ರಿಂದ ಖಾಸಗಿ ವಲಯದ ಉದ್ಯೋಗಿಗಳಿಗೂ ಇದನ್ನು ವಿಸ್ತರಿಸಿತು. ಪ್ರಸ್ತುತ ಈ ಯೋಜನೆಯು ಸಾರ್ವಜನಿಕ, ಖಾಸಗಿ, ಅಸಂಘಟಿತ ವಲಯದ ಉದ್ಯೋಗಿಗಳು ಮತ್ತು ಮಕ್ಕಳೂ ಸೇರಿದಂತೆ ಎಲ್ಲಾ ನಾಗರಿಕರಿಗೂ ಮುಕ್ತವಾಗಿದೆ. ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ಇದರ ನಿರ್ವಹಣೆಯ ಹೊಣೆ ಹೊತ್ತಿದೆ.

ಎನ್‌ಪಿಎಸ್, ಷೇರು ಮಾರುಕಟ್ಟೆ ಸಂಯೋಜಿತ ಹೂಡಿಕೆ ಮತ್ತು ಉಳಿತಾಯ ಯೋಜನೆ. ನಿವೃತ್ತಿ ನಂತರವೂ ನಿಯಮಿತ ಆದಾಯವನ್ನು ಒದಗಿಸುತ್ತದೆ. ಜೊತೆಗೆ, ಚಂದಾದಾರರಿಗೆ ಆರ್ಥಿಕ ಸ್ಥಿರತೆ ಮತ್ತು ಭದ್ರತೆಯನ್ನೂ ಖಾತರಿಪಡಿಸುತ್ತದೆ. ಇದರಡಿ ಹೂಡಿಕೆ ಮಾಡುವವರಿಗೆ ಆದಾಯ ತೆರಿಗೆಯ ವಿನಾಯಿತಿ ಲಭಿಸುತ್ತದೆ. ಎನ್‌ಪಿಎಸ್‌ನಡಿ ಹೂಡಿಕೆ ಮಾಡಿದರೆ ಸೆಕ್ಷನ್ 80ಸಿ ಅಡಿ ₹1.50 ಲಕ್ಷ ಹಾಗೂ ಸೆಕ್ಷನ್ 80ಸಿಸಿಡಿ (1ಬಿ) ಅಡಿ ₹50 ಸಾವಿರ ವಿನಾಯಿತಿ ದೊರೆಯುತ್ತದೆ.

ಮತ್ತೊಂದೆಡೆ, ಮ್ಯೂಚುವಲ್ ಫಂಡ್‌ಗಳ ನಿರ್ವಹಣಾ ಶುಲ್ಕಕ್ಕೆ ಹೋಲಿಸಿದರೆ ಎನ್‌ಪಿಎಸ್ ನಿರ್ವಹಣಾ ಶುಲ್ಕ ಅತ್ಯಲ್ಪ. ಮ್ಯೂಚುವಲ್ ಫಂಡ್‌ಗಳ ವಾರ್ಷಿಕ ನಿರ್ವಹಣಾ ಶುಲ್ಕ ಶೇ 1ರಿಂದ ಶೇ 2.5ರಷ್ಟಿದೆ. ಎನ್‌ಪಿಎಸ್‌ನಲ್ಲಿ ವಾರ್ಷಿಕ ನಿರ್ವಹಣಾ ಶುಲ್ಕ ಶೇ 0.09ರಷ್ಟಿದೆ. ಅಂದರೆ ₹1 ಲಕ್ಷ ಹೂಡಿಕೆ ಮೊತ್ತಕ್ಕೆ ಚಂದಾದಾರರು ಕೇವಲ ₹90 ಶುಲ್ಕವನ್ನಷ್ಟೆ ಭರಿಸುತ್ತಾರೆ. ಈ ಯೋಜನೆಯಡಿ ಇಂಥ ಸಾಕಷ್ಟು ಅನುಕೂಲಗಳಿದ್ದರೂ ಅರಿವಿನ ಕೊರತೆಯಿಂದಾಗಿ ಹೆಚ್ಚು ಜನಪ್ರಿಯತೆ ಪಡೆದಿಲ್ಲ.

ನಿಯಮ ಇನ್ನಷ್ಟು ಸರಳ: ಇದಕ್ಕಾಗಿಯೇ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು ಎನ್‌ಪಿಎಸ್‌ನಲ್ಲಿ ಹೂಡಿಕೆ, ಚಂದಾದಾರಿಕೆ ಅಂತ್ಯಗೊಳಿಸುವ ಮತ್ತು ಹಣ ಹಿಂಪಡೆಯುವಿಕೆ ಪ್ರಕ್ರಿಯೆಯನ್ನು ಮತ್ತಷ್ಟು ಸರಳಗೊಳಿಸಲು ಅಣಿಯಾಗಿದೆ. ಇದಕ್ಕಾಗಿ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯಡಿ ನಿರ್ಗಮನ ಮತ್ತು ಹಿಂಪಡೆಯುವಿಕೆ) ನಿಯಮಗಳು–2015ರ ತಿದ್ದುಪಡಿ ಕರಡು ಪ್ರಕಟಿಸಿದೆ. ಉದ್ದೇಶಿತ ತಿದ್ದುಪಡಿ ನಿಯಮಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರನ್ನು ಹೊರತುಪಡಿಸಿ ಉಳಿದ ಎಲ್ಲ ರೀತಿಯ ಉದ್ಯೋಗಿಗಳಿಗೂ ಅನ್ವಯಿಸುತ್ತವೆ.

ಎನ್‌ಪಿಎಸ್ ಸ್ವಾವಲಂಬನೆ (ಅಸಂಘಟಿತ ವಲಯ), ಎನ್‌ಪಿಎಸ್ ವಾತ್ಸಲ್ಯ (ಮಕ್ಕಳ ಹೆಸರಿನಲ್ಲಿ ಚಂದಾದಾರಿಕೆ), ಎಲ್ಲ ನಾಗರಿಕರು, ಕಾರ್ಪೊರೇಟ್ ವಲಯಗಳ ಸಿಬ್ಬಂದಿಗೆ (ಎನ್‌ಪಿಎಸ್‌ನ ಟೈರ್–1 ಖಾತೆ) ಈ ನಿಯಮಗಳು ಅನ್ವಯಿಸುತ್ತವೆ.

15 ವರ್ಷಕ್ಕೆ ಹೊರಬರಲು ಅವಕಾಶ

ಪ್ರಸ್ತಾವಿತ ತಿದ್ದುಪಡಿ ನಿಯಮದಲ್ಲಿ 15 ವರ್ಷಗಳಿಗೆ ಎನ್‌ಪಿಎಸ್‌ನಿಂದ ಹೊರಬರುವುದಕ್ಕೆ ಅವಕಾಶ ಕಲ್ಪಿಸಲಾಗಿದೆ (ಹಾಲಿ ನಿಯಮದಡಿ 60 ವರ್ಷ ಆಗಿರಬೇಕು). ಉದಾಹರಣೆಗೆ, ಒಬ್ಬ ಖಾಸಗಿ ವಲಯದ ಉದ್ಯೋಗಿಯು 30ನೇ ವಯಸ್ಸಿಗೆ ಎನ್‌ಪಿಎಸ್ ಖಾತೆ ತೆರೆದು 45ನೇ ವಯಸ್ಸಿಗೆ ತನ್ನ ಚಂದಾದಾರಿಕೆಯನ್ನು ಕೊನೆಗೊಳಿಸಬಹುದು.

ಆ ಸಮಯದಲ್ಲಿ ಆ ಉದ್ಯೋಗಿಯ ಎನ್‌ಪಿಎಸ್ ಖಾತೆಯಲ್ಲಿ ₹50 ಲಕ್ಷ ಹೊಂದಿದ್ದರೆ, ಆ ಪೈಕಿ ಶೇ 60ರಷ್ಟು ಮೊತ್ತ (₹30 ಲಕ್ಷ) ಹಿಂಪಡೆಯಬಹುದು. ಉಳಿದ ಶೇ 40ರಷ್ಟು ಮೊತ್ತವನ್ನು (₹20 ಲಕ್ಷ) ನಿಯಮಿತವಾಗಿ ಆದಾಯ ತರುವ ಯೋಜನೆಯಲ್ಲಿ ಹೂಡಿಕೆ ಮಾಡಲು ಮೀಸಲಿಡಬೇಕಿದೆ.



18 ತುಂಬಿದ ನಂತರವಷ್ಟೇ ಚಂದಾದಾರಿಕೆ ಅಂತ್ಯ

ಎನ್‌ಪಿಎಸ್–ವಾತ್ಸಲ್ಯ ಚಂದಾದಾರರಿಗೆ ಸಂಬಂಧಿಸಿದಂತೆ ಮಕ್ಕಳಿಗೆ 18 ವರ್ಷ ತುಂಬಿದ ಬಳಿಕಷ್ಟೇ ಅವರು ಚಂದಾದಾರಿಕೆಯಿಂದ ಹೊರಬರಬಹುದು ಎಂದು ಕರಡು ನಿಯಮದಲ್ಲಿ ಹೇಳಲಾಗಿದೆ. ಚಂದಾದಾರಿಕೆ ಅಂತ್ಯಗೊಳಿಸಿದ ನಂತರ ನಿಧಿಯಲ್ಲಿ ಸಂಗ್ರಹವಾಗಿರುವ ಮೊತ್ತದಲ್ಲಿ ಶೇ 80ರಷ್ಟನ್ನು ನಿಯಮಿತವಾಗಿ ಆದಾಯ ತರುವ ಯೋಜನೆಯಲ್ಲಿ ಹೂಡಿಕೆ ಮಾಡಬೇಕು. ಶೇ 20ರಷ್ಟನ್ನು ಇಡುಗಂಟು ರೂಪದಲ್ಲಿ ನೀಡಲಾಗುತ್ತದೆ. ಒಂದು ವೇಳೆ, ಎನ್‌ಪಿಎಸ್ ಖಾತೆಯಲ್ಲಿ ಸಂಗ್ರಹವಾದ ಮೊತ್ತ ₹4 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇದ್ದರೆ, ಒಂದೇ ಸಲಕ್ಕೆ ಪೂರ್ಣ ಮೊತ್ತವನ್ನು ವಾಪಸ್ ಪಡೆಯುವುದಕ್ಕೂ ಅವಕಾಶ ಇದೆ. ಇದನ್ನು ಆಯ್ಕೆ ಮಾಡಿಕೊಂಡವರಿಗೆ ನಂತರ ಪಿಂಚಣಿ ಆದಾಯ ಸಿಗುವುದಿಲ್ಲ.

ಮಕ್ಕಳಿಗೆ 18 ವರ್ಷ ಪೂರ್ಣವಾದ ನಂತರವೂ ಚಂದಾದಾರಿಕೆಯಿಂದ ಹೊರಬಾರದೇ ಇದ್ದ ಪಕ್ಷದಲ್ಲಿ ಚಂದಾದಾರಿಕೆಯು ಎನ್‌ಪಿಎಸ್‌ನ ಎಲ್ಲ ನಾಗರಿಕರು (All citizens) ವಿಭಾಗದಲ್ಲಿ ಮುಂದುವರಿಯುತ್ತದೆ.

ಶೇ 80ರಷ್ಟು ಇಡುಗಂಟು ಲಭ್ಯ

ಪಿಎಫ್‌ಆರ್‌ಡಿಎ ಪ್ರಕಟಿಸಿರುವ ಹೊಸ ಪ್ರಸ್ತಾವದನ್ವಯ ಚಂದಾದಾರರಿಗೆ ಹೆಚ್ಚಿನ ಅನುಕೂಲ ಲಭಿಸಲಿದೆ. ಹಾಲಿ ನಿಯಮದ (ಸಾಮಾನ್ಯ ಯೋಜನೆ) ಅನ್ವಯ ಚಂದಾದಾರರಿಗೆ ಯೋಜನೆಯಿಂದ ಹೊರಬರಲು ನಿವೃತ್ತಿಯ ವಯಸ್ಸು ಅಂದರೆ 60 ವರ್ಷದ ಮಿತಿ ನಿಗದಿಪಡಿಸಲಾಗಿತ್ತು. ಈ ವೇಳೆ ದೊರೆಯುವ ಪಿಂಚಣಿಯ ಇಡುಗಂಟಿನಲ್ಲಿ (ಕಾರ್ಪಸ್) ಶೇ 60ರಷ್ಟು ಮೊತ್ತ ಹಿಂಪಡೆಯಲು ಅವಕಾಶವಿತ್ತು. ಈ ಮೊತ್ತವು ಆದಾಯ ತೆರಿಗೆಯಿಂದ ಮುಕ್ತವಾಗಿದೆ. ಉಳಿದ ಶೇ 40ರಷ್ಟು ನಿಧಿಯನ್ನು ನಿಯಮಿತವಾಗಿ ಆದಾಯ ತರುವ ಯೋಜನೆಯಲ್ಲಿ (ಪರ್ಚೇಸ್ ಆಫ್ ಆ್ಯನುಟಿ) ಕಡ್ಡಾಯವಾಗಿ ಹೂಡಿಕೆ ಮಾಡಬೇಕಿತ್ತು.

ಕರಡಿನಲ್ಲಿ ಇಡುಗಂಟು ಹಿಂಪಡೆಯುವಿಕೆ ಪ್ರಮಾಣವನ್ನು ಶೇ 80ಕ್ಕೆ ಹೆಚ್ಚಿಸುವ ಕುರಿತು ಪ್ರಸ್ತಾಪಿಸಲಾಗಿದೆ (ಈ ಪೈಕಿ ಶೇ 60ರಷ್ಟು ಮೊತ್ತಕ್ಕೆ ತೆರಿಗೆ ವಿನಾಯಿತಿ ಇದ್ದರೆ, ಉಳಿದ ಶೇ 20ರಷ್ಟು ಮೊತ್ತವು ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡುತ್ತದೆ). ಉಳಿದ ಶೇ 20ರಷ್ಟು ಮೊತ್ತವನ್ನು ಚಂದಾದಾರರು ನಿಯಮಿತವಾಗಿ ಆದಾಯ ತರುವ ಯೋಜನೆಯಲ್ಲಿ ಹೂಡುವುದು ಕಡ್ಡಾಯ. ಹೊಸ ಪ್ರಸ್ತಾವವು ಖಾತೆದಾರರಿಗೆ ಹೆಚ್ಚಿನ ಆರ್ಥಿಕ ಭದ್ರತೆ ಒದಗಿಸಲಿದೆ. ಅಲ್ಲದೆ, ಆರ್ಥಿಕ ಸಂಕಷ್ಟಗಳನ್ನು ಪರಿಹರಿಸಿಕೊಳ್ಳಲು ನೆರವಾಗಲಿದೆ ಎನ್ನುತ್ತಾರೆ ಹೂಡಿಕೆ ತಜ್ಞರು.

ಸಾಮಾನ್ಯ ಚಂದಾದಾರಿಕೆ ಹೊರಬರುವ ವ್ಯವಸ್ಥೆಯಡಿ (60 ವರ್ಷಕ್ಕೆ) ಚಂದಾದಾರರ ಖಾತೆಯಲ್ಲಿ ₹2.5 ಲಕ್ಷ ಇಡುಗಂಟು ಇದ್ದರೆ, ಇಡೀ ಮೊತ್ತ ಹಿಂಪಡೆಯಲು ಹಾಲಿ ನಿಯಮದಲ್ಲಿ ಅವಕಾಶವಿದೆ. ಈ ಮೊತ್ತದ ಪ್ರಮಾಣ ಹೆಚ್ಚಿಸಲು ತಿದ್ದುಪಡಿಯಲ್ಲಿ ಪ್ರಸ್ತಾಪಿಸಲಾಗಿದೆ. ಇಡುಗಂಟು ₹12 ಲಕ್ಷಕ್ಕಿಂತ ಕಡಿಮೆ ಇದ್ದರೆ ಆ ಮೊತ್ತದಲ್ಲಿ ಶೇ 50ರಷ್ಟನ್ನು ಒಂದೇ ಬಾರಿಗೆ ಹಿಂಪಡೆಯಬಹುದಾಗಿದೆ. ಉಳಿದ ಶೇ 50ರಷ್ಟು ಮೊತ್ತವನ್ನು ಐದು ವರ್ಷಗಳಲ್ಲಿ ವ್ಯವಸ್ಥಿತವಾಗಿ ಹಿಂಪಡೆಯಲು ಅವಕಾಶವಿದೆ ಅಥವಾ ಚಂದಾದಾರರು ಇಚ್ಛಿಸಿದರೆ ಈ ಮೊತ್ತವನ್ನು ನಿಯಮಿತವಾಗಿ ಆದಾಯ ತರುವ ಯೋಜನೆಯಲ್ಲಿ ಹೂಡಿಕೆ ಮಾಡಬಹುದಾಗಿದೆ.

ಕೆಲವು ಚಂದಾದಾರರು ಅವಧಿ ಮುಗಿಯುವ ಮೊದಲೇ ಇಡುಗಂಟು ಹಿಂಪಡೆಯಲು ಇಚ್ಛಿಸುವುದುಂಟು. ಹಾಲಿ ನಿಯಮದಡಿ ₹2.5 ಲಕ್ಷ ಇಡುಗಂಟು ಇದ್ದರೆ ಇಡೀ ಮೊತ್ತವನ್ನು ಹಿಂಪಡೆಯಬಹುದಾಗಿದೆ. ಈ ಮೊತ್ತ ಹೆಚ್ಚಿಸುವ ಕುರಿತು ತಿದ್ದುಪಡಿಯಲ್ಲಿ ಉಲ್ಲೇಖಿಸಲಾಗಿದೆ. ₹4 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಮೊತ್ತ ಇದ್ದರೆ ಸಂಪೂರ್ಣವಾಗಿ ಹಿಂಪಡೆಯಲು ಅವಕಾಶ ಕಲ್ಪಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಅಂತಹ ಚಂದಾದಾರರು ನಿಯಮಿತವಾಗಿ ಆದಾಯ ತರುವ ಯೋಜನೆಯಲ್ಲಿ ಹೂಡಿಕೆ ಮಾಡುವ ಪ್ರಮೇಯ ಇರುವುದಿಲ್ಲ.

ಪ್ರಸ್ತುತ ಎನ್‌ಪಿಎಸ್ ಸೇರ್ಪಡೆಗೆ ಗರಿಷ್ಠ ವಯಸ್ಸು 70 ವರ್ಷ. 75 ವರ್ಷದವರೆಗೂ ಖಾತೆ ಮುಂದುವರಿಸಬಹುದು. ತಿದ್ದುಪಡಿಯಲ್ಲಿ ಸೇರ್ಪಡೆ ಮತ್ತು ಖಾತೆ ಮುಂದುವರಿಸುವ ಅವಧಿಯನ್ನು 85 ವರ್ಷದವರೆಗೆ ವಿಸ್ತರಿಸುವ ಕುರಿತು ಉಲ್ಲೇಖಿಸಲಾಗಿದೆ. ಪ್ರಸ್ತುತ ಚಂದಾದಾರರ ಎನ್‌ಪಿಎಸ್ ಮೊತ್ತಕ್ಕೆ ಸಾಲ ಸೌಲಭ್ಯವಿಲ್ಲ. ಕರಡಿನಲ್ಲಿ, ಸಾಲ ನೀಡುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಬಹು ಯೋಜನೆಯ ಚೌಕಟ್ಟು

ಎನ್‌ಪಿಎಸ್ ಬಲವರ್ಧನೆಗೆ ಪ್ರಾಧಿಕಾರವು ಬಹು ಯೋಜನೆ ಚೌಕಟ್ಟು (ಎಂಎಸ್‌ಎಫ್) ರೂಪಿಸಿದೆ. ಇದರಡಿ ಅನುಷ್ಠಾನಗೊಳಿಸಿರುವ ಹೊಸ ಯೋಜನೆಯು ಚಂದಾದಾರರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ.

ಪ್ರಸ್ತುತ ಎನ್‌ಪಿಎಸ್ ಚಂದಾದಾರರ ಕೊಡುಗೆಯನ್ನು ಷೇರುಪೇಟೆ, ಸರ್ಕಾರಿ ಬಾಂಡ್, ಕಾರ್ಪೊರೇಟ್ ಬಾಂಡ್ ಮತ್ತು ಇತರ ನಿಧಿಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಯಾವ ಹೂಡಿಕೆಗೆ ಎಷ್ಟು ಮೊತ್ತ ಹಂಚಿಕೆ ಮಾಡಬೇಕು ಎಂಬುದನ್ನು ಚಂದಾದಾರರೇ ನಿರ್ಧರಿಸಬಹುದು. ಚಂದಾದಾರರ ಸೂಚನೆ ಅನ್ವಯ ಫಂಡ್ ಮ್ಯಾನೇಜರ್‌ಗಳು ಹೂಡಿಕೆಯನ್ನು ನಿರ್ವಹಣೆ ಮಾಡುತ್ತಾರೆ.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯಾಗಿರುವ ಎನ್‌ಪಿಎಸ್ ಮೊತ್ತವು ವಾರ್ಷಿಕ ಶೇ 13ರಷ್ಟು ರಿಟರ್ನ್ಸ್ ತಂದುಕೊಟ್ಟಿದೆ. ಕಾರ್ಪೊರೇಟ್ ಬಾಂಡ್ ಮತ್ತು ಸರ್ಕಾರಿ ಬಾಂಡ್‌ಗಳಲ್ಲಿನ ಹೂಡಿಕೆಯು ಶೇ 9ರಷ್ಟು ರಿಟರ್ನ್ಸ್ ನೀಡಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಸದ್ಯ ಎನ್‌ಪಿಎಸ್ ಚಂದಾದಾರರು ತಮ್ಮ ಕೊಡುಗೆಯ ಶೇ 75ರಷ್ಟು ಮೊತ್ತವನ್ನಷ್ಟೇ ಷೇರುಪೇಟೆಯಲ್ಲಿ ಹೂಡಲು ಅವಕಾಶವಿದೆ. ಆದರೆ, ಬಹಳಷ್ಟು ಚಂದಾದಾರರು ಹೆಚ್ಚಿನ ರಿಟರ್ನ್ಸ್ ಅನ್ನು ಅಪೇಕ್ಷಿಸುತ್ತಾರೆ. ಅಂತಹ ಚಂದಾದಾರರಿಗೆ ತಮ್ಮ ಕೊಡುಗೆಯ ಶೇ 100ರಷ್ಟು ಮೊತ್ತವನ್ನೂ ಷೇರುಪೇಟೆಯಲ್ಲಿ ಹೂಡಿಕೆಗೆ ಬಹು ಯೋಜನೆ ಚೌಕಟ್ಟಿನಡಿ ಅವಕಾಶ ಕಲ್ಪಿಸಲಾಗಿದೆ. ಅಕ್ಟೋಬರ್ 1ರಿಂದಲೇ ಇದು ಜಾರಿಗೆ ಬಂದಿದೆ.

‘ಜೆನ್-ಝೀ’ ಪೀಳಿಗೆ ಮತ್ತು ಗಿಗ್ ಕಾರ್ಮಿಕರು ಎನ್‌ಪಿಎಸ್‌ನಿಂದ ದೂರವಿದ್ದಾರೆ. ಅವರನ್ನು ಈ ಯೋಜನೆಯತ್ತ ಆಕರ್ಷಿಸುವ ಉದ್ದೇಶದಿಂದ ಪಿಎಫ್‌ಆರ್‌ಡಿಎ ಈ ಚೌಕಟ್ಟು ರೂಪಿಸಿದೆ. ಆದರೆ, ಜಾಗತಿಕ ಹಾಗೂ ದೇಶೀಯ ವಿದ್ಯಮಾನಗಳು ದೇಶೀಯ ಷೇರುಪೇಟೆ ಮೇಲೆ ಪರಿಣಾಮ ಬೀರುತ್ತವೆ. ಹಾಗಾಗಿ, ಹೆಚ್ಚಿನ ರಿಟರ್ನ್ಸ್ ನಿರೀಕ್ಷಿಸುವ ಚಂದಾದಾರರು ರಿಸ್ಕ್ ಭರಿಸಲೂ ಸಿದ್ಧವಿರಬೇಕಿದೆ.

ಆಧಾರ: ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ವೆಬ್‌ಸೈಟ್, ಎನ್‌ಪಿಸ್‌ಟ್ರಸ್ಟ್.ಒಆರ್‌ಜಿ.ಇನ್,

ಸಾಕ್ಷ್ಯ ಸಂಗ್ರಹ: ಪ್ರಮುಖ ಆರೋಪಿ ಬೆಂಗಳೂರಿಗೆ

ಶಬರಿಮಲೆ ಚಿನ್ನ ಕಳವು ಪ್ರಕರಣ

ಪತ್ತನಂತಿಟ್ಟ (ಪಿಟಿಐ): ಶಬರಿಮಲೆ ದೇವಸ್ಥಾನದಿಂದ ಚಿನ್ನ ಕಳವು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಪ್ರಮುಖ ಆರೋಪಿ ಉಣ್ಣಿಕೃಷ್ಣನ್ ಪೋಟಿ ಅವರನ್ನು ಸಾಕ್ಷ್ಯಾಧಾರ ಸಂಗ್ರಹಕ್ಕಾಗಿ ಬೆಂಗಳೂರಿಗೆ ಶುಕ್ರವಾರ ಕರೆದೊಯ್ದಿದೆ.

ಪೋಟಿ ಅವರನ್ನು ಚೆನ್ನೈ ಮತ್ತು ಹೈದರಾಬಾದ್‌ಗೂ ಕರೆದೊಯ್ಯುವ ಸಾಧ್ಯತೆಯಿದೆ. ಅಲ್ಲದೆ, ರಾನ್ನಿಯ ಜೆಎಫ್‌ಸಿಎಂ ನ್ಯಾಯಾಲಯವು ಪೋಟಿ ಅವರನ್ನು ಅ.30ರವರೆಗೆ ಎಸ್‌ಐಟಿ ಕಸ್ಟಡಿಗೆ ನೀಡಿರುವುದರಿಂದ ಆ ಅವಧಿಯೊಳಗೆ ಸಾಕ್ಷ್ಯಾಧಾರ ಸಂಗ್ರಹ ಕಾರ್ಯವನ್ನು ಪೂರ್ಣಗೊಳಿಸುವ ಗುರಿಯನ್ನು ಎಸ್‌ಐಟಿ ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೋಟಿ ಅವರು 2019ರಲ್ಲಿ ದ್ವಾರಪಾಲಕ ಮೂರ್ತಿಗಳಿಂದ ಚಿನ್ನಲೇಪಿತ ಕವಚವನ್ನು ಬೇರ್ಪಡಿಸಿ ಹೊಸದಾಗಿ ಚಿನ್ನ ಲೇಪನಕ್ಕೆಂದು ಅವುಗಳನ್ನು ತಿರುವಾಂಕೂರು ದೇವಸ್ವಂ ಮಂಡಳಿಯಿಂದ ಪಡೆದಿದ್ದರು. ಚೆನ್ನೈ ಮೂಲದ ಸಂಸ್ಥೆಯಲ್ಲಿ ಕವಚಗಳಿಗೆ ಚಿನ್ನಲೇಪನ ಮಾಡಿದ ನಂತರ ಚೆನ್ನೈ, ಬೆಂಗಳೂರು ಮತ್ತು ಕೇರಳದ ವಿವಿಧ ಸ್ಥಳಗಳಲ್ಲಿ ಪ್ರದರ್ಶಿಸಿದ್ದಾರೆ. ವಿವಿಧ ದೇವಾಲಯಗಳು ಮತ್ತು ಮನೆಗಳಿಗೆ ಅನುಮತಿಯಿಲ್ಲದೆ ಅವುಗಳನ್ನು ಸಾಗಿಸಿದ್ದಾರೆ ಎಂದು ಆರೋಪಿಸಲಾಗಿದೆ. ಶಬರಿಮಲೆ ಯಲ್ಲಿ ಪೋಟಿ ಅವರ ಪ್ರಾಯೋಜಿತ ಕಾರ್ಯಗಳಿಗೆ ಕರ್ನಾಟಕದ ಕೆಲವರು ಹಣ ಒದಗಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೋಟಿ ಹಾಗೂ ಶಬರಿಮಲೆಯ ಮಾಜಿ ಆಡಳಿತಾಧಿಕಾರಿ ಬಿ.ಮುರಾರಿ ಬಾಬು ಅವರನ್ನು ಬಂಧಿಸಲಾಗಿದೆ.

ಬಳ್ಳಾರಿಯಲ್ಲಿ ತನಿಖೆ?

ಬಳ್ಳಾರಿ: ‘ಶಬರಿಮಲೆ ಚಿನ್ನ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಪಿ ದರ್ಜೆಯ ಅಧಿಕಾರಿಯ ನೇತೃತ್ವದ ಕೇರಳ ಸಿಸಿಬಿ ಪೊಲೀಸ್ ತಂಡವು ಶುಕ್ರವಾರ ಬಳ್ಳಾರಿಗೆ ಬಂದಿರುವ ಬಗ್ಗೆ ಮಾಹಿತಿ ಸಿಕ್ಕಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ ತಿಳಿಸಿದ್ದಾರೆ.

‘ತಿರುವನಂತಪುರದಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ 3700/25ಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಬಳ್ಳಾರಿಗೆ ಬಂದಿರುವ ಮಾಹಿತಿ ಇದೆ. ಈ ವಿಷಯ ಖಚಿತವಾಗಬೇಕಿದೆ’ ಎಂದು ಅವರು ತಿಳಿಸಿದ್ದಾರೆ.

ಬಳ್ಳಾರಿ–ಬೆಂಗಳೂರು ರಸ್ತೆಯ ಚಿನ್ನದಂಗಡಿಯೊಂದರಲ್ಲಿ ಕೇರಳ ಪೊಲೀಸರು ಶುಕ್ರವಾರ ವಿಚಾರಣೆ ನಡೆಸಿದರು ಎನ್ನಲಾಗಿದೆ. ಬೆಳಿಗ್ಗೆ ಬಾಗಿಲು ತೆರೆದಿದ್ದ ಅಂಗಡಿ ಮಾಲೀಕರು, ಮಧ್ಯಾಹ್ನ ದಿಢೀರ್ ಬಾಗಿಲು ಬಂದ್ ಮಾಡಿದರು ಎಂದು ಗೊತ್ತಾಗಿದೆ. ಇದು ಅನುಮಾನಕ್ಕೆ ಕಾರಣವಾಗಿದೆ.

ಎಐಸಿಸಿ: ಎಸ್‌ಟಿ ಘಟಕಕ್ಕೆ ಸಂಯೋಜಕರ ನೇಮಕ

ಪ್ರಜಾವಾಣಿ ವಾರ್ತೆ

ಆನಂದ್ ಕುಮಾರ್

ನವದೆಹಲಿ: ಎಐಸಿಸಿ ಪರಿಶಿಷ್ಟ ಜಾತಿ (ಎಸ್‌ಟಿ) ಘಟಕಕ್ಕೆ 45 ರಾಷ್ಟ್ರೀಯ ಸಂಯೋಜಕರನ್ನು ನೇಮಿಸಲಾಗಿದೆ.

ಕರ್ನಾಟಕದಿಂದ ವಿಧಾನಪರಿಷತ್ ಸದಸ್ಯ ಎಫ್.ಎಚ್. ಜಕ್ಕಪ್ಪನವರ್, ಕೆಪಿಸಿಸಿ ಕಾರ್ಯದರ್ಶಿ ಆನಂದ ಕುಮಾರ್ ಅವರನ್ನು ಮಹಾರಾಷ್ಟ್ರದ ಸಂಯೋಜಕರನ್ನಾಗಿ ಎಐಸಿಸಿ ಪರಿಶಿಷ್ಟ ಜಾತಿ ಘಟಕದ ಅಧ್ಯಕ್ಷ ರಾಜೇಂದ್ರ ಪಾಲ್ ಗೌತಮ್ ನೇಮಕ ಮಾಡಿದ್ದಾರೆ.

ದಲಿತ ಸಮುದಾಯಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಸಂಘಟನೆ ಮಾಡಬೇಕು. ಜೊತೆಗೆ, ಶೋಷಿತರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿ, ಪರಿಶಿಷ್ಟರನ್ನು ಪಕ್ಷದತ್ತ ಸೆಳೆಯಲು ಸೂಕ್ತ ಕಾರ್ಯತಂತ್ರ ರೂಪಿಸಬೇಕು. ಪ್ರತಿ ತಿಂಗಳಿಗೊಮ್ಮೆ ತಮ್ಮ ಕಾರ್ಯಚಟುವಟಿಕೆ ಬಗ್ಗೆ ಎಐಸಿಸಿಗೆ ವರದಿ ನೀಡಬೇಕು ಎಂದು ನೇಮಕಾತಿ ಪತ್ರದಲ್ಲಿ ತಿಳಿಸಲಾಗಿದೆ.

‘ಎಸ್‌ಐನಿಂದ ಅತ್ಯಾಚಾರ’: ವೈದ್ಯೆ ಆತ್ಮಹತ್ಯೆ

ಪುಣೆ/ಸತಾರ (ಪಿಟಿಐ): ಸತಾರ ಜಿಲ್ಲೆಯ ಸರ್ಕಾರಿ ಆಸ್ಪತ್ರೆಯ 28 ವರ್ಷದ ವೈದ್ಯೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪೊಲೀಸ್ ಅಧಿಕಾರಿಯೊಬ್ಬರು ಅತ್ಯಾಚಾರವೆಸಗಿ, ಮಾನಸಿಕ ಕಿರುಕುಳ ನೀಡಿದ್ದರು ಎಂದು ಅವರು ಸಾವಿಗೂ ಮುನ್ನ ಅಂಗೈನಲ್ಲಿ ಬರೆದಿಟ್ಟಿದ್ದಾರೆ.

ಪಲತಾಣಾದಲ್ಲಿರುವ ಹೋಟೆಲ್ ಕೊಠಡಿಯೊಂದರಲ್ಲಿ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ವೈದ್ಯೆಯ ದೇಹವು ಗುರುವಾರ ರಾತ್ರಿ ಪತ್ತೆಯಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬೀಡ್ ಜಿಲ್ಲೆಯ ಪಲತಾಣಾ ತಾಲ್ಲೂಕಿನಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯೆ ಕೆಲಸ ಮಾಡುತ್ತಿದ್ದರು.

ವೈದ್ಯೆ ಉಲ್ಲೇಖಿಸಿದ ಅಧಿಕಾರಿಯನ್ನು ಅಮಾನತುಗೊಳಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತುಷಾರ್ ದೋಷಿಗೆ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಸೂಚಿಸಿದ್ದಾರೆ.

‘ಸತಾರ ಜಿಲ್ಲೆಯ ಸಬ್ ಇನ್‌ಸ್ಪೆಕ್ಟರ್ ಗೋಪಾಲ್ ಬದನೆ ಹಲವು ಬಾರಿ ಅತ್ಯಾಚಾರವೆಸಗಿ, ಲೈಂಗಿಕ ಕಿರುಕುಳ ನೀಡಿದ್ದಾರೆ. ಸಾಫ್ಟ್‌ವೇರ್ ಎಂಜಿನಿಯರ್ ಪ್ರಶಾಂತ್ ಬನಕರ್ ಮಾನಸಿಕ ಕಿರುಕುಳ ನೀಡಿದ್ದರು. ಅಸ್ವಾಭಾವಿಕ ಸಾವಿನ ಪ್ರಕರಣದ ವೈದ್ಯಕೀಯ ವರದಿಯನ್ನು ಬದಲಾಯಿಸಲು ಹಾಗೂ ವೈದ್ಯಕೀಯ ಪರೀಕ್ಷೆಗಾಗಿ ಆರೋಪಿಗಳನ್ನು ಆಸ್ಪತ್ರೆಗೆ ಕರೆತಂದ ವೇಳೆ ವರದಿಯನ್ನು ಮಾರ್ಪಡಿಸುವಂತೆ ಒತ್ತಾಯಿಸಲಾಗುತ್ತಿತ್ತು’ ಎಂದು ವೈದ್ಯೆಯು ಅಂಗೈನಲ್ಲಿ ಬರೆದಿದ್ದಾರೆ.

‘ಆರೋಪಿ ಗೋಪಾಲ್ ವಿರುದ್ಧ ಅತ್ಯಾಚಾರ ಹಾಗೂ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣ ದಾಖಲಿಸಲಾಗಿದೆ. ಸಂತ್ರಸ್ತೆಯು ಅಂಗೈನಲ್ಲಿ ಬರೆದ ಎಲ್ಲಾ ಆರೋಪಗಳ ಕುರಿತಂತೆ, ತನಿಖೆ ನಡೆಸಲಾಗುವುದು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

25 ಅಕ್ಟೋಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಚತುರ್ಥಿ ಗಂ. 27-49 **ನಕ್ಷತ್ರ:** ಅನುರಾಧ 7-52 **ಯೋಗ:** ಶೋಭನ ಆಹೋರಾತ್ರ ಕರಣ: ವಣಿಜ ಗಂ. 14-35 ತುಲಾ ಮಾಸದ 08 ನೇ ದಿನ. **ಮಳೆ ನಕ್ಷತ್ರ:** ಸ್ವಾತಿ 1 ನೇ ಪಾದ. **ರಾಹುಕಾಲ:** ಬೆಳಿಗ್ಗೆ 09-00 10-30, **ಸೂರ್ಯೋದಯ:** 06-26 **ಸೂರ್ಯಾಸ್ತ:** 06-03, **ಮುಸ್ಲಿಂ ದಿನಾಂಕ:** 02 ಜುಮಾದುಲ್ಲಾವಲ್, **ಅದೃಷ್ಟ ಸಂಖ್ಯೆ:** 5, 12

ಮೇಷ: ವಿವಾಹ ವಿಚಾರದ ನಿರ್ಧಾರಗಳೆಲ್ಲವೂ ಅಡ್ಡಗೋಡೆಯ ಮೇಲಿನ ದೀಪದಂತೆ ಇರುವುದು ಅಸಮಾಧಾನವನ್ನು ಉಂಟುಮಾಡುತ್ತದೆ. ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು.

ವೃಷಭ: ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿದ್ದರೆ ಬಹುಮಾನವನ್ನು ನಿರೀಕ್ಷಿಸಬಹುದು. ದಂಪತಿಗಳು ಒಟ್ಟಾಗಿ ದೇವರ ದರ್ಶನ ಅಥವಾ ಹರಕೆ ತೀರಿಸುವಂಥ ಕೆಲಸಗಳನ್ನು ಮಾಡುವ ಯೋಗವಿದೆ. ಅಪೇಕ್ಷಿತ ಫಲ ಈಡೇರುವುದು.

ಮಿಥುನ: ಸ್ನೇಹಿತರೊಂದಿಗೆ ಭೂಮಿ ಖರೀದಿಗಾಗಿ ನಡೆಸಿದ ಪ್ರಯತ್ನ ಲಾಭ ತರಲಿದೆ. ಮಹಿಳೆಯರು ದೇಹದಲ್ಲಾಗುತ್ತಿರುವ ಅಸಮರ್ಪಕ ಬದಲಾವಣೆಗಳನ್ನು ಕಡೆಗಣಿಸದೆ ವೈದ್ಯರ ಸಲಹೆಯನ್ನು ಪಡೆದುಕೊಳ್ಳಿ.

ಕರ್ಕಾಟಕ: ಹಣವು ಕೈಸೇರಿತೆಂದಾದರು ದುಂದುವೆಚ್ಚ ಮಾಡದೆ ಹಣದ ಸದ್ವಿನಿಯೋಗ ಮಾಡಿ. ಮೈಮುರಿದು ಕೆಲಸ ಮಾಡುವ ಬದ್ಧತೆ ನಿಲ್ಲಿಸಬೇಡಿ. ಅದು ಆರೋಗ್ಯವನ್ನು ಕಾಪಾಡುವುದು.

ಸಿಂಹ: ಮಕ್ಕಳ ಏಳಿಗೆಯನ್ನು ಕಾಣಬೇಕೆಂದು ಬಯಸುವುದು ಅರಿವಿಗೆ ಬಾರದ ವಿಷಯವಾಗಿ ಉಳಿಯುತ್ತದೆ. ಬೇಸರ ಬೇಡ ಶ್ರೀ ಆಂಜನೇಯನ ದರ್ಶನದಿಂದ ಅಸಾಧ್ಯ ಕಾರ್ಯಗಳು ನೆರವೇರಲಿವೆ.

ಕನ್ಯಾ: ವ್ಯವಹಾರದಲ್ಲಿ ಎದುರಾಗುವ ಲಾಭನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಮನಸ್ಸು ಬರಲಿದೆ. ಕಥೆ ಕವನಗಳ ಬರವಣಿಗೆಯಲ್ಲಿ ಅಥವಾ ಪುಸ್ತಕಗಳ ಅಧ್ಯಯನದಲ್ಲಿ ಸಮಯ ಕಳೆಯುವಿರಿ.

ತುಲಾ: ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ. ಅಸೂಯೆ ಪಡುವ ಸಹೋದ್ಯೋಗಿ ಯಾರೆಂಬುವುದು ತಿಳಿಯುವುದು. ಕೆಲಸಗಳಿಗೆ ಬೇರೆಯವರ ಅತಿಯಾದ ಅವಲಂಬನೆ ಬೇಡ. ಆತ್ಮಸ್ಥೈರ್ಯ ಹೆಚ್ಚಲಿದೆ.

ವೃಶ್ಚಿಕ: ಅರ್ಧಕ್ಕೆ ನಿಂತ ಸ್ವಂತ ಕಾರ್ಯಗಳು ಪುನಃ ಚಾಲನೆ ದೊರೆಯಲಿದೆ. ವ್ಯವಹಾರದ ವಿಷಯಗಳಿಂದಾಗಿ ಬಿಡುವಿಲ್ಲದ ಕೆಲಸಗಳು ಎದುರಾಗುವುದು. ತಾಮಸ ಗುಣಗಳನ್ನು ಪ್ರದರ್ಶಿಸಿದರೆ ಘನತೆಗೆ ಧಕ್ಕೆ ಉಂಟಾಗುತ್ತದೆ.

ಧನು: ಯಾತ್ರಿಕರಿಗೆ ದೇವರ ಕೃಪೆಯಿಂದಾಗಿ ಎಲ್ಲಾ ಒಳ್ಳೆಯ ವ್ಯವಸ್ಥೆ ಪಡೆಯುವಿರಿ. ವಿದ್ಯಾರ್ಥಿಗಳು ಸಾಮಾಜಿಕ ಕಾರ್ಯ ಎಂಬ ನೆಪ ಮಾಡಿಕೊಂಡು ಪಾಠ ಪ್ರವಚನಗಳ ಮೇಲೆ ಗಮನ ಕಡಿಮೆಯಾದರೆ ಕಷ್ಟ

ಮಕರ: ಜನರ ನಿಂದನೆಗಳು ಕಿವಿಗೆ ಬಿದ್ದು ವಾಸ್ತವತೆಯ ಬಗ್ಗೆ ಅವರಿಗೆ ಪರಿಚಯಿಸುವ ಹಠ ಮೂಡುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ವೀಕ್ಷಿಸಿದ ವ್ಯಕ್ತಿಯಿಂದ ಅನುಕೂಲಗಳಾಗುವ ಸಾಧ್ಯತೆ ಇದೆ.

ಕುಂಭ: ಧನಲಾಭದಲ್ಲಿ ಒಂದು ರೀತಿಯ ಹೊಸ ಅನುಭವ ಹಾಗೂ ಅದೃಷ್ಟವನ್ನು ಕಾಣುವಿರಿ. ಗುರುವಿನ ಆಶೀರ್ವಾದವನ್ನು ಬೇಡಿ ನಿಮ್ಮ ಕೆಲಸವನ್ನು ಆರಂಭಿಸಿ. ಆದಾಯದಷ್ಟೇ ಖರ್ಚು ಇರಲಿದೆ.

ಮೀನ: ಸಣ್ಣ-ಪುಟ್ಟ ಅನಾರೋಗ್ಯಕ್ಕೆ ಸ್ವಯಂಔಷಧ ಮಾಡಿಕೊಳ್ಳಬೇಡಿ. ವಸ್ತ್ರ ವಿನ್ಯಾಸಕರ ಹೊಸ ವಿನ್ಯಾಸಕ್ಕೆ ಬೇಡಿಕೆ ಬರುವುದು. ರಾಸಾಯನಿಕ ವಸ್ತುವಿನಿಂದ ಅಲರ್ಜಿಯಾಗುವ ಸಾಧ್ಯತೆಗಳಿದೆ.

ಪದಬಂಧ 6203

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ಬಳೆಗಳ ಗೊಂಚಲು (3)
6.ಕೊನೆಗೆ ನಾಡಿ ಹಿಡಿದಿರುವ ಸ್ನೇಹಿತ (4)
7.ಪರಮಾತ್ಮನನ್ನು ಹೀಗೂ ಕರೆವರು (6)
9.ಪ್ರೇಮಿಗಳ ಹುಸಿ ಜಗಳ (6)
14.ನಮೂನೆ ಅಥವಾ ಆದರ್ಶ (3)
15.ಒತ್ತಾಯವನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ

1.ಗಮನಿಸಲು ಯೋಗ್ಯವಾದುದು (4)
2.ದಂಡಯಾತ್ರೆ ಮಾಡುವಾಗ ನೀಡಿದ ಶಿಕ್ಷೆ (2)
3.ಹೆಚ್ಚು ಪದದ ವಿರುದ್ಧ ಪದ (3)
5.ಸಂಬಳವಿಲ್ಲಿ ಉಲ್ಟಾ ಕಾಣುತ್ತಿದೆ (3)
6.ನೆನಪು ಮಾಡಿಕೊಂಡು ತೋರಿದ ಬಿನ್ನಾಣ (3)
8.ದಶಕದಿಂದಲೂ ಕಾಡುತ್ತಿರುವ ಸೊಳ್ಳೆ (3)
10.ಮಗನಿಲ್ಲಿ ತಿರುಗಿದ್ದಾನಲ್ಲಾ! (3)
11.ಭಾರ ಹೊರುವ ಕೂಲಿಯಾಳು (3)
12.ಪದದಲ್ಲಿಯೇ ಪುಸ್ತಕದ ಸರ್ಗವಿದೆ! (4)
13.ಒನಕೆಯನ್ನೇ ಆಯುಧವನ್ನಾಗಿಸಿಕೊಂಡು ಶತ್ರುಗಳನ್ನು ಹಿಮ್ಮೆಟ್ಟಿಸಿದ ವೀರ ವನಿತೆ (3)
16.ವಂದಿಸುವಾಗ ಹೊಗಳುಭಟ್ಟ ಕಾಣಿಸಿದನಲ್ಲಾ! (2)



6202ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಅಳ್ಳೆದೆ 2.ಸಾರಜನಕ 4.ಸಾಕ್ಷಾತ್ಕಾರ 6.ವದಂತಿ 7.ತಮ 9.ದಿವಾನ 11.ತಿಲ 13.ಸವಡು 14.ಕರವಾಲ 16.ಜಗಳಗಂಟಿ 17.ಹರಕೆ

ಮೇಲಿಂದ ಕೆಳಕ್ಕೆ:

1.ಅಹಿಂಸಾವ್ರತ 2.ಸಾಮು 3.ನವದಂಪತಿ 5.ರಶೀದಿ 8.ಮದುವಣಿಗ 10.ನರಕ 12.ಲವಲವಿಕೆ 15.ತುಟಿ

ಸುಡೊಕು 6587

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	9			3		8	
	4			8		2	5	9
8	1		2	6		7		
	8					1		5
	9	2	8	1	5		6	
5						8		
9		7	5					6
	5			7	2		4	
4	3		6		1			2

6586 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,891
ಇಂದಿನ ಅಂತ್ಯ:	25,795
ದಿನದ ಗರಿಷ್ಠ:	25,718
	96

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹580
12 ಕ್ಕೆ	₹80
ಮೈಸೂರು: 100 ಕ್ಕೆ	₹583

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹184
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹166

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1410 (1400)
ಸೋಯಾ (ರಿಫೈನ್ಡ್)	₹1285 (1275)
ಸೂರ್ಯಕಾಂತಿ (ರಿಫೈನ್ಡ್)	₹1480 (1475)
ಪಾಮೋಲಿನ್	₹1285 (1285)

ಮುದ್ರೆಮನೆ ಕಾಫಿ (50 ಕೆಜಿಗೆ)	
ಎಪಿ	₹31000
ಎಸಿ	₹15800
ಆರ್‌ಪಿ	₹19500
ಆರ್‌ಸಿ	₹10950

ಕೈಗಾರಿಕೆ ನೋಂದಣಿ ವಿಳಂಬಕ್ಕೆ ಅಸಮಾಧಾನ

ನೋಂದಣಿಗೆ ಇರುವ ಅಡೆತಡೆ ತ್ವರಿತವಾಗಿ ನಿವಾರಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೈಗಾರಿಕಾ ನೋಂದಣಿ ಅನುಮತಿ ವಿಳಂಬದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತ್ವರಿತಗತಿಯಲ್ಲಿ ನೋಂದಣಿಗೆ ಇರುವ ಅಡೆತಡೆಗಳನ್ನು ಕೂಡಲೇ ನಿವಾರಿಸುವಂತೆ ಅಧಿಕಾರಿಗಳಿಗೆ ಕಟ್ಟಪ್ಪಣೆ ವಿಧಿಸಿದರು.

'ಕೈಗಾರಿಕಾ ಯೋಜನೆಗಳಿಗೆ ಸಂಬಂಧಿಸಿದಂತೆ ನೆರೆಯ ತೆಲಂಗಾಣ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ದಿನಗಳಲ್ಲಿ ಒಪ್ಪಿಗೆ ನೀಡಲಾಗುತ್ತಿದೆ' ಎಂದು ಸಿದ್ದರಾಮಯ್ಯ ಅವರು ಉನ್ನತ ಮಟ್ಟದ ಯೋಜನಾ ಒಪ್ಪಿಗೆ ಸಮಿತಿ ಸಭೆಯಲ್ಲಿ ಕೇಳಿದರು. ಅದಕ್ಕೆ ಅಧಿಕಾರಿಗಳು ನೀಡಿದ ಉತ್ತರಕ್ಕೆ ಮುಖ್ಯಮಂತ್ರಿ ಅತೃಪ್ತಿ ವ್ಯಕ್ತಪಡಿಸಿದರು.

'ನೆರೆಯ ರಾಜ್ಯಗಳಲ್ಲಿ ಕೈಗಾರಿಕೆಗಳ ನೋಂದಣಿಗೆ ಕನಿಷ್ಠ 7 ದಿನಗಳಿಂದ ಗರಿಷ್ಠ 66 ದಿನಗಳು ಬೇಕಾಗುತ್ತದೆ. ನಮ್ಮಲ್ಲಿ, ಭೂಬಳಕೆ ಉದ್ದೇಶ ಬದಲಾವಣೆ, ವಿದ್ಯುತ್ ಸೌಲಭ್ಯ, ಮರ ಕಡಿಯಲು, ಸ್ಥಳಾಂತರಕ್ಕೆ ಒಪ್ಪಿಗೆ, ನೀರಿನ ಪೂರೈಕೆ, ಅಗ್ನಿಶಾಮಕ ಇಲಾಖೆಯ ಒಪ್ಪಿಗೆ, ಕೈಗಾರಿಕೆಗಳ ನೋಂದಣಿ ಮತ್ತು ಲೈಸೆನ್ಸ್, ಬಾಯ್ಲರ್ ನೋಂದಣಿ, ಲಿಫ್ಟ್ ಬಳಕೆಗೆ ಪರವಾನಗಿ ಪಡೆಯಬೇಕು. ನೆರೆಯ ರಾಜ್ಯಗಳಲ್ಲಿ ಈ ಸೇವೆಗಳನ್ನು ಕನಿಷ್ಠ 7 ದಿನಗಳಿಂದ ಗರಿಷ್ಠ 66 ದಿನಗಳಲ್ಲಿ ಒದಗಿಸಲಾಗುತ್ತಿದೆ. ನಮ್ಮಲ್ಲಿ ಕನಿಷ್ಠ 20 ರಿಂದ ಗರಿಷ್ಠ 120 ದಿನಗಳು ಹಿಡಿಯುತ್ತಿವೆ' ಎಂದು ಅಧಿಕಾರಿಗಳು ವಿವರ ನೀಡಿದರು.

ಉನ್ನತ ಮಟ್ಟದ ಯೋಜನಾ ಒಪ್ಪಿಗೆ ಸಮಿತಿ ಸಭೆಯಲ್ಲಿ ಶಾಲಿನಿ ರಜನೀಶ್, ಎಂ.ಬಿ. ಪಾಟೀಲ, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಪಾಲ್ಗೊಂಡಿದ್ದರು

ಮುಖ್ಯಮಂತ್ರಿ, 'ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಅಗ್ನಿಶಾಮಕ ಇಲಾಖೆಯಿಂದ ವಿಪರೀತ ವಿಳಂಬವಾಗುತ್ತಿದೆ ಎಂದು ಹೂಡಿಕೆದಾರರು ಹೇಳುತ್ತಿದ್ದಾರೆ. ಇದನ್ನು ತಪ್ಪಿಸಲು ಹೂಡಿಕೆದಾರರ ಸಮಾವೇಶದಲ್ಲಿ ಬಿಡುಗಡೆ ಮಾಡಿದ, ಮೈಕ್ರೊಸಾಫ್ಟ್ ಕಂಪನಿ ರೂಪಿಸಿರುವ ಅತ್ಯಾಧುನಿಕ ಏಕಗವಾಕ್ಷಿ ಪೋರ್ಟಲ್ ಅಡಿ 20 ಇಲಾಖೆಗಳ 115 ಸೇವೆಗಳನ್ನು ತರಲಾಗಿದೆ ಎಂದೂ ಅಧಿಕಾರಿಗಳು ಹೇಳಿದರು.

'ಕರ್ನಾಟಕ ದೇಶದಲ್ಲೇ ಪ್ರಗತಿಪರ ರಾಜ್ಯವಾಗಿದ್ದು, ಹೂಡಿಕೆಗೆ ಪೂರಕವಾದ ವಾತಾವರಣವನ್ನು ಇನ್ನಷ್ಟು ಉತ್ತಮಪಡಿಸಬೇಕು. ಯಾವುದೇ ಕಾರಣಕ್ಕೂ ಅನುಮೋದನೆಗಳ ನೀಡಿಕೆಯಲ್ಲಿ ವಿಳಂಬಕ್ಕೆ ಅವಕಾಶ ನೀಡಬಾರದು' ಎಂದು ಸಿದ್ದರಾಮಯ್ಯ ಸೂಚಿಸಿದರು.

'ಕೈಗಾರಿಕಾ ಸ್ನೇಹಿ ವ್ಯವಸ್ಥೆಯನ್ನು ಉತ್ತಮಪಡಿಸಲು ಕಾನೂನು ಮತ್ತು ನಿಯಮಗಳಿಗೆ ಅಗತ್ಯ ತಿದ್ದುಪಡಿ ತರುವ ನಿಟ್ಟಿನಲ್ಲಿ ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು. ಕೈಗಾರಿಕೆಗಳ ಆರಂಭಕ್ಕೆ ಅಗತ್ಯವಾದ ಭೂಬಳಕೆ ಬದಲಾವಣೆ ಪ್ರಕ್ರಿಯೆ ಸೇರಿ ವಿವಿಧ ಎನ್‌ಒಸಿಗಳ ನೀಡಿಕೆಯ ಕಾಲಮಿತಿ ಕಡಿಮೆ ಮಾಡಬೇಕು. ಕಾಲಮಿತಿ ಕಡಿಮೆ ಮಾಡಲು ಬೇಕಾದ ವಿವರವಾದ ಪ್ರಸ್ತಾವನೆ ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ವಿಳಂಬಕ್ಕೆ ಅವಕಾಶ ನೀಡಬಾರದು' ಎಂದು ಹೇಳಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವ ಎಂ.ಬಿ.ಪಾಟೀಲ, 'ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಕರ್ನಾಟಕವನ್ನು ದೇಶದಲ್ಲೇ ಅಗ್ರ ರಾಜ್ಯವನ್ನಾಗಿ ಮಾಡಲಾಗುವುದು. ರಾಜ್ಯದಲ್ಲಿ ಹೂಡಿಕೆದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಕ್ಷಿಪ್ರಗತಿಯಲ್ಲಿ ಬಗೆಹರಿಸಲು ಕ್ರಮ ಕೈಗೊಳ್ಳುತ್ತೇವೆ. ವಿವಿಧ ಇಲಾಖೆಗಳಲ್ಲಿ ಆಗಬೇಕಾಗಿರುವ ಕೆಲಸಗಳ ಬಗ್ಗೆ ನಿರ್ದೇಶನ ನೀಡಿ, ವರದಿ ಕೊಡುವಂತೆ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಲಾಗಿದೆ' ಎಂದು ಅವರು ತಿಳಿಸಿದರು.

ಹೂಡಿಕೆ ಯೋಜನೆಗಳು ಯಾವುವು

ಕಂಪನಿ	ಮೊತ್ತ (₹ ಕೋಟಿಗಳಲ್ಲಿ)
ಎನ್‌ಎಕ್ಸ್ ಇಂಡಿಯಾ	9,298
ಜಿಂದಾಲ್ ಎಲೆಕ್ಟ್ರಿಕಲ್ ಸ್ಟೀಲ್	7,102
ಶ್ನೈಡರ್ ಎಲೆಕ್ಟ್ರಿಕ್ ಬಿಸಿನೆಸ್ ಇಂಡಿಯಾ	1,520.75
ರಿಲಯನ್ಸ್ ಕನ್ಸ್ಯೂಮರ್ ಪ್ರಾಡಕ್ಟ್ಸ್	1,622
ಗ್ರಾಸಿಂ ಇಂಡಸ್ಟ್ರೀಸ್	1,386
ಜಿಂದಾಲ್ ಸ್ಟೀಲ್	1,300.57
ಟೊಯೋಟ ಎಂಜಿನ್ ಇಂಡಿಯಾ	1,330
ವಾಯು ಅನರ್ಜಿ	1,251
ಕ್ವಾಂಟಿಯಾ ಇಂಡಿಯಾ	1,136
ಸ್ಪೀರ್ ಎಲೆಕ್ಟ್ರಿಕ್ ಪ್ರೈ.ಲಿ, ಎಚ್‌ಎಸ್‌ಎಸ್ ಟೆಕ್ಸ್‌ಟೈಲ್ಸ್	740
ತೇಜಸ್ ನೆಟ್‌ವರ್ಕ್	542.19
ಬಾಲಾಜಿ ವೇಫರ್ಸ್	298.75
ಎಂಐಸಿ ಇಂಡಸ್ಟ್ರಿಯಲ್ ಪಾರ್ಕ್	80

₹27,607 ಕೋಟಿ ಹೂಡಿಕೆಗೆ ಒಪ್ಪಿಗೆ

ರಾಜ್ಯ ಉನ್ನತ ಮಟ್ಟದ ಯೋಜನಾ ಮಂಜೂರಾತಿ ಸಮಿತಿ ಸಭೆಯಲ್ಲಿ ₹27,607.26 ಕೋಟಿ ಬಂಡವಾಳ ಹೂಡಿಕೆಗೆ ಒಪ್ಪಿಗೆ ನೀಡಲಾಗಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಸಭೆ ಬಳಿಕ ಮಾತನಾಡಿದ ಅವರು, ಅನುಮೋದನೆ ನೀಡಿದ ಯೋಜನೆಗಳ ಪೈಕಿ 11 ಹೊಸ ಕೈಗಾರಿಕಾ ಯೋಜನೆಗಳು ಮತ್ತು 2 ಹೆಚ್ಚುವರಿ ಪ್ರಸ್ತಾವನೆಗಳು ಸೇರಿವೆ. ಒಟ್ಟು 13 ಯೋಜನೆಗಳಿಂದ 8,704 ನೇರ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದರು.

ಸುದ್ದಿ 2 ನಿಮಿಷ

ಪಿಡಿಪಿಎಸ್ ಅಡಿ ಈರುಳ್ಳಿ ಖರೀದಿ ಯತ್ನ: ಶಿವಾನಂದ ಪಾಟೀಲ

ಬೆಂಗಳೂರು: ಈರುಳ್ಳಿ ಬೆಲೆ ಕುಸಿತದ ಕಾರಣ ಪಿಡಿಪಿಎಸ್ (ಪ್ರೈಸ್ ಡಿಫಿಷಿಯನ್ಸಿ ಪ್ರೊಕ್ಯೂರ್‌ಮೆಂಟ್ ಸ್ಕೀಮ್) ಅಡಿ ಈರುಳ್ಳಿ ಖರೀದಿಸುವ ಪ್ರಯತ್ನ ನಡೆದಿದ್ದು, ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಇದೇ ಮುಂಗಾರು ಹಂಗಾಮಿನಲ್ಲಿ ಸುರಿದ ಭಾರಿ ಮಳೆಗೆ ಕೊಯಿಲಿಗೆ ಬಂದಿದ್ದ ಈರುಳ್ಳಿ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ. ಇದರಿಂದ ಬೆಲೆ ಕುಸಿದು ಹೋಗಿದೆ. ಕಳೆದ ಸಾಲಿನ ಸರಾಸರಿ ಈರುಳ್ಳಿ ಮಾರುಕಟ್ಟೆ ಬೆಲೆಗೆ ಹೋಲಿಕೆ ಮಾಡಿದರೆ ಈ ಸಾಲಿನಲ್ಲಿ ಮಾರಾಟ ದರ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಇದೆ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ರಾಜ್ಯದಲ್ಲಿ ಮುಂಗಾರು ಮತ್ತು ಹಿಂಗಾರು ಸೇರಿ ಒಟ್ಟು 2.05 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬೆಳೆಯಲಾಗುತ್ತಿದೆ. ವಾರ್ಷಿಕ ಉತ್ಪನ್ನ 27 ಲಕ್ಷ ಟನ್‌ಗಳು. ಮುಖ್ಯವಾಗಿ ವಿಜಯಪುರ, ಚಿತ್ರದುರ್ಗ, ಬಾಗಲಕೋಟೆ, ವಿಜಯಪುರ, ಬೆಳಗಾವಿ, ಧಾರವಾಡ, ಕೊಪ್ಪಳ, ಗದಗ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ ಎಂದಿದ್ದಾರೆ.

ಜಮೀನಿನಲ್ಲೇ ಈರುಳ್ಳಿ ಬೆಳೆ ನಾಶವಾಗಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಿ ಚರ್ಚೆ ಮಾಡಿದ್ದು, ಎಂಐಎಸ್ (ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ) ಅಡಿಯಲ್ಲಿ ಖರೀದಿಸಲು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಶಿಫಾರಸು ಮಾಡಿದ್ದರು. ಆದರೆ, ಪಿಡಿಪಿಎಸ್ ಅಡಿ ಈರುಳ್ಳಿ ಖರೀದಿ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಅನುಮತಿ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ ಎಂದು ಶಿವಾನಂದ ಪಾಟೀಲ ತಿಳಿಸಿದ್ದಾರೆ.

'ಬೆದರಿಕೆಗೆ ಮಣಿದು ವ್ಯಾಪಾರ ಒಪ್ಪಂದ ಮಾಡಿಕೊಳ್ಳಲ್ಲ'

ಬರ್ಲಿನ್ / ನವದೆಹಲಿ (ಪಿಟಿಐ): 'ಯಾವುದೇ ಬೆದರಿಕೆಗೆ ಮಣಿದು ಭಾರತ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದಿಲ್ಲ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಭಾರತವು ಯುರೋಪಿಯನ್ ಒಕ್ಕೂಟ, ಅಮೆರಿಕ ಸೇರಿದಂತೆ ವಿವಿಧ ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳ ಕುರಿತು ಸಕ್ರಿಯವಾಗಿ ಮಾತುಕತೆ ನಡೆಸುತ್ತಿದೆ. ಆತುರದಲ್ಲಿ ನಾವು ಒಪ್ಪಂದಗಳನ್ನು ಮಾಡಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಮತ್ತು ಹೂಡಿಕೆಗಳನ್ನು ಹೆಚ್ಚಿಸಲು ಬರ್ಲಿನ್‌ಗೆ ಭೇಟಿ ನೀಡಿರುವ ಗೋಯಲ್ ಅವರು, ವ್ಯಾಪಾರ ಒಪ್ಪಂದವನ್ನು ದೀರ್ಘಾವಧಿಯ ದೃಷ್ಟಿಕೋನದಿಂದ ನೋಡಬೇಕು. ಹೆಚ್ಚಿನ ಸುಂಕಗಳನ್ನು ಎದುರಿಸಲು ಭಾರತವು ಹೊಸ ಮಾರುಕಟ್ಟೆಗಳನ್ನು ಅನ್ವೇಷಿಸುತ್ತಿದೆ ಎಂದು ಹೇಳಿದ್ದಾರೆ.

ಭಾರತವು, ಅಲ್ಪಾವಧಿಗೆ ಸಂಬಂಧಿಸಿದ ವ್ಯಾಪಾರ ಒಪ್ಪಂದದ ಮಾತುಕತೆಯ ಬಗ್ಗೆ ನೋಡುವುದಿಲ್ಲ. ವ್ಯಾಪಾರ ಒಪ್ಪಂದಗಳು ದೀರ್ಘಾವಧಿಯದ್ದಾಗಿರುತ್ತವೆ. ಇದು ಕೇವಲ ಸುಂಕ ಅಥವಾ ಸರಕು ಮತ್ತು ಸೇವೆಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಇದು ನಂಬಿಕೆ ಮತ್ತು ಸಂಬಂಧದ ಬಗ್ಗೆಯೂ ಆಗಿದೆ ಎಂದರು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹285-625
ದ್ವಿತಳಿ (ಬಿ.ವಿ)	₹395-766

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹26000-28050
ಪುತ್ತೂರು	₹6000-24500
ಸುಳ್ಯ	₹20000-24500

ಅಡಿಕೆ ಧಾರಣೆ

ಕುಮಟಾ		ಶಿರಸಿ			
ಚಾಲಿ	40569-46869	ರಾಶಿ	47899-66501	ಚಾಲಿ	39569-48599
ಚಿಪ್ಪು	27569-33029	ಬೆಟ್ಟೆ	40199-51199	ಕೋಕ	12009-29699
ಕೋಕ	11019-31869	ಬಿಳಿಗೋಟು	24809-38599	ಹೊಸಚಾಲಿ	31899-31899
ಫ್ಯಾಕ್ಟರಿ	9099-26829	ಚಾಲಿ	42098-48111	ಕೆಂಪುಗೋಟು	21899-36099
ಹಳೆಚಾಲಿ	41569-45698	ಕೆಂಪುಗೋಟು	24599-36499	ರಾಶಿ	50565-64619
ಶಿವಮೊಗ್ಗ		ರಾಶಿ	51298-59518	ತಟ್ಟಿಬೆಟ್ಟೆ	35901-50090
ಬೆಟ್ಟೆ	61000-76900	**ಯಲ್ಲಾಪುರ**		**ಪುತ್ತೂರು**	
ಗೊರಬಲು	19001-46399	ಆಪಿ	71795-71795	ಕೋಕ	20000-31500
ಹೊಸತು	56109-66501	ಬಿಳಿಗೋಟು	16899-38129	ಹೊಸತು	26000-36000

ಉಕ್ಕು ಬೆಲೆ 5 ವರ್ಷದ ಕನಿಷ್ಠ ಮಟ್ಟಕ್ಕೆ

ನವದೆಹಲಿ (ಪಿಟಿಐ): ದೇಶೀಯ ಸಗಟು ಮಾರುಕಟ್ಟೆಯಲ್ಲಿ ಟನ್ ಉಕ್ಕು ಬೆಲೆಯು ₹47 ಸಾವಿರದಿಂದ ₹48 ಸಾವಿರದವರೆಗೆ ಮಾರಾಟವಾಗುತ್ತಿದೆ. ಈ ಬೆಲೆ ಇಳಿಕೆ ಐದು ವರ್ಷದ ಕನಿಷ್ಠ ಮಟ್ಟದ್ದಾಗಿದೆ ಎಂದು ಮಾರುಕಟ್ಟೆ ಸಂಶೋಧನಾ ಸಂಸ್ಥೆ ಬಿಗ್‌ಮಿಂಟ್ ಶುಕ್ರವಾರ ತಿಳಿಸಿದೆ.

ಹಾಟ್ ರೋಲ್ಡ್ ಕಾಯಿಲ್ (ಎಚ್‌ಆರ್‌ಸಿ) ಪ್ರತಿ ಟನ್‌ಗೆ ₹47,150, ಟಿಎಂಟಿ ಬಾರ್‌ಗಳು (ರಿ-ಬಾರ್) ₹46,500ರಿಂದ ₹47 ಸಾವಿರದಂತೆ ಸಗಟು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದೆ. 2020ರಲ್ಲಿ ಪ್ರತಿ ಟನ್ ಹಾಟ್ ರೋಲ್ಡ್ ಕಾಯಿಲ್ ಬೆಲೆ ₹46 ಸಾವಿರ ಇದ್ದರೆ, ಬಾರ್‌ಗಳು ಟನ್‌ಗೆ ₹45 ಸಾವಿರದಷ್ಟಿತ್ತು ಎಂದು ತಿಳಿಸಿದೆ.

ರಫ್ತು ಪ್ರಮಾಣ ಮಂದಗೊಂಡಿರುವುದು, ಹೆಚ್ಚಿದ ಆಮದು ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಉಕ್ಕಿನ ಹೆಚ್ಚಿನ ಪೂರೈಕೆಯೇ ದರ ಇಳಿಕೆಗೆ ಕಾರಣ ಎಂದು ತಿಳಿಸಿದೆ.

ಸರ್ಕಾರ ವಿವಿಧ ಕ್ರಮ ತೆಗೆದುಕೊಂಡಿದ್ದರೂ, ಉಕ್ಕು ಆಮದು ಪ್ರಮಾಣ ಸಕ್ರಿಯವಾಗಿದೆ. ಚೀನಾದಂತಹ ದೇಶಗಳ ರಫ್ತು ಹೆಚ್ಚಳದಿಂದಾಗಿ ದೇಶದ ಉಕ್ಕಿನ ರಫ್ತು ತೀವ್ರವಾಗಿ ಕುಸಿದಿದೆ ಎಂದು ತಿಳಿಸಿದೆ.

ಅಕ್ಟೋಬರ್ 27ರಂದು ನವದೆಹಲಿಯಲ್ಲಿ ಕೇಂದ್ರ ಉಕ್ಕು ಸಚಿವಾಲಯವು ಉಕ್ಕು ಆಮದು ಸಂಬಂಧಿತ ಸಮಸ್ಯೆಗಳನ್ನು ಚರ್ಚಿಸಲು ಉದ್ಯಮದ ಪಾಲುದಾರರೊಂದಿಗೆ ಮಾತುಕತೆ ನಡೆಸಲಿದೆ.

ಪೀಯೂಷ್ ಪಾಂಡೆ ನಿಧನ



ಪೀಯೂಷ್ ಪಾಂಡೆ

ಮುಂಬೈ (ಪಿಟಿಐ): ದೇಶದ ಜಾಹೀರಾತು ಲೋಕಕ್ಕೆ ವಿಶೇಷ ಮೆರುಗು ತುಂಬಿದ್ದ ಪದ್ಮಶ್ರೀ ಪುರಸ್ಕೃತ ಪೀಯೂಷ್ ಪಾಂಡೆ (70) ಅವರು ಶುಕ್ರವಾರ ನಿಧನರಾಗಿದ್ದಾರೆ.

ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಪಾಂಡೆ ಅವರು, ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಬೆಳಿಗ್ಗೆ 5.50ಕ್ಕೆ ಕೊನೆಯುಸಿರೆಳೆದರು. ಶನಿವಾರ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಸಹೋದರಿ, ನಟಿ ಇಳಾ ಅರುಣ್ ತಿಳಿಸಿದ್ದಾರೆ.

ರಾಜಸ್ಥಾನದ ಜೈಪುರದಲ್ಲಿ ಜನಿಸಿದ್ದ ಪಾಂಡೆ ಅವರು, 1982ರಲ್ಲಿ ಜಾಹೀರಾತು ಕಂಪನಿ ಓಗಿಲ್ವಿ ಇಂಡಿಯಾಗೆ ಸೇರಿದರು. ಸ್ಥಳೀಯ ಭಾಷೆ, ಹಾಸ್ಯ ಮತ್ತು ಭಾವನೆಗಳ ಮೂಲಕ ಜನರ ಮನಸಿನಲ್ಲಿ ಬೇರೂರುವಂತಹ ಜಾಹೀರಾತನ್ನು ರೂಪಿಸುವ ಮೂಲಕ ಪ್ರಸಿದ್ಧಿ ಪಡೆದಿದ್ದರು.

2014ರಲ್ಲಿ ಅಬ್ ಕಿ ಬಾರ್ ಮೋದಿ ಸರ್ಕಾರ್ ಎಂಬ ಚುನಾವಣೆ ಘೋಷಣೆ ರೂಪಿಸಿದ್ದರು. ಜೊತೆಗೆ ಕ್ಯಾಡ್‌ಬರಿ, ಏಷ್ಯನ್ ಪೇಂಟ್ಸ್ ಮತ್ತು ಫೆವಿಕಾಲ್‌ಗೆ ಜಾಹೀರಾತು ಘೋಷಣೆಗಳನ್ನು ಸಹ ರೂಪಿಸಿಕೊಟ್ಟಿದ್ದರು.

ಪಾಂಡೆ ಅವರಿಗೆ, 2016ರಲ್ಲಿ ಪದ್ಮಶ್ರೀ ಪ್ರಶಸ್ತಿ, 2024ರಲ್ಲಿ ಲಂಡನ್ ಇಂಟರ್‌ನ್ಯಾಷನಲ್ ಅವಾರ್ಡ್ಸ್‌ನ ಲೆಜೆಂಡ್ ಪ್ರಶಸ್ತಿ ಸಂದಿದೆ.

ಪಾಕ್ ವಿರುದ್ಧ ಜೈಶಂಕರ್ ವಾಗ್ದಾಳಿ

ನವದೆಹಲಿ (ಪಿಟಿಐ): 'ಭಯೋತ್ಪಾದನೆಗೆ ಬಲಿಪಶುವಾದವರನ್ನು ಮತ್ತು ಭಯೋತ್ಪಾದಕರನ್ನು ಸಮಾನವಾಗಿ ನೋಡಲು ಸಾಧ್ಯವಿಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದರು.

ಜೈ ಶಂಕರ್

ವಿಶ್ವಸಂಸ್ಥೆಯ 80ನೇ ವಾರ್ಷಿಕೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪಾಕಿಸ್ತಾನದ ಹೆಸರು ಉಲ್ಲೇಖಿಸದೆ ವಾಗ್ದಾಳಿ ನಡೆಸಿದ ಅವರು, 'ಪಹಲ್ಗಾಮ್ ದಾಳಿಯ ಹೊಣೆ ಹೊತ್ತುಕೊಂಡಿರುವ ಲಷ್ಕರ್–ಎ–ತಯಬಾ (ಎಲ್‌ಇಟಿ) ಮತ್ತು ಅದರ ಅಂಗಸಂಸ್ಥೆ 'ದಿ ರೆಸಿಸ್ಟನ್ಸ್ ಫ್ರಂಟ್' (ಟಿಆರ್‌ಎಫ್) ಅನ್ನು ರಕ್ಷಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸದಸ್ಯ ದೇಶವೊಂದು ಪ್ರಯತ್ನಿಸುತ್ತಿದೆ' ಎಂದು ಆರೋಪಿಸಿದರು.

ಪಹಲ್ಗಾಮ್ ದಾಳಿಯಲ್ಲಿ 'ಟಿಆರ್‌ಎಫ್' ಪಾತ್ರದ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ತನ್ನ ವರದಿಯಲ್ಲಿ ಉಲ್ಲೇಖಿಸಿದೆ. ಆದರೆ, ಈ ಉಲ್ಲೇಖವನ್ನು ತೆಗೆದುಹಾಕಲು ಸದಸ್ಯ ದೇಶವೊಂದು ಪ್ರಯತ್ನಿಸುತ್ತಿದೆ' ಎಂದು ಜೈಶಂಕರ್ ಹೇಳಿದರು.

'ವಿಶ್ವಸಂಸ್ಥೆಯ ಚರ್ಚೆಗಳು ಈಗ ಹೆಚ್ಚು ಧ್ರುವೀಕರಣಗೊಂಡಿವೆ. ಭಯೋತ್ಪಾದನೆ ಸೇರಿದಂತೆ ಜಾಗತಿಕ ಸವಾಲುಗಳಿಗೆ ಸುಸ್ಥಿರ ಪರಿಹಾರವನ್ನು ಹುಡುಕಬೇಕಾದ ವಿಶ್ವಸಂಸ್ಥೆಯೇ ಬಿಕ್ಕಟ್ಟಿನಲ್ಲಿರುವಂತೆ ಕಾಣುತ್ತದೆ' ಎಂದೂ ಜೈಶಂಕರ್ ಹೇಳಿದರು.

ಮುಂಬೈ ಧಾರಣೆ (ಶೇಂಗಾ)

24-10-2025

ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1420 (1410)
ಒಂದು ವಾರದ ಡೆಲಿವರಿ	1415 (1405)
ಪಾಮ್ ವಾರದ ಡೆಲಿವರಿ	1283 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1415)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,21,800 (1,23,100)
ಬೆಳ್ಳಿ ಕೆ.ಜಿಗೆ	1,48,500 (1,56,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

29ರಿಂದ ಓರ್ಕ್ಲಾ ಇಂಡಿಯಾ ಐಪಿಒ

ನವದೆಹಲಿ (ಪಿಟಿಐ): ಎಂಟಿಆರ್ ಮತ್ತು ಈಸ್ಟರ್ನ್ ಬ್ರ್ಯಾಂಡ್‌ಗಳ ಮಾಲೀಕತ್ವದ ಓರ್ಕ್ಲಾ ಇಂಡಿಯಾ ಕಂಪನಿಯು, ಸಾರ್ವಜನಿಕರಿಗೆ ಷೇರು ಮಾರಾಟ ಮಾಡುವ (ಐಪಿಒ) ಮೂಲಕ ₹1,667 ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ.

ಪ್ರತಿ ಷೇರಿನ ಬೆಲೆ ₹695ರಿಂದ ₹730 ಇರಲಿದೆ. ಷೇರುಗಳಿಗೆ ಬಿಡ್ ಸಲ್ಲಿಸಲು ಅಕ್ಟೋಬರ್ 29ರಿಂದ 31ರ ವರೆಗೆ ಅವಕಾಶ ಇರಲಿದೆ. ಆರಂಭಿಕ ಹೂಡಿಕೆದಾರರು ಅಕ್ಟೋಬರ್ 28ರಂದು ಐಪಿಒಗೆ ಅರ್ಜಿ ಸಲ್ಲಿಸಬಹುದಾಗಿದೆ. ಆಫರ್ ಫಾರ್ ಸೇಲ್ (ಒಎಫ್‌ಎಸ್) ಮೂಲಕ 2.28 ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಲಿದೆ.

ಪಶ್ಚಿಮ ಏಷ್ಯಾ ದೇಶಗಳಿಂದ ಕಚ್ಚಾ ತೈಲ ಖರೀದಿ?

ರಷ್ಯಾದ ತೈಲ ಕಂಪನಿಗಳ ಮೇಲಿನ ನಿರ್ಬಂಧ: ಬೇರೆಡೆ ಖರೀದಿಗೆ ಮುಂದಾದ ಭಾರತದ ಕಂಪನಿಗಳು

ನವದೆಹಲಿ (ಪಿಟಿಐ): ರಷ್ಯಾದ ಎರಡು ಪ್ರಮುಖ ತೈಲ ಕಂಪನಿಗಳ ಮೇಲೆ ಅಮೆರಿಕ ನಿರ್ಬಂಧ ವಿಧಿಸಿದೆ. ಇದರಿಂದಾಗಿ, ಕಚ್ಚಾ ತೈಲ ಆಮದಿನಲ್ಲಿ ಉಂಟಾಗುವ ಕೊರತೆಯನ್ನು ಸರಿದೂಗಿಸಿಕೊಳ್ಳಲು ಭಾರತೀಯ ತೈಲ ಸಂಸ್ಕರಣಾ ಕಂಪನಿಗಳು ಪಶ್ಚಿಮ ಏಷ್ಯಾ, ಲ್ಯಾಟಿನ್ ಅಮೆರಿಕ ಮತ್ತು ಅಮೆರಿಕದಿಂದ ಕಚ್ಚಾ ತೈಲ ಖರೀದಿಯನ್ನು ಹೆಚ್ಚಿಸುವ ಸಾಧ್ಯತೆಯಿದೆ.

ಕಚ್ಚಾ ತೈಲ ಉತ್ಪನ್ನ ಮಾಡುವ ರಷ್ಯಾದ ಅತಿದೊಡ್ಡ ಕಂಪನಿಗಳಾದ 'ರೊಸ್ನೆಫ್ಟ್' ಮತ್ತು 'ಲುಕಾಯಿಲ್' ಮೇಲೆ ಅಕ್ಟೋಬರ್ 22ರಂದು ಅಮೆರಿಕ ನಿರ್ಬಂಧ ವಿಧಿಸಿದೆ. ಆ ಮೂಲಕ, ಈ ಕಂಪನಿಗಳು ಮತ್ತು ಅವುಗಳ ಅಂಗ ಸಂಸ್ಥೆಗಳೊಂದಿಗೆ ಅಮೆರಿಕದ ಕಂಪನಿಗಳು ಮತ್ತು ವ್ಯಕ್ತಿಗಳು ವಹಿವಾಟು ನಡೆಸುವುದನ್ನು ನಿಷೇಧಿಸಲಾಗಿದೆ. ಅಲ್ಲದೆ, ಅವುಗಳಿಂದ ಅಮೆರಿಕದ್ದಲ್ಲದ ಕಂಪನಿಗಳು ತೈಲ ಖರೀದಿಸಿದರೆ ಅಂತಹ ಸಂಸ್ಥೆಗಳೂ ನಿರ್ಬಂಧದ ಪರಿಣಾಮವನ್ನು ಎದುರಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ರಷ್ಯಾದ ಈ ಎರಡೂ ಕಂಪನಿಗಳ ಜತೆಗಿನ ವಹಿವಾಟುಗಳನ್ನು ನವೆಂಬರ್ 21ರೊಳಗೆ ಅಂತ್ಯಗೊಳಿಸಬೇಕು ಎಂದು ಅಮೆರಿಕ ಹೇಳಿದೆ.

ಪ್ರಸ್ತುತ ಭಾರತವು ರಷ್ಯಾದಿಂದ ನಿತ್ಯ 17 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲ ಖರೀದಿಸುತ್ತಿದೆ. ಈ ಪೈಕಿ 'ರೊಸ್ನೆಫ್ಟ್' ಮತ್ತು 'ಲುಕಾಯಿಲ್'ನಿಂದಲೇ 12 ಲಕ್ಷ ಬ್ಯಾರಲ್ ತೈಲವನ್ನು ಖರೀದಿ ಮಾಡುತ್ತಿದೆ. ಖಾಸಗಿ ಕಂಪನಿಗಳಾದ ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ನಯಾರಾ ಎನರ್ಜಿ ಕಂಪನಿಗಳು ಈ ತೈಲದಲ್ಲಿ ಹೆಚ್ಚಿನ ಪ್ರಮಾಣವನ್ನು ಖರೀದಿಸುತ್ತಿವೆ. ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಕಡಿಮೆ ಪ್ರಮಾಣದಲ್ಲಿ ಖರೀದಿ ಮಾಡುತ್ತಿವೆ.

'ರಷ್ಯಾದಿಂದ ನವೆಂಬರ್ 21ರವರೆಗೆ ನಿಗದಿಯಂತೆ ಕಚ್ಚಾ ತೈಲ ಆಮದು ಆಗಲಿದೆ. ಆ ನಂತರ ತೈಲ ಖರೀದಿ ಪ್ರಮಾಣ ಇಳಿಕೆಯಾಗಲಿದೆ. ಅಮೆರಿಕ ವಿಧಿಸಿರುವ ನಿರ್ಬಂಧದ ಪರಿಣಾಮಗಳನ್ನು ತಪ್ಪಿಸಿಕೊಳ್ಳಲು ಭಾರತದ ತೈಲ ಸಂಸ್ಕರಣಾಗಾರಗಳು ಪ್ರಯತ್ನಿಸುತ್ತಿವೆ' ಎಂದು ಕೆಪ್ಲೆರ್‌ನ ಸಂಶೋಧನಾ ವಿಶ್ಲೇಷಕ (ಸಂಸ್ಕರಣೆ ಮತ್ತು ಮಾಡೆಲಿಂಗ್) ಸುಮಿತ್ ರಿಟೋಲಿಯಾ ಹೇಳಿದ್ದಾರೆ.

> ರಷ್ಯಾದಿಂದ ತೈಲ ಖರೀದಿಗೆ ಸಂಬಂಧಿಸಿದಂತೆ ಅಮೆರಿಕ ಮತ್ತು ಇತರೆ ಪಾಶ್ಚಿಮಾತ್ಯ ದೇಶಗಳು ವಿಧಿಸಿರುವ ನಿರ್ಬಂಧಗಳನ್ನು ಪಾಲಿಸಲಾಗುವುದು
>
> ರಿಲಯನ್ಸ್ ಇಂಡಸ್ಟ್ರೀಸ್

'ದಿನಕ್ಕೆ 5 ಲಕ್ಷ ಬ್ಯಾರಲ್‌ನಂತೆ 25 ವರ್ಷ ಕಚ್ಚಾ ತೈಲ ಪೂರೈಕೆ ಮಾಡಲು ರಿಲಯನ್ಸ್, ರೊಸ್ನೆಫ್ಟ್ ಜೊತೆ ಈಗಾಗಲೇ ಒಪ್ಪಂದ ಮಾಡಿಕೊಂಡಿದೆ. ನಯಾರಾ ಎನರ್ಜಿ, ರಷ್ಯಾದ ತೈಲ ಕಂಪನಿಗಳ ಮೇಲೆಯೇ ಸಂಪೂರ್ಣವಾಗಿ ಅವಲಂಬಿತವಾಗಿದೆ. ಅದಕ್ಕಿರುವ ಆಯ್ಕೆ ಕಡಿಮೆ. ಆದರೂ, ಸಂಸ್ಕರಣಾಗಾರರು ಮಧ್ಯವರ್ತಿಗಳ ಮೂಲಕ ಖರೀದಿಯನ್ನು ಮುಂದುವರಿಸಬಹುದು' ಎಂದು ಅವರು ಹೇಳಿದ್ದಾರೆ.

ಕಚ್ಚಾ ತೈಲ ಆಮದಿನಲ್ಲಿ ಉಂಟಾಗುವ ಕೊರತೆಯನ್ನು ಸರಿದೂಗಿಸಿಕೊಳ್ಳಲು ಭಾರತವು ಪಶ್ಚಿಮ ಏಷ್ಯಾ, ಬ್ರೆಜಿಲ್, ಲ್ಯಾಟಿನ್ ಅಮೆರಿಕ, ಪಶ್ಚಿಮ ಆಫ್ರಿಕಾ, ಕೆನಡಾ, ಅಮೆರಿಕದಿಂದ ಹೆಚ್ಚಿನ ಪ್ರಮಾಣದಲ್ಲಿ ತೈಲ ಖರೀದಿಸುವ ನಿರೀಕ್ಷೆಯಿದೆ.

ಅಮೆರಿಕದ ನಿರ್ಬಂಧಗಳು ಭಾರತದ ತೈಲ ಖರೀದಿ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದ್ದು, ಭಾರತವು ಬೇರೆ ದೇಶಗಳಿಂದ ತೈಲ ಖರೀದಿಸಿದರೆ ವೆಚ್ಚ ಹೆಚ್ಚಳವಾಗಬಹುದು ಎಂದು ಅವರು ವಿವರಿಸಿದ್ದಾರೆ.

ರಷ್ಯಾದಿಂದ ತೈಲ ಖರೀದಿ: ಭಾರತ ಕಡಿಮೆಗೊಳಿಸುತ್ತಿದೆ– ಶ್ವೇತಭವನ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕೋರಿಕೆ ಮೇರೆಗೆ ಭಾರತವು ರಷ್ಯಾದಿಂದ ತೈಲ ಖರೀದಿಯನ್ನು ಕಡಿಮೆಗೊಳಿಸಲು ಆರಂಭಿಸಿದೆ ಎಂದು ಶ್ವೇತಭವನ ಹೇಳಿದೆ.

'ರಷ್ಯಾದಿಂದ ತೈಲ ಖರೀದಿಯನ್ನು ಚೀನಾ ಸಹ ಕಡಿಮೆ ಮಾಡುತ್ತಿದೆ ಎಂಬ ವರದಿಗಳನ್ನು ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ನೋಡಿದ್ದೇನೆ. ಭಾರತವೂ ಅದೇ ರೀತಿ ಮಾಡುತ್ತಿದೆ ಎಂಬುದು ಗೊತ್ತಾಗಿದೆ' ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇದೇ ರೀತಿ ಯುರೋಪಿನಲ್ಲಿರುವ ಮಿತ್ರರಾಷ್ಟ್ರಗಳು ಸಹ ರಷ್ಯಾದಿಂದ ತೈಲ ಆಮದುಗಳನ್ನು ಕಡಿತಗೊಳಿಸುತ್ತವೆ ಎಂಬ ವಿಶ್ವಾಸವಿದೆ ಎಂದು ಅವರು ಹೇಳಿದರು.

'ರಷ್ಯಾದ ಬೃಹತ್ ತೈಲ ಕಂಪನಿಗಳಾದ ರೋಸ್ನೆಫ್ಟ್ ಮತ್ತು ಲುಕೋಯಿಲ್ ಮೇಲೆ ಬುಧವಾರ ನಿರ್ಬಂಧ ಹೇರಲಾಗಿದೆ. ಈ ಎರಡೂ ಕಂಪನಿಗಳಿಂದ ರಷ್ಯಾಗೆ ದೊಡ್ಡ ಪ್ರಮಾಣದ ಆದಾಯ ಸಂದಾಯವಾಗುತ್ತಿದೆ. ಅದನ್ನು ಅದು ಉಕ್ರೇನ್ ವಿರುದ್ಧದ ಯುದ್ಧದಲ್ಲಿ ತೊಡಗಿಸುತ್ತಿದೆ. ಈ ಕಂಪನಿಗಳ ವಿರುದ್ಧದ ನಿರ್ಬಂಧವು ರಷ್ಯಾಗೆ ಮಾರಕವಾಗಲಿದೆ' ಎಂದು ಅವರು ಹೇಳಿದರು.

ರಷ್ಯಾದಿಂದ ತೈಲ ಆಮದುಗಳನ್ನು ಗಣನೀಯವಾಗಿ ಕಡಿಮೆ ಮಾಡುವುದಾಗಿ ಭಾರತ ಭರವಸೆ ನೀಡಿದೆ ಎಂದು ಅಮೆರಿಕ ಅಧ್ಯಕ್ಷರು ಮತ್ತು ಅವರ ಆಡಳಿತದ ಪ್ರಮುಖರು ಕೆಲ ದಿನಗಳಿಂದ ಹೇಳುತ್ತಿದ್ದಾರೆ. ಆದರೆ ಭಾರತವು, ತನ್ನ ಇಂಧನ ನೀತಿಯು ರಾಷ್ಟ್ರೀಯ ಹಿತಾಸಕ್ತಿಯಿಂದ ನಿರ್ದೇಶಿಸಲ್ಪಟ್ಟಿದೆ ಎಂದು ಹೇಳಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 8095043191

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

CAREER OPPORTUNITY, part-time there is no age limit. WA: 7019246661.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕಿನ್ನಾಳ ಕಲಾಕೃತಿಗೆ ಬಂಪರ್ ಬೇಡಿಕೆ

ಜಿಎಸ್‌ಟಿ ಇಳಿಕೆ: ಬೇಡಿಕೆಗೆ ತಕ್ಕಷ್ಟು ಪೂರೈಸಲು ಪರದಾಟ

• ಪ್ರಮೋದ ಕುಲಕರ್ಣಿ

ಕೊಪ್ಪಳ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಳಿಕೆ ಮಾಡಿದ ನಂತರ ಜಿಲ್ಲೆಯ ಕಿನ್ನಾಳ ಕಲಾಕೃತಿಗಳಿಗೆ ಬಂಪರ್ ಬೇಡಿಕೆ ಬರುತ್ತಿದೆ.

ಕಲಾವಿದರು ನೂರಾರು ವರ್ಷಗಳಿಂದ ತಯಾರಿಸಿಕೊಂಡು ಬರುತ್ತಿರುವ ಕಲಾಕೃತಿಗಳಿಂದಲೇ ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗ್ರಾಮ ದೇಶ ಹಾಗೂ ವಿದೇಶಗಳಲ್ಲಿ ಹೆಸರಾಗಿದೆ. ಮೊದಲಿನಿಂದಲೂ ಕಿನ್ನಾಳ ಕಲಾಕೃತಿಗಳಿಗೆ ಭಾರಿ ಬೇಡಿಕೆಯಿತ್ತು. ಆದರೆ, ಈ ಕಲಾಕೃತಿಗಳ ಮೇಲೆ ಶೇ 12ರಷ್ಟು ಸರಕು ಮತ್ತು ಸೇವಾ ತೆರಿಗೆ ವಿಧಿಸಿದ ಬಳಿಕ ವ್ಯಾಪಾರಕ್ಕೆ ಮಂಕು ಕವಿದಂತೆ ಆಗಿತ್ತು. ಇತ್ತೀಚೆಗೆ ಜಿಎಸ್‌ಟಿಯನ್ನು ಶೇ 5ಕ್ಕೆ ಇಳಿಕೆ ಮಾಡಿರುವುದು ವ್ಯಾಪಾರಿಗಳಿಗೂ ಸಂತಸ ಉಂಟು ಮಾಡಿದ್ದು, ಖರೀದಿ ಪ್ರಮಾಣವೂ ದಿಢೀರ್ ಏರಿಕೆಯಾಗಿದೆ.

ಪ್ರಸ್ತುತ ಗ್ರಾಮದಲ್ಲಿ 60 ಕಲಾವಿದರು ಕೀಲುಗೌರಿ, ಕೀಲುಗೊಂಬೆ, ಆಲಂಕಾರಿಕ ಸಾಮಗ್ರಿಗಳು, ಚೌಕಿ, ಟೀಪಾಯಿ, ಗರುಡ, ಕೊಂತಿ ಹೀಗೆ ಅನೇಕ ಕಲಾಕೃತಿಗಳನ್ನು ತಯಾರಿಸುತ್ತಿದ್ದಾರೆ. 'ಜಿಎಸ್‌ಟಿ ಪರಿಷ್ಕರಣೆಗೂ ಮೊದಲು ಪ್ರತಿ ತಿಂಗಳು ₹2 ಲಕ್ಷದಿಂದ ₹3 ಲಕ್ಷ ಮೊತ್ತದ ಕಲಾಕೃತಿಗಳನ್ನು ತಯಾರಿಸಲು ಮುಂಗಡ ನೋಂದಣಿ ಮಾಡಲಾಗುತ್ತಿತ್ತು. ಈಗ ಒಂದೇ ಬಾರಿಗೆ ₹20 ಲಕ್ಷ ಮೊತ್ತದ ಕಿನ್ನಾಳ ಕಲಾಕೃತಿಗಳನ್ನು ತಯಾರಿಸಲು ಬುಕ್ಕಿಂಗ್ ಮಾಡಿಕೊಂಡಿದ್ದೇನೆ. ಆನ್‌ಲೈನ್ ಮೂಲಕವೇ ದೊಡ್ಡ ಮಾರುಕಟ್ಟೆ ಸಿಕ್ಕಿದೆ' ಎಂದು ಕಲಾಕೃತಿಗಳ ತಯಾರಕ ಕಿನ್ನಾಳದ ಸಂತೋಷ ಚಿತ್ರಗಾರ ಹೇಳಿದರು.

'ಈಗ ಗೌರಿ ಮುಖ, ಕಾಮಧೇನು, ಚೈತ್ರಮಾಸ ಗೌರಿ, ಗೊಂಬೆಗಳು, ಹಣ್ಣಿನ ಪುಟ್ಟಿ, ಫಲಕಗಳನ್ನು ಹೊಸ ವಿನ್ಯಾಸದಲ್ಲಿ ತಯಾರಿಸಿಕೊಡುವಂತೆ ಸಾಕಷ್ಟು ಬೇಡಿಕೆ ಬರುತ್ತಿವೆ. ಗ್ರಾಹಕರ ನಿರೀಕ್ಷೆಗೆ ವೇಗವಾಗಿ ತಯಾರಿಸಿಕೊಡಲು ಸಾಧ್ಯವಾಗುತ್ತಿಲ್ಲ. ಜಿಎಸ್‌ಟಿ ಇಳಿಕೆ ಎಲ್ಲರಿಗೂ ಅನುಕೂಲವಾಗಿದೆ' ಎಂದರು.

ಕಿನ್ನಾಳದ ಕಲೆಯ ಮಾದರಿ

ಮುಖ್ಯಾಂಶಗಳು

- ಶೇ 12 ರಿಂದ ಶೇ 5ಕ್ಕೆ ಜಿಎಸ್‌ಟಿ ಇಳಿಕೆ
- ಆನ್‌ಲೈನ್ ಮೂಲಕ ಬೇಡಿಕೆ ಹೆಚ್ಚಿಸಿಕೊಂಡ ಕಲಾವಿದರು

ಕಾಡುತ್ತಿರುವ ಪೊಳಕಿ ಮರದ ಕೊರತೆ

ಕಿನ್ನಾಳ ಕಲಾಕೃತಿಗಳಿಗೆ ಜಿಎಸ್‌ಟಿ ಇಳಿಕೆ ಹಾಗೂ ಮಾರುಕಟ್ಟೆಯಲ್ಲಿ ದಿಢೀರ್ ಬೇಡಿಕೆ ಹೆಚ್ಚಾಗಿರುವುದು ಒಂದೆಡೆಯಾದರೆ ಅವುಗಳನ್ನು ತಯಾರಿಸಲು ಬೇಕಾಗುವ ಹಗುರವಾದ ಪೊಳಕಿ ಮರದ ಕೊರತೆಯಾಗುತ್ತಿರುವುದು ಕಲಾವಿದರ ಚಿಂತೆಗೆ ಕಾರಣವಾಗಿದೆ. ಮರಗಳ ಬೆಳವಣಿಗೆಗೆ ಕ್ರಮ ಕೈಗೊಳ್ಳುವಂತೆ ಕಲಾವಿದರು ಒತ್ತಾಯಿಸುತ್ತಲೇ ಬಂದಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಸುರೇಶ ಇಟ್ನಾಳ, 'ಕಿನ್ನಾಳ ಕಲೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆಯಿದೆ. ಮರಗಳ ಕೊರತೆ ಇರುವುದು ಗಮನಕ್ಕೆ ಬಂದಿದೆ. ಅರಣ್ಯ ಇಲಾಖೆ ಸಹಯೋಗದಲ್ಲಿ ರಸ್ತೆ ಬದಿಯಲ್ಲಿಯೇ ಪೊಳಕಿ ಮರಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

'ಪಿ.ಎಂ.ಶ್ರೀ ಶಾಲಾ ಯೋಜನೆ'ಗೆ ಸೇರಲು ಕೇರಳ ಸರ್ಕಾರ– ಕೇಂದ್ರ ಸರ್ಕಾರ ಒಪ್ಪಂದ

ಕೇರಳ: ಎಡಪಕ್ಷಗಳಲ್ಲಿ ಆಂತರಿಕ ಸ್ಫೋಟ

ತಿರುವನಂತಪುರ, ಕೇರಳ (ಪಿಟಿಐ): ಕೇಂದ್ರ ಸರ್ಕಾರ ಪ್ರಾಯೋಜಿತ 'ಪಿ.ಎಂ.ಶ್ರೀ ಶಾಲಾ ಯೋಜನೆ'ಗೆ ಸೇರ್ಪಡೆಯಾಗಲು ಕೇರಳದ ಶಾಲಾ ಶೈಕ್ಷಣಿಕ ಇಲಾಖೆ ಒಪ್ಪಿಗೆ ಸೂಚಿಸಿರುವುದು ರಾಜ್ಯದ ಎಡಪಕ್ಷಗಳ ನೇತೃತ್ವದ ಸರ್ಕಾರದಲ್ಲಿ ಆಂತರಿಕ ಕಲಹಕ್ಕೆ ಕಾರಣವಾಗಿದೆ. ಎಲ್‌ಡಿಎಫ್ ಒಕ್ಕೂಟದಲ್ಲಿ ಸಿಪಿಐ ಎರಡನೇ ಅತೀ ದೊಡ್ಡ ಮೈತ್ರಿ ಪಕ್ಷವಾಗಿದ್ದು, ಶಿಕ್ಷಣ ಖಾತೆ ಹೊಂದಿರುವ ಸಿಪಿಎಂ ನಿಲುವಿನಿಂದ ಅಸಮಾಧಾನಗೊಂಡಿದೆ.

ಕೇಂದ್ರ ಸರ್ಕಾರದ ಜೊತೆಗೆ ಶಿಕ್ಷಣ ಇಲಾಖೆಯು ತಿಳಿವಳಿಕೆ ಒಪ್ಪಂದ ಮಾಡಿಕೊಂಡಿರುವುದು 'ಸ್ವಯಂ ಗೋಲು ಗಳಿಸಿದಂತೆ' ಎಂದು ಸಿಪಿಐ ಸಂಸದ ಪಿ.ಸಂತೋಷ್ ಕುಮಾರ್ ಟೀಕಿಸಿದ್ದಾರೆ.

'ತಲೆ ಮೇಲೆ ಟವಲ್ ಹಾಕಿಕೊಂಡು ಒಪ್ಪಂದಕ್ಕೆ ಸಹಿ ಹಾಕಿದವರು ಈ ಕುರಿತು ಪ್ರಶ್ನೆಗಳಿಗೆ ಉತ್ತರಿಸಬೇಕು. ಈ ಕುರಿತು ಸಿಪಿಎಂ ನಾಯಕ ಎಂ.ಎ.ಬೇಬಿ ಅವರೇ ಹೆಚ್ಚಿನ ವಿವರ ನೀಡಬೇಕು' ಎಂದು ಮಾಧ್ಯಮಗಳ ಮುಂದೆ ಒತ್ತಾಯಿಸಿದ್ದಾರೆ.

> ಕೇಂದ್ರ ಸರ್ಕಾರವು ತಡೆಹಿಡಿದಿರುವ ₹1,500 ಕೋಟಿ ಅನುದಾನವನ್ನು ಪಡೆಯಲು ಪಿಎಂ–ಶ್ರೀ ಯೋಜನೆಗೆ ರಾಜ್ಯ ಸರ್ಕಾರ ಸೇರ್ಪಡೆಯಾಗಿದೆ
>
> ವಿ. ಶಿವನ್‌ಕುಟ್ಟಿ, ಶಿಕ್ಷಣ ಸಚಿವ, ಸಿಪಿಎಂ ನಾಯಕ

> ಪಿಎಂ–ಶ್ರೀ ಒಪ್ಪಂದದ ಕುರಿತಂತೆ ಯಾವುದೇ ಚರ್ಚೆಗಳಿಲ್ಲದೇ, ಎಲ್ಲರನ್ನೂ ಕತ್ತಲಲ್ಲಿಡುವ ಮೂಲಕ ಎಲ್‌ಡಿಎಫ್ ಮುಂದುವರಿಯಲು ಹೇಗೆ ಸಾಧ್ಯ?
>
> ಬಿನೋಯ್ ವಿಶ್ವಂ, ಸಿಪಿಐ ರಾಜ್ಯ ಕಾರ್ಯದರ್ಶಿ

ವಿವಾದ ಏಕೆ?: 'ಪಿ.ಎಂ.ಶ್ರೀ ಶಾಲಾ ಯೋಜನೆ' ಮೂಲಕ ರಾಜ್ಯದಲ್ಲಿ ಸಂಘ ಪರಿವಾರದ ಕಾರ್ಯಸೂಚಿಯನ್ನು ಜಾರಿಗೊಳಿಸುವ ಯತ್ನ ನಡೆಯುತ್ತಿದೆ ಎಂದು ಆರೋಪಿಸಿ ಸಿಪಿಐ ಈ ಹಿಂದೆ ಸೇರ್ಪಡೆಯಾಗದಂತೆ ತಡೆ ಹಿಡಿದಿತ್ತು. ಆದರೆ, ಈ ಬಾರಿ ಸಚಿವ ಸಂಪುಟದಲ್ಲಿ ಚರ್ಚೆ ನಡೆಸದೇ, ಕೇಂದ್ರ ಸರ್ಕಾರದ ಯೋಜನೆಗೆ ಸೇರ್ಪಡೆಯಾಗಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ. ಶಿಕ್ಷಣ ಇಲಾಖೆ ಕಾರ್ಯದರ್ಶಿ ಕೆ. ವಾಸುಕಿ ಅವರು ಗುರುವಾರ ರಾತ್ರಿ ನವದೆಹಲಿಯಲ್ಲಿ ಕೇಂದ್ರ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಭೇಟಿಯಾಗಿ ಒಪ್ಪಂದಕ್ಕೆ ಸಹಿ ಹಾಕಿರುವುದೇ ವಿವಾದ ಸೃಷ್ಟಿಸಿದೆ.

ಸಿಪಿಐ ಈ ಹಿಂದೆ ಎರಡು ಸಲ ರಾಜ್ಯ ಸರ್ಕಾರದ ನಿರ್ಧಾರವನ್ನು ತಡೆಹಿಡಿದಿತ್ತು. ಮೈತ್ರಿ ಪಕ್ಷ ಸಿಪಿಐ ಅನ್ನು ಹಿರಿಯ ಪಾಲುದಾರ ಸಿಪಿಎಂ ಪಕ್ಕಕ್ಕೆ ತಳ್ಳುತ್ತಿದೆ ಎಂದು ಆರೋಪಿಸಿತ್ತು. ಇದರಿಂದಾಗಿಯೇ, ಒಪ್ಪಂದಕ್ಕೆ ಸಹಿಹಾಕಲು ಒಂದು ತಿಂಗಳ ಕಾಲ ಹಿಂಜರಿದಿದ್ದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರವು, ಸಿಪಿಐ ಪ್ರಬಲ ವಿರೋಧದ ಹೊರತಾಗಿಯೂ 'ಪ್ರಧಾನಮಂತ್ರಿ ಸ್ಕೂಲ್ಸ್ ಫಾರ್ ರೈಸಿಂಗ್' (ಪಿಎಂ–ಶ್ರೀ) ಸಹಿಹಾಕಲು ಒಪ್ಪಿಗೆ ಸೂಚಿಸಿದ್ದರು.

ಮಿತ್ರಕೂಟದಲ್ಲಿ ಅಪಸ್ವರ– ಕಾಂಗ್ರೆಸ್ ಟೀಕೆ

ಮಿತ್ರ ಪಕ್ಷದಲ್ಲಿ ಚರ್ಚಿಸದೇ, ಯೋಜನೆಗೆ ಸೇರ್ಪಡೆಯಾಗಿರುವ ಸಿಪಿಎಂ ನಿರ್ಧಾರಕ್ಕೆ ರಾಷ್ಟ್ರೀಯ ಜನತಾದಳ ಕೂಡ ಆಕ್ಷೇಪ ವ್ಯಕ್ತಪಡಿಸಿದೆ.

'ಎಲ್‌ಡಿಎಫ್‌ನಲ್ಲಿ ಅಳವಾದ ಬಿರುಕುಗಳಿರುವುದು ಬಹಿರಂಗಗೊಂಡಿದೆ' ಎಂದು ಕಾಂಗ್ರೆಸ್ ನಾಯಕ ಹಾಗೂ ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಆರೋಪಿಸಿದ್ದಾರೆ. 'ಅವಮಾನವನ್ನು ಸಹಿಸಿಕೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ಸಿಪಿಐ ನಿರ್ಧರಿಸಬೇಕು. ಇದು ಸಿಪಿಐನ ರಾಜಕೀಯ ನಿರ್ಧಾರವಾಗಿದೆ, ಸಿಪಿಎಂ ಕೇಂದ್ರ ಸಮಿತಿಯನ್ನು ಕೇರಳದ ರಾಜ್ಯ ಸಮಿತಿಯೇ ನಿಯಂತ್ರಿಸುತ್ತಿದೆ' ಎಂದು ಹೇಳಿದ್ದಾರೆ.

'ಪಿಎಂ–ಶ್ರೀ' ಗುಪ್ತವಾದ ಅಜೆಂಡಾ ಹಾಗೂ ವಿವಾದಾಸ್ಪದ ನಿಯಾಮವಳಿಗಳ ಕುರಿತು ಕಾಂಗ್ರೆಸ್ ನೇತೃತ್ವದ ಸರ್ಕಾರವು ಬಹಿರಂಗವಾಗಿ ವಿರೋಧಿಸುತ್ತಿದೆ. ಆದರೆ, ಕೇರಳವು ಸೂಕ್ತ ನೋಟಿಸ್ ನೀಡದೇ, ಏಕಪಕ್ಷೀಯವಾಗಿ ಒಪ್ಪಿಗೆ ಸೂಚಿಸಿದೆ' ಎಂದು ಸತೀಶನ್ ದೂರಿದ್ದಾರೆ.

ರಿಷಬ್ ಶೆಟ್ಟಿ

2025ರ ಅತ್ಯಧಿಕ ಗಳಿಕೆಯ ಚಿತ್ರ ಕಾಂತಾರ

ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ: ಒಂದು ದಂತಕಥೆ, ಚಾಪ್ಟರ್–1' ಸಿನಿಮಾ 2025ರಲ್ಲಿ ವಿಶ್ವದಾದ್ಯಂತ ಅತ್ಯಧಿಕ ಹಣ ಗಳಿಸಿದ ಭಾರತೀಯ ಚಿತ್ರವಾಗಿದೆ. ಸಿನಿಮಾವು ಇಲ್ಲಿಯವರೆಗೆ ₹818 ಕೋಟಿ ಕಲೆಕ್ಷನ್ ಮಾಡಿದ್ದು, ಈ ಮೂಲಕ ವಿಕ್ಕಿ ಕೌಶಲ್ ನಟನೆಯ ಹಿಂದಿಯ 'ಛಾವಾ' ಸಿನಿಮಾವನ್ನು ಹಿಂದಿಕ್ಕಿದೆ.

ಹೊಂಬಾಳೆ ಫಿಲ್ಮ್ಸ್ ನಿರ್ಮಿಸಿರುವ 'ಕಾಂತಾರ' ಸಿನಿಮಾ ಬಿಡುಗಡೆಯಾಗಿ ಮೂರು ವಾರ ಉರುಳಿದ್ದರೂ ಹಲವೆಡೆ ಹೌಸ್‌ಫುಲ್ ಪ್ರದರ್ಶನಗಳನ್ನು ಕಾಣುತ್ತಿದೆ. ಚಿತ್ರವು ಕರ್ನಾಟಕ ರಾಜ್ಯವೊಂದರಲ್ಲೇ ₹250 ಕೋಟಿಗೂ ಅಧಿಕ ಗಳಿಕೆ ಮಾಡಿದ್ದು, ಈ ಗಡಿ ದಾಟಿದ ಮೊದಲ ಕನ್ನಡ ಚಲನಚಿತ್ರ ಎಂಬ ದಾಖಲೆಯನ್ನೂ ಬರೆದಿದೆ. ಕನ್ನಡ ಚಿತ್ರರಂಗದ ಪಾಲಿಗೆ ಹೆಮ್ಮೆಯ ಕ್ಷಣವಿದು ಎಂದಿದೆ ಹೊಂಬಾಳೆ ಫಿಲ್ಮ್ಸ್.

ಈಗಾಗಲೇ ಭಾರತದ ಹಲವು ಭಾಷೆಗಳಲ್ಲಿ ಡಬ್ ಆಗಿ ರಿಲೀಸ್ ಆಗಿರುವ 'ಕಾಂತಾರ' ಸಿನಿಮಾದ ಇಂಗ್ಲಿಷ್ ಆವೃತ್ತಿಯು ಅ.31ರಂದು ವಿಶ್ವದಾದ್ಯಂತ ತೆರೆಕಾಣಲಿದೆ. ಈ ಮೂಲಕ ಆಸ್ಕರ್ ಅಂಗಳದಲ್ಲಿ ಸದ್ದು ಮಾಡಲು ತಂಡ ತಯಾರಿ ಆರಂಭಿಸಿದೆ. ಸಿನಿಮಾದಲ್ಲಿ 'ಬೆರ್ಮೆ' ಎಂಬ ಪಾತ್ರದಲ್ಲಿ ರಿಷಬ್ ನಟಿಸಿದ್ದು, ಈ ಪಾತ್ರಕ್ಕೆ ಸಜ್ಜಾದ ವಿಡಿಯೊವೊಂದನ್ನು ರಿಷಬ್ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ. ಕಳರಿಪಯಟ್ಟು ಕಲಿತು, ಜಿಮ್‌ನಲ್ಲಿ ದೇಹದಂಡಿಸಿ, ಯಾವುದೇ ಡ್ಯೂಪ್ ಬಳಸದೆ ಸಾಹಸ ದೃಶ್ಯಗಳನ್ನು ತಾವೇ ನಿರ್ವಹಿಸಿದ ಬಗೆಯನ್ನು ಈ ವಿಡಿಯೊದಲ್ಲಿ ತೋರಿಸಿದ್ದಾರೆ ರಿಷಬ್.

ಪ್ರೈಮ್‌ನಲ್ಲಿ ಪರಮ್ ಸುಂದರಿ

ಸಿದ್ಧಾರ್ಥ್ ಮಲ್ಹೋತ್ರ ಹಾಗೂ ಜಾಹ್ನವಿ ಕಪೂರ್ ನಟಿಸಿರುವ, ತುಷಾರ್ ಜಲೋಟ ನಿರ್ದೇಶನದ ಹಿಂದಿ ಸಿನಿಮಾ 'ಪರಮ್ ಸುಂದರಿ' ಪ್ರೈಮ್ ವಿಡಿಯೊದಲ್ಲಿ ಸ್ಟ್ರೀಮ್ ಆಗುತ್ತಿದೆ.

ರೊಮ್ಯಾಂಟಿಕ್ ಕಾಮಿಡಿ ಜಾನರ್‌ನಲ್ಲಿರುವ ಈ ಸಿನಿಮಾದ ಬಹುತೇಕ ಚಿತ್ರೀಕರಣ ಕೇರಳದ ಹಿನ್ನೀರು ಪ್ರದೇಶದಲ್ಲಿ ನಡೆದಿದೆ. ದೆಹಲಿಯಲ್ಲಿ ವಾಸಿಸುವ ಪಂಜಾಬ್‌ನ 'ಪರಮ್', ಕೇರಳದ 'ಸುಂದರಿ' ಜೊತೆ ಪ್ರೀತಿಯಲ್ಲಿ ಬಿದ್ದಾಗ ಏನೇನಾಗುತ್ತದೆ ಎನ್ನುವುದೇ ಚಿತ್ರದ ಕಥೆ.

ಸಿದ್ಧಾರ್ಥ್, ಜಾಹ್ನವಿ ಕಪೂರ್

'ಫೌಜಿ' ಆದ ಪ್ರಭಾಸ್

ತೆಲುಗಿನ ಖ್ಯಾತ ನಟ ಪ್ರಭಾಸ್ ನಟಿಸುತ್ತಿರುವ, ಹನು ರಾಘವಪುಡಿ ನಿರ್ದೇಶಿಸಲಿರುವ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾದ ಟೈಟಲ್ ಪೋಸ್ಟರ್ ರಿಲೀಸ್ ಆಗಿದೆ.

ಪ್ರಭಾಸ್–ಹನು ಜೋಡಿಯ ಈ ಚಿತ್ರಕ್ಕೆ 'ಫೌಜಿ' ಎಂಬ ಶೀರ್ಷಿಕೆ ಇಡಲಾಗಿದೆ. 'ಫೌಜಿ'ಯಲ್ಲಿ ಪ್ರಭಾಸ್ ಸೈನಿಕನಾಗಿ ನಟಿಸುತ್ತಿದ್ದು, 1940ರ ದಶಕದ ವಸಾಹತುಶಾಹಿ ಭಾರತದ ಹಿನ್ನೆಲೆಯಲ್ಲಿ ಕಥೆ ಇದೆ. ಪೋಸ್ಟರ್‌ನಲ್ಲಿ ಉರಿಯುತ್ತಿರುವ, ಹರಿದ ಬ್ರಿಟಿಷ್ ಧ್ವಜವಿದ್ದು, ಇದು ದಂಗೆ ಮತ್ತು ಪ್ರತಿರೋಧದ ಚಿತ್ರಣ ಕಟ್ಟಿಕೊಟ್ಟಿದೆ. ಪ್ರಭಾಸ್‌ಗೆ ಜೋಡಿಯಾಗಿ ಇಮಾನ್ವಿ ನಟಿಸಿದ್ದಾರೆ. ಜೊತೆಗೆ ಅನುಪಮ್ ಖೇರ್, ಮಿಥುನ್ ಚಕ್ರವರ್ತಿ, ಜಯಪ್ರದಾ ಮತ್ತು ಭಾನು ಚಂದರ್ ಸೇರಿದಂತೆ ಹಲವರು ಪಾತ್ರ ವರ್ಗದಲ್ಲಿ ಇದ್ದಾರೆ. 'ಟೋಬಿ', 'ಸಪ್ತ ಸಾಗರದಾಚೆ ಎಲ್ಲೋ' ಖ್ಯಾತಿಯ ನಟಿ ಚೈತ್ರಾ ಜೆ. ಆಚಾರ್ ಅವರೂ ಈ ಸಿನಿಮಾದ ಭಾಗವಾಗಿದ್ದಾರೆ.

ಮೈತ್ರಿ ಮೂವೀ ಮೇಕರ್ಸ್ ಬ್ಯಾನರ್‌ನಡಿ ನವೀನ್ ಯೆರ್ನೇನಿ ಮತ್ತು ವೈ. ರವಿಶಂಕರ್ ಹಾಗೂ ಭೂಷಣ್ ಕುಮಾರ್ 'ಫೌಜಿ' ಸಿನಿಮಾವನ್ನು ನಿರ್ಮಿಸುತ್ತಿದ್ದಾರೆ. ವಿಶಾಲ್ ಚಂದ್ರಶೇಖರ್ ಸಂಗೀತ, ಸುದೀಪ್ ಚಟರ್ಜಿ ಛಾಯಾಚಿತ್ರಗ್ರಹಣ, ಕೋಟಗಿರಿ ವೆಂಕಟೇಶ್ವರ ರಾವ್ ಸಂಕಲನ ಚಿತ್ರಕ್ಕಿದೆ. ಚಿತ್ರವು ಕನ್ನಡ, ತೆಲುಗು, ತಮಿಳು, ಹಿಂದಿ, ಮಲಯಾಳ ಜೊತೆಗೆ ಬೆಂಗಾಲಿ ಭಾಷೆಯಲ್ಲಿ ರಿಲೀಸ್ ಆಗಲಿದೆ.

ಕಾರ್ತಿಕ್ ಜಯರಾಮ್

'ದಿ ವೀರ್' ಟೀಸರ್ ಬಿಡುಗಡೆ

ಕಾರ್ತಿಕ್ ಜಯರಾಮ್ ನಟಿಸಿರುವ 'ದಿ ವೀರ್' ಸಿನಿಮಾದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಸಿನಿಮಾಗೆ ಆರ್.ಲೋಹಿತ್ ನಾಯಕ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಮಾಸ್ ಆ್ಯಕ್ಷನ್ ಜಾನರ್ ಸಿನಿಮಾವಿದು. ಚಿತ್ರದಲ್ಲಿ ರೋಚಿತ್ ಅವರು ವಿಲನ್ ಆಗಿ ಅಭಿನಯಿಸಿದ್ದಾರೆ. ಮಂಜು ಪಾವಗಡ ಕೂಡ ನಟಿಸಿದ್ದಾರೆ. ಪ್ರಣಿತಿ ಅವರು ಈ ಸಿನಿಮಾದ ಮೂಲಕ ನಾಯಕಿಯಾಗಿದ್ದಾರೆ' ಎಂದಿದೆ ಚಿತ್ರತಂಡ.

ಚಿತ್ರಕ್ಕೆ ಧ್ರುವ ಎಂ.ಬಿ. ಸಂಗೀತ, ದೇವೇಂದ್ರ ಛಾಯಾಚಿತ್ರಗ್ರಹಣ, ಆರ್ಯನ್ ಗೌಡ ಸಂಕಲನವಿದೆ. ಗೀತಾ ಜಯಶ್ರೀನಿವಾಸನ್ ಮತ್ತು ವಿಶಾಲ್ ತೇಜ್ ಬಂಡವಾಳ ಹೂಡಿದ್ದಾರೆ.

'ದಾಖಲೆ ಮುರಿಯಲಿದೆ ಎನ್‌ಡಿಎ'

ಬಿಹಾರ ಚುನಾವಣೆ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಸಮಸ್ತಿಪುರ/ಬೆಗುಸರಾಯ್ (ಪಿಟಿಐ): ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದಲ್ಲಿ ಎನ್‌ಡಿಎ ಹಿಂದಿನ ಎಲ್ಲ ಚುನಾವಣಾ ದಾಖಲೆಗಳನ್ನು ಮುರಿಯಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಪ್ರತಿಪಾದಿಸಿದರು.

ಸಮಸ್ತಿಪುರ ಮತ್ತು ಬೆಗುಸರಾಯ್ ಜಿಲ್ಲೆಗಳಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಗುಜರಾತ್‌ನಲ್ಲಿ 30 ವರ್ಷಗಳಿಂದ ಬಿಜೆಪಿ ಸರ್ಕಾರ ಅಧಿಕಾರದಲ್ಲಿದೆ. ಅಲ್ಲಿ ಕಳೆದ ವರ್ಷದ ಚುನಾವಣೆಯಲ್ಲಿ ಹಿಂದಿನ ಎಲ್ಲ ದಾಖಲೆಗಳನ್ನು ಮುರಿಯಲಾಗಿತ್ತು. ಅದೇ ರೀತಿ ಮಧ್ಯ ಪ್ರದೇಶ, ಮಹಾರಾಷ್ಟ್ರ ಮತ್ತು ಹರಿಯಾಣ ವಿಧಾನಸಭಾ ಚುನಾವಣೆಗಳಲ್ಲೂ ದಾಖಲೆಗಳನ್ನು ಮುರಿಯಲಾಗಿತ್ತು. ಬಿಹಾರದಲ್ಲೂ ಅದೇ ರೀತಿಯ ಫಲಿತಾಂಶ ಬರಲಿದೆ ಎಂಬ ವಿಶ್ವಾಸವಿದೆ' ಎಂದರು.

ವಿರೋಧ ಪಕ್ಷಗಳ 'ಮಹಾಘಟಬಂಧನ್' ಅನ್ನು 'ಮಹಾಲಟ ಬಂಧನ್' (ಬಡಿಗೆಗಳಲ್ಲಿ ಬಡಿದಾಡಿಕೊಳ್ಳುವವರ ಕೂಟ) ಎಂದು ಟೀಕಿಸಿದ ಪ್ರಧಾನಿ, ಈ ಮೈತ್ರಿ ಕೂಟದಲ್ಲಿರುವ ಕಾಂಗ್ರೆಸ್ ಮತ್ತು ಆರ್‌ಜೆಡಿ ನಾಯಕರು ಮಹಾ ಭ್ರಷ್ಟರಾಗಿದ್ದು, ಜಾಮೀನಿನ ಮೇಲೆ ಹೊರಗಿದ್ದಾರೆ' ಎಂದು ದೂರಿದರು.

> ಆರ್‌ಜೆಡಿಯೊಂದಿಗೆ ಈ ಹಿಂದೆ ಮೈತ್ರಿ ಮಾಡಿಕೊಂಡಿದ್ದು ತಪ್ಪು. 1990ರ ದಶಕದಿಂದಲೂ ಎನ್‌ಡಿಎ ಮೈತ್ರಿಕೂಟದಲ್ಲಿ ಉತ್ತಮವಾಗಿರುವೆ
> **ನಿತೀಶ್ ಕುಮಾರ್,** ಬಿಹಾರ ಮುಖ್ಯಮಂತ್ರಿ

ರ‍್ಯಾಲಿಯಲ್ಲಿದ್ದವರನ್ನು ಉದ್ದೇಶಿಸಿ, 'ನಿಮ್ಮ ಬಳಿ ಇರುವ ಮೊಬೈಲ್ ಲೈಟ್ ಅನ್ನು ಆನ್ ಮಾಡಿ' ಎಂದರು. ಲೈಟ್‌ಗಳು ಆನ್ ಆದ ಬಳಿಕ, 'ನಮ್ಮ ಸುತ್ತಲೂ ಇಷ್ಟೊಂದು ಬೆಳಕಿರುವಾಗ ಲಾಟೀನು (ಆರ್‌ಜೆಡಿ ಚಿಹ್ನೆ) ಏಕೆಬೇಕು' ಎಂದು ಪ್ರಶ್ನಿಸಿದರು.

'ಆರ್‌ಜೆಡಿ ಅಧಿಕಾರಕ್ಕೆ ಬಂದರೆ ಪುನಃ ಜಂಗಲ್ ರಾಜ್ ಬಂದಂತೆ. ಹಿಂದೆ ಅವರ ಅಡಳಿತಾವಧಿಯಲ್ಲಿ ತೀವ್ರ ಸಂಕಷ್ಟಕ್ಕೆ ಸಿಲುಕಿದವರು ಮಹಿಳೆಯರು. ಹೀಗಾಗಿ ಮತ್ತೆ ಜಂಗಲ್ ರಾಜ್ ಬಾರದಂತೆ ಎಚ್ಚರವಹಿಸಿ.' ಎಂದು ಅವರು ಮತದಾರರಲ್ಲಿ ಮನವಿ ಮಾಡಿದರು.

ಬಿಹಾರದ ಸಮಸ್ತಿಪುರದಲ್ಲಿ ಶುಕ್ರವಾರ ನಡೆದ ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ಹೂವಿನ ಮಾಲೆ ಹಾಕಿ ಸ್ವಾಗತಿಸಲಾಯಿತು ಪಿಟಿಐ ಚಿತ್ರ

ಎನ್‌ಡಿಎ ಮತ್ತೆ ನಿತೀಶ್‌ರನ್ನು ಸಿ.ಎಂ ಮಾಡಲ್ಲ–ತೇಜಸ್ವಿ

'ಜೆಡಿಯು ನೇತೃತ್ವದ ಎನ್‌ಡಿಎ 20 ವರ್ಷಗಳ ಕಾಲ ಆಡಳಿತ ನಡೆಸಿದ್ದರೂ ಬಿಹಾರ ಇನ್ನೂ ಬಡ ರಾಜ್ಯವಾಗಿಯೇ ಉಳಿದಿದೆಯಲ್ಲ' ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಪ್ರಶ್ನಿಸಿದರು.

ಸಹರ್ಸಾ ಜಿಲ್ಲೆಯ ಸಿಮ್ರಿ ಭಕ್ತಿಯಾರ್‌ಪುರದಲ್ಲಿ ಶುಕ್ರವಾರ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಎನ್‌ಡಿಎ ಮರಳಿ ಅಧಿಕಾರಕ್ಕೆ ಬಂದರೆ ನಿತೀಶ್ ಕುಮಾರ್ ಅವರನ್ನು ಅದು ಪುನಃ ಮುಖ್ಯಮಂತ್ರಿ ಮಾಡುವುದಿಲ್ಲ' ಎಂದು ಹೇಳಿದರು.

ತೇಜಸ್ವಿ ಯಾದವ್

'ಬಿಹಾರದ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬುದನ್ನು ಚುನಾಯಿತ ಶಾಸಕರು ನಿರ್ಧರಿಸುತ್ತಾರೆ ಎಂದು ಗೃಹ ಸಚಿವ ಅಮಿತ್ ಶಾ ಅವರು ಇತ್ತೀಚೆಗೆ ಸ್ಪಷ್ಟಪಡಿಸಿದ್ದಾರೆ. ಈ ಮೂಲಕ ಅವರು, ಎನ್‌ಡಿಎ ಅಧಿಕಾರಕ್ಕೆ ಮರಳಿದರೆ ನಿತೀಶ್ ಅವರು ಮುಖ್ಯಮಂತ್ರಿ ಆಗುವುದಿಲ್ಲ ಎಂಬ ಸಂದೇಶ ರವಾನಿಸಿದ್ದಾರೆ' ಎಂದು ತಿಳಿಸಿದರು.

'ಕೇಂದ್ರ ಸರ್ಕಾರವು ರಾಜ್ಯದಲ್ಲಿನ ಭ್ರಷ್ಟರು ಮತ್ತು ಅಪರಾಧಿಗಳನ್ನು ರಕ್ಷಿಸುತ್ತಿದೆ' ಎಂದು 'ಇಂಡಿಯಾ' ಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿಯೂ ಆಗಿರುವ ತೇಜಸ್ವಿ ದೂರಿದರು.

ಪತಿ ಸುಧಾರಿಸಿದಂತೆ, ಕ್ಷೇತ್ರ ಸುಧಾರಿಸುವೆ: ಆರ್‌ಜೆಡಿ ಅಭ್ಯರ್ಥಿ

ಮೊಕಮಾ (ಪಿಟಿಐ): 'ನನ್ನನ್ನು ಆಯ್ಕೆ ಮಾಡಿದರೆ, ನನ್ನ ಪತಿಯನ್ನು ಸುಧಾರಿಸಿದಂತೆಯೇ ಇಡೀ ಮೊಕಮಾ ಕ್ಷೇತ್ರವನ್ನು ಸುಧಾರಿಸುತ್ತೇನೆ' ಎಂದು ಇಲ್ಲಿನ ಆರ್‌ಜೆಡಿ ಅಭ್ಯರ್ಥಿ, ಮಾಜಿ ಸಂಸದೆ ವೀಣಾ ದೇವಿ ಹೇಳಿದ್ದಾರೆ.

ವೀಣಾ ದೇವಿ ಅವರ ಪತಿ ಸೂರಜ್‌ಭನ್ ಸಿಂಗ್ ಕ್ರಿಮಿನಲ್ ಆರೋಪಗಳನ್ನು ಹೊಂದಿರುವ ಕಾರಣ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ. ಹೀಗಾಗಿ ಅವರ ಪತ್ನಿಯನ್ನು ಆರ್‌ಜೆಡಿ ಕಣಕ್ಕಿಳಿಸಿದೆ. ಅವರ ಎದುರು ಜೆಡಿಯು ಅಭ್ಯರ್ಥಿ ಅನಂತ್ ಸಿಂಗ್ ಕಣದಲ್ಲಿದ್ದಾರೆ.

'ನನ್ನ ಪತಿ ಈಗ ಬದಲಾದ ವ್ಯಕ್ತಿ. ನನಗೆ ಅವಕಾಶ ದೊರೆತರೆ ಅವರನ್ನು ಸುಧಾರಿಸಿದಂತೆ, ಕ್ಷೇತ್ರವನ್ನು ಅಭಿವೃದ್ಧಿಪಡಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಜಮ್ಮು–ಕಾಶ್ಮೀರ: ರಾಜ್ಯಸಭೆಗೆ ನಡೆದ ಚುನಾವಣೆ

ಎನ್‌ಸಿಗೆ 3, ಬಿಜೆಪಿಗೆ ಒಂದು ಸ್ಥಾನ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸದಸ್ಯ ಸ್ಥಾನಗಳಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಮೂರು ಸ್ಥಾನಗಳು 'ಇಂಡಿಯಾ' ಮೈತ್ರಿಕೂಟದ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷದ ಪಾಲಾಗಿದ್ದರೆ, ಒಂದು ಸ್ಥಾನ ಬಿಜೆಪಿಗೆ ದಕ್ಕಿದೆ.

ಸಂವಿಧಾನದ 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ಹಿಂಪಡೆದ ಬಳಿಕ ರಾಜ್ಯಸಭಾ ಸ್ಥಾನಗಳಿಗೆ ಇಲ್ಲಿ ನಡೆದ ಮೊದಲ ಚುನಾವಣೆ ಇದಾಗಿದೆ. ಬೆಳಿಗ್ಗೆ 9 ಗಂಟೆಗೆ ಆರಂಭವಾದ ಮತದಾನ ಸಂಜೆ 4ರವರೆಗೂ ನಡೆಯಿತು. ಸಂಜೆ 5 ಗಂಟೆಗೆ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಿಸಲಾಯಿತು.

ಆಡಳಿತಾರೂಢ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಅಭ್ಯರ್ಥಿಗಳಾದ ಚೌಧ್ರಿ ಮೊಹಮ್ಮದ್ ರಂಜಾನ್, ಸಜಾದ್ ಕಿಚ್ಲೂ, ಜಿ.ಎಸ್.ಒಬೆರಾಯ್ (ಪಕ್ಷದ ಖಜಾಂಚಿ) ಚುನಾಯಿತರಾದರು. ಬಿಜೆಪಿಯ ಸತ್ ಶರ್ಮಾ ಅವರು 32 ಮತಗಳನ್ನು ಪಡೆಯುವ ಮೂಲಕ ನಾಲ್ಕನೇ ಸ್ಥಾನವನ್ನು ತಮ್ಮದಾಗಿಸಿಕೊಂಡರು. ಎನ್‌ಸಿಯ ಮತ್ತೊಬ್ಬ ಅಭ್ಯರ್ಥಿ ಇಮ್ರಾನ್ ನಬಿದಾರ್ ಅವರು 22 ಮತಗಳನ್ನಷ್ಟೇ ಪಡೆದರು.

ರಂಜಾನ್ ಮತ್ತು ಕಿಚ್ಲೂ ಅವರ ಗೆಲುವು ನಿರೀಕ್ಷಿತವಾಗಿತ್ತು. ಏಕೆಂದರೆ, ಎನ್‌ಸಿ ಬಳಿ 41 ಸದಸ್ಯರಿದ್ದರೆ, ಕಾಂಗ್ರೆಸ್‌ನ ಆರು, ಪಿಡಿಪಿಯ ಮೂವರು, ಸಿಪಿಐ(ಎಂ)ನ ಒಬ್ಬರು ಮತ್ತು ಕೆಲ ಸ್ವತಂತ್ರ ಸದಸ್ಯರು ಸೇರಿ 58 ಶಾಸಕರ ಬೆಂಬಲವಿತ್ತು.

